ಹುಬ್ಬಳ್ಳಿ
ಬುಧವಾರ, 25 ಮಾರ್ಚ್ 2026
ಸಂಪುಟ 15, ಸಂಚಿಕೆ 365, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಪಾಕ್ ಅತ್ಯಂತ ಮಾಲಿನ್ಯ ದೇಶ | 02
ಇರಾನ್ ಮೇಲೆ 3 ಸಾವಿರ ದಾಳಿ! | 02
ನುಸುಳುಕೋರರನ್ನು ಅಧಿಕಾರಿಗಳಿಗೊಪ್ಪಿಸಿ | 02

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ : ಸಪ್ತಮಿ, ನಕ್ಷತ್ರ : ಮೃಗಶಿರ

ದಿನದ ಮಾತು

ಚಿತೆ ಹೆಣವನ್ನು ಸುಡುತ್ತದೆ. ಚಿಂತೆ ಬದುಕಿರುವವರನ್ನು ಸುಡುತ್ತದೆ.
▲ ಲೋಕೋಕ್ತಿ

ಸಾಧಕನಿಗೆ ಬಾಧಕವಾಗುವ ಲೋಕವಾಸನೆ

ಪದ ಸಂಚಲನ
• ವಿಶ್ವನಾಥ ಸುಂಕಸಾಳ

• ಪುಟ ೬

ಕಿರುಸುದ್ದಿ

ಅಭಿಮಾನಿಗಳ ನೆನಪಿಗಾಗಿ 11 ಆಸನ ಮೀಸಲು

• **ಬೆಂಗಳೂರು:** ಕಳೆದ ವರ್ಷ ವಿಜಯೋತ್ಸವ ವೇಳೆ ಪ್ರಾಣ ಕಳೆದುಕೊಂಡಿದ್ದ 11 ಅಭಿಮಾನಿಗಳ ನೆನಪಿಗಾಗಿ ಚಿನ್ನಸ್ವಾಮಿಯಲ್ಲಿ ನಡೆಯುವ ಐದೂ ಆರ್‌ಸಿಬಿ ತವರು ಪಂದ್ಯದ ವೇಳೆ 11 ಆಸನಗಳನ್ನು ಖಾಲಿ ಬಿಡುವುದಾಗಿ



ಫ್ರಾಂಚೈಸಿ ತಿಳಿಸಿದೆ. ಕ್ರೀಡಾಂಗಣಕ್ಕೆ ಪಂದ್ಯಗಳು ಮರಳಿದ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ಆರ್‌ಸಿಬಿಯ ಮುಖ್ಯ ಕಾರ್ಯನಿರ್ವಾಹಕ ರಾಜೇಶ್ ಮೆನನ್, ನಾವು ಆ ದುರಂತ ಮರೆಯುವುದಿಲ್ಲ. 11 ಜನರು ನಮ್ಮ ಪಯಣದಲ್ಲಿ ಇದ್ದೇ ಇರುತ್ತಾರೆ. ಚಿನ್ನಸ್ವಾಮಿಯಲ್ಲಿ ನಡೆಯುವ 5 ಪಂದ್ಯಗಳಲ್ಲಿ 11 ಆಸನಗಳನ್ನು ಖಾಲಿ ಬಿಡಲಾಗುವುದು. ಮೊದಲ ಪಂದ್ಯಕ್ಕೂ ಮುನ್ನ ಅಭ್ಯಾಸದ ವೇಳೆ ನಮ್ಮ ತಂಡದ ಎಲ್ಲಾ ಆಟಗಾರರು 11 ಎಂಬ ಸಂಖ್ಯೆಯೊಂದಿಗೆ ಮೈದಾನಕ್ಕಿಳಿಯುತ್ತಾರೆ. ಅಲ್ಲದೆ ಪಂದ್ಯದ ವೇಳೆ ಕೈಗೆ ಕಪ್ಪು ಬ್ಯಾಂಡ್ ಕೂಡ ಧರಿಸುತ್ತಾರೆ ಎಂದರು.

• ಪುಟ ೧೧

ಇಡಿ ಅಧಿಕಾರಿಗಳಿಗೂ ಮೂಲಭೂತ ಹಕ್ಕಿದೆ: ಸುಪ್ರೀಂ

• ಪುಟ ೭

ಬಿಕ್ಕಟ್ಟಿನ ನಡುವೆಯೂ ಇಂಧನ ಪೂರೈಕೆ ಭರವಸೆ

• ಪುಟ ೭

ಸೇನಾ ವಿಮಾನ ಪತನ 66 ಮಂದಿ ಸಾವು

• ಪುಟ ೭

ಶೇ.5 ಕುಟುಂಬಗಳಿಗಷ್ಟೇ 100 ದಿನಗಳ ಉದ್ಯೋಗ

• ಪುಟ ೩

ಇಂದಿನಿಂದ ಮೈಸೂರಲ್ಲಿ ಆರೆಸ್ಸೆಸ್ ಶೈಕ್ಷಣಿಕ ಸಮ್ಮೇಳನ

• ಪುಟ ೩

ಮಧ್ಯಪ್ರಾಚ್ಯ ಬಿಕ್ಕಟ್ಟು ಟ್ರಂಪ್-ಮೋದಿ ಚರ್ಚೆ

• ಪುಟ ೭

ಎಐಎಡಿಎಂಕೆ ಪ್ರಣಾಳಿಕೆಯಲ್ಲಿ ಉಚಿತ ಫ್ರಿಡ್ಜ್!

• ಪುಟ ೭

ಲೋಕಸಭಾ ಕ್ಷೇತ್ರ 543ರಿಂದ 816 ಕ್ಷೇತ್ರಗಳಿಗೆ ವಿಸ್ತರಣೆ

ಮಹಿಳೆಯರಿಗೆ 273 ಕ್ಷೇತ್ರಗಳ ಮೀಸಲು?

ಮಹಿಳಾ ಮೀಸಲು ಜಾರಿಗೆ ಕೇಂದ್ರ ಸರ್ಕಾರ ತಯಾರಿ

ವಿಶೇಷ ಅಧಿವೇಶನ?

ಮೂಲಗಳ ಪ್ರಕಾರ, ಸರ್ಕಾರದ ಮಟ್ಟದಲ್ಲಿ ಈಗಾಗಲೇ ವಿಶೇಷ ಅಧಿವೇಶನ ಬಗ್ಗೆ ಚರ್ಚೆ ನಡೆದಿದೆ. ಹಾಗೆಯೇ, ಸೋಮವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಎನ್‌ಡಿಎ ಮತ್ತು ಕಾಂಗ್ರೆಸ್ ಹಾಗೂ ಟಿಎಂಸಿ ಪಕ್ಷಗಳನ್ನು ಹೊರತುಪಡಿಸಿ ಉಳಿದ ಪಕ್ಷಗಳ ಸಭಾ ನಾಯಕರ ಜತೆ ಮಾತುಕತೆ ನಡೆಸಿದ್ದಾರೆ ಎನ್ನಲಾಗುತ್ತಿದೆ. ಆದರೆ, ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್, ಟಿಎಂಸಿ ಜತೆ ಚರ್ಚೆಗೆ ಇನ್ನಷ್ಟು ಸಮಯಾವಕಾಶ ಮತ್ತು ಹಾಲಿ ವಿಧಾನಸಭೆ ಚುನಾವಣೆ ಸಿದ್ಧತೆಯಲ್ಲಿ ಭಾಗಿಯಾಗುತ್ತಿರುವುದರಿಂದ ಈ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡನೆಯಾಗುವುದಿಲ್ಲ ಎನ್ನಲಾಗುತ್ತಿದೆ. ಇದಕ್ಕಾಗಿ, ವಿಶೇಷ ಅಧಿವೇಶನ ಕರೆಯುವ ಸಾಧ್ಯತೆಗಳಿವೆ ಎನ್ನಲಾಗಿದೆ.



• **ಹೊಸದಿಲ್ಲಿ:** ಮಹಿಳಾ ಮೀಸಲು ಕಾಯ್ದೆ ಜಾರಿಗೆ ತರುವ ದಿಸೆಯಲ್ಲಿ ಕೇಂದ್ರ ಸರ್ಕಾರ ದೊಡ್ಡ ಹೆಜ್ಜೆ ಇಡಲು ಸಜ್ಜಾಗಿದ್ದು, ಇಂದಿನ 543 ಲೋಕಸಭಾ ಕ್ಷೇತ್ರಗಳನ್ನು ಪುನರ್‌ರಚಿಸಿ, ಒಟ್ಟು ಸದಸ್ಯರ ಸಂಖ್ಯೆಯನ್ನು 816ಕ್ಕೆ ಏರಿಸುವ ಮಹತ್ವಾಕಾಂಕ್ಷಿ ಯೋಜನೆ ರೂಪಿಸಲಾಗಿದೆ. ಇದರ ಭಾಗವಾಗಿ ಮಹಿಳೆಯರಿಗೆ 273 ಕ್ಷೇತ್ರಗಳನ್ನು ಮೀಸಲಿಡಲು ಕೇಂದ್ರ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಯೋಜನೆಯನ್ನು ಶೀಘ್ರ ಜಾರಿಗೆ ತರಲು, ಕ್ಷೇತ್ರ ಮರು ವಿಂಗಡಣೆ ಪೂರ್ಣಗೊಳ್ಳುವ ಮೊದಲೇ 2 ಪ್ರತ್ಯೇಕ ಮಸೂದೆಗಳನ್ನು ಮಂಡಿಸಲು ಸರ್ಕಾರ ಸನ್ನದ್ಧವಾಗಿದೆ. ಒಂದು ಸಂವಿಧಾನ ತಿದ್ದುಪಡಿ ಮಸೂದೆ ಮೂಲಕ ನಾರಿ ಶಕ್ತಿ ವಂದನ್ ಅಧಿನಿಯಮದಲ್ಲಿ ತಿದ್ದುಪಡಿ ಮಾಡಲಾಗುವುದಾದರೆ, ಮತ್ತೊಂದು ಸಾಮಾನ್ಯ ಮಸೂದೆ ಮೂಲಕ ಡಿಲಿಮಿಟೇಶನ್ ಕಾಯ್ದೆಯಲ್ಲಿ ಬದಲಾವಣೆ ತರಲಾಗುತ್ತದೆ. ಸದ್ಯ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಇರುವುದರಿಂದ ಮತ್ತು ಬಜೆಟ್ ಅಧಿವೇಶನ ಮುಗಿಯಲು ಕೆಲವೇ ದಿನ ಬಾಕಿಯಿದ್ದು, ಈಗ ತಿದ್ದುಪಡಿ ಮಸೂದೆ ಮಂಡಿಸಿ ಅನುಮೋದನೆ ಕಷ್ಟವಾಗುವ ಸಾಧ್ಯತೆ ಇರುವುದರಿಂದ ಚುನಾವಣೆ ಮುಗಿದ ಮೇಲೆ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ. ➡ಪುಟ ೪

ಏನು ಬದಲಾವಣೆ?

ಪ್ರಸ್ತುತ 543 ಕ್ಷೇತ್ರಗಳಿಂದಲೇ ಹೊಸ 273 ಕ್ಷೇತ್ರಗಳನ್ನು ಬೇರ್ಪಡಿಸುವ ಸಾಧ್ಯತೆ ಇದೆ. ಅಂದರೆ, ಇಂದಿನ ಕ್ಷೇತ್ರಗಳನ್ನೇ ಪುನರ್‌ವಿಂಗಡಿಸಿ ಮಹಿಳೆಯರಿಗೆ ಮೀಸಲಾದ ಕ್ಷೇತ್ರಗಳನ್ನು ರೂಪಿಸುವುದು ಪ್ರಮುಖ ಆಯ್ಕೆಯಾಗಿದೆ. ಆದರೆ, ಎಸ್‌ಸಿ ಮತ್ತು ಎಸ್‌ಟಿ ಮೀಸಲು ಕ್ಷೇತ್ರಗಳಂತೆ ಮಹಿಳೆಯರಿಗೆ ಮೀಸಲಾತಿ ನಿಗದಿಪಡಿಸಲು ಸ್ಪಷ್ಟ ಮಾನದಂಡ ಇಲ್ಲದಿರುವುದು ಸವಾಲಾಗಿ ಪರಿಣಮಿಸಿದೆ. ಇದಕ್ಕಾಗಿ ಲಾಟರಿ ವಿಧಾನ ಬಳಸಿ 273 ಕ್ಷೇತ್ರಗಳನ್ನು ಆಯ್ಕೆ ಮಾಡುವ ಸಾಧ್ಯತೆಯೂ ಪರಿಗಣನೆಯಲ್ಲಿದೆ. ರಾಜ್ಯ ವಿಧಾನಸಭೆಗಳಲ್ಲೂ ಶೇ.33 ಮಹಿಳಾ ಮೀಸಲಾತಿಯನ್ನು 'ಪ್ರೋ ರಾಟಾ' ಸೂತ್ರದಲ್ಲಿ ಜಾರಿಗೆ ತರಲು ಯೋಜನೆಯಿದೆ.

2011ರ ಜನಗಣತಿ ಆಧಾರ

ಕ್ಷೇತ್ರ ಮರುವಿಂಗಡಣೆಗೆ 2011ರ ಜನಗಣತಿ ಅಂಕಿಅಂಶಗಳನ್ನು ಆಧಾರವಾಗಿಡಲಾಗುತ್ತದೆ. ಏಕೆಂದರೆ ಪ್ರಸ್ತುತ ಜನಗಣತಿ ಇನ್ನೂ ಪೂರ್ಣಗೊಂಡಿಲ್ಲ.



ಮಹಿಳಾ ಮೀಸಲು ಕಾಯ್ದೆ ಈಗಾಗಲೇ ಸಂವಿಧಾನ ತಿದ್ದುಪಡಿಯ ಮೂಲಕ ಅಂಗೀಕೃತವಾಗಿದ್ದರೂ, ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೇ ಅದು ಜಾರಿಗೆ ಬರಲಿದೆ.

2029ರಿಂದ ಜಾರಿ ಸಾಧ್ಯತೆ

• ಪುಟ ೪

ಹಿಂದು, ಬೌದ್ಧ, ಸಿಖ್‌ರಿಗೆ ಮಾತ್ರ ಅನ್ವಯ

ಮತಾಂತರವಾದ್ರೆ ಮೀಸಲಾತಿ ಸಿಗಲ್ಲ

• **ಹೊಸದಿಲ್ಲಿ:** ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯೊಬ್ಬರು ಹಿಂದು, ಸಿಖ್ ಅಥವಾ ಬೌದ್ಧ ಧರ್ಮಗಳನ್ನು ಬಿಟ್ಟು ಬೇರೆ ಧರ್ಮಕ್ಕೆ ಮತಾಂತರವಾದರೆ, ಅವರು ಮತಾಂತರವಾದ ಕ್ಷಣದಿಂದಲೇ ತಮ್ಮ ಪರಿಶಿಷ್ಟ ಜಾತಿ(ಎಸ್‌ಸಿ) ಸ್ಥಾನಮಾನವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಮನ್ಮೋಹನ್ ಅವರ ಪೀಠವು, ಆಂಧ್ರ ಪ್ರದೇಶ ಹೈಕೋರ್ಟ್ ನೀಡಿದ ಆದೇಶವನ್ನು ಸಮರ್ಥಿಸಿ ಈ ತೀರ್ಪು ಪ್ರಕಟಿಸಿದೆ.

ನ್ಯಾಯಾಲಯ ಹೇಳುವಂತೆ, ಸಂವಿಧಾನದ 1950ರ ಪರಿಶಿಷ್ಟ ಜಾತಿಗಳ ಆದೇಶದ 3ನೇ ವಿಧಿಯ ಪ್ರಕಾರ, ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಗಳನ್ನು ಹೊರತುಪಡಿಸಿ ಬೇರೆ ಧರ್ಮ ಅನುಸರಿಸುವವರನ್ನು ಪರಿಶಿಷ್ಟ ಜಾತಿಯ ಸದಸ್ಯರನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ. ಆದ್ದರಿಂದ, ಕ್ರೈಸ್ತಧರ್ಮಕ್ಕೆ ಮತಾಂತರವಾದ ಕ್ಷಣದಿಂದಲೇ ವ್ಯಕ್ತಿ ತನ್ನ ಎಸ್‌ಸಿ ಸ್ಥಾನಮಾನವನ್ನು ತಕ್ಷಣ ಮತ್ತು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ.

ಇದೇ ವೇಳೆ, ಪರಿಶಿಷ್ಟ ಜನಾಂಗ(ಎಸ್‌ಟಿ) ಕುರಿತು ಕೂಡ ನ್ಯಾಯಾಲಯ ಸ್ಪಷ್ಟನೆ ನೀಡಿದ್ದು, ಧರ್ಮಾಂತರವಾದ ನಂತರ ವ್ಯಕ್ತಿಯ ಮೂಲ ಜನಾಂಗದ ಆಚಾರ-ವಿಚಾರಗಳು, ಸಂಪ್ರದಾಯಗಳು ಮತ್ತು ಜೀವನಶೈಲಿ ನಿಧಾನವಾಗಿ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ. ಅಂತಹ ಸಂದರ್ಭಗಳಲ್ಲಿ, ವ್ಯಕ್ತಿ ತನ್ನ ಮೂಲ ಜನಾಂಗದೊಂದಿಗೆ ಗುರುತಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಹೇಳಿದೆ.

ಎಸ್‌ಸಿ ಸ್ಥಾನಮಾನ ಕಳೆದುಕೊಂಡ ನಂತರ, ಮೀಸಲು, ಕಾನೂನು ರಕ್ಷಣೆ, ವಿಶೇಷ ಸೌಲಭ್ಯಗಳು ಸೇರಿದಂತೆ ಎಲ್ಲಾ ವಿಧದ ಹಕ್ಕುಗಳು ತಕ್ಷಣವೇ ರದ್ದಾಗುತ್ತವೆ ಎಂದು ಸುಪ್ರೀಂ ಹೇಳಿದೆ.

ಈ ಸಂದರ್ಭದಲ್ಲಿ, 1950ರ ಆದೇಶದ ಇತಿಹಾಸವನ್ನು ಉಲ್ಲೇಖಿಸಿದ ನ್ಯಾಯಾಲಯ, ಆರಂಭದಲ್ಲಿ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಹಿಂದುಗಳಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು ಎಂದು ತಿಳಿಸಿದೆ. ➡ಪುಟ ೪



- ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿ ಮೀಸಲು ಹಕ್ಕಿಗಾಗಿ ಬೇಡಿಕೆ
- ಸ್ಪಷ್ಟವಾಗಿ ನಿರಾಕರಿಸಿದ ಸುಪ್ರೀಂ ಕೋರ್ಟ್

ಸ್ವಯಂಘೋಷಣೆ ಮಾತ್ರ ಸಾಲದು

ಒಬ್ಬ ವ್ಯಕ್ತಿ ಮತ್ತೆ ಹಿಂದು, ಸಿಖ್ ಅಥವಾ ಬೌದ್ಧ ಧರ್ಮಕ್ಕೆ ಮತಾಂತರವಾದಲ್ಲಿ, ಅವನು ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಮರಳಿ ಪಡೆಯಲು 3 ಪ್ರಮುಖ ಅಂಶಗಳನ್ನು ಸಾಬೀತುಪಡಿಸಬೇಕಾಗುತ್ತದೆ. ಮೂಲವಾಗಿ ಪರಿಶಿಷ್ಟ ಜಾತಿಗೆ ಸೇರಿದವನಾಗಿರುವುದು, ನಿಜವಾದ ಪುನರ್ಮತಾಂತರ ನಡೆದಿರುವುದು ಮತ್ತು ಆತನನ್ನು ಮೂಲ ಸಮುದಾಯವು ಮತ್ತೆ ಸ್ವೀಕರಿಸಿರುವುದು ಎಂಬುದು ಸ್ಪಷ್ಟವಾಗಬೇಕು. ಕೇವಲ ಸ್ವಯಂ ಘೋಷಣೆ ಮಾತ್ರ ಸಾಕಾಗುವುದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಪರಿಷತ್‌ನಲ್ಲೂ ಕರ್ನಾಟಕ ವಿವಾಹ ವಿಧೇಯಕ 2026 ಅಂಗೀಕಾರ

ಮರ್ಯಾದಾ ಹತ್ಯೆಗೆ ಕಡಿವಾಣ

• **ವಿಧಾನಪರಿಷತ್:** ರಾಜ್ಯದಲ್ಲಿ ಸಾಮಾಜಿಕ ಸಾಮರಸ್ಯವನ್ನು ಎತ್ತಿಹಿಡಿಯುವ ಮತ್ತು ಮರ್ಯಾದಾ ಹತ್ಯೆಯಂತಹ ಅಮಾನವೀಯ ಕೃತ್ಯಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಮಹತ್ವದ ಹೆಜ್ಜೆಯನ್ನಿಟ್ಟಿದೆ.

ರಾಜ್ಯ ಸರ್ಕಾರದ ಮಹತ್ವದ ಹೆಜ್ಜೆ

ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ವಿಧೇಯಕ-2026ನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಎಚ್.ಕೆ. ಪಾಟೀಲ್ ಅವರು ವಿಧಾನಪರಿಷತ್ತಿನ ಕಲಾಪದ ವೇಳೆ ಮಂಡಿಸುತ್ತಾ ವಿಧೇಯಕದ ಉದ್ದೇಶಗಳು ಮತ್ತು ಕಾರಣಗಳ ಬಗ್ಗೆ ವಿವರಿಸಿದರು. ಕರ್ನಾಟಕ ರಾಜ್ಯದಲ್ಲಿ ಜಾತಿ-ಆಧಾರಿತ ತಾರತಮ್ಯವು ನಿರಂತರವಾಗಿ, ಅಂತರ್ಜಾತಿ ವಿವಾಹಗಳ ಮೂಲಕ ಅವರ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೂ ಅಡ್ಡಿಯಿದೆ. ➡ಪುಟ ೪



ಪ್ರಮುಖ ಉದ್ದೇಶಗಳು

12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ಇವ ನಮ್ಮವ ಇವ ನಮ್ಮವ ಎಂಬ ಸಮಾನತೆಯ ಸಂದೇಶದಿಂದ ಪ್ರೇರಿತವಾಗಿರುವ ಈ ಕಾಯ್ದೆಯು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ➡ಪುಟ ೪

ಸುಪ್ರೀಂ ತೀರ್ಪಿನಂತೆ ಚಿಕಿತ್ಸೆ ಸ್ಥಗಿತ | 13 ವರ್ಷಗಳ ಕೋಮಾ ಕೊನೆ

ಹರೀಶ್ ರಾಣಾ ಬದುಕು ಅಂತ್ಯ

ದೇಶದ ಮೊದಲ ಪ್ಯಾಸಿವ್ ದಯಾಮರಣ ಪ್ರಕರಣ

• **ಹೊಸದಿಲ್ಲಿ:** ದೇಶದಲ್ಲಿ ಮೊದಲ ಬಾರಿಗೆ ಪ್ಯಾಸಿವ್ ದಯಾಮರಣಕ್ಕೆ ಅನುಮತಿ ಪಡೆದ ವ್ಯಕ್ತಿ ಹರೀಶ್ ರಾಣಾ (31) ಮಂಗಳವಾರ ದಿಲ್ಲಿಯ ಏಮ್ಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು ಎಂದು ಮೂಲಗಳು ತಿಳಿಸಿವೆ. 2013ರಿಂದಲೇ ಕೋಮಾ ಸ್ಥಿತಿಯಲ್ಲಿದ್ದ ಹರೀಶ್ ರಾಣಾ, ಕಳೆದ 13 ವರ್ಷಗಳಿಂದ ಜೀವಮರಣ ಹೋರಾಟ ನಡೆಸುತ್ತಿದ್ದರು. ಮಾ.14ರಂದು ಘಾಜಿಯಾಬಾದ್‌ನ ಮನೆಯಿಂದ ಅವರನ್ನು ಏಮ್ಸ್‌ನ ಡಾ.ಅಂಬೇಡ್ಕರ್ ಇನ್ಸಿಟ್ಯೂಟ್ ರೋಟರಿ ಕ್ಯಾನ್ಸರ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು.



ಮಾ.11ರಂದು ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದ್ದು, ಹರೀಶ್ ರಾಣಾಗೆ ಪ್ಯಾಸಿವ್ ದಯಾಮರಣಕ್ಕೆ ಅನುಮತಿ ನೀಡಿತ್ತು. ಪಂಜಾಬ್ ವಿಶ್ವವಿದ್ಯಾಲಯದ ಬಿ.ಟೆಕ್ ವಿದ್ಯಾರ್ಥಿಯಾಗಿದ್ದ ಅವರು 2013ರಲ್ಲಿ ನಾಲ್ಕನೇ ಮಹಡಿಯ ಬಾಲ್ಕನಿಯಿಂದ ಬಿದ್ದು ತೀವ್ರ ತಲೆಗೆ ಗಾಯಗೊಂಡಿದ್ದು, ಆಗಿನಿಂದಲೇ ಕೋಮಾದಲ್ಲಿದ್ದರು.

ವೈದ್ಯಕೀಯವಾಗಿ ಅವರಿಗೆ ಕೃತಕ ಆಹಾರ ಹಾಗೂ ಕೆಲವೊಮ್ಮೆ ಆಮ್ಲಜನಕ ಸಹಾಯ ನೀಡಲಾಗುತ್ತಿತ್ತು. ಆದರೆ ಆಸ್ಪತ್ರೆಗೆ ದಾಖಲಾದ ಬಳಿಕ ಹಂತ ಹಂತವಾಗಿ ಪೋಷಕಾಂಶ ನೀಡುವ ಚಿಕಿತ್ಸೆ ಸ್ಥಗಿತಗೊಳಿಸಲಾಯಿತು. ಜೀವನಾಂತ್ಯದಲ್ಲಿ ಮಾನವೀಯ ಗೌರವ ಕಾಪಾಡುವಂತೆ ವಿಶೇಷ ಯೋಜನೆ ರೂಪಿಸಿ, ಜೀವಾಧಾರ ಚಿಕಿತ್ಸೆ ಹಿಂಪಡೆಯುವಂತೆ ಏಮ್ಸ್‌ಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ಈ ಪ್ರಕ್ರಿಯೆಯನ್ನು ಜಾರಿಗೊಳಿಸಲು ಡಾ. ಸೀಮಾ ಮಿಶ್ರಾ ನೇತೃತ್ವದಲ್ಲಿ ವಿಶೇಷ ವೈದ್ಯಕೀಯ ತಂಡವನ್ನು ರಚಿಸಲಾಗಿತ್ತು.

ಕಾಶ್ಮೀರ ಪ್ರತ್ಯೇಕತಾವಾದಿ ಅಂದ್ರಾಬಿಗೆ ಜೀವಾವಧಿ

ಯುಎಪಿಎ ಪ್ರಕರಣದಲ್ಲಿ ದಿಲ್ಲಿ ಕೋರ್ಟ್ ತೀರ್ಪು

• **ಹೊಸದಿಲ್ಲಿ:** ಜಮ್ಮು -ಕಾಶ್ಮೀರದಲ್ಲಿನ ದೇಶ ವಿರೋಧಿ ಚಟುವಟಿಕೆಗಳ ವಿರುದ್ಧ ಕಠಿಣ ಸಂದೇಶ ನೀಡಿರುವ ದಿಲ್ಲಿ ಕೋರ್ಟ್, ಕಾಶ್ಮೀರದ ಪ್ರತ್ಯೇಕತಾವಾದಿ ನಾಯಕಿ ಹಾಗೂ ದುಖ್ತರಾನ್-ಎ-ಮಿಲ್ಲತ್ ಮುಖ್ಯಸ್ಥೆ ಆಸಿಯಾ ಅಂದ್ರಾಬಿಗೆ ಜೀವಾವಧಿ ಕಾರಾಗೃಹ ಶಿಕ್ಷೆ ವಿಧಿಸಿದೆ. ಇದೇ ಪ್ರಕರಣದಲ್ಲಿ ಆಕೆಯ ಸಹಚರರಾದ ಸೋಫಿ ಫಹ್ಮೀದಾ ಮತ್ತು ನಹಿದಾ ನಸ್ರೀನ್ ಅವರಿಗೆ ತಲಾ 30 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.




ಜ.14ರಂದು ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಹಾಗೂ ದೇಶದ ವಿರುದ್ಧ ಯುದ್ಧ ನಡೆಸಲು ಸಂಚು ರೂಪಿಸಿದ ಆರೋಪ ಸೇರಿದಂತೆ ಹಲವು ವಿಧಿಗಳಲ್ಲಿ ಮೂವರನ್ನೂ ನ್ಯಾಯಾಲಯ ದೋಷಿಗಳೆಂದು ತೀರ್ಪು ನೀಡಿತ್ತು. ➡ಪುಟ ೪



ಯುದ್ಧದಿಂದ ಜಾಗತಿಕ ಇಂಧನ ಬಿಕ್ಕಟ್ಟು: ಮೋದಿ

ಪರಿಸ್ಥಿತಿ ದುರ್ಲಾಭ ಬೇಡ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಸಮರ ಸೃಷ್ಟಿಸಿರುವ ಬಿಕ್ಕಟ್ಟುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ನಿಟ್ಟಿನಲ್ಲಿ ಇಂಧನ, ಪೂರೈಕೆ ವ್ಯವಸ್ಥೆ ಮತ್ತು ರಸಗೊಬ್ಬರ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಪೂರಕ ಕಾರ್ಯತಂತ್ರ ರಚಿಸಲು, ಏಳು ಉನ್ನತಾಧಿಕಾರ ಸಮಿತಿ ರಚಿಸಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರಕಟಿಸಿದ್ದಾರೆ. ಪಶ್ಚಿಮ ಏಷ್ಯಾದ ಯುದ್ಧವು ಜಾಗತಿಕವಾಗಿ ಗಂಭೀರ ಸ್ವರೂಪದ ಇಂಧನ ಬಿಕ್ಕಟ್ಟನ್ನು ಹುಟ್ಟುಹಾಕಿದೆ ಎಂದವರು ರಾಜ್ಯಸಭೆಯಲ್ಲಿ ಹೇಳಿದ್ದಾರೆ.



ಬಿಕ್ಕಟ್ಟಿನ ದುರ್ಲಾಭ ಪಡೆಯಲೆತ್ನಿಸಿದರೆ ಜೋಕೆ ಎಂದು ದುಷ್ಕರ್ಮಿಗಳಿಗೆ ಕಟು ಎಚ್ಚರಿಕೆ ನೀಡಿರುವ ಪ್ರಧಾನಿ ಮೋದಿ ಇಂಧನ, ಎಲ್‌ಪಿಜಿಗಳ ಕಾಳಸಂತೆ ಮಾರಾಟ, ಅಕ್ರಮ ದಾಸ್ತಾನುಗಳನ್ನು ಕಾರ್ಯಾಚರಣೆ ಮುಖೇನ ಪತ್ತೆ ಹಚ್ಚುವಂತೆ ರಾಜ್ಯ ಸರಕಾರಗಳಿಗೆ ಸೂಚನೆ ನೀಡಿದ್ದಾರೆ.

ಸಮಗ್ರ ಕಾರ್ಯತಂತ್ರ: ಎಲ್ಲಾ ಲಭ್ಯ ಮೂಲಗಳಿಂದ ಅನಿಲ, ಕಚ್ಚಾ ತೈಲಗಳ ಖರೀದಿಗೆ ಸರಕಾರ ಪ್ರಯತ್ನಿಸುತ್ತಿದೆ. ಈ ಪ್ರಯತ್ನಗಳು ಮುಂದಿನ ದಿನಗಳಲ್ಲಿ ನಿರಂತರ ನೆಲೆಯಲ್ಲಿ ಮುಂದುವರಿಯಲಿವೆ. ➡ಪುಟ ೪



ಯಾವುದೇ ಸವಾಲು ಎದುರಿಸಲು ಸಿದ್ಧರಾಗಿರಿ

ರಕ್ಷಣಾ ಸಚಿವರ ಮೇಲೆ ಆರೋಪ ಹೊರಿಸಿದ ಟ್ರಂಪ್!

ಇಂದು ಸರ್ವಪಕ್ಷ ಸಭೆ

• ಪುಟ ೪

ಎಂಟು ಗಂಟೆಯೊಳಗೆ ಟಿಕೆಟ್ ರದ್ದು: ಹಣ ಮರುಪಾವತಿ ಇಲ್ಲ

- ರೈಲು ಹೊರಡುವ 8 ಗಂಟೆಯೊಳಗೆ ರದ್ದು ಮಾಡಿದರೆ ಹಣ ವಾಪಸ್ಸಿಲ್ಲ
- ರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ರಿಂದ ಹೊಸ ನಿಯಮ ಪ್ರಕಟ

• **ಹೊಸದಿಲ್ಲಿ:** ರೈಲು ಹೊರಡುವ ಎಂಟು ಗಂಟೆಯೊಳಗೆ ಟಿಕೆಟ್ ರದ್ದು ಮಾಡಿದರೆ ಮರುಪಾವತಿ ಇರುವುದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಂಗಳವಾರ ಘೋಷಿಸಿದ್ದಾರೆ. ಈ ಮೊದಲು ನಾಲ್ಕು ಗಂಟೆಯ ಮಿತಿ ಇದ್ದು, ಇದನ್ನು ಈಗ ಎಂಟು ಗಂಟೆಗೆ ಏರಿಕೆ ಮಾಡಲಾಗಿದೆ. ಈ ಎಲ್ಲ ಹೊಸ ಮರುಪಾವತಿ ನಿಯಮಗಳು ಏ.1ರಿಂದ ಜಾರಿಗೆ ಬರಲಿವೆ.



ಹೊಸ ಮರುಪಾವತಿ ಶ್ರೇಣಿ

- 72 ಗಂಟೆಗೂ ಮೊದಲು ರದ್ದು - ನಿಗದಿತ ರದ್ದತಿ ಶುಲ್ಕ ಹೊರತುಪಡಿಸಿ ಸಂಪೂರ್ಣ ಮರುಪಾವತಿ
- 72ರಿಂದ 24 ಗಂಟೆ ನಡುವೆ ರದ್ದು-ಶೇ. 25 ಕಡಿತ
- 24ರಿಂದ 8 ಗಂಟೆ ನಡುವೆ -50% ಕಡಿತ ➡ಪುಟ ೪



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್‌ನ ನೂತನ ಉಪಪೊಲೀಸ್ ಆಯುಕ್ತರಾಗಿ (ಕಾನೂನು ಮತ್ತು ಸುವ್ಯವಸ್ಥೆ) ಶೃತಿ ಎಂ.ಎಸ್. ಅವರು ಮಂಗಳವಾರ ಅಧಿಕಾರ ವಹಿಸಿಕೊಂಡರು.

ಮಾ.30ಕ್ಕೆ ದೆಹಲಿ ಚಲೋ: ನಾಗಪ್ಪ ಉಂಡಿ

ಧಾರವಾಡ: ರೈತರ ಸಾಲಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ-ಹಸಿರು ಸೇನೆ ಮಾ.30ಕ್ಕೆ ದೆಹಲಿ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ನಾಗಪ್ಪ ಉಂಡಿ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಾರಾಷ್ಟ್ರದ ಮತ್ತು ತೆಲಂಗಾಣ ಸರ್ಕಾರಗಳು ರೈತರ ಸಾಲಮನ್ನಾ ಮಾಡಿವೆ. ಅದೇ ಮಾದರಿಯಲ್ಲಿ ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರ ರೈತರ ಸಾಲ ಸಂಪೂರ್ಣ ಮನ್ನಾಕ್ಕೆ ಆಗ್ರಹ ಮಾಡಿದರು. ಮಾ.28ರ ರಾತ್ರಿ ಸುಮಾರು 300ಕ್ಕೂ ಅಧಿಕ ರೈತರು ಹುಬ್ಬಳ್ಳಿಯಿಂದ ರೈಲ್ವೆ ಪ್ರಯಾಣದ ಮೂಲಕ ದೆಹಲಿಗೆ ತೆರಳಿ ರೈತರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜಂತರ-ಮಂತರನಲ್ಲಿ ಒಂದು ದಿನ ಸಾಂಕೇತಿಕ ಪ್ರತಿಭಟನೆ ನಡೆಸುವುದಾಗಿ ಹೇಳಿದರು. ಮಹದಾಯಿ, ಕಳಸಾ-ಬಂಡೂರಿ ಅನುಷ್ಠಾನ, ರೈತರ ಸಂಪೂರ್ಣ ಸಾಲಮನ್ನಾ, ರೈತರ ಬೆಳಗಳಿಗೆ ಬೆಂಬಲ ಬೆಲೆ ಘೋಷಣೆ, ರೈತರಿಗೆ ಮಾಸಿಕ ರೂ.10 ಸಾವಿರ ಮಾಸಾಶನ ಜಾರಿ, ಅಮೇರಿಕ-ಭಾರತ ಒಪ್ಪಂದ ಕೈಬೀಡಲು ಒತ್ತಾಯಿಸುವುದಾಗಿ ತಿಳಿಸಿದರು. ರೈತ ಸಂಘ-ಹಸಿರು ಸೇನೆ ಜಿಲ್ಲಾಧ್ಯಕ್ಷ ರವಿರಾಜ ಕಂಬಳಿ ಮಾತನಾಡಿ, ಅನೇಕ ಹೋರಾಟದ ವೇಳೆ ಕೇಂದ್ರ ಮತ್ತು ರಾಜ್ಯ ಸರ್ಕಾರ ರೈತರ ಮೇಲೆ ಪ್ರಕರಣಗಳು ದಾಖಲಿಸಿದ್ದು, ತಕ್ಷಣವೇ ಈ ಪ್ರಕರಣ ಖುಲಾಸೆ ಮಾಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘ-ಹಸಿರು ಸೇನೆ ಅಳ್ನಾವರ ಅಧ್ಯಕ್ಷ ರವಿ ಒಡ್ಡರ, ಧಾರವಾಡ ಅಧ್ಯಕ್ಷ ನಿಂಗಪ್ಪ ಧಾರವಾಡ ಇದ್ದರು.



ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯು ಆಯೋಜಿಸುತ್ತಿರುವ ಇನ್‌ಕಾಮೆಕ್ಸ್-2026 ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನದ ಸಿದ್ಧತೆಗಳ ಅಂಗವಾಗಿ ಸಂಸ್ಥೆಯ ಪದಾಧಿಕಾರಿಗಳು ಬೆಂಗಳೂರಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್.ಸೆಲ್ವಕುಮಾರ ಅವರನ್ನು ಭೇಟಿ ಮಾಡಿ ಸಮಗ್ರ ಚರ್ಚೆ ನಡೆಸಿದರು.

ಕಿರುಸುದ್ದಿ

ಕೃತಿ ಬಿಡುಗಡೆ ಇಂದು



ಧಾರವಾಡ: ಭಾರತ ಯೋಗಾದ ಸತ್ಸಂಗ ಸೊಸೈಟಿ ಹೊರತಂದ ಪರಮಹಂಸ ಯೋಗಾನಂದರು ಬೋಧಿಸಿರುವ ಕ್ರಿಯಾ ಯೋಗದ ಕನ್ನಡ ಆವೃತ್ತಿಯ ಕೃತಿ ಬಿಡುಗಡೆ ಸಮಾರಂಭ ಮಾ.25ಕ್ಕೆ ಜರುಗಲಿದೆ ಎಂದು ಸ್ಮರಣಾನಂದ ಸ್ವಾಮೀಜಿ ಹೇಳಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6ಕ್ಕೆ ನರೇಂದ್ರ ಕ್ರಾಸ್ ಬಳಿಯ ಮಾಸ್ಟಿಫ್ ಗ್ರ್ಯಾಂಡ್‌ನಲ್ಲಿ ಕೃತಿ ಬಿಡುಗಡೆಯ ನಂತರ ನಂತರ ಕ್ರೀಯಾ ಯೋಗದ ಕುರಿತು ಪ್ರವಚನ ನಡೆಯಲಿದೆ ಎಂದರು. ಈಗಾಗಲೇ ಇಂಗ್ಲಿಷ್, ಹಿಂದಿ, ತೆಲುಗು, ತಮಿಳು ಭಾಷೆಗಳಲ್ಲಿ ಪ್ರಕಟಣೆಗೊಂಡ ಕೃತಿಯನ್ನು ಈಗ ಕನ್ನಡದಲ್ಲಿ ಹೊರತಂದಿದೆ. ಪ್ರತಿ ತಿಂಗಳು ಎರಡು ಪಾಠಗಳು ಕಲಿಸಲಿದೆ. ಡಿಜಿಟಲ್ ಮಾದರಿಯಲ್ಲೂ ಕ್ರಿಯಾ ಯೋಗ ಕಲಿಸುತ್ತಿರುವುದಾಗಿ ತಿಳಿಸಿದರು. ಜನರು ಡಿಜಿಟಲ್ ಸ್ವರೂಪ ಮತ್ತು ಅಭ್ಯಾಸ ಅವಧಿಗಾಗಿ ಅಪ್ಲಿಕೇಶನ್‌ಗಾಗಿ ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದರು. ಶ್ರೇಯಾನಂದ ಸ್ವಾಮೀಜಿ ಇದ್ದರು.

ಇಂದು ಸಮಾರಂಭ



ಹುಬ್ಬಳ್ಳಿ: ಭೂಸಪೇಟ ಮಲ್ಲಿಕಾರ್ಜುನ ಗಟ್ಟಿನ ಬಸವೇಶ್ವರ ದೇವಸ್ಥಾನ ಟ್ರಸ್ಟ್ ನಿಂದ ಮಲ್ಲಿಕಾರ್ಜುನ ದೇವಸ್ಥಾನ ಜೀರ್ಣೋದ್ಧಾರ, ಗೋಪುರ ನಿರ್ಮಾಣ ಹಾಗೂ ಕಳಸಾ ರೋಹಣ ಸಮಾರಂಭ ಮಾ. 25 ರಂದು ಬೆಳಗ್ಗ 10 ಗಂಟೆಗೆ ನಡೆಯಲಿದೆ ಎಂದು ಟ್ರಸ್ಟ್ ಚೇರಮನ್ ಜಿ.ಎಂ. ಚಿಕ್ಕಮಠ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ. 24ರಂದು ಬೆಳಗ್ಗ 8.30ಕ್ಕೆ ಯಲ್ಲಾಪುರ ಓಣಿ ಜಗದ್ಗುರು ಪಂಚಾಚಾರ್ಯ ಮಣ್ಯಾಶ್ರಮದಿಂದ ನೂತನ ಕಳಸದ ಸುಮಂಗಲೆಯರಿಂದ ಕುಂಭಗಳೊಂದಿಗೆ ಭವ್ಯ ಮೆರವಣಿಗೆ ಆರಂಭವಾಗಿ ದೇಸಾಯಿ ಓಣಿ, ಗಬ್ಬೂರ ಓಣಿ ಭೂಸಪೇಟ ಮಾರ್ಗವಾಗಿ ಮಲ್ಲಿಕಾರ್ಜುನ ದೇವಸ್ಥಾನವರೆಗೆ ನಡೆಯಲಿದೆ. ಅಂದು ಬೆಳಗ್ಗ 10 ಗಂಟೆಗೆ ದೇವಸ್ಥಾನ ಆವರಣದಲ್ಲಿ ಸಮಾರಂಭ ನಡೆಯಲಿದ್ದು, ಮೂರು ಸಾವಿರ ಮಠ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಸಾನಿಧ್ಯ, ರುದ್ರಾಕ್ಷಿಮಠ ಬಸವಲಿಂಗ ಸ್ವಾಮೀಜಿ ದೇವಸ್ಥಾನ ಜಿರ್ನೋದ್ಧಾರ ಉದ್ಘಾಟನೆ ಮಾಡುವರು. ನೂತನ ಗೋಪುರ ಉದ್ಘಾಟನೆ ಎರಡೆತ್ತಿನಮಠದ ಸಿದ್ಧಲಿಂಗ ಸ್ವಾಮೀಜಿ, ಕಳಸಾರೋಹಣ ಹನ್ನೆರಡುಮಠದ ಅಭಿನವ ಮಡಿವಾಳ ಶಿವಾಚಾರ್ಯ ಸ್ವಾಮೀಜಿ, ಮುಖ್ಯ ಅತಿಥಿಯಾಗಿ ಉದ್ಯಮಿ ವಿಜಯಕುಮಾರ ಶೆಟ್ಟರ ಭಾಗವಹಿಸುವರು ಎಂದರು. ಎಚ್ ಎಸ್ ರೋಗಿ, ಶಿವು ಮೆಣಸಿನಕಾಯಿ, ಗುರುಸಿದ್ದಪ್ಪ ಉಗರಗೋಳ ಇದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹ



ಹುಬ್ಬಳ್ಳಿ: ಹಿರಿಯ ನಾಗರಿಕರನ್ನು ರಾಷ್ಟ್ರದ ಸಂಪತ್ತು ಎಂದು ಘೋಷಿಸಬೇಕು ಹಾಗೂ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ನಗರದಲ್ಲಿ ರಾಜ್ಯ ಹಿರಿಯ ನಾಗರಿಕರು ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ರಾಜ್ಯ ಮಟ್ಟದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮಂಗಳವಾರ ಇಲ್ಲಿಯ ನೆಹರು ಮೈದಾನದಲ್ಲಿ ಸಮಾವೇಶಗೊಂಡ ಹಿರಿಯ ನಾಗರಿಕರು, ರಾಜ್ಯ ಹಾಗೂ ಕೇಂದ್ರ ಸರ್ಕಾರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಅಲ್ಲಿಂದ ತಹಶೀಲ್ದಾರ್ ಕಚೇರಿ ವರೆಗೂ ಮೆರವಣಿಗೆ ನಡೆಸಿದರು. ತಹಶೀಲ್ದಾರ್ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರತ್ಯೇಕ ಸಚಿವಾಲಯ, ಪ್ರತ್ಯೇಕ ಬಜೆಟ್ ಮಂಡಿಸಬೇಕು. ಮಾಸಿಕ 10 ಸಾವಿರ ರೂ. ವೃದ್ಧಾಪ್ಯ ವೇತನ ಕೊಡಬೇಕು. ರೈಲ್ವೆ ರಿಯಾಯಿತಿ ತಕ್ಷಣ ಆರಂಭಿಸಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಆಗ್ರಹಿಸಿದರು. ರುದ್ರಾಕ್ಷಿಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ಸರ್ಕಾರಗಳು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರನ್ನು ಗೌರವದಿಂದ ಕಾಣಬೇಕು. ಅವರಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಆಗ್ರಹಿಸಿದರು. ಸಂಘದ ಅಧ್ಯಕ್ಷ ಬಿ.ಎ. ಪಾಟೀಲ ಮಾತನಾಡಿ, ಹಿರಿಯ ನಾಗರಿಕರಿಗೆ ವಿವಿಧ ಸವಲತ್ತು ಕಲ್ಪಿಸುವಂತೆ ಆಗ್ರಹಿಸುತ್ತ ಬಂದಿದ್ದೇವೆ. ಇದುವರೆಗೂ ಸರ್ಕಾರಗಳು ನಮ್ಮ ಬೇಡಿಕೆ ಈಡೇರಿಸಿಲ್ಲ, ಕೂಡಲೇ ನಮ್ಮ ಬೇಡಿಕೆ ಈಡೇರಿಕೆಗೆ ಮುಂದಾಗಬೇಕು. ಇಲ್ಲವಾದರೆ ರಾಜ್ಯಾದ್ಯಂತ ಹೋರಾಟ ಮುಂದುವರಿಯಲಿದೆ ಎಂದರು. ಪ್ರತಿಭಟನೆಯಲ್ಲಿ ಪ್ರಮುಖರಾದ ಮಹಾಂತೇಶ ಹಿರೇಮಠ, ಡಾ.ಆರ್.ಕೆ. ಮಠದ, ಡಾ. ಸುನಂದಾ ಬೆನ್ನೂರ, ಎ.ವೈ. ಬೆಂಡಿಗೇರಿ, ಡಿ.ಟಿ. ಪಾಟೀಲ, ಪಿ.ಆರ್. ಬಿರಾದಾರ, ಇತರರು ಪ್ರತಿಭಟನೆಯಲ್ಲಿದ್ದರು. ವಿವಿಧ ಜಿಲ್ಲೆಗಳ ನಿವೃತ್ತ ನೌಕರರು, ಹಿರಿಯ ನಾಗರಿಕರು ಭಾಗವಹಿಸಿದ್ದರು.

ವದಂತಿ ಸುಳಿಗೆ ಸಿಲುಕಿದ ಜನ | ಪೆಟ್ರೋಲ್, ಡೀಸೆಲ್ ಕೊರತೆಯಿಲ್ಲ: ಡಿಸಿ

ಬಂಕ್‌ಗಳ ಮುಂದೆ ಸರತಿ ಸಾಲು

▸ಮಹಾಂತೇಶ ಕಣವಿ

ಧಾರವಾಡ: ಯಾವದೋ ಮೂಲೆಯಲ್ಲಿ ಹಬ್ಬದ ಪೆಟ್ರೋಲ್-ಡಿಸೈಲ್ ಸಿಗಲ್ಲ ಎಂಬ ವದಂತಿ, ಕ್ಷಣಾರ್ಧದಲ್ಲಿ ಕಾಳ್ಗಿಚ್ಚಿನಂತೆ ಜಿಲ್ಲೆಯಲ್ಲಿ ಹರಡಿದ ಪರಿಣಾಮ ಇಂಧನ ಕೇಂದ್ರಗಳ ಮುಂಭಾಗ ಅಕ್ಷರಶಃ ಜನಸಾಗರವೇ ಸೃಷ್ಠಿಯಾದ ಘಟನೆ ಗೋಚರಿಸಿದವು.

ಸಾಮಾಜಿಕಜಾಲತಾಣದಲ್ಲಿ ಪೆಟ್ರೋಲ್-ಡಿಸೈಲ್ ಖಾಲಿಯಾಗುವ ಜತೆ ಜತೆ ಬೆಲೆಯೂ ಏರಿಕೆ ಕಾಣದಲಿದೆ ಎಂಬ ವದಂತಿ ನಂಬಿದ ವಾಹನ ಸವಾರರು ಪೆಟ್ರೋಲ್ ಬಂಕ್ ಮುಂಭಾಗ ತೈಲಕ್ಕಾಗಿ ಕಿಲೋಮಿಟರ್ ಗಟ್ಟಲೆ ಸರತಿಯಲ್ಲಿ ನಿಂತಿದ್ದರು.

ದಿಗಂತ ವಿಶೇಷ

ಜ್ಯೋತಿ ಪೆಟ್ರೋಲ್ ಪಂಪ್, ಬಾಗಲಕೋಟಿ ಪೆಟ್ರೋಲ್ ಪಂಪ್, ಮಾಳಮಡ್ಡಿ, ಜಯನಗರ, ಸಂಪಿಗೆನಗರ, ಮುರುಘಾಮಠ, ಹೊಸ ಬಸ್ ನಿಲ್ದಾಣ ಹತ್ತಿರದ ಪೆಟ್ರೋಲ್ ಪಂಪ್‌ಗಳಲ್ಲಿ ಬೈಕ್‌ಗಳು, ಆಟೋಗಳು, ಕಾರ್‌ಗಳು ಒಂದಕ್ಕೊಂದು ಮುತ್ತಿಕೊಂಡಿದ್ದವು. ಕೇವಲ ವಾಹನಗಳಿಗೆ ಎಣ್ಣೆ ಹಾಕಿಸದೆ, ಕೆಮಿಕಲ್ ಡಬ್ಬಿಗಳು, ಕ್ಯಾನ್‌ನಲ್ಲೂ ತೈಲ ತುಂಬಿಸಿಕೊಳ್ಳುವ ದೃಶ್ಯಗಳು ಗೋಚರಿಸಿದವು.





> ಡಿಸೈಲ್ ಮತ್ತು ಪೆಟ್ರೋಲ್ ಖಾಲಿ ಆಗಲಿದೆ ಎಂಬುದು ಕೇವಲ ವದಂತಿ. ಇದಕ್ಕೆ ಜನತೆ ಕಿವಿಗೊಡಬಾರದು. ಇಂಧನದ ಕೊರತೆ ಇಲ್ಲ. ಅದು ಪೂರೈಕೆ ಎಂದಿನಂತೆ ಇರುತ್ತದೆ.
> ■ ಮಂಜುಗೌಡ ಪಾಟೀಲ, ಪೆಟ್ರೋಲ್ ಪಂಪ್ ಮಾಲೀಕ

> ಪೆಟ್ರೋಲ್-ಡಿಸೈಲ್ ಹಾಗೂ ಗ್ಯಾಸ್ ಸಿಲಿಂಡರ್ ಸಿಗದಿರುವ ಮಾಹಿತಿ ಸುಳ್ಳು. ಜಿಲ್ಲೆಯಲ್ಲಿ 4-5 ದಿನಕ್ಕಾಗುವಷ್ಟು ತೈಲವಿದೆ. ಗೃಹಬಳಕೆ ಸಿಲಿಂಡರ್ ದಾಸ್ತಾನಿದೆ. ಜನರು ಸರತಿಯಲ್ಲಿ ನಿಲ್ಲಬಾರದು. ವದಂತಿಗೆ ಕಿವಿಗೊಡಬಾರದು.
> ■ ಸ್ನೇಹಲ್ ಆರ್., ಜಿಲಾಧಿಕಾರಿ

ಕೊರತೆ ಇಲ್ಲವೆಂದರೂ ಕೇಳದ ಜನ

ವದಂತಿ ಸುಳಿಗೆ ಸಿಲುಕಿರುವ ಧಾರವಾಡ ಜನರ ನೆಮ್ಮದಿಗೆ ವಾಹನಗಳ ಹಾರ್ನ್ ಸದ್ದು, ಜನರ ಕೂಗಾಟವೂ ಭಂಗತಂದಿತು. ತೈಲದ ಕೊರತೆ ಇಲ್ಲ ಎಂದು ಬಂಕ್ ಸಿಬ್ಬಂದಿ ಹೇಳಿದರೂ ನಮ್ಮ ಹೊಲದ ಟ್ರ್ಯಾಕ್ಟರ್‌ಗೆ ಬೇಕು, ಜನರೇಟರ್‌ಗೆ ಬೇಕು ಅಂತ ಸುಳ್ಳೋ, ನಿಜವೋ ಹೇಳಿ ಪೆಟ್ರೋಲ್-ಡಿಸೈಲ್ ನೀಡುವಂತೆ ಗೋಗರೆಯುವ ದೃಶ್ಯಗಳು ಸಾಮಾನ್ಯವಾಗಿ ಕಂಡುಬಂದವು.

» ಇದು ವದಂತಿ, ಯಾವುದೇ ಕೊರತೆಯಿಲ್ಲ ಎಂದು ಅಧಿಕಾರಿಗಳ ಮನವಿಗೂ ಕಿವಿಗೊಡದ ಜನರ ಸಂಗ್ರಹದ ಹಪಾಹಪಿ ನಿಲ್ಲಲಿಲ್ಲ

» ಕ್ಯಾನ್ ತುಂಬಿಸಿಕೊಂಡಾಗ ಮುಖದಲ್ಲಿ ಗೆಲುವಿನ ನಗು ಇತ್ತೇ ವಿನಃ ಕೃತಕ ಅಭಾವದ ಅರಿವು ಯಾರಿಗೂ ಇರಲಿಲ್ಲ

ಶಾಂತವಾಗಿದ್ದ ರಸ್ತೆಗಳು

ದ್ವಿಚಕ್ರ ವಾಹನಗಳು, ಕಾರುಗಳು ಮತ್ತು ಆಟೋರಿಕ್ಷಾಗಳ ಇಂಜಿನ್‌ಗಳ ಶಬ್ದ, ಹಾರ್ನ್‌ಗಳ ಕರ್ಕಶ ಅಬ್ಬರ, ಜನರ ಗೊಂದಲದ ಮಾತುಗಳಿಂದ ಶಾಂತವಾಗಿದ್ದ ರಸ್ತೆಗಳು ರಣರಂಗದಂತಾಗಿದ್ದವು. ಸರತಿಯಲ್ಲಿ ನಿಂತ ಜನರ ಮುಖದಲ್ಲಿ ಆತಂಕ ಮನೆಮಾಡಿತ್ತು. ನಾಳೆ ಆಫೀಸ್‌ಗೆ ಹೇಗೆ ಹೋಗುವುದು? ಮಕ್ಕಳನ್ನು ಸ್ಕೂಲ್‌ಗೆ ಬಿಡುವುದು ಹೇಗೆ? ಎಂಬ ಚಿಂತೆ ಪ್ರತಿಯೊಬ್ಬರನ್ನೂ ಕಾಡುತ್ತಿತ್ತು.

ಪೆಟ್ರೋಲ್, ಡೀಸೆಲ್ ತುಂಬಿಸಲು ಮುಗಿಬಿದ್ದ ಜನ



ನವಲಗುಂದ: ಪೆಟ್ರೋಲ್, ಡೀಸೆಲ್ ಒಂದುವಾರ ಸಿಗುವುದಿಲ್ಲ ಎಂಬ ಸುಳ್ಳು ವದಂತಿ ಹಿನ್ನೆಲೆ ಜನ ತಮ್ಮ ವಾಹನಗಳಿಗೆ ಡೀಸೆಲ್, ಪೆಟ್ರೋಲ್ ತುಂಬಿಸಲು ಮುಗಿಬಿದ್ದ ಘಟನೆ ನವಲಗುಂದ ಪಟ್ಟಣದಲ್ಲಿ ನಡೆದಿದೆ.

ಮಂಗಳವಾರ ಪಟ್ಟಣ ಸೇರಿದಂತೆ ಗ್ರಾಮಗಳಲ್ಲಿನ ಬಹುತೇಕ ಪೆಟ್ರೋಲ್ ಬಂಕ್‌ಗಳಲ್ಲಿ ಜನರು ಸರತಿ ಸಾಲಿನಲ್ಲಿ ವಾಹನ ನಿಲ್ಲಿಸಿದ್ದರು. ನೀರಿನ ಬಾಟಲಿಗಳಲ್ಲೂ ಪೆಟ್ರೋಲ್, ಕ್ಯಾನ್‌ಗಳಲ್ಲಿ ಡೀಸೆಲ್ ತುಂಬಿಸಿಕೊಂಡು ಹೋಗುತ್ತಿದ್ದರು. ಗ್ಯಾಸ್ ಸಿಲಿಂಡರ್ ಅಭಾವದಿಂದಾಗಿ ಹೋಟೆಲ್‌ಗಳು ಮತ್ತು ಟಿಫಿನ್ ಸೆಂಟರ್‌ಗಳು ಬಂದ್ ಆಗುವ ಭೀತಿ ಎದುರಾಗಿದೆ. ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಕಡಿಮೆಯಾದ ಕಾರಣ ಹೋಟೆಲ್ ಉದ್ಯಮಕ್ಕೆ ಹೊಡೆತ ಬಿದ್ದಿದೆ. ಹೀಗಾಗಿ ಕಟ್ಟಿಗೆ ಒಲೆ ಕಡೆ ಮೊರೆ ಹೋಗಿದ್ದಾರೆ.

> ಸುಮಾರು 15 ದಿನಗಳಿಂದ ನಮಗೆ ಗ್ಯಾಸ್ ಸಿಲೆಂಡರ್ ಸಿಕ್ಕಿಲ್ಲ. ಕಮರ್ಶಿಯಲ್ ಹಾಗೂ ಖಾಸಗಿ ಗ್ಯಾಸ್ ಸಿಲೆಂಡರ್ ಸಿಗದೇ ಇದ್ದಿದ್ದಕ್ಕೆ ರಸ್ತೆಯಲ್ಲಿ ಸೌದೆ ಹಚ್ಚಿ ಅಡುಗೆ ಮಾಡುತ್ತಿದ್ದೇವೆ.
> ■ ಶ್ರೀಶೈಲಯ್ಯ, ಸ್ನೇಹಿತರ ಹೋಟೆಲ್ ಮಾಲೀಕ, ನವಲಗುಂದ.

> ಗ್ಯಾಸ್ ಸಿಲೆಂಡರ್ ಸಿಗದೇ ಇದ್ದಿದಕ್ಕೆ ಸೌದೆ ಹಚ್ಚಿ ನೂಡಲ್ಸ್, ಗೋಬಿ, ಮಿರ್ಚಿ, ಬಜಿ ತಯಾರ ಮಾಡಿದ್ದೇವೆ.
> ■ ಮುತ್ತಣ್ಣ ಕುರ್ತಕೋಟಿ, ಸ್ಥಳಿಯ

> ದೇಶಾದ್ಯಂತ ತೈಲ ಹಾಗೂ ಗ್ಯಾಸ್ ಸಿಲೆಂಡರ್ ಕೊರತೆ ಹಿನ್ನೆಲೆ ಜನ ಸಾಮಾನ್ಯರ ಮೇಲೆ ಬಿಸಿ ತಟ್ಟುತ್ತಾ ಇದೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತ್ವರಿತಗತಿಯಲ್ಲಿ ಈ ಸಮಸ್ಯೆ ಪರಿಹರಿಸಲಿಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.
> ■ ಶಂಕರ ಪಾಟೀಲ ಮುನೇನಕೊಪ್ಪ ಮಾಜಿ ಸಚಿವ

> ಪೆಟ್ರೋಲ್-ಡಿಸೈಲ್, ಗ್ಯಾಸ್ ಕೊರತೆ ಬಿಸಿ ನಗರ ಮಾತ್ರವಲ್ಲ ಇದೀಗ ಹಳ್ಳಿಗಳಿಗೂ ತಟ್ಟಿದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರ ತನ್ನ ಪಾತ್ರವನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತಿದೆ. ಹೆಚ್ಚಿನ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲಿದೆ.
> ■ ಎನ್. ಎಚ್. ಕೋನರಡ್ಡಿ ಶಾಸಕ

ಮಾ.27ರಿಂದ ರಾಷ್ಟ್ರೀಯ ಸಂಕಲ್ಪ ಉತ್ಸವ: ಡಾ.ಅಜಿತ

ಧಾರವಾಡ: ಜನತಾ ಶಿಕ್ಷಣ ಸಮಿತಿ ಮಂಜುನಾಥೇಶ್ವರ ಸ್ನಾತಕ-ಸ್ನಾತಕೋತ್ತರ ಅಧ್ಯಯನ ಕೇಂದ್ರದಿಂದ ರಾಷ್ಟ್ರೀಯ ಸಂಕಲ್ಪ ಉತ್ಸವ ಮಾ.27, 28ರಂದು ಸನ್ನಿಧಿ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿರುವುದಾಗಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಈಗಾಗಲೇ 10 ಉತ್ಸವ ಯಶಸ್ವಿಯಾಗಿದ್ದು, 11ನೇ ಉತ್ಸವಕ್ಕೆ ಸಜ್ಜಾಗಿದೆ. ಗೋವಾ, ಮಹಾರಾಷ್ಟ್ರ, ಕೇರಳ ಮತ್ತು ಆಂಧ್ರಪ್ರದೇಶ ಸೇರಿದಂತೆ ಒಟ್ಟು 100 ಕಾಲೇಜುಗಳು ಪಾಲ್ಗೊಳ್ಳುವುದಾಗಿ ತಿಳಿಸಿದರು.

ಈಗಾಗಲೇ ಕರ್ನಾಟಕ ಹಾಗೂ ಹೊರರಾಜ್ಯ ಸೇರಿ 45 ಕಾಲೇಜು ನೋಂದಣಿ ಮಾಡಿಕೊಂಡಿದ್ದು, ಸುಮಾರು 3 ಸಾವಿರ ವಿದ್ಯಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಎಲ್ಲರಿಗೂ ಉಚಿತ ವಸತಿ, ಉಪಹಾರ ಹಾಗೂ ಊಟದ ವ್ಯವಸ್ಥೆ ಮಾಡಿದೆ ಎಂದರು.

ಐದು ಸ್ಪರ್ಧೆಗಳು: ಉತ್ಸವದಲ್ಲಿ ರಸಪ್ರಶ್ನೆ, ವಿಡಿಯೋ ಸಂಪಾದನೆ, ಛಾಯಾಗ್ರಹಣ, ಟಷರ್ ಹಂಟ್ ಸೇರಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದ್ದು, ಪ್ರಥಮ ರೂ.30 ಸಾವಿರ ನಗದು ಮತ್ತು ದ್ವಿತೀಯ ರೂ.20 ಸಾವಿರ ನಗದು, ಟ್ರೋಫಿ ಬಹುಮಾನ ನೀಡುವುದಾಗಿ ಹೇಳಿದರು.

ಒಟ್ಟು 18 ಪ್ರಶಸ್ತಿಗಳು: ಐದು ಸ್ಪರ್ಧೆಗಳಲ್ಲಿ ಒಟ್ಟು 18 ಪ್ರಶಸ್ತಿಗಳು ನೀಡಲಿದೆ. ವಿದ್ಯಾರ್ಥಿಗಳ ಪ್ರತಿಭೆಯ ಅನಾವರಣಕ್ಕೆ ಸಂಕಲ್ಪ ಉತ್ಸವ ಆಯೋಜಿಸುತ್ತಿದ್ದು, ಒಂದು ಕಾಲೇಜಿಂದ 10 ಜನರ ತಂಡ ಮಾತ್ರವೇ ಪಾಲ್ಗೊಳ್ಳಲು ಅವಕಾಶವಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಾ.27ಕ್ಕೆ ಉದ್ಘಾಟನೆ: ಮಾ.27ರ ಬೆಳಗ್ಗೆ 9.30ಕ್ಕೆ ಸನ್ನಿಧಿ ಕಲಾಕ್ಷೇತ್ರದಲ್ಲಿ ಸಂಕಲ್ಪ ಉತ್ಸವಕ್ಕೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಉದ್ಘಾಟಿಸಲಿದ್ದು, ಖ್ಯಾತ ಗಾಯಕ ಮತ್ತು ನಟ ನವೀನ್ ಸಜ್ಜು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದರು.

ಬಹುಮಾನ ವಿತರಣೆ: ಮಾ.28ರ ಸಂಜೆ 6ಕ್ಕೆ ನಡೆಯುವ ಸಮಾರೋಪದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ವಿಜೇತರಿಗೆ ಬಹುಮಾನ ವಿತರಿಸಲಿದ್ದು, ಕವಿವಿಯ ಕುಲಪತಿ ಡಾ.ಎ.ಎಂ. ಖಾನ್, ಜೆಎಸ್‌ಎಸ್ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಎಂಸಿಎ ವಿಭಾಗದ ನಿರ್ದೇಶಕ ಡಾ.ಸೂರಜ್ ಜೈನ್, ಜೆಎಸ್‌ಎಸ್ ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾದ್ಯೆ, ಪ್ರೊ. ಆರ್.ವಿ.ಚಿಟಗುಪ್ಪಿ ಇದ್ದರು.



ನೋಂದಣಿ ಐಡಿ, ಪ್ರಮಾಣಪತ್ರ ವಿತರಣೆ



ಹುಬ್ಬಳ್ಳಿ: ವಿಶ್ವ ಕ್ಷಯರೋಗ ದಿನಾಚರಣೆಯ ಅಂಗವಾಗಿ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಕರ್ನಾಟಕ ಸರ್ಕಾರದಸಹಯೋಗದಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಜೇಠಿಯಾ ಫೌಂಡೇಶನ್‌ಗೆ ಪ್ರಧಾನಮಂತ್ರಿ ಟಿಬಿ ಮುಕ್ತ ಭಾರತ ಅಭಿಯಾನ ಅಡಿಯಲ್ಲಿ ನಿಕ್ಷಯ ಮಿತ್ರ ಎಂದು ನೋಂದಣಿ ಐಡಿ ಹಾಗೂ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು. ಟಿಬಿ ರೋಗಿಗಳಿಗೆ ಪ್ರತಿ ತಿಂಗಳು ನಿರಂತರವಾಗಿ ಪ್ರೋಟೀನ್ ಪೌಡರ್ ನೀಡುವ ಮೂಲಕ ಕೆಎಂಸಿಆರ್‌ಐ ಟಿಬಿ ವಿಭಾಗ, ಹುಬ್ಬಳ್ಳಿಯಲ್ಲಿ ನೀಡುತ್ತಿರುವ ಸಮರ್ಪಿತ ಸೇವೆಯನ್ನು ಗಮನಿಸಿ ಈ ಗೌರವ ನೀಡಲಾಗಿದೆ. ಈ ಪ್ರಶಸ್ತಿಯನ್ನು ನಿವೃತ್ತ ಶಸ್ತ್ರಚಿಕಿತ್ಸಕ ಡಾ. ನಾಗರಾಜ್ ರಾವ್ ಸಾನು, ವೈದ್ಯಕೀಯ ಅಧೀಕ್ಷಕರು (ಹಾಸ್ಪಿಸ್) ಹಾಗೂ ಸಿಇಒ ಡಾ. ಸುನೀಲಕುಮಾರ್ ಸ್ವೀಕರಿಸಿದರು.



ಹುಬ್ಬಳ್ಳಿ: ಭೂಸಪೇಟದಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದ ಜೀರ್ಣೋದ್ಧಾರ ಗೋಪುರ ನಿರ್ಮಾಣ ಹಾಗೂ ಕಳಸಾರೋಹಣ ಕಾರ್ಯಕ್ರಮದ ಅಂಗವಾಗಿ ಕಳಸದ ಮೆರವಣಿಗೆ ವಿಂಜೃಭಣೆಯಿಂದ ನಡೆಯಿತು. ಮಹಿಳೆಯರು 108 ಕುಂಭ ಮೇಳದ ಜೊತೆಗೆ ಮೆರವಣಿಗೆಯಲ್ಲಿ ಭಾಗವಹಿಸಿದರು. ಹಿರಿಯರಾದ ಜಿ.ಎಂ.ಚಿಕ್ಕಮಠ್ ಪಾಲಿಕೆ ಸದಸ್ಯ ಶಿವು ಮೆಣಸಿಕಾಯಿ, ಪ್ರೇಮಾನಂದ ಬೆಳ್ಳೊಳ್ಳಿ ,ಹುಚ್ಚಪ್ಪ ರೂಗಿ, ರಾಜು ಕುಂದನಹಳ್ಳಿ, ಗುರುಶಿದ್ದಪ್ಪ ಉಗರಗೋಳ, ಗುರುಸಿದ್ದಪ್ಪ ನಾಶಿ, ಉಮೇಶ್ ಅಪ್ಪೋಜಿ, ಮಲ್ಲೇಶಪ್ಪ ಉಗರಗೋಳ, ರಾಜು ಕೋರ್ಯಾಣಮಠ ಸುಭಾಸ ಅಥಣಿ ಇದ್ದರು.

ಲಾಡ್ ಫೌಂಡೇಶನ್‌ನಿಂದ ಹಂಚು ವಿತರಣೆ

ಕಲಘಟಗಿ: ತಾಲೂಕಿನ ಮಾಚಾಪೂರ ಗ್ರಾಮದಲ್ಲಿ ಮಾ.17 ರಂದು ಸುರಿದ ಆಲಿಕಲ್ಲು ಮಳೆಯಿಂದ ಹಾನಿಗೊಳಗಾದ ಮನೆಗಳ ಸಂತ್ರಸ್ತರಿಗೆ ಸಂತೋಷ್ ಲಾಡ್ ಫೌಂಡೇಶನ್ ನಿಂದ ಉಚಿತವಾಗಿ ಹೆಂಚುಗಳನ್ನು ವಿತರಿಸಲಾಯಿತು. ಗ್ರಾಮದ 250ಕ್ಕೂ ಹೆಚ್ಚು ಮನೆಗಳಿಗೆ ಒಟ್ಟು 50 ಸಾವಿರ ಹೆಂಚುಗಳನ್ನು ಮಂಗಳವಾರ ವಿತರಿಸಲಾಯಿತು. ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್.ಆರ್. ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮುರಳ್ಳಿ, ಹರಿಶಂಕರ ಮಠದ, ಸೋಮಣ್ಣ ಬೆನ್ನೂರ, ಬಾಳು ಖಾನಾಪುರ, ಬಾಬಣ್ಣ ಅಂಚಟಗೇರಿ, ಸುಧೀರ ಬೋಳಾರ, ಬೂದಪ್ಪ ಹುರಕಡ್ಲಿ ಇದ್ದರು.





ಹುಬ್ಬಳ್ಳಿ: ಅಕ್ರಮವಾಗಿ ಧಾರ್ಮಿಕ ಕಟ್ಟಡ ಇಲ್ಲಿಯ ಗೋಕುಲ ರಸ್ತೆ ಸವಣೂರ ಬಡಾವಣೆಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಆರೋಪಿಸಿ ಮಂಗಳವಾರ ನಿರ್ಮಾಣ ಮಾಡುತ್ತಿರುವ ಕಟ್ಟದ ಸ್ಥಳದಲ್ಲಿ ಸಮಾವೇಶಗೊಂಡ ಶ್ರೀರಾಮ ಸೇನೆ ಹಾಗೂ ಹಿಂದೂ ಸಂಘಟನೆ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಹಿಂದೂ ಸಂಘಟನೆ ಮುಖಂಡ ಶ್ರೀಧರ ಕಲಬುರ್ಗಿ, ರಘು ಯಲ್ಲಕ್ಕನವರ, ಶ್ರೀಧರ ಕಲಬುರ್ಗಿ, ಮಂಜುನಾಥ ಕಾಟಕರ, ವಿಶ್ವನಾಥ ಬೂದೂರ ಹಾಗೂ ಇತರರಿದ್ದರು.

ಆತ್ಮವಿಶ್ವಾಸ ಯುವ ತಲೆಮಾರಿಗೆ ಮಾದರಿ: ಡಾ. ಲಿಂಗರಾಜ

ಹುಬ್ಬಳ್ಳಿ: ನಾನು ಮತ್ತು ನನ್ನ ಬರಹ ಕುರಿತಾಗಿ ಉಪನ್ಯಾಸ ನೀಡಿದ ಯುವ ಚಿಂತಕಿ ಮಲ್ಲಮ್ಮ ಯಾಟಗಲ್ ಹಲವು ಸಂಕಷ್ಟಗಳನ್ನು ಎದುರಿಸಿ ಮುಂದೆ ಬಂದ ನಮ್ಮ ನಡುವಿನ ಒಬ್ಬ ಯುವ ಹೋರಾಟಗಾರ್ತಿ. ಅವಳಲ್ಲಿರುವ ಛಲ, ಆತ್ಮವಿಶ್ವಾಸ ಯುವ ತಲೆಮಾರಿಗೆ ಒಂದು ಮಾದರಿ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಅಭಿಪ್ರಾಯಪಟ್ಟರು.

ಇಲ್ಲಿಯ ಕಾಳಿದಾಸನಗರದ ನಾಗಸುಧೆ ಜಗಲಿಯಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ನಾಗಸುಧೆ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ಚಿಂತಕ ಪ್ರೊ. ಕೆ. ಎಸ್ ಕೌಜಲಗಿ ಮಾತನಾಡಿ, ಹಿಂದಿನಿಂದಲೂ ನಮ್ಮ ಭಾಗದಲ್ಲಿ ಗೆಳೆಯರ ಬಳಗದಂಥ ಸಣ್ಣ ಸಹೃದಯ ಗುಂಪುಗಳ ಸಾಹಿತ್ಯಿಕ ಚಟುವಟಿಕೆಗಳೇ ಹೀಗೆ ಮಹತ್ವವಾದ ಕೆಲಸವನ್ನು ಮಾಡುತ್ತ ಬಂದಿವೆ. ನಾಗಸುಧೆ ಜಗಲಿಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳು ತನ್ನ ಮೌಲಿಕತೆಯನ್ನು ಯಾವತ್ತೂ ಉಳಿಸಿಕೊಂಡು ಬಂದಿದೆ ಎಂದರು.

ಜೆ.ಜಿ. ವಾಣಿಜ್ಯ ಕಾಲೇಜಿನ ಕನ್ನಡ ಉಪನ್ಯಾಸಕಿ ಮತ್ತು ಬರಹಗಾರ್ತಿ ಮಲ್ಲಮ್ಮ ಯಾಟಗಲ್ ತಾವು ನಡೆದು ಬಂದ ದಾರಿಯ ಸಂದಿಗ್ಧಗಳನ್ನು ಹಂಚಿಕೊಂಡರು. ನಂತರ ನಡೆದ ಕವಿಗೋಷ್ಠಿಯಲ್ಲಿ ಸಿ. ಎಂ ಚನ್ನಬಸಪ್ಪ, ಸಿ.ಎಂ ಮುನಿಸ್ವಾಮಿ, ಗಾಯತ್ರಿ ರವಿ, ಕವಿತಾ ಹೆಗಡೆ ಅಭಯಂ, ವಿರೂಪಾಕ್ಷ ಕಟ್ಟಿಮನಿ, ಮಂಜುನಾಥ ಹೊಸ್ಮನೆ ಮತ್ತು ವಿಶಾಲಾಕ್ಷಿ ಶೆಟ್ಟಿ ಕವಿತೆಗಳನ್ನು ವಾಚಿಸಿದರು. ರಾಮು ಮೂಲಗಿ ಜಾನಪದ ಹಾಡನ್ನು ಪ್ರಸ್ತುತ ಪಡಿಸಿದರು. ಪ್ರಕಾಶ ಕಡಮೆ ಸ್ವಾಗತಿಸಿ ನಿರ್ವಹಿಸಿದರು. ಸುನಂದಾ ಕಡಮೆ ವಂದಿಸಿದರು. ಸಾಹಿತಿಗಳಾದ ನಿರ್ಮಲಾ ಶೆಟ್ಟರ್, ಮಹಾಂತಪ್ಪ ನಂದೂರ, ಎಂ.ಬಿ. ಅಡ್ನೂರ, ಬಸು ಸುಳಿಭಾವಿ, ಅಶೋಕ ನಾಡಿಗೇರ, ವಿದ್ಯಾ ನಾಡಿಗೇರ, ಎಸ್.ಆರ್. ಆಶಿ, ಚಿದಾನಂದ ಕಮ್ಮಾರ, ತೇಜಾವತಿ ಎಚ್. ಡಿ., ಆರ್. ಎಂ. ಗೋಗೇರಿ, ಸಂಜೀವ ದುಮಕನಾಳ, ಧಾರವಾಡಶೆಟ್ಟರ್, ಸರೋಜಾ ಮೇಟಿ, ವ್ಯಾಸ ದೇಶಪಾಂಡೆ, ಎಸ್. ಅರುಂಧತಿ, ವೈಭವ ಪೂಜಾರಿ ಉಪಸ್ಥಿತರಿದ್ದರು.



ಇಷ್ಟಲಿಂಗ ಪೂಜೆಯಿಂದ ಬದುಕು ಸಮೃದ್ಧ

ಕುಂದಗೋಳ: ಶ್ರದ್ಧಾ, ಭಕ್ತಿಯಿಂದ ಜೀವನದಲ್ಲಿ ಇಷ್ಟಲಿಂಗ ಪೂಜೆ, ಮನೆದೇವರ ಪೂಜೆ ಹಾಗೂ ಗ್ರಾಮ ದೇವತೆ ಪೂಜೆ ಮಾಡುವುದರ ಫಲವಾಗಿ ಬದುಕು ಸಮೃದ್ಧವಾಗುತ್ತದೆ ಎಂದು ಕಾಶಿ ಪೀಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಶಿರೂರ ಗ್ರಾಮದಲ್ಲಿನ ಕುಂದಗೋಳ ಪಂಚಗ್ರಹ ಹಿರೇಮಠದ ಶಾಖಾಮಠದಲ್ಲಿ ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾಪೂಜೆ, ಅಯ್ಯಾಚಾರ ಹಾಗೂ ಚಂದ್ರದರ್ಶನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಯುವಕರಿಗೆ ಪೂಜೆ, ಪುನಸ್ಕಾರ, ಸಂಸ್ಕೃತಿ, ಸಂಪ್ರದಾಯ ಸನಾತನ ಹಿಂದೂ ಸಂಸ್ಕೃತಿ ಬಗ್ಗೆ ತಿಳಿಸಬೇಕು ಎಂದರು. ಕಾಶಿ ಪೀಠದ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯ ಇಷ್ಟಲಿಂಗ ಮಹಾಪೂಜೆ, ಜಂಗಮ ವಟುಗಳ ಅಯ್ಯಾಚಾರ ಹಾಗೂ ಚಂದ್ರದರ್ಶನ ಕಾರ್ಯಕ್ರಮ ಜರುಗಿತು. ಹಾಸನ ಜಿಲ್ಲೆಯ ಸದಾಶಿವ ಶಿವಾಚಾರ್ಯ ಸ್ವಾಮೀಜಿ, ಚನ್ನಯ್ಯ ಹಿರೇಮಠ, ನಿವೃತ್ತ ಪಿಎಸ್‌ಐ ಜಿ.ಸಿ.ಹಿರೇಮಠ, ಈಶ್ವರಯ್ಯ ಹಿರೇಮಠ, ಶಿಕ್ಷಕ ಶಿವಮೂರ್ತಯ್ಯ ಹಿರೇಮಠ, ಬಸಯ್ಯ ಹಿರೇಮಠ, ಮೃತ್ಯುಂಜಯ ಹಿರೇಮಠ, ಸಾಗರ ಎಂ.ಕೆ., ಶೇಖರಗೌಡ ಸಂಕನಗೌಡ್ರ, ಡಾ.ಸಿ.ಕೆ.ಪಾಟೀಲ, ರುದ್ರಪ್ಪ ಗಾಣಿಗೇರ, ಈಶ್ವರ ಬೆಂಗೇರಿ, ನಿವೃತ್ತ ಶಿಕ್ಷಕ ವಿ.ಜಿ.ಪಾಟೀಲ, ಬಾಪುಗೌಡ ಪಾಟೀಲ, ಮಂಜುನಾಥ ಕಮಡೊಳ್ಳಿ, ಶಂಕ್ರಯ್ಯ ಹಿರೇಮಠ, ಪ್ರವೀಣಕುಮಾರ ಭೂಸನೂರಮಠ, ನಿಂಗಪ್ಪ ಭಜಮ್ಮನವರ, ಗೌಡಪ್ಪ ಕಬನೂರ, ಸುರೇಶ ಕೋಳೂರ, ಗುರುಸಿದ್ಧಗೌಡ ಸುಳ್ಳಪ್ಪಗೌಡ್ರ, ಗೌಡಪ್ಪಗೌಡ ಹಿರೇಗೌಡ್ರ ಇತರರಿದ್ದರು.



ಧರ್ಮ-ಸಂಸ್ಕೃತಿ ಉಳಿಸುವ ಉದ್ದೇಶ ಜಾತ್ರೆಗಳದ್ದು

ಉಪ್ಪಿನಬೆಟಗೇರಿ: ವಿಭಿನ್ನ ಧರ್ಮ ಪೀಠಗಳು ಹಾಗೂ ಮಠ-ಮಂದಿರಗಳ ಮೂಲಕ ನಾಡಿನಾದ್ಯಂತ ಜರುಗುವ ಜಾತ್ರೆಗಳ ಹಿಂದೆ ಧರ್ಮ, ಸಂಸ್ಕೃತಿ, ಸಂಸ್ಕಾರಗಳನ್ನು ಉಳಿಸುವ ಉದಾತ್ತ ಉದ್ದೇಶವಿದೆ ಎಂದು ನಗರದ ಮುರುಘಾಮಠದ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅವರು ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಕರ್ತೃ ಶ್ರೀಗುರುಶಾಂತಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಧರ್ಮ ಸಂಗಮ ಸಮಾವೇಶದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಹಾಸನ ಜಿಲ್ಲೆಯ ನೊಣವಿನಕೆರೆ ಶ್ರೀಸೋಮೇಕಟ್ಟೆ ಕಾಡಸಿದ್ದೇಶ್ವರಮಠದ ಶ್ರೀಅಭಿನವ ಕಾಡಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಯುದ್ಧಗಳಿಂದಾಗಿ ಇಂದು ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಅಶಾಂತಿ ನೆಲೆಸಿದೆ. ಅಲ್ಲಿಯ ಜನಮನಗಳು ತಲ್ಲಣಗೊಂಡಿವೆ. ಆದರೆ ಆಧ್ಯಾತ್ಮದ ತವರುಮನೆ ಭಾರತದಲ್ಲಿ ಸದಾಕಾಲವೂ ಶಾಂತಿ, ಸಮಾಧಾನ, ಸಮೃದ್ಧಿ ನೆಲಸಲು ಇಲ್ಲಿ ಅವತಾರ ತಾಳಿರುವ ಅನೇಕ ಆಚಾರ್ಯರ, ಶಿವಯೋಗಿಗಳ, ಸಂತರ, ಶರಣರ ತಪೋಶಕ್ತಿಯೇ ಕಾರಣವಾಗಿದೆ ಎಂದರು. ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಕಿರಿಯ ಶ್ರೀಗಳಾದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಮಷ್ಟಿ ಭಾವವನ್ನೇ ಕೇಂದ್ರೀಕರಿಸಿರುವ ದಾಸೋಹದ ಗುಣಗಳಾದ ಹಂಚಿ ತಿನ್ನುವ ವಿಚಾರಗಳನ್ನು ವ್ಯಾಪಕಗೊಳಿಸಿ ಸಾಮಾಜಿಕ ಒಳಿತನ್ನು ಜೊತೆಗೆ ಆಧ್ಯಾತ್ಮಿಕ ಪ್ರಗತಿಯನ್ನೂ ಸಾಧಿಸಬೇಕೆನ್ನುವುದು ಜಾತ್ರೆಗಳ ಹಿಂದಿನ ಬಹುಮುಖ್ಯ ಉದ್ದೇಶವಾಗಿದೆ ಎಂದರು.

ಕಲಬುರ್ಗಿ ಜಿಲ್ಲೆ ಬೆಳಗುಂಪಾ ಬೃಹನ್ಮಠದ ಶ್ರೀಅಭಿನವ ಪರ್ವತೇಶ್ವರ ಶಿವಾಚಾರ್ಯ ಸ್ವಾಮೀಜಿ ಹಾಗೂ ಸವದತ್ತಿ ಮೂಲಿಮಠದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡಿದರು. ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಹಿರಿಯ ಶ್ರೀಗಳಾದ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸಮಾವೇಶದ ಸಾನ್ನಿಧ್ಯ ವಹಿಸಿದ್ದರು. ಹಾಸನ ಜಿಲ್ಲೆ ಹೆಗ್ಗಡಹಳ್ಳಿಮಠದ ಶ್ರೀ ಷ'ಡ್ಕಾ'ವ'ರ'ಹಿ'ತೇ'ಶ್ವ'ರ' ಶಿವಾಚಾರ್ಯ ಸ್ವಾಮೀಜಿ, ಮೊರಬ ಜಡಿಮಠದ ಶ್ರೀಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಳೇಹುಬ್ಬಳ್ಳಿ-ಹಳ್ಯಾಳ ಪಂಚಗೃಹ ಹಿರೇಮಠದ ನಿಯೋಜಿತ ಪಟ್ಟಾಧ್ಯಕ್ಷರಾದ ಶ್ರೀರೇಣುಕಪ್ರಸಾದ ದೇವರು, ಜೆ.ಡಿ.ಎಸ್. ಜಿಲ್ಲಾಧ್ಯಕ್ಷ ಗುರುರಾಜ ಹುಣಸಿಮರದ, ಯುವ ಕಾಂಗ್ರೆಸ್ ಮುಖಂಡ ಈಶ್ವರ ಶಿವಳ್ಳಿ, ಗ್ರಾ.ಪಂ. ಮಾಜಿ ಸದಸ್ಯ ಬಸವರಾಜ ಇದ್ಲಿ ಇತರರಿದ್ದರು.




ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆ ಕೌಶಲಾಭಿವೃದ್ಧಿಯಲ್ಲಿ ಸೇರಿಸಿ

ವಿಧಾನಸಭೆ: ಶಾಲೆಗಳಲ್ಲಿ ಶೌಚಾಲಯಗಳನ್ನು ವಿದ್ಯಾರ್ಥಿಗಳು ತೊಳೆಯುವಂತೆ ಅನುಕೂಲವಾಗುವಂತೆ ಅದನ್ನು ಕೌಶಲಾಭಿವೃದ್ಧಿಯಲ್ಲಿ ಸೇರಿಸಿ. - ಹೀಗೆ ಸಲಹೆ ನೀಡಿದವರು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್.

2026ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕದ ಕುರಿತ ಚರ್ಚೆಯ ವೇಳೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು ಮಾತನಾಡಿ, ಶಾಲೆಗಳಲ್ಲಿ ಡಿ ಗ್ರೂಪ್ ಹುದ್ದೆಗಳನ್ನು ನೇಮಕ ಮಾಡಿ. ಮಕ್ಕಳನ್ನು ಶುಚಿತ್ವದ ಕೆಲಸಕ್ಕೆ ಬಳಸಲಾಗುತ್ತಿದೆ ಎಂದರು.

ಇದಕ್ಕೆ ಸಭಾಧ್ಯಕ್ಷ ಯು.ಟಿ.ಖಾದರ್ ಧ್ವನಿಗೂಡಿಸಿ, ಹಿಂದೆ ನಾವೆಲ್ಲ ಬೆಳಗ್ಗೆ ಬೇಗ ಶಾಲೆಗಳಲ್ಲಿನ ಶೌಚಾಲಯಗಳನ್ನು ತೊಳೆಯುತ್ತಿದ್ದೆವು. ಆಗ ಎಲ್ಲರಿಗೂ ಶೌಚಾಲಯಗಳ ಸ್ವಚ್ಛತೆ ಮಾಡಲು ಅವಕಾಶವಿತ್ತು. ಅದನ್ನು ಮಾಡುವಂತೆ ಶಿಕ್ಷಣ ಸಚಿವರಿಗೆ ಸೂಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 15 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಡಿ ಗ್ರೂಪ್ ನೇಮಕಕ್ಕೆ ಅನುಮತಿ ದೊರೆತಿಲ್ಲ. ಹೊರಗುತ್ತಿಗೆಯಲ್ಲಿ ನೇಮಕಕ್ಕೆ ಪ್ರಯತ್ನಿಸಲಾಗುವುದು ಎಂದರು.

ಆರಗ ಜ್ಞಾನೇಂದ್ರ ಮಾತನಾಡಿ, ಡಿ ಗ್ರೂಪ್ ನೌಕರರನ್ನು ನೇಮಕ ಮಾಡಲು ಆದರೆ ನೇಮಕ ಮಾಡಿ. ಇಲ್ಲದಿದ್ದರೆ ಮಕ್ಕಳು ಸ್ವಚ್ಛತೆ ಮಾಡಲು ಅವಕಾಶ ಮಾಡಿಕೊಡಿ. ಮಹಾತ್ಮ ಗಾಂಧೀಜಿ ಅವರೇ ಶೌಚಾಲಯ ತೊಳೆಯುತ್ತಿದ್ದರು. ನಮ್ಮ ಮಕ್ಕಳು ಅವರಿಗಿಂತ ದೊಡ್ಡವರಾ? ಅವರೂ ಶುಚಿತ್ವ ಕಲಿಯಲಿ ಎಂದು ಹೇಳಿದರು. ಈ ವೇಳೆ ಸಚಿವರು ಮತ್ತು ಕೆಲ ಸದಸ್ಯರು ಮಕ್ಕಳು ಶೌಚಾಲಯ ತೊಳೆಯುವುದಕ್ಕೆ ಕಾನೂನಿನಲ್ಲಿ ತೊಡಕಿದೆ ಎಂದು ಹೇಳಿದರು. ಕೊನೆಗೆ ಸಭಾಧ್ಯಕ್ಷರು ಮಾತನಾಡಿ, ಶಾಲೆಗಳ ಶೌಚಾಲಯಗಳ ಶುಚಿತ್ವಕ್ಕೆ ಆದ್ಯತೆ ಕೊಡಿ. ಒಂದೇ ಕಾನೂನು ಬದಲಾಗಲಿ. ಇಲ್ಲದಿದ್ದರೆ ಅದನ್ನು ಕೌಶಲ ಅಭಿವೃದ್ಧಿಯಲ್ಲಿ ಸೇರಿಸಿ ಎಂದರು.



ವಿಧಾನಸೌಧದ ಪಶ್ಚಿಮ ದ್ವಾರಕ್ಕೆ ಅಳವಡಿಸಲಾದ ನೂತನ ಬೀಟೆ ಮರದ ಬಾಗಿಲನ್ನು ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸ್ಪೀಕರ್ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ವಿಪಕ್ಷ ನಾಯಕ ಆರ್.ಅಶೋಕ ಮೊದಲಾದವರು ಇದ್ದರು.

ಮಾರ್ಚ್‌ನೊಳಗೆ 22 ಇಂದಿರಾ ಕ್ಯಾಂಟೀನ್ ಉದ್ಘಾಟನೆ

ವಿಧಾನ ಪರಿಷತ್ : ರಾಜ್ಯದ ವಿವಿಧೆಡೆ ಹೊಸದಾಗಿ ನಿರ್ಮಾಣಗೊಂಡಿರುವ 22 ಇಂದಿರಾ ಕ್ಯಾಂಟಿನ್‌ಗಳಿಗೆ ಕಳೆದ ಆರು ತಿಂಗಳಿಂದ ಸ್ಥಳೀಯ ಶಾಸಕರು ಉದ್ಘಾಟನೆ ಸಮಯ ನೀಡಿಲ್ಲ. ಈ ಬಗ್ಗೆ ವೈಯಕ್ತಿಕವಾಗಿ ಪತ್ರ ಬರೆದು ಉದ್ಘಾಟಿಸುವಂತೆ ಮನವಿ ಮಾಡಿದ್ದೇನೆ. ಈ ತಿಂಗಳಲ್ಲಿ ಕ್ಯಾಂಟಿನ್‌ಗಳನ್ನು ಉದ್ಘಾಟಿಸುವ ಭರವಸೆ ನೀಡಿದ್ದಾರೆ ಎಂದು ಪೌರಾಡಳಿತ ಸಚಿವ ರಹೀಂಖಾನ್ ತಿಳಿಸಿದರು.



ಸದಸ್ಯ ಕೆ.ಎಸ್.ನವೀನ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಇಂದಿರಾ ಕ್ಯಾಂಟಿನ್ ಯೋಜನೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕನಸಿನ ಯೋಜನೆಯಾಗಿದೆ. ರಾಜ್ಯದಲ್ಲಿ 346 ಇಂದಿರಾ ಕ್ಯಾಂಟಿನ್‌ಗಳು ಕಾರ್ಯನಿರ್ವಹಿಸುತ್ತಿವೆ. 22 ಕ್ಯಾಂಟಿನ್‌ಗಳು ಉದ್ಘಾಟನೆಗೆ ಬಾಕಿ ಇದ್ದು, 15 ಕ್ಯಾಂಟಿನ್‌ಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ ಎಂದು ವಿವರಿಸಿದರು.

ಇದಕ್ಕೂ ಮೊದಲು ಮಾತನಾಡಿದ ನವೀನ್, 2017ರಲ್ಲಿ ಇಂದಿರಾ ಕ್ಯಾಂಟಿನ್‌ಗಳ ನಿರ್ಮಾಣಕ್ಕೆ ಗುತ್ತಿಗೆ ನೀಡಿದ್ದ ಎಕ್ಸೆಲ್ ಪ್ರಿ ಕಾಸ್ಟ್ ಸೆಲ್ಯುಷನ್ ಪ್ರೈವೇಟ್ ಕಂಪೆನಿಗೆ 2023ರಲ್ಲಿ ಎರಡನೇ ಹಂತದ 186 ಕ್ಯಾಂಟಿನ್‌ಗಳ ನಿರ್ಮಾಣಕ್ಕೂ ಗುತ್ತಿಗೆ ನೀಡಲಾಗಿದೆ. ಈ ಕಂಪೆನಿಗೆ ಕೆಟಿಪಿಪಿ ಕಾಯ್ದೆ 4 (ಜಿ) ವಿನಾಯಿತಿ ನೀಡಲಾಗಿದೆ. ಸದ್ಯ ಕಂಪೆನಿ ಬಗ್ಗೆ ಪರಿಶೀಲಿಸಿದಾಗ ಕಂಪೆನಿ ಮುಚ್ಚಿದೆ ಎಂದು ಮಾಹಿತಿ ಬಂದಿದೆ. ನಿರ್ದಿಷ್ಟ ಕಂಪೆನಿಗೆ ಎರಡು ಬಾರಿ ಗುತ್ತಿಗೆ ನೀಡಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದರು.

ಸಚಿವ ರಹೀಂಖಾನ್ ಮಾತನಾಡಿ, ಇಂದಿರಾ ಕ್ಯಾಂಟಿನ್‌ಗಳ ನಿರ್ಮಾಣ ವಿಚಾರವಾಗಿ 2023ರಲ್ಲಿ ಅರ್ಜಿ ಸಲ್ಲಿಸಿ ಕಂಪೆನಿ ಬಿಡ್ ಮಾಡಿತ್ತು. ಎರಡನೇ ಹಂತದ ಕ್ಯಾಂಟಿನ್ ಗಳನ್ನ ಇದೇ ಕಂಪೆನಿ ನಿರ್ಮಿಸುತ್ತಿದೆ ಎಂದರು.

ಕಿರುಸುದ್ದಿ

ಆರ್ಥಿಕ ಶಿಸ್ತು ಕಾಪಾಡಲು ಆದ್ಯತೆ: ರಾಯರೆಡ್ಡಿ

ವಿಧಾನ ಸಭೆ: ರಾಜ್ಯದ ಜಿಡಿಪಿ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಾಲ ಮಾಡಲಾಗಿದ್ದು, ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲಾಗಿದೆ ಎಂದು ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು. ಬಜೆಟ್ ಮೇಲಿನ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, 17 ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರ ಅಪಾರ ಅನುಭವದಿಂದ ಈ ಬಜೆಟ್‌ನಲ್ಲಿ ಆರ್ಥಿಕ ಶಿಸ್ತು ಕಾಪಾಡಲಾಗಿದೆ ಎಂದರು. ಈ ಬಜೆಟ್‌ನಲ್ಲಿ ಬಂಡವಾಳ ವೆಚ್ಚ, ಜನಕಲ್ಯಾಣ ಮತ್ತು ಅಭಿವೃಧಿ ಕಾರ್ಯಗಳಿಗೆ ಅನುದಾನ ನೀಡಲಾಗಿದ್ದು, ಗ್ಯಾರಂಟಿ ಸರ್ಕಾರಕ್ಕೆ ಭಾರ ಆಗಿಲ್ಲ, ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗೆ 1 ಲಕ್ಷ 33 ಸಾವಿರ ಎಕರೆ ಭೂ ಸ್ವಾಧೀನಕ್ಕೆ ಬಜೆಟ್‌ನಲ್ಲಿ ಹಣ ಮೀಸಲಿಡಲಾಗಿದೆ. ರಾಜ್ಯಕ್ಕೆ ವಿದೇಶಿ ಬಂಡವಾಳ ಬರುತ್ತಿದ್ದು, ಇದು ಸಿದ್ದರಾಮಯ್ಯ ಅವರ ಆಡಳಿತದ ವೈಖರಿಗೆ ಸಾಕ್ಷಿ ಎಂದರು.

ಉದ್ಯೋಗಾಕಾಂಕ್ಷಿಗಳಿಗೆ ವಯೋಮಿತಿ 5 ವರ್ಷ ಸಡಿಲ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯಲ್ಲಿ ಉದ್ಯೋಗ ಆಕಾಂಕ್ಷಿಗಳಾಗಿರುವ ಅಭ್ಯರ್ಥಿಗಳಿಗೆ ಸರ್ಕಾರವು ಮಹತ್ವದ ವಿನಾಯಿತಿಯೊಂದನ್ನು ನೀಡಿದೆ. ಇಲಾಖೆಯ ನೇರ ನೇಮಕಾತಿಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ನಿಗದಿಪಡಿಸಲಾಗಿದ್ದ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಕಾಲ ಸಡಿಲಿಕೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ವಯೋಮಿತಿ ಸಡಿಲಿಕೆಯು ಕೇವಲ ಒಂದು ಬಾರಿ ಕ್ರಮವಾಗಿ ಜಾರಿಗೆ ಬರಲಿದೆ. ಸರ್ಕಾರದ ಈ ನಿರ್ಧಾರದಿಂದಾಗಿ ವಯೋಮಿತಿ ಮೀರಿ ಉದ್ಯೋಗದ ಅವಕಾಶ ವಂಚಿತರಾಗಿದ್ದ ಸಾವಿರಾರು ಯುವಕರಿಗೆ ಮತ್ತೆ ಪೊಲೀಸ್ ಇಲಾಖೆ ಸೇರಲು ಸುವರ್ಣಾವಕಾಶ ಲಭಿಸಿದಂತಾಗಿದೆ. ಅನ್ವಯವಾಗುವ ಅವಧಿ ದಿನಾಂಕ 31.12.2027 ವರೆಗೆ ಹೊರಡಿಸಲಾಗುವ ಎಲ್ಲಾ ನೇರ ನೇಮಕಾತಿ ಅಧಿಸೂಚನೆಗಳಿಗೆ ಈ ಸಡಿಲಿಕೆ ಅನ್ವಯವಾಗಲಿದೆ ಎಂದರು.

ಮಾಫಿಯಾ ಕಪಿಮುಷ್ಠಿಯಲ್ಲಿ ಕಸ ವಿಲೇವಾರಿ: ಅರುಣ್

ವಿಧಾನ ಪರಿಷತ್: ರಾಜ್ಯದಲ್ಲಿ ಕಸ ವಿಲೇವಾರಿ ಮಾಫಿಯಾ ಕಪಿಮುಷ್ಠಿಯಲ್ಲಿದೆ. ದೊಡ್ಡ ಲಾಬಿ ಇದನ್ನು ನಿಯಂತ್ರಿಸುತ್ತಿದೆ ಎಂದು ಬಿಜೆಪಿ ಸದಸ್ಯ ಡಿ.ಎಸ್. ಅರುಣ್ ದೂರಿದರು. ಪ್ರಶ್ನೋತ್ತರ ಕಲಾಪದಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಇ-ತ್ಯಾಜ್ಯ ವಿಲೇವಾರಿ, ವೈದ್ಯಕೀಯ ವಲಯದ ತ್ಯಾಜ್ಯ ವಿಲೇವಾರಿ ಸೇರಿದಂತೆ ಪೂರ್ಣಪ್ರಮಾಣದಲ್ಲಿ ಕಸ ವಿಲೇವಾರಿ ವೈಜ್ಞಾನಿಕವಾಗಿ ನಿರ್ವಹಣೆಯಾಗುತ್ತಿಲ್ಲ. ಗ್ರಾಮೀಣ ಭಾಗದಲ್ಲಿಯೂ ಈ ಸಮಸ್ಯೆ ವ್ಯಾಪಕವಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳ ಸಮನ್ವಯ ಅಗತ್ಯವಾಗಿದೆ ಎಂದರು. ಆ ವೇಳೆ ಪೌರಾಡಳಿತ ಸಚಿವ ರಹೀಂ ಖಾನ್, ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಹಾಗೂ ವಿಲೇವಾರಿಯಲ್ಲಿ ಸಮಸ್ಯೆ ಉಂಟಾಗುತ್ತಿರುವುದನ್ನು ಒಪ್ಪಿಕೊಂಡರು. ಕಟ್ಟುನಿಟ್ಟಿನ ನಿರ್ದೇಶನವುಳ್ಳ ಸುತ್ತೋಲೆಯನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು ಎಂದೂ ಭರವಸೆ ನೀಡಿದರು.

ಮನರೇಗಾ: ಶೇ.48 ಕುಟುಂಬಗಳಿಗೆ ಮಾತ್ರ ಉದ್ಯೋಗ ಚೀಟಿ

ಶೇ.5 ಕುಟುಂಬಗಳಿಗಷ್ಟೇ 100 ದಿನಗಳ ಉದ್ಯೋಗ

ವಿಧಾನಸಭೆ: ರಾಜ್ಯ ಸರ್ಕಾರ ಮರುಸ್ಥಾಪನೆಗೆ ಒತ್ತಾಯಿಸುತ್ತಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ)ಯಲ್ಲಿ ಉದ್ಯೋಗ ಚೀಟಿಗಳನ್ನು ವಿತರಿಸಿದ ಶೇ.48 ಕುಟುಂಬಗಳಿಗೆ ಮಾತ್ರ ಉದ್ಯೋಗ ಒದಗಿಸಲಾಗಿದೆ. ಅಲ್ಲದೇ 100 ದಿನಗಳ ಉದ್ಯೋಗ ಶೇ.5 ಕುಟುಂಬಗಳಿಗಷ್ಟೇ ಒದಗಿಸಿರುವುದು ಬಹಿರಂಗವಾಗಿದೆ.

ಮುಖ್ಯಮಂತ್ರಿಗಳ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮಂಡಿಸಿದ 2025ನೇ ಸಾಲಿನ ಮನರೇಗಾ ಕುರಿತಾದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯಲ್ಲಿ ಇದು ಉಲ್ಲೇಖವಾಗಿದೆ. ಕಾರ್ಯಕ್ಷಮತೆಯ ತಪಾಸಣೆಯನ್ನು 2019-20ರಿಂದ 2023-24ರ ಅವಧಿಯಲ್ಲಿ ನಡೆಸಲಾಗಿದೆ.

ಬಹುತೇಕರಿಗೆ 1-30 ದಿನಗಳ ಉದ್ಯೋಗ: 2024ರ ಮಾರ್ಚ್‌ನಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ 34,499 ಫಲಾನುಭವಿಗಳಿಗೆ ಉದ್ಯೋಗ ಚೀಟಿಗಳ ವಿತರಣೆ ಬಾಕಿ ಉಳಿದಿತ್ತು. ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಉದ್ಯೋಗ ಚೀಟಿಗಳು ನಿಗದಿತ ನಮೂನೆಗೆ ಬದ್ಧವಾಗಿರಲಿಲ್ಲ. ವಿಶಿಷ್ಟಚೇತನರಿಗೆ ವಿಶೇಷ ಉದ್ಯೋಗ ಚೀಟಿಗಳನ್ನು ನೀಡಿರಲಿಲ್ಲ. ಮನರೇಗಾ ಪ್ರತಿ ಬೇಡಿಕೆಯ ಕುಟುಂಬಕ್ಕೆ 100 ದಿನಗಳ ಉದ್ಯೋಗವನ್ನು ಖಚಿತಪಡಿಸಿದ್ದರೂ ನೋಂದಾಯಿತ ಕುಟುಂಬಗಳಿಂದ ಉದ್ಯೋಗದ ಬೇಡಿಕೆಯು ಉದ್ಯೋಗ ಚೀಟಿ ನೀಡಲಾದ ಶೇ.48 ಕುಟುಂಬಗಳಿಗಿಂತ ಅಧಿಕವಾಗಿರಲಿಲ್ಲ. ಈ ಅವಧಿಯಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸಿದ ಕುಟುಂಬಗಳು ಶೇ.5ರಷ್ಟಿದ್ದು, ಬಹುಪಾಲು ಕುಟುಂಬಗಳಿಗೆ ಕೇವಲ 1ರಿಂದ 30 ದಿನಗಳ ಉದ್ಯೋಗ ನೀಡಲಾಗಿದೆ.

ತನಿಖೆ ನಡೆಸಿದ ಗ್ರಾಮ ಪಂಚಾಯತ್‌ಗಳಲ್ಲಿ ಬೇಡಿಕೆ ರಿಜಿಸ್ಟರ್ ನಿರ್ವಹಣೆ ಮಾಡದಿರುವುದು ಮತ್ತು ಕಾರ್ಮಿಕರ ಬೇಡಿಕೆಯನ್ನು ತಪ್ಪಾಗಿ ದಾಖಲಿಸಿದ ಕಾರಣ ಫಲಾನುಭವಿಗಳಿಗೆ ನೀಡಬೇಕಾದ ನಿರುದ್ಯೋಗ ಭತ್ಯೆಯನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗಿಲ್ಲ. ಲೆಕ್ಕಪರಿಶೋಧನಾ ಅವಧಿಗೆ ಪಾವತಿಸಬೇಕಾದ 1.28 ಕೋಟಿ ರೂ. ನಿರುದ್ಯೋಗ ಭತ್ಯೆ ಕೂಡ ಫಲಾನುಭವಿಗಳಿಗೆ ಪಾವತಿಸಲು ಬಾಕಿ ಉಳಿದಿತ್ತು. 2022-23 ಮತ್ತು 2023-24ರ ಅವಧಿಯಲ್ಲಿ ಯೋಜನೆಯ ವೇತನ ಘಟಕದಡಿಯಲ್ಲಿ ವೆಚ್ಚವು ಇಳಿಕೆ ಪ್ರವೃತ್ತಿಯನ್ನು ತೋರಿಸಿತು.



ಸೃಜನೆಯಾಗಿರಲಿಲ್ಲ ಭೌತಿಕ ಆಸ್ತಿ

ಮನರೇಗಾ ಸಾಫ್ಟ್ ಬಳಸದೇ ಮಸ್ಟರ್ ರೋಲ್‌ಗಳನ್ನು ಮುದ್ರಿಸುವುದು ಮತ್ತು ಅಂತಹ ತಿದ್ದಿದ ಮಸ್ಟರ್ ರೋಲ್‌ಗಳ ಮೇಲೆ ಅನಿಯಮಿತ ಪಾವತಿಗಳಂತಹ ಅಕ್ರಮಗಳನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಇಲಾಖಾ ಅಧಿಕಾರಿಗಳೊಂದಿಗೆ ಯೋಜನೆಯಲ್ಲಿ ರಚಿಸಲಾದ ಸ್ವತ್ತುಗಳ ಜಂಟಿ ಭೌತಿಕ ಪರಿಶೀಲನೆಯು ಅವುಗಳ ಅಸಿತ್ವದಲ್ಲಿರಲಿಲ್ಲ ಅಥವಾ ಆಸ್ತಿಗಳು ನಿಷ್ಕ್ರಿಯವಾಗಿರುವುದನ್ನು ಬಹಿರಂಗಪಡಿಸಿದೆ.

ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿ ಕೊರತೆ

ಲೆಕ್ಕಪರಿಶೋಧನಾ ಅವಧಿಯಲ್ಲಿ ಒಮ್ಮೆ ಮಾತ್ರ ಸಭೆ ಸೇರಿದ್ದರಿಂದ ರಾಜ್ಯ ಉದ್ಯೋಗ ಖಾತರಿ ಪರಿಷತ್ ಮೂಲಕ ಯೋಜನೆಯ ನಿಗದಿತ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಕೊರತೆಯಿದೆ. ನಿಗದಿತ ಉಪ ಸಮಿತಿಗಳು ನಿಷ್ಕ್ರಿಯವಾಗಿದ್ದವು. ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ನಿರ್ದೇಶಕರ ನೇಮಕಾತಿಯಲ್ಲಿ ಮಾನದಂಡಗಳ ಉಲ್ಲಂಘನೆ, ಸಿಬ್ಬಂದಿಯ ಕೊರತೆ, ಹಣದ ಕೊರತೆ ಅಥವಾ ಬಿಡುಗಡೆಯಲ್ಲಿ ವಿಳಂಬ ಮತ್ತು ಲೆಕ್ಕಪರಿಶೋಧನೆಗಾಗಿ ದಾಖಲೆಗಳ ಅಲಭ್ಯತೆಯಂತಹ ಸಾಂಸ್ಥಿಕ ದೌರ್ಬಲ್ಯಗಳಿಂದ ಬಳಲುತ್ತಿತ್ತು. ಇದರಿಂದ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿನ ಕೊರತೆಯು 2019-20ರಲ್ಲಿ ಶೇ.1ರಿಂದ 2023-24ರಲ್ಲಿ ಶೇ.57ಕ್ಕೆ ಏರಿಕೆಯಾಗಿತ್ತು ಎಂಬುದನ್ನು ವರದಿ ಗಮನಿಸಿದೆ.

ಎಸಿಸಿ ಕಂಪನಿ ಗುತ್ತಿಗೆ ಮುಂದುವರಿಕೆಗೆ ಆಗ್ರಹ

ಮೇಲ್ಮನೆಯಲ್ಲಿ ಗದ್ದಲ

ವಿಧಾನ ಪರಿಷತ್: ಕೋಟ್ಯಂತರ ರೂ. ಗಣಿಗಾರಿಕೆ ಬಾಕಿ ಪಾವತಿಸದ ಆರೋಪ ಮತ್ತು ಅದಾನಿ ಗ್ರೂಪ್‌ನ ಎಸಿಸಿ ಲಿಮಿಟೆಡ್‌ಗೆ ಬೊಮ್ಮನಹಳ್ಳಿ, ಕಣ್ಣೂರವಾಡಿ ಮೊದಲಾದ ಕಡೆಗಳಲ್ಲಿ ಸುಣ್ಣದ ಕಲ್ಲಿನ ಬ್ಲಾಕ್ ಗುತ್ತಿಗೆ ನೀಡಲು ಮುಂದುವರಿಕೆಗೆ ಸಂಬಂಧಿಸಿದಂತೆ ಮಂಗಳವಾರ ಮೇಲ್ಮನೆಯಲ್ಲಿ ಜಟಾಪಟಿಗೆ ಕಾರಣವಾಯಿತು.



ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯೆ ಆರತಿ ಕೃಷ್ಣ ಪರವಾಗಿ ಈ ವಿಷಯವನ್ನು ಪ್ರಸ್ತಾಪಿಸಿದ ಕಾಂಗ್ರೆಸ್ ಪರಿಷತ್ ಸದಸ್ಯ ಕೆ. ಶಿವಕುಮಾರ್ ಕೆ. ಅವರು, ಕಲಬುರಗಿಯ ವಾಡಿಯಲ್ಲಿರುವ ಕಣ್ಣೂರು ಲೈಮ್‌ಸ್ಟೋನ್ ಬ್ಲಾಕ್‌ನಲ್ಲಿ ಗಣಿಗಾರಿಕೆಗಾಗಿ ಅದಾನಿ ಗ್ರೂಪ್‌ನ ಎಸಿಸಿ ಲಿಮಿಟೆಡ್‌ಗೆ ನೀಡಲಾದ ಗುತ್ತಿಗೆ ಅವಧಿ ಮುಗಿದಿದೆ ಎಂದು ರಾಜ್ಯ ಸರ್ಕಾರಕ್ಕೆ ತಿಳಿದಿದೆಯೇ ಎಂದು ಆರತಿ ಕೃಷ್ಣ ತಿಳಿದುಕೊಳ್ಳಲು ಬಯಸಿದ್ದರು. ಇದು ನಿಜವಾಗಿದ್ದರೆ, ರಾಜ್ಯ ಸರ್ಕಾರಕ್ಕೆ ಪಾವತಿಸಬೇಕಾದ ರಾಯಧನ, ಬಾಡಿಗೆ ಅಥವಾ ದಂಡದ ಒಟ್ಟು 850.21 ಕೋಟಿ ರು.ಗಳನ್ನು ಪಾವತಿಸದೆ ಸ್ಥಳದಲ್ಲಿ ಅನಧಿಕೃತ ಗಣಿಗಾರಿಕೆ ನಡೆಸಿದ್ದಕ್ಕಾಗಿ ಸರ್ಕಾರ ಈ ಕಂಪನಿಯ ವಿರುದ್ಧ ಏನು ಕ್ರಮ ಕೈಗೊಂಡಿದೆ? ಎಂದು ಅವರು ಲಿಖಿತ ಪ್ರಶ್ನೆಯಲ್ಲಿ ಕೇಳಿದರು. ಅದಾನಿ ಗ್ರೂಪ್ ಕ್ವಾರಿಯನ್ನು ವಹಿಸಿಕೊಂಡ ನಂತರ, ಅವರು 837 ಕೋಟಿ ರೂ.ಗಳನ್ನು ರಾಯಲ್ಟಿಯಾಗಿ ಪಾವತಿಸಬೇಕಾಯಿತು. ಇಂದಿನವರೆಗೆ ಅವರು ರಾಯಲ್ಟಿಯನ್ನು ಪಾವತಿಸಿಲ್ಲ, ಈ ರಾಯಲ್ಟಿಯಿಂದ ಅವರಿಗೆ ವಿನಾಯಿತಿ ನೀಡಲು ನಿಮ್ಮನ್ನು ಪ್ರೇರೇಪಿಸಿದ್ದೇನು? ಎಂದರು.

ಆಗ ಬಿಜೆಪಿ ಸದಸ್ಯ ಸಿ.ಟಿ. ರವಿ, ಪದೇ ಪದೇ ನಮ್ಮ ನಾಯಕರನ್ನು ಅದಾನಿ ಸ್ನೇಹಿತರು ಎಂದು ಕರೆಯುವ ನೀವು ಈಗ ಅದಾನಿ ಅವರ ಒಡೆತನದ ಕಂಪನಿಗೆ ಏಕೆ ಅನುಕೂಲಕರವಾದ ವಾತಾವರಣ ಸೃಷ್ಟಿಸುತ್ತಿದ್ದೀರಿ, ಇದರ ಹಿಂದಿನ ಅರ್ಥವೇನು ಎಂದು ಪ್ರಶ್ನಿಸಿದರು.

ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಪರವಾಗಿ ಇದಕ್ಕೆ ಉತ್ತರಿಸಿದ, ಸಚಿವ ಚೆಲುವರಾಯಸ್ವಾಮಿ, ಯಾವುದೇ ಹೊಸ ಪರವಾನಗಿಯನ್ನು ನೀಡಲಾಗಿಲ್ಲ ಮತ್ತು ಈ ವಿಷಯವು ಅಸ್ತಿತ್ವದಲ್ಲಿರುವ ಗಣಿಗಾರಿಕೆ ಗುತ್ತಿಗೆ ಮತ್ತು ಪ್ರತ್ಯೇಕ ಹೊಸ ಅರ್ಜಿಯನ್ನು ಇನ್ನೂ ಪ್ರಕ್ರಿಯೆಯಲ್ಲಿದೆ ಎಂದು ತಿಳಿಸಿದರು.

ಎಸಿಸಿಸಿ ಕಂಪನಿಯಿಂದ ಕಾನೂನು ಹೋರಾಟ

ಕಲಬುರಗಿ ಜಿಲ್ಲೆಯ ಇಂಗಳಗಿ ಹಾಗೂ ರಾವೂರ ಗ್ರಾಮಗಳ ವ್ಯಾಪ್ತಿಯಲ್ಲಿ 471.03 ಹೆಕ್ಟೇರ್ ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗೆ ಸಂಬಂಧಿಸಿದಂತೆ ರಾಜಧನ ಹಾಗೂ ದಂಡ ಸೇರಿ 850.21 ಕೋಟಿ ರೂ. ಎಸಿಸಿ ಲಿಮಿಟೆಡ್ ಪಾವತಿಸಬೇಕಿದೆ. ಆದರೆ, ಕಂಪನಿಯು ಇದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ ಕಾನೂನಾತ್ಮಕ ಹೋರಾಟ ನಡೆಸುತ್ತಿದೆ. ಅತ್ತ ಸುಪ್ರೀಂಕೋರ್ಟ್ ಕೂಡ ಈ ಪ್ರಕರಣ ಇತ್ಯರ್ಥವಾಗಬೇಕು. ರಾಜಧನ/ದಂಡದ ಪ್ರಮಾಣವೇ ತೀರ್ಮಾನವಾಗಬೇಕಿದೆ. ಅಲ್ಲಿಯವರೆಗೆ ಗಣಿಗಾರಿಕೆ ನಡೆಸಲು ಕೋರ್ಟ್ ಅವಕಾಶ ನೀಡಿದೆ ಎಂದು ಸ್ಪಷ್ಟಪಡಿಸಿದರು.

ಹು-ಧಾ ಮಹಾನಗರ ಪಾಲಿಕೆಗೆ 3,792 ಹುದ್ದೆ ಮಂಜೂರು

ವಿಧಾನ ಪರಿಷತ್: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ 3,792 ಹುದ್ದೆಗಳು ಮಂಜೂರಾಗಿವೆ ಎಂದು ನಗರಾಭಿವೃದ್ಧಿ ಸಚಿವ ಸಚಿವ ಬಿ.ಎಸ್. ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರಾದ ಎಸ್.ವಿ.ಸಂಕನೂರ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಮಂಜೂರಾದ 3,792 ಹುದ್ದೆಗಳ ಪೈಕಿ 1,059 ಖಾಯಂ ಅಧಿಕಾರಿ-ನೌಕರರು ಕಾರ್ಯನಿರ್ವಹಿಸುತ್ತಿದ್ದು, 1,760 ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದಾರೆ. ಉಳಿದ 973 ಖಾಲಿ ಹುದ್ದೆಗಳನ್ನು ಹಂತ-ಹಂತವಾಗಿ ಭರ್ತಿ ಮಾಡಲಾಗುವುದು ಎಂದರು. ಮಹಾನಗರ ಪಾಲಿಕೆಗಳ ಸಿಬ್ಬಂದಿಗೆ ವೇತನ ಮತ್ತು ಪಿಂಚಣಿಯ ಶೇ. 80 ರಷ್ಟು ವಿಶೇಷ ಹಣಕಾಸು ಆಯೋಗ ಮತ್ತು ಶೇ.20 ರಷ್ಟನ್ನು ಆಯಾ ಸಂಸ್ಥೆಗಳೇ ತಮ್ಮ ಹಣಕಾಸು ಸಂಪನ್ಮೂಲದಿಂದ ಕ್ರೋಢೀಕರಿಸಿ ಭರಿಸಬೇಕಾಗುತ್ತದೆ. ಆದರೆ, ಸಂಪೂರ್ಣ ವೇತನವನ್ನು ಸರ್ಕಾರವೇ ಭರಿಸಲು ಸಾಧ್ಯವಿಲ್ಲ, ಇದೇ ವೇಳೆ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗೆ ಪೂರ್ಣ ಪ್ರಮಾಣ ದಲ್ಲಿ ಸರ್ಕಾರವೇ ವೇತನ ಪಾವತಿಸುತ್ತಿದೆ ಎಂದರು.

ಗುತ್ತಿಗೆದಾರರಿಗೆ ಹಣ

ಅಮೃತ್ 1ರ ಅಡಿಯಲ್ಲಿ ನಡೆದ ಕಾಮಗಾರಿಗಳಿಗೆ ಸುಮಾರು 600 ಕೋಟಿ ರೂ.ಗಳಷ್ಟು ಹಣವನ್ನು ಗುತ್ತಿಗೆದಾರರಿಗೆ ಪಾವತಿ ಮಾಡುವುದು ಬಾಕಿಯಿದೆ. ಹಣಕಾಸು ಇಲಾಖೆಯೊಂದಿಗೆ ಚರ್ಚಿಸಿದ ಬಳಿಕ ಈ ಹಣವನ್ನು ಹಂತ-ಹಂತವಾಗಿ ಗುತ್ತಿಗೆದಾರರಿಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬಿ.ಎಸ್. ಸುರೇಶ್ ತಿಳಿಸಿದರು.

ಉತ್ತರಿಸದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ: ಹೊರಟ್ಟಿ ತಾಕೀತು

ವಿಧಾನ ಪರಿಷತ್: ಮೇಲ್ಮನೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿಲ್ಲವೆಂದರೆ ಏನರ್ಥ? ನಾಳೆ ಸದನಕ್ಕೆ ಉತ್ತರ ಒದಗಿಸದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಿ, ಇಲ್ಲವೇ ಅವರನ್ನು ಕರೆತಂದು ಸದನದಲ್ಲಿ ನಿಲ್ಲಿಸಿ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಮೇಲ್ಮನೆ ಸಭಾನಾಯಕ ಬೋಸರಾಜು ಅವರಿಗೆ ತಾಕೀತು ಮಾಡಿದರು.



ಮೇಲ್ಮನೆಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಈ ಬಾರಿ ಸದನದಲ್ಲಿ ಪ್ರಶ್ನೋತ್ತರದಲ್ಲಿ 157 ಪ್ರಶ್ನೆಗಳನ್ನು ಕೇಳಲಾಗಿದ್ದು, ಈವರೆಗೆ 57ಕ್ಕೆ ಮಾತ್ರ ಉತ್ತರಗಳು ಬಂದಿವೆ. ಹೀಗಾದರೆ ಹೇಗೆ ಎಂದ ಸದಸ್ಯ ಭೋಜೇಗೌಡ ಸಭಾಪತಿಗಳ ಗಮನ ಸೆಳೆದರು. ಅದಕ್ಕೆ ಧ್ವನಿಗೂಡಿಸಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಸದಸ್ಯ ಸಿ.ಟಿ.ರವಿ, ಈ ಬಾರಿಯಷ್ಟೇ ಅಲ್ಲ, ಕಳೆದ ಬೆಳಗಾವಿ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೂ ಇನ್ನೂ ಉತ್ತರ ಸಿಕ್ಕಿಲ್ಲ ಎಂದು ದೂರಿದರು. ಸದನಕ್ಕೆ ಉತ್ತರ ಒದಗಿಸದ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಈಗಾಗಲೇ ಪೀಠ ಸರ್ಕಾರಕ್ಕೆ ಆದೇಶಿಸಿದೆ. ಅದರಂತೆ ಕ್ರಮ ವಹಿಸಲಿ. ವಿಧಾನ ಪರಿಸತ್ ಸದಸ್ಯರು ಕೇಳಿದ ಪ್ರಶ್ನೆಗಳಿಗೂ ಅಧಿಕಾರಿಗಳು ಉತ್ತರ ಹೇಳುತ್ತಿಲ್ಲ ಎಂದರೆ ಜನರು ಏನು ಮಾತನಾಡಿಕೊಳ್ಳಬಹುದು. ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ಮನವಿ ಮಾಡಿದರು.

ಹಜ್ ಯಾತ್ರೆಗಾಗಿ ಪ್ರತ್ಯೇಕ ಟರ್ಮಿನಲ್ ನಿರೀಕ್ಷೆ: ಸಚಿವ

ವಿಧಾನ ಪರಿಷತ್: ಮಂಗಳೂರು ವಿಮಾನ ನಿಲ್ದಾಣದಿಂದ ಹಜ್ ಯಾತ್ರೆಗೆ ತೆರಳುವ ಯಾತ್ರಿಕರಿಗೆ ಈ ವರ್ಷ ಪ್ರತ್ಯೇಕ ಟರ್ಮಿನಲ್ ಆರಂಭಿಸುವ ನಿರೀಕ್ಷೆಯಿದೆ ಎಂದು ಹಜ್ ಸಚಿವ ರಹೀಂ ಖಾನ್ ತಿಳಿಸಿದರು. ಅವರು ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ನಾಗರಾಜ್ ಯಾದವ್ ಅವರ ಪ್ರಶ್ನೆಗೆ ಉತ್ತರಿಸಿದರು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಡುವ ಹಜ್ ಯಾತ್ರಿಕರಿಗೆ ಬಿಐಎಲ್ ನಿಂದ ಪ್ರತಿ ವರ್ಷ ಪ್ರತ್ಯೇಕ ತಾತ್ಕಾಲಿಕ ಟರ್ಮಿನಲ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಅದೇ ರೀತಿ ಮಂಗಳೂರು ವಿಮಾನ ನಿಲ್ದಾಣದಿಂದ ಪ್ರತ್ಯೇಕ ಟರ್ಮಿನಲ್‌ಗೆ ಎರಡು ವರ್ಷಗಳಿಂದ ಕೇಂದ್ರ ಸರ್ಕಾರ ಅನುಮತಿ ನೀಡಿರಲಿಲ್ಲ, ಮತ್ತೆ ಅನುಮತಿ ನೀಡುವ ಕುರಿತು ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಲಾಗಿದ್ದು, ಈ ವರ್ಷ ಆರಂಭಿಸುವ ವಿಶ್ವಾಸವಿದೆ ಎಂದರು. ರಾಜ್ಯದಲ್ಲಿ ಪ್ರತಿ ವರ್ಷ ಸಾವಿರಾರು ಮಂದಿ ಹಜ್ ಯಾತ್ರೆಗೆ ತೆರಳುತ್ತಾರೆ. 2025 ರಲ್ಲಿ 8 ಸಾವಿರ ಹಾಗೂ ಈ ಬಾರಿ 11 ಸಾವಿರ ಮಂದಿ ಹಜ್ ಯಾತ್ರೆ ತೆರಳಲಿದ್ದಾರೆ. ಸೌದಿ ಅರೇಬಿಯಾ, ಹಜ್ ಯಾತ್ರಿಕರು ಆರೋಗ್ಯ ತಪಾಸಣೆಯಲ್ಲಿ ದೃಢವಾಗಿರಬೇಕು ಎಂದು ತಿಳಿಸಿದೆ. ಆದರಂತೆ ರಾಜ್ಯ ಸರ್ಕಾರ ಆರೋಗ್ಯ ತಪಾಸಣೆ ನಡೆಸುತ್ತಿದೆ ಎಂದು ತಿಳಿಸಿದರು.

ಇಂದಿನಿಂದ ಮೈಸೂರಲ್ಲಿ ಆರೆಸ್ಸೆಸ್ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ

ಮೈಸೂರು: ಏಕಾತ್ಮ ಮಾನವ ದರ್ಶನ-ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನವನ್ನು ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಮಾರ್ಚ್ 25ರಿಂದ ಮಾರ್ಚ್ 27ರ ವರೆಗೆ ಪ್ರಜ್ಞಾ ಪ್ರವಾಹ, ಕರ್ನಾಟಕ ಹಾಗೂ ಡಾ. ಶ್ಯಾಮಪ್ರಸಾದ ಮುಖರ್ಜಿ ರಿಸರ್ಚ್ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಲಾಗಿದೆ.





ಭಾರತೀಯ ದರ್ಶನ, ಆಧ್ಯಾತ್ಮಿಕತೆ ಮತ್ತು ಸಮಾಜಶಾಸ್ತ್ರಗಳ ಆಧಾರದ ಮೇಲೆ ವ್ಯಕ್ತಿ, ಸಮಾಜ ಹಾಗೂ ಪ್ರಕೃತಿ ನಡುವೆ ಸಮತೋಲನ ಮತ್ತು ಸೌಹಾರ್ದತೆಯನ್ನು ಸಾಧಿಸುವ ತತ್ವವೇ ಏಕಾತ್ಮ ಮಾನವ ದರ್ಶನ. ಈ ಸಮ್ಮೇಳನದಲ್ಲಿ ಭಾರತದ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು, ಕುಲಸಚಿವರು, ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಸಾಮಾಜಿಕ ಮತ್ತು ರಾಜಕೀಯ ಶಾಸ್ತ್ರದ ತಜ್ಞರು ಹಾಗೂ ಚಿಂತಕರು ಭಾಗವಹಿಸಲಿದ್ದಾರೆ.

ಮಾರ್ಚ್ 25 ರಂದು ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ರಾಜ್ಯಪಾಲ ಥಾವರಚಂದ ಗೆಹ್ಲೋಟ್ .ಅವರು ಉದ್ಘಾಟಿಸಲಿದ್ದಾರೆ. ಎರಡನೆಯ ದಿನ ಮಾರ್ಚ್ 26ರಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನರವರು ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕೊನೆಯ ದಿನ ಮಾರ್ಚ್ 27 ರಂದು, ಸಮಾರೋಪ ಸಮಾರಂಭ ನಡೆಯಲಿದ್ದು, ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರೊ.ಶಾಚಿತಿ ಶ್ರೀ ಭಾಗವಹಿಸಲಿದ್ದಾರೆ. ಇದೊಂದು ಸಂಪೂರ್ಣ ಶೈಕ್ಷಣಿಕ ಸಮ್ಮೇಳನವಾಗಿದ್ದು, ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಕುಲಸಚಿವರು, ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಈ ಸಮ್ಮೇಳನದಲ್ಲಿ ಮುಕ್ತವಾಗಿ ಭಾಗವಹಿಸಬಹುದು.

ಸಮ್ಮೇಳನದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಲು ಅವಕಾಶ ನೀಡಲಾಗಿದೆ. ಭಾರತದ ಪರಂಪರೆ ಮತ್ತು ಸಾಧನೆಗಳ ಕುರಿತಾದ ಪ್ರದರ್ಶಿನಿಯನ್ನು ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಉದ್ಘಾಟಿಸಲಿದ್ದು, ಮೂರೂ ದಿನಗಳ ಕಾಲ ವೀಕ್ಷಣೆಗೆ ಅವಕಾಶವಿರುತ್ತದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾಂಸ್ಕೃತಿಕ ಚಿಂತಕರು ಹಾಗೂ ಸಾರ್ವಜನಿಕರು ಪ್ರದರ್ಶಿನಿಯ ವೀಕ್ಷಣೆ ಮಾಡಬಹುದು.

ಬಾಡಿಗೆ ಕೊಟ್ಟದ್ದಷ್ಟೇ: ಕುಲಪತಿ

ಬೆಂಗಳೂರು: ಪ್ರಜ್ಞಾ ಪ್ರವಾಹ ಸಂಸ್ಥೆ ವತಿಯಿಂದ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯಲ್ಲಿ ಮಾ. 25 ರಿಂದ ಮೂರು ದಿನಗಳ ಕಾಲ ಏಕಾತ್ಮ ಮಾನವ ದರ್ಶನ ಕಾರ್ಯಕ್ರಮವನ್ನು ಆಯೋಜಿಸಲು ವಿಶ್ವವಿದ್ಯಾಲಯದ ಘಟಿಕೋತ್ಸವ ಭವನವನ್ನು ಬಾಡಿಗೆಗೆ ನೀಡಲಾಗಿತ್ತು ಎಂದು ವಿವಿಯ ಕುಲಪತಿ ಪ್ರೊ. ಶರಣಪ್ಪ ವಿ ಹಲಸೆ ಅವರು ಉನ್ನತ ಶಿಕ್ಷಣ ಇಲಾಖೆಗೆ ಸ್ಪಷ್ಟನೆ ನೀಡಿದ್ದಾರೆ.ಸೋಮವಾರ ಮೇಲ್ಮನೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಈ ಕಾರ್ಯಕ್ರಮದ ಕುರಿತು ಉನ್ನತ ಶಿಕ್ಷಣ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ, ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಈ ಬಗ್ಗೆ ಕುಲಪತಿಗಳಿಂದ ವಿವರಣೆ ಕೇಳಲಾಗುವುದು ಎಂದು ತಿಳಿಸಿದ್ದರು. ಬಳಿಕ ಉನ್ನತ ಶಿಕ್ಷಣ ಇಲಾಖೆ, ಕುಲಪತಿ ಅವರಿಗೆ ಕಾರ್ಯಕ್ರಮದ ಬಗ್ಗೆ 24 ಗಂಟೆಯೊಳಗೆ ಸಂಪೂರ್ಣ ವರದಿ ಸಲ್ಲಿಸುವಂತೆ ಶೋಕಾಸ್ ನೋಟಿಸ್ ನೀಡಿತ್ತು. ಈ ಹಿನ್ನೆಲೆಯಲ್ಲಿ ಮಂಗಳವಾರ ತಮ್ಮ ವಿವರಣೆ ನೀಡಿರುವ ಪ್ರೊ. ಶರಣಪ್ಪ ವಿ ಹಲಸೆ, ವಿಶ್ವವಿದ್ಯಾಲಯದ ಆವರಣದಲ್ಲಿ ವಿಶಾಲ ಸಭಾಂಗಣ ಹೊಂದಿದೆ. ಆದ್ದರಿಂದ ಶೈಕ್ಷಣಿಕ, ಬೌದ್ಧಿಕ ಕಾರ್ಯಕ್ರಮಗಳನ್ನು ವಿವಿಧ ಸಂಘ ಸಂಸ್ಥೆಗಳು ಇಲ್ಲಿ ಆಯೋಜಿಸುತ್ತವೆ. ವಿಶ್ವವಿದ್ಯಾಲಯ ಬಾಡಿಗೆ ಆಧಾರದಲ್ಲಿ ಬಳಸಲು ಅನುಮತಿ ನೀಡುತ್ತದೆ ಎಂದು ತಿಳಿಸಿದರು. ಈ ಮಧ್ಯೆ, ಕುಲಪತಿಗಳ ಸ್ಪಷ್ಟನೆ ಹೊರತಾಗಿಯೂ, ರಾಜ್ಯ ಸರ್ಕಾರ ಬುಧವಾರದ ಕಾರ್ಯಕ್ರಮವನ್ನು ರದ್ದು ಮಾಡಿರುವುದಾಗಿ ಆದೇಶಿಸಿದೆ.

ರಮೇಶ್ ಬಾಬು ಪ್ರಶ್ನೆಗೆ ಉತ್ತರಿಸಿದ ಸಚಿವ ಡಾ. ಎಂ.ಸಿ. ಸುಧಾಕರ್

ವಿಧಾನ ಪರಿಷತ್‌ನಲ್ಲೂ ಸದ್ದು

ವಿಧಾನ ಪರಿಷತ್: ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ 60 ವರ್ಷಗಳ ಸ್ಮರಣಾರ್ಥ ಮಾ. 25 ರಿಂದ ಮಾ. 27ರವರೆಗೆ ಹಮ್ಮಿಕೊಳ್ಳಲಾಗಿರುವ ಉಪನ್ಯಾಸ ಸಮ್ಮೇಳನವನ್ನು ಕೂಡಲೇ ರದ್ದು ಮಾಡುವಂತೆ ಸೂಚಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.



ಮೇಲ್ಮನೆಯಲ್ಲಿ ಶೂನ್ಯ ವೇಳೆ ಕಲಾಪದಲ್ಲಿ ಪ್ರಸ್ತಾಪಿಸಿದ ರಮೇಶ್ ಬಾಬು, ಮಾ.25 ರಿಂದ ಮೂರು ದಿನಗಳ ಕಾಲ ಶೈಕ್ಷಣಿಕ ಸಮ್ಮೇಳನವನ್ನ ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಷ್ಟಾಚಾರಕ್ಕೆ ಅನುಗುಣವಾಗಿ ಸರ್ಕಾರದ ಪ್ರತಿನಿಧಿಗಳು ಹಾಗೂ ಶೈಕ್ಷಣಿಕ ತಜ್ಞರಿಗೆ ಮಾಹಿತಿ ನೀಡಿಲ್ಲ. ಸರ್ಕಾರದ ಶಿಷ್ಟಾಚಾರ ಬದಿಗೊತ್ತಿ ನಿಯಮ ಉಲ್ಲಂಘಿಸಲಾಗಿದೆ. ವೈಯಕ್ತಿಕ ಹಿತಾಸಕ್ತಿಗಾಗಿ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ಕುಲಪತಿಗಳ ವಿರುದ್ಧ ಕ್ರಮ ಆಗಬೇಕೆಂದು ಒತ್ತಾಯಿಸಿದರು.

ಈ ವೇಳೆ ಪ್ರತಿಕ್ರಿಯಿಸಿದ ಸಚಿವರು, ಪ್ರಜ್ಞಾ ಪ್ರವಾಹ ಸಂಸ್ಥೆ ಆಯೋಜಿಸಿರುವ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ಉದ್ಘಾಟನೆಗೆ ರಾಜ್ಯಪಾಲರನ್ನು ಆಹ್ವಾನಿಸಲಾಗಿದೆ. ಹಾಗೂ ಕೇಂದ್ರದ ಶಿಕ್ಷಣ ಸಚಿವರು ಭಾಗಿಯಾಗುತ್ತಿರುವುದಾಗಿ ತಿಳಿದುಬಂದಿದೆ. ಈ ಬಗ್ಗೆ ಪ್ರಶ್ನಿಸಿದಾಗ ಗೊತ್ತಿಲ್ಲ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಉತ್ತರಿಸಿದ್ದಾರೆ ಎಂದು ತಿಳಿಸಿದರು. ಆಡಳಿತ ಮತ್ತು ಪ್ರತಿಪಕ್ಷದ ನಡುವಿನ ಮಾತಿನ ಚಕಮಕಿ ಹೆಚ್ಚಾಗುತ್ತಿದ್ದಂತೆ ಸಭಾಪತಿ ಪೀಠದಲ್ಲಿದ್ದ ಎಂ .ಕೆ.ಪ್ರಾಣೇಶ್ ಅವರು, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ, ಸದಸ್ಯರ ಪ್ರಸ್ತಾಪಕ್ಕೆ ಸಚಿವರು ಉತ್ತರ ನೀಡಬಹುದು ಎಂದು ಸೂಚನೆ ನೀಡಿದರು.

ಬಳಿಕ ಎಂ.ಸಿ. ಸುಧಾಕರ್ ಅವರು, ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಬೇಕಾದ ಸಮ್ಮೇಳನದಲ್ಲಿ ರಾಜ್ಯಪಾಲರು, ಕೇಂದ್ರ ಶಿಕ್ಷಣ ಸಚಿವರು ಭಾಗವಹಿಸುತ್ತಿದ್ದು, ರಾಜ್ಯ ಸರ್ಕಾರದ ಯಾವುದೇ ಪ್ರತಿನಿಧಿಯನ್ನು ಆಹ್ವಾನಿಸದಿರುವುದು ತರವಲ್ಲ, ಈ ಮೂಲಕ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಈ ಕುರಿತು ಸಂಬಂಧಪಟ್ಟವರಿಂದ ವಿವರಣೆ ಕೇಳಲಾಗುವುದು ಎಂದರು. ವಿಶ್ವವಿದ್ಯಾಲಯಗಳು ಸ್ಥಳವನ್ನು ಬಾಡಿಗೆಗೆ ನೀಡಬಹುದೇ ಹೊರತು ಯಾವುದೇ ವಿಶ್ವವಿದ್ಯಾಲಯವು ಖಾಸಗಿ ಸಂಸ್ಥೆಗಳ ಕಾರ್ಯಕ್ರಮಗಳನ್ನು ಆಯೋಜಿಸಲು ಅವಕಾಶವಿಲ್ಲ, ಆದರೆ, ಖಾಸಗಿ ಸಂಸ್ಥೆಗಳ ಪರವಾಗಿ ಕಾರ್ಯಕ್ರಮವನ್ನು ಆಯೋಜಿಸುವಂತಿಲ್ಲ, ಭಾನುವಾರ ಮಧ್ಯಾಹ್ನ ನನಗೆ ಈ ಬಗ್ಗೆ ತಿಳಿಯಿತು. ಈ ಕುರಿತು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳನ್ನು ಕರೆ ಮೂಲಕ ಕೇಳಿದಾಗ, ತಮಗೆ ಈ ಬಗ್ಗೆ ತಿಳಿದಿಲ್ಲ ಎಂದು ಅವರು ಉತ್ತರಿಸಿದ್ದರು.


ಪ್ರತಿಪಕ್ಷಗಳಿಂದ ನಕಾರಾತ್ಮಕ ರಾಜಕಾರಣ: ಸಂಸದ ಬೊಮ್ಮಾಯಿ

ಹೊಸದಿಲ್ಲಿ: ದೇಶದ ಬಲಿಷ್ಠ ಆರ್ಥಿಕತೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕಠಿಣ ಪರಿಶ್ರಮವಿದೆ. ಮೋದಿ ಇದ್ದರೆ ಮ್ಯಾಜಿಕ್ ಆಗುತ್ತದೆ. ಹೀಗಾಗಿ ದೇಶದ ಸಾಮಾನ್ಯ ಜನರು ಅವರ ನಾಯಕತ್ವದ ಮೇಲೆ ನಂಬಿಕೆ ಇಟ್ಟಿದ್ದಾರೆ. ಪ್ರತಿಪಕ್ಷಗಳು ಎಲ್ಲದರಲ್ಲೂ ನಕಾರಾತ್ಮಕ ರಾಜಕಾರಣ ಮಾಡುತ್ತಿವೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟರು.

ಸಂಸತ್ತಿನಲ್ಲಿ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 2026-27ನೇ ಸಾಲಿನ ಆಯವ್ಯಯ ಮಂಡನೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಪಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಎಕನಾಮಿಕ್‌ನಲ್ಲಿ ಮ್ಯಾಜಿಕ್ ಇಲ್ಲ. ಮೋದಿ ಪ್ರಧಾನಿಯಾದಾಗ ದೇಶದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಇದನ್ನು ಎಲ್ಲಿಂದ, ಹೇಗೆ ಸರಿ ಮಾಡುವುದು ಎನ್ನುವ ಚಿಂತನೆ ಇತ್ತು. ಹಣದುಬ್ಬರ ಎರಡಂಕಿ ಇತ್ತು. ಜಿಡಿಪಿ ಪಾತಾಳಕ್ಕಿಳಿದಿತ್ತು. ಪ್ರಧಾನಿ ಆರ್ಥಿಕತೆಯನ್ನು ಮರು ಸೃಷ್ಟಿ ಮಾಡಿದರು ಎಂದರು.

ದೂರದೃಷ್ಟಿಯುಳ್ಳ ಪಧಾನಮಂತ್ರಿ, ಬಂದರೆ ಸಂಕಷ್ಟವನ್ನು ಹೇಗೆ ಅವಕಾಶವನ್ನಾಗಿ ಮಾಡಿ ತೋರಿಸುತ್ತಾರೆ ಎನ್ನುವುದನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತೋರಿಸಿದ್ದಾರೆ. ಪ್ರತಿಪಕ್ಷದವರು ಏನು ಹೇಳುತ್ತಾರೆ ಹೇಳಲಿ, ಅವರು ಖಜಾನೆ ಖಾಲಿ ಮಾಡಿ ಹೋಗಿದ್ದರು. ಮೋದಿ ಯವರು ಅದನ್ನು ಸರಿದಾರಿಗೆ ತಂದಿದ್ದಾರೆ. ನಮ್ಮ ಖರ್ಚು ಶೇ 7.7 ಆಗಿತ್ತು. ಜಿಡಿಪಿ ಅಭಿವೃದ್ಧಿ ಶೇ. 10 ನಿರೀಕ್ಷಿಸಲಾಗಿದೆ. ಎರಡಂಕಿಯ ಜಿಡಿಪಿ ನಿರೀಕ್ಷೆಯಿದೆ. ನಮ್ಮ ವಿತ್ತೀಯ ಕೊರತೆ ಶೇ. 4.4ರಿಂದ 4.3ಕ್ಕೆ ಇಳಿದಿದೆ. ಕಳೆದ ಒಂದು ತಿಂಗಳಲ್ಲಿ ಇಡೀ ವ್ಯವಸ್ಥೆ ಬದಲಾಗುತ್ತಿದೆ. ನಮ್ಮ ಪ್ರಧಾನಿ ಇಂದು ದೇಶ ಮತ್ತು ಜಗತ್ತಿನಲ್ಲಿ ಏನಾಗುತ್ತಿದೆ ಎಂದು ಸದನದಲ್ಲಿ ಹೇಳಿದ್ದಾರೆ.

ರಾಮ ಬಾಣ



8 ಗಂಟೆಯೊಳಗೆ ಟಿಕೆಟ್ ರದ್ದು: ಹಣ ಮರುಪಾವತಿ ಇಲ್ಲ

ಪುಟ 1 ➜ **8 ಗಂಟೆಯೊಳಗೆ ರದ್ದು ಯಾವುದೇ ಮರುಪಾವತಿ ಇಲ್ಲ:** ಈ ಮೊದಲು 48 ಗಂಟೆಗೂ ಮೊದಲು ರದ್ದು ಮಾಡಿದರೆ ಸಂಪೂರ್ಣ ಮರುಪಾವತಿ, 48-12 ಗಂಟೆ ನಡುವೆ ಶೇ. 25 ಕಡಿತ ಮತ್ತು 12-4 ಗಂಟೆ ನಡುವೆ ಶೇ.50 ಕಡಿತ ಅನ್ವಯಿಸುತ್ತಿತ್ತು.

ದಲ್ಲಾಳಿಗಳು ಟಿಕೆಟ್ ಸಂಗ್ರಹಿಸಿ ದುರುಪಯೋಗ ಮಾಡಿಕೊಳ್ಳುವುದನ್ನು ತಡೆಯಲು ಈ ಬದಲಾವಣೆ ಮಾಡಲಾಗಿದೆ ಎಂದು ವೈಷ್ಣವ್ ಹೇಳಿದ್ದಾರೆ. ಈ ನಿಯಮ ಈಗಾಗಲೇ 2026ರ ಜನವರಿ ನಂತರ ಆರಂಭವಾದ ವಂದೇ ಭಾರತ್ ಸ್ಲೀಪರ್ ಮತ್ತು ಅಮೃತ ಭಾರತ್ ರೈಲುಗಳಲ್ಲಿ ಜಾರಿಯಲ್ಲಿದೆ.

ತರಗತಿ ಮೇಲ್ದರ್ಜೆ ಮತ್ತು ಏರಿಕೆ ನಿಲ್ದಾಣ ಬದಲಾವಣೆ: ಕೌಂಟರ್‌ನಲ್ಲಿ ಟಿಕೆಟ್ ಖರೀದಿಸಿದ ಪ್ರಯಾಣಿಕರು ರೈಲು ಹೊರಡುವ 30 ನಿಮಿಷ ಮೊದಲು ತರಗತಿ ಮೇಲ್ದರ್ಜೆ ಮಾಡಿಕೊಳ್ಳಬಹುದು. ಆನ್‌ಲೈನ್ ಟಿಕೆಟ್‌ಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ.

ಅದೇ ರೀತಿ, ರೈಲು ಮೂಲ ನಿಲ್ದಾಣದಿಂದ ಹೊರಡುವ 30 ನಿಮಿಷ ಮೊದಲು ರೈಲು ಹತ್ತುವ ನಿಲ್ದಾಣ ಬದಲಾಯಿಸಿಕೊಳ್ಳಲು ಈಗ ಅನುಮತಿ ನೀಡಲಾಗಿದೆ. ಈ ಬದಲಾವಣೆ ಟಿಕೆಟ್ ದರದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ತತ್ಕಾಲ್ ಬುಕಿಂಗ್ ಸುಧಾರಣೆ: ದಲ್ಲಾಳಿಗಳು ಮತ್ತು ಏಜೆಂಟರ ಟಿಕೆಟ್ ಸಂಗ್ರಹವನ್ನು ತಡೆಯಲು ತತ್ಕಾಲ್ ಬುಕಿಂಗ್‌ನಲ್ಲಿ ಹಲವು ಬದಲಾವಣೆ ಮಾಡಲಾಗಿದೆ. ಆಧಾರ್ ಆಧಾರಿತ ಒಟಿಪಿ, ಮೊದಲ 30 ನಿಮಿಷ ಏಜೆಂಟ್‌ಗಳಿಗೆ ಬುಕಿಂಗ್ ನಿರ್ಬಂಧ ಮತ್ತು ನಕಲಿ ಬಳಕೆದಾರರನ್ನು ತಡೆಯಲು ಆ್ಯಂಟಿ -ಬಾಟ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಹಾಗೆಯೇ, ಈವರೆಗೆ 3 ಕೋಟಿ ಅನುಮಾನಾಸ್ಪದ ಬಳಕೆದಾರ ಖಾತೆಗಳನ್ನು ರದ್ದು ಮಾಡಲಾಗಿದೆ ಎಂದು ವೈಷ್ಣವ್ ತಿಳಿಸಿದ್ದಾರೆ.

ದಿನ ಭವಿಷ್ಯ

ಮೇಷ ನೀವು ಇಚ್ಛಿಸದ ಬೆಳವಣಿಗೆ ನಡೆದೀತು. ಬೇಸರ ಪಡುತ್ತಾ ಕೂರದಿರಿ. ಪರಿಸ್ಥಿತಿಗೆ ಒಗ್ಗಿಕೊಳ್ಳುವುದು ಮುಖ್ಯ. ಧನವ್ಯಯ ಹೆಚ್ಚಲಿದೆ.

ವೃಷಭ ಆಪ್ತ ಬಳಗದ ಜತೆ ಕಾಲ ಕಳೆಯುವ ಅವಕಾಶ. ಮಾತಿನಲ್ಲಿ ಕಟುಮಾತು ನುಸುಳದಂತೆ ನೋಡಿಕೊಳ್ಳಿ. ಸಂಬಂಧ ಕೆಡದಂತೆ ಎಚ್ಚರವಿರಲಿ.

ಮಿಥುನ ನಿಮ್ಮ ಕಾರ್ಯದಲ್ಲಿ ದಿನವಿಡೀ ವ್ಯಸ್ತ. ಬೇರೆ ವಿಷಯದಲ್ಲಿ ಮನಸ್ಸು ತೊಡಗದು. ಸಂಬಂಧದಲ್ಲಿ ಒಡಕು ಮೂಡೀತು. ಹೊಟ್ಟೆ ಕೆಡುವ ಸಾಧ್ಯತೆ.

ಕಟಕ ಕುಟುಂಬದ ಜತೆ ಪ್ರಯಾಣ ಸಾಧ್ಯತೆ. ವೃತ್ತಿ ಕೆಲಸ ಮುಗಿಸಿರಿ. ನಿಮ್ಮ ಕಟು ಮಾತಿನಿಂದ ಆಪ್ತರು ದೂರವಾದಾರು. ಹೆಚ್ಚು ಹಣ ಗಳಿಕೆ ಅವಕಾಶ.

ಸಿಂಹ ದೈಹಿಕ ಕ್ಷಮತೆ ಕಾಯ್ದುಕೊಳ್ಳಿ. ಹೆಚ್ಚುವರಿ ಆದಾಯದ ದಾರಿ ಹೊಳೆಯಲಿದೆ. ಕೌಟುಂಬಿಕ ಉದ್ವಿಗ್ನತೆ ಶಮನಕ್ಕೆ ಗಮನ ಕೊಡಿ.

ಕನ್ಯಾ ಇಂದು ಪ್ರಮುಖ ಬೆಳವಣಿಗೆ ಸಂಭವ. ಅನವಶ್ಯ ವಾಗ್ವಾದದಿಂದ ಆದಷ್ಟು ದೂರವಿರಿ. ಪ್ರತಿ ವಿಷಯದಲ್ಲಿ ಸಂಯಮ ಅತ್ಯವಶ್ಯ.

ತುಲಾ ಏಕತಾನತೆಯ ಕೆಲಸ ನಿಮ್ಮ ಉತ್ಸಾಹ ಕುಗ್ಗಿಸುವುದು. ಮನಸ್ಸು ಉಲ್ಲಸಿತಗೊಳಿಸುವ ಹವ್ಯಾಸ ಬೆಳೆಸಿಕೊಳ್ಳಿ. ಬಂಧುಗಳ ಸಹಕಾರ.

ವೃಶ್ಚಿಕ ನಿಮ್ಮ ಮನಸ್ಥಿತಿ. ಇತರರ ಜತೆ ಹಂಚಿಕೊಳ್ಳಲು ಬಯಸುವಿರಿ. ಆದರೆ ಸೂಕ್ತ ಸ್ಪಂದನೆ ದೊರಕದು. ದಂಪತಿ ಮಧ್ಯೆ ವಿರಸ ಮೂಡೀತು. ಹೊಂದಾಣಿಕೆಯಿರಲಿ.

ಧನು ವೃತ್ತಿಯ ಒತ್ತಡ ಎಂದಿಗಿಂತ ಹೆಚ್ಚು. ಏಕಾಗ್ರತೆ ಕಳಕೊಳ್ಳದಿರಿ. ವೈವಾಹಿಕ ಬದುಕಲ್ಲಿ ಒಡಕು ಮೂಡದಂತೆ ಎಚ್ಚರಿಕೆ ವಹಿಸಿರಿ.

ಮಕರ ಸಂಗಾತಿ ಜತೆ ಸಂಘರ್ಷ ನಡೆದೀತು. ಪರಸ್ಪರ ಗೌರವವಿದ್ದರೆ ಪ್ರೀತಿ ಬೆಳೆಯುವುದು. ಉದ್ಯೋಗದ ಅವಕಾಶ ಹೆಚ್ಚಲಿದೆ. ಧನವ್ಯಯ.

ಕುಂಭ ಬಿಡುವಿಲ್ಲದ ಕೆಲಸ. ಒತ್ತಡ ಅಧಿಕ. ಇತರರ ಒಳಿತಿಗೆ ಶ್ರಮಿಸುತ್ತಾ ನಿಮ್ಮ ಆಕಾಂಕ್ಷೆ ಬಲಿಗೊಡದಿರಿ. ಕೌಟುಂಬಿಕ ಸಾಮರಸ್ಯ ಹದಗೆಡದಿರಲಿ.

ಮೀನ ಸಂಗಾತಿ ಜತೆ ಅಹಂ ಬಿಡಿ. ನಿಮ್ಮದೇ ನಿಲುವು ಹೇರಬೇಡಿ. ಸಂಬಂಧ ಕೆಡಬಹುದು. ಹಣ ಗಳಿಕೆ ಹೆಚ್ಚಳವಾಗದು. ಇದ್ದುದರಲ್ಲಿ ತೃಪ್ತಿಯಿರಲಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,3,6,8

ಪರಿಸರಸ್ನೇಹಿ ಸುಸ್ಥಿರ ನಗರ ಸಾರಿಗೆ ವ್ಯವಸ್ಥೆಯೇ ಯೋಜನೆಯ ಉದ್ದೇಶ

ಮೆಟ್ರೊ 3ನೇ ಹಂತಕ್ಕೆ ಸಹಿ

ಬೆಂಗಳೂರು: ನಮ್ಮ ಮೆಟ್ರೊ ಮೂರನೇ ಹಂತಕ್ಕೆ ಜಪಾನ್ ಇಂಟರ್ ನ್ಯಾಷನಲ್ ಕೋ ಆಪರೇಷನ್ ಏಜೆನ್ಸಿಯು(ಜೈಕಾ) ಜಪಾನ್‌ನ ಅಧಿಕೃತ ಅಭಿವೃದ್ಧಿ ನೆರವು ಯೋಜನೆಯಡಿ ಒಟ್ಟು 6100 ಕೋಟಿ ರೂ.ಸಾಲವನ್ನು ಒದಗಿಸಲು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದೆ.

ಹೊಸದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ ಡಾ.ಅಲೋಕ್ ತಿವಾರಿ ಮತ್ತು ಜೈಕಾ ಇಂಡಿಯಾ ಕಚೇರಿಯ ಮುಖ್ಯ ಪ್ರತಿನಿಧಿ ಟೈಕುಚಿ ಟಾಕುರೊ ಅವರು ಈ ಸಾಲದ ಒಪ್ಪಂದಕ್ಕೆ ಅಧಿಕೃತವಾಗಿ ಸಹಿ ಮಾಡಿದರು.

ಬೆಂಗಳೂರು ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವವಾಹನದಟ್ಟಣೆಯನ್ನುಸಮರ್ಥವಾಗಿ ನಿರ್ವಹಿಸುವುದು ಮತ್ತು ಪರಿಸರ ಸ್ನೇಹಿ ಸುಸ್ಥಿರ ನಗರ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಮೂರನೇ ಹಂತದ ಈ ಯೋಜನೆಯು ನಗರದ ವಿವಿಧ ಭಾಗಗಳನ್ನು ಸಂಪರ್ಕಿಸುವ ಮೂಲಕ ಸಾರ್ವಜನಿಕರಿಗೆ ಸುಗಮ ಪ್ರಯಾಣದ ವ್ಯವಸ್ಥೆ ಕಲ್ಪಿಸಲಿದೆ. ಜೊತೆಗೆ ಹೆಚ್ಚುತ್ತಿರುವ ಮೋಟಾರು ವಾಹನಗಳಿಂದ ಉಂಟಾಗುವ ಮಾಲಿನ್ಯ ಮತ್ತು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಮೂಲಕ ಹವಾಮಾನ ಬದಲಾವಣೆಯನ್ನು ಶಮನಗೊಳಿಸುವ ನಿರೀಕ್ಷೆಯಿದೆ.

ನಗರದ ಸಂಚಾರ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತರಲಿರುವ ಬೆಂಗಳೂರು ಮೆಟ್ರೊ ಮೂರನೇ ಹಂತದ ಯೋಜನೆಯು ಒಟ್ಟು 44.65 ಕಿ.ಮೀ. ಉದ್ದದ ಮೆಟ್ರೊ ಮಾರ್ಗವನ್ನು ಹೊಂದಿರಲಿದ್ದು, ಇದರಲ್ಲಿ 31 ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯು ಹೊರ ವರ್ತುಲ ರಸ್ತೆ ವಿಭಾಗ (ಕಾರಿಡಾರ್ 3-1) ಮತ್ತು ಪಶ್ಚಿಮ ಅಭಿವೃದ್ಧಿ ಕಾರಿಡಾರ್ (ಕಾರಿಡಾರ್ 3-2) ಎರಡನ್ನೂ ಒಳಗೊಂಡಿದೆ. ಈ ನೂತನ ಮಾರ್ಗವು ವಿಮಾನ ನಿಲ್ದಾಣದ ಲೈನ್ ಮತ್ತು 6ನೇ ಮಾರ್ಗದೊಂದಿಗೆ ಸಂಪರ್ಕ ಸಾಧಿಸಲಿದೆ. ಇದರಿಂದ ನಗರದ ಕೇಂದ್ರ ಭಾಗದ ಸುತ್ತ ಒಂದು ಸಂಪೂರ್ಣ ವೃತ್ತಾಕಾರದ ಮೆಟ್ರೊ ಜಾಲ ನಿರ್ಮಾಣವಾಗಲಿದ್ದು, ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವವರಿಗೆ ಮತ್ತು ಪೂರ್ವ-ಪಶ್ಚಿಮ ಮಾರ್ಗಗಳ ನಡುವೆ ಸಂಚರಿಸುವವರಿಗೆ ಹೆಚ್ಚಿನ ಅನುಕೂಲವಾಗಲಿದೆ.ಕೇವಲ ಮೆಟ್ರೊ ರೈಲಿಗೆ ಸೀಮಿತವಾಗದೆ, ಈ ಯೋಜನೆಯು ಫೀಡರ್ ಬಸ್‌ಗಳು, ಹಂಚಿಕೆಯ ಸಾರಿಗೆ ಸೇವೆಗಳು ಮತ್ತು ಡಬಲ್ ಡೆಕ್ಕರ್ ಮೇಲ್ಸೇತುವೆ ರಚನೆಗಳನ್ನು ಒಳಗೊಂಡಿರಲಿದೆ. ಈ ಮೂಲಕ ಸಮಗ್ರ ಸಾರಿಗೆ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ.ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಬಿಎಂಆರ್‌ಸಿಎಲ್ ಹೊತ್ತುಕೊಂಡಿದೆ. ಜಪಾನ್‌ನಿಂದ ಪಡೆಯುತ್ತಿರುವ ಈ ಸಾಲವು 30 ವರ್ಷಗಳ ದೀರ್ಘಾವಧಿಯ ಮರುಪಾವತಿ ಅವಧಿ ಹೊಂದಿದೆ. ಇದರಲ್ಲಿ ಆರಂಭಿಕ 10 ವರ್ಷ ರಿಯಾಯಿತಿ ಅವಧಿ ಇರಲಿದೆ.



ಆರ್ಥಿಕ ಬೆಳವಣಿಗೆಗೆ ಸಹಕಾರಿ

ಈ ಯೋಜನೆಯು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ, ವಿಶೇಷವಾಗಿ ಆರ್ಥಿಕ ಬೆಳವಣಿಗೆ, ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ, ಸುಸ್ಥಿರ ನಗರಗಳು ಮತ್ತು ಸಮುದಾಯಗಳು ಹಾಗೂ ಹವಾಮಾನ ರಕ್ಷಣೆಯ ಕ್ಷೇತ್ರಗಳಲ್ಲಿ ಕೊಡುಗೆ ನೀಡುವ ನಿರೀಕ್ಷೆಯಿದೆ. ಈ ಯೋಜನೆಯು ಜನವರಿ 2032 ರ ವೇಳೆಗೆ ಪೂರ್ಣಗೊಳ್ಳುವ ಗುರಿ ಹೊಂದಿದ್ದು, ಸಮಾಲೋಚನಾ ಸೇವೆಗಳಿಗಾಗಿ ಏಪ್ರಿಲ್‌ನಲ್ಲಿ ಆಹ್ವಾನ ನೀಡುವ ನಿರೀಕ್ಷೆಯಿದೆ. ಮೇಲ್ಸೇತುವೆ ಭಾಗದ ಸಿವಿಲ್ ಕಾಮಗಾರಿಗಳ ಮೊದಲ ಖರೀದಿ ಪ್ಯಾಕೇಜ್‌ಗಾಗಿ ಮೇನಲ್ಲಿ ಟೆಂಡರ್ ಪ್ರಕಟಿಸಲು ಯೋಜಿಸಲಾಗಿದೆ.

ಶೇ.66ರಷ್ಟು ಮನೆಗೆ ನಳ ಸಂಪರ್ಕ

ವಿಧಾನಸಭೆ: ಕರ್ನಾಟಕದಲ್ಲಿ ಜಲಜೀವನ್ ಮಿಷನ್‌ನ ಅವಧಿಯು 2024ರ ಮಾ.31ರಂದು ಕೊನೆಗೊಂಡರೂ ರಾಜ್ಯವು ಅದೇ ವರ್ಷ ನವೆಂಬರ್‌ಗೆ ಶೇ.66ರಷ್ಟು ಮನೆಗಳಿಗೆ ಮಾತ್ರ ಕಾರ್ಯಾತ್ಮಕಮನೆಯನಳಸಂಪರ್ಕ(ಎಫ್‌ಎಚ್‌ಟಿಸಿ) ಒದಗಿಸಿದೆ. ಮುಖ್ಯಮಂತ್ರಿಗಳ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮಂಡಿಸಿದ ಜಲ ಜೀವನ ಮಿಷನ್ ಅನುಷ್ಠಾನದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯಲ್ಲಿ ಇದು ಬಹಿರಂಗವಾಗಿದೆ. ಈ ಕಾರ್ಯಕ್ಷಮತೆಯ ತಪಾಸಣೆಯನ್ನು 2019 ರಿಂದ 2024ರ ಅವಧಿಯಲ್ಲಿ ನಡೆಸಲಾಗಿದೆ. ರಾಜ್ಯದಲ್ಲಿ 72.14 ಲಕ್ಷ ಮನೆಗಳಲ್ಲಿ 24.52 ಲಕ್ಷ ಮನೆಗಳಿಗೆ ಎಫ್‌ಎಚ್‌ಟಿಸಿಗಳನ್ನು ಒದಗಿಸಿಲ್ಲ. ಟೆಂಡರ್ ಕರೆಯುವಲ್ಲಿನ ವಿಳಂಬ, ಗುತ್ತಿಗೆದಾರರಿಗೆ ಅನೇಕ ಕಾಮಗಾರಿಗಳನ್ನು ವಹಿಸಿಕೊಡುವುದು, ಭೂಮಿಯ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳುವ ಮೊದಲು ಕಾಮಗಾರಿಗಳನ್ನು ವಹಿಸಿಕೊಡುವುದು, ಭೂ ಮಂಜೂರಾತಿ ಪಡೆಯುವಲ್ಲಿನ ವಿಳಂಬ ಮತ್ತು ರಚನಾತ್ಮಕ ಹಾಗೂ ಹೈಡ್ರಾಲಿಕ್ ವಿನ್ಯಾಸಗಳಿಗೆ ಅನುಮೋದನೆ ನೀಡುವಲ್ಲಿನ ವಿಳಂಬ, ವಿಸ್ತೃತ ಯೋಜನಾ ವರದಿಗಳ ಕೊರತೆ ಇತ್ಯಾದಿಗಳು ಇದಕ್ಕೆ ಕಾರಣವಾಗಿದೆ.

ಮಹಿಳೆಯರಿಗೆ 273 ಕ್ಷೇತ್ರಗಳ ಮೀಸಲು?

2029ರಿಂದ ಜಾರಿ ಸಾಧ್ಯತೆ

ಸಂಸತ್ತಿನ ಅನುಮೋದನೆಯ ನಂತರ ಈ ಯೋಜನೆಗಳು 2029ರ ಮಾರ್ಚ್ 31ರಿಂದ ಜಾರಿಗೆ ಬರುವ ಸಾಧ್ಯತೆ ಇದೆ. ಇದರಿಂದ ಮುಂದಿನ ಲೋಕಸಭಾ ಚುನಾವಣೆಯ ಜೊತೆಗೆ ಒಡಿಶಾ, ಅರುಣಾಚಲ ಪ್ರದೇಶ, ಸಿಕ್ಕಿಂ ಮತ್ತು ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲೂ ಮಹಿಳಾ ಮೀಸಲಾತಿ ಅನ್ವಯವಾಗಲಿದೆ.

ಪುಟ 1 ➜ **ನಿಷ್ಪಕ್ಷಪಾತ ಆಯೋಗದ ಮಹತ್ವ:** ಕ್ಷೇತ್ರ ಮರುವಿಂಗಡಣೆ ಆಯೋಗವು ಸಂಪೂರ್ಣ ನಿಷ್ಪಕ್ಷಪಾತ ಸಂಸ್ಥೆಯಾಗಿದ್ದು, ಅದರ ನಿರ್ಧಾರಗಳನ್ನು ಸುಪ್ರೀಂ ಕೋರ್ಟ್‌ನಲ್ಲೂ ಪ್ರಶ್ನಿಸಲು ಅವಕಾಶವಿಲ್ಲ. ಇದೇ ಕಾರಣಕ್ಕೆ ಈ ಪ್ರಕ್ರಿಯೆಯ ಮೇಲೆ ವಿಶ್ವಾಸ ಮೂಡಿಸಲು ಸರ್ಕಾರ ಒತ್ತು ನೀಡುತ್ತಿದೆ. ಚುನಾವಣಾ ಆಯೋಗ ಸ್ವತಂತ್ರ ಸಂಸ್ಥೆಯಾದರೂ, ದೇಶವ್ಯಾಪಿ ಡಿಲಿಮಿಟೇಶನ್ ನಡೆಸಲು ಅದಕ್ಕೆ ಅಧಿಕಾರವಿಲ್ಲ. ಅಗತ್ಯವಿದ್ದರೆ ಕೆಲವು ರಾಜ್ಯಗಳಲ್ಲಿ ಮಾತ್ರ ಕಾರ್ಯನಿರ್ವಹಿಸಬಹುದು.

ಮಹಿಳಾ ಮೀಸಲು- 15 ವರ್ಷ ಅವಧಿ: ಮಹಿಳೆಯರಿಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿ 15 ವರ್ಷ ಜಾರಿಯಲ್ಲಿರಲಿದೆ. ನಂತರ ಈ ಅವಧಿಯನ್ನು ವಿಸ್ತರಿಸುವ ಅಧಿಕಾರ ಸಂಸತ್ತಿಗೆ ಇರುತ್ತದೆ. ಎಸ್‌ಸಿ ಮತ್ತು ಎಸ್‌ಟಿ ಮಹಿಳೆಯರಿಗೆ ಮೀಸಲಾತಿಯೊಳಗಿನ ಮೀಸಲಾತಿ ವ್ಯವಸ್ಥೆಯೂ ಮುಂದುವರಿಯಲಿದೆ. ಆದರೆ, ಇತರೆ ಹಿಂದುಳಿದ ವರ್ಗಗಳಿಗೆ(ಒಬಿಸಿ) ಮೀಸಲು ವಿಸ್ತರಿಸಬೇಕೆಂಬ ವಿರೋಧ ಪಕ್ಷಗಳ ಬೇಡಿಕೆ ಇನ್ನೂ ನಿರ್ಣಯದ ಹಂತದಲ್ಲಿದೆ.

ಕಾಶ್ಮೀರ ಪ್ರತ್ಯೇಕತಾವಾದಿ ಅಂದ್ರಾಬಿಗೆ ಜೀವಾವಧಿ

ಪುಟ 1 ➜ ಈ ತಿಂಗಳ ಆರಂಭದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಂದ್ರಾಬಿಗೆ ಜೀವಾವಧಿ ಶಿಕ್ಷೆ ವಿಧಿಸುವಂತೆ ಮನವಿ ಸಲ್ಲಿಸಿತ್ತು.

ಜಮ್ಮು-ಕಾಶ್ಮೀರದಲ್ಲಿ ಸೆಕ್ಷನ್ 370 ರದ್ದುಪಡಿಸಿದ ಬಳಿಕ, ಯುಎಪಿಎ ಕಾಯ್ದೆಯಡಿ ಎನ್‌ಐಎ ನ್ಯಾಯಾಲಯದಲ್ಲಿ ದೋಷಿ ತೀರ್ಪು ಎದುರಿಸಿದ ಎರಡನೇ ಪ್ರತ್ಯೇಕತಾವಾದಿ ನಾಯಕಿ ಅಂದ್ರಾಬಿ ಆಗಿದ್ದಾರೆ.ಎನ್‌ಐಎ ಪ್ರಕಾರ ನಿಷೇಧಿತ ಸಂಘಟನೆ ದುಖ್ತರಾನ್-ಎ-ಮಿಲ್ಲತ್ ಮೂಲಕ ಮೂವರು ಆರೋಪಿಗಳು ಅಶಾಂತಿ ಸೃಷ್ಟಿಸಲು ಹಾಗೂ ಜಮ್ಮು-ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಲು ಪ್ರಚೋದನೆ ನೀಡಿದ್ದರು. ಅಂದ್ರಾಬಿ ವಿರುದ್ಧ ಜಮ್ಮು-ಕಾಶ್ಮೀರದ ವಿವಿಧ ಭಾಗಗಳಲ್ಲಿ ಒಟ್ಟು 33 ಎಫ್‌ಐಆರ್‌ಗಳು ದಾಖಲಾಗಿವೆ. ಆಕೆಯ ಸಹಚರರಾದ ಫಹ್ಮೀದಾ ಮತ್ತು ನಸ್ರೀನ್ ವಿರುದ್ಧ ಕ್ರಮವಾಗಿ 9 ಮತ್ತು 5 ಪ್ರಕರಣಗಳು ದಾಖಲಾಗಿವೆ. ಯುಎಪಿಎ ಕಾಯ್ದೆಯ ಸೆಕ್ಷನ್ 20, 38 ಮತ್ತು 39 ಅನ್ವಯದಲ್ಲಿ ಉಗ್ರ ಸಂಘಟನೆಗೆ ಸದಸ್ಯತ್ವ ಹಾಗೂ ಬೆಂಬಲ ನೀಡಿದ ಆರೋಪಗಳೂ ಸೇರಿವೆ.

ಯಾರು ಈ ಆಸಿಯಾ ಅಂದ್ರಾಬಿ?: 62 ವರ್ಷದ ಆಸಿಯಾ ಅಂದ್ರಾಬಿ, ದುಖ್ತರಾನ್-ಎ-ಮಿಲ್ಲತ್ ಸಂಸ್ಥಾಪಕಿ. ಆರಂಭದಲ್ಲಿ ಸಾಮಾಜಿಕ ಸುಧಾರಣಾ ಸಂಘಟನೆಯಾಗಿ ಆರಂಭವಾದ ಈ ಸಂಘಟನೆಗೆ 2018ರಲ್ಲಿ ಕೇಂದ್ರ ಸರ್ಕಾರ ಉಗ್ರ ಸಂಘಟನೆಯ ಮುದ್ರೆ ಹಾಕಿ ನಿಷೇಧ ಹೇರಿತ್ತು.

1963ರಲ್ಲಿ ಜನಿಸಿದ ಅಂದ್ರಾಬಿ, ಶ್ರೀನಗರದಲ್ಲಿ ಹೋಮ್ ಸೈನ್ಸ್ ಪದವಿ ಪಡೆದಿದ್ದರು. ನಂತರ ದಾರ್ಜಿಲಿಂಗ್‌ನಲ್ಲಿ ಮುಂದುವರಿದ ವಿದ್ಯಾಭ್ಯಾಸಕ್ಕೆ ಅವಕಾಶ ಸಿಗದ ಹಿನ್ನೆಲೆಯಲ್ಲಿ ಇಸ್ಲಾಮಿಕ್ ಸಾಹಿತ್ಯದತ್ತ ಮುಖಮಾಡಿ, ಜಮಾತ್-ಎ-ಇಸ್ಲಾಮಿ ಮಹಿಳಾ ಘಟಕಕ್ಕೆ ಸೇರ್ಪಡೆಯಾದರು. ಈ ಸಂಘಟನೆಯನ್ನು 2019ರಲ್ಲಿ ನಿಷೇಧಿಸಲಾಯಿತು.

1985ರಲ್ಲಿ ಜಮಾತ್-ಎ-ಇಸ್ಲಾಮಿಯಿಂದ ಬೇರ್ಪಟ್ಟು ದುಖ್ತರಾನ್-ಎ-ಮಿಲ್ಲತ್ ಸ್ಥಾಪಿಸಿದರು. 1991ರಲ್ಲಿ ಕಾಶ್ಮೀರದಲ್ಲಿ ಮಹಿಳೆಯರಿಗೆ ಪರ್ದಾ ಕಡ್ಡಾಯಗೊಳಿಸುವ ಅಭಿಯಾನದ ಮೂಲಕ ಗಮನ ಸೆಳೆದರು.

1990ರಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಆಶಿಕ್ ಹುಸೇನ್ ಫಕ್ತೂ ಅವರನ್ನು ವಿವಾಹವಾದರು. ಇಬ್ಬರು ಮಕ್ಕಳ ತಾಯಿ ಆಗಿರುವ ಅಂದ್ರಾಬಿ, 1993ರಲ್ಲಿ ಮೊದಲ ಬಾರಿಗೆ ಬಂಧಿತರಾಗಿ, ನಂತರ ಸಾರ್ವಜನಿಕ ಭದ್ರತಾ ಕಾಯ್ದೆಯಲ್ಲಿ ಅನೇಕ ಬಾರಿ ಬಂಧನಕ್ಕೊಳಗಾದರು.

ನಗರಸಭೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿಗೆ ಶೀಘ್ರ ಕ್ರಮ

ವಿಧಾನ ಪರಿಷತ್ : ಹೊಸದಾಗಿ ರಚನೆಯಾಗಿರುವ 11 ನಗರಸಭೆಗಳ ವ್ಯಾಪ್ತಿಗೆ ಸುತ್ತಮುತ್ತಲಿನ ಗ್ರಾಮಗಳನ್ನೂ ಸೇರ್ಪಡೆ ಮಾಡಲಾಗಿದೆ. ಹೀಗಾಗಿ ಇಲ್ಲಿ ಕಸ ವಿಲೇವಾರಿಯಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಯ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಿ ಉತ್ತಮ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ಕ್ರಮ ವಹಿಸಲಾಗುವುದು ಎಂದು ಸಚಿವ ಬೈರತಿ ಸುರೇಶ್ ಹೇಳಿದರು. ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಅವರು ರಾಜ್ಯದಲ್ಲಿರುವ ಹಲವು ನಗರಗಳ ಸ್ವಚ್ಛತೆಗಳ ಕುರಿತು ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಮತಾಂತರವಾದ್ರೆ ಮೀಸಲಾತಿ ಸಿಗಲ್ಲ

ಪುಟ 1 ➜ ಬಳಿಕ 1956ರಲ್ಲಿ ಸಿಖ್ ಧರ್ಮದವರನ್ನು ಸೇರಿಸಲಾಗಿದ್ದು, 1990ರಲ್ಲಿ ಬೌದ್ಧ ಧರ್ಮದವರಿಗೂ ವಿಸ್ತರಿಸಲಾಯಿತು. ಆದರೆ, ಕ್ರೈಸ್ತ ಧರ್ಮವನ್ನು ಯಾವುದೇ ಹಂತದಲ್ಲೂ ಸೇರಿಸಲಾಗಿಲ್ಲ ಎಂದು ನ್ಯಾಯಾಲಯ ಹೇಳಿದೆ. ಪ್ರಕರಣದ ಹಿನ್ನೆಲೆಯಂತೆ, ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಪಾಸ್ಟರ್ ಆಗಿದ್ದ ಚಿಂತಾಡ ಆನಂದ್ ಎಂಬ ವ್ಯಕ್ತಿಯೊಬ್ಬರು ಎಸ್‌ಸಿ/ಎಸ್‌ಟಿ (ದೌರ್ಜನ್ಯ) ಕಾಯ್ದೆಯಡಿ ಅಕ್ಕಲ ರಾಮಿ ರೆಡ್ಡಿ ಮತ್ತಿತರರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಆದರೆ, ಅವರನ್ನು ಪರಿಶಿಷ್ಟ ಜಾತಿಗೆ ಸೇರಿದವರಾಗಿ ಪರಿಗಣಿಸಲು ಸಾಧ್ಯವಿಲ್ಲವೆಂದು ಆಂಧ್ರ ಪ್ರದೇಶ ಹೈಕೋರ್ಟ್ ಪ್ರಕರಣವನ್ನು ರದ್ದುಪಡಿಸಿತ್ತು. ಈ ತೀರ್ಪನ್ನು ಪ್ರಶ್ನಿಸಿ ಅವರು ಸುಪ್ರೀಂ ಮೊರೆ ಹೋಗಿದ್ದರು. ಸುಪ್ರೀಂ ಕೋರ್ಟ್ ಈಗ ಹೈಕೋರ್ಟ್ ತೀರ್ಪನ್ನು ಸಮರ್ಥಿಸಿದ್ದು, ಧರ್ಮಾಂತರವು ಕಾನೂನುಬದ್ಧವಾಗಿ ವ್ಯಕ್ತಿಯ ಸಾಮಾಜಿಕ ಗುರುತು ಮತ್ತು ಹಕ್ಕುಗಳ ಮೇಲೂ ನೇರ ಪರಿಣಾಮ ಬೀರುತ್ತದೆ ಎಂಬುದನ್ನು ಸ್ಪಷ್ಟಪಡಿಸಿದೆ.

ಪರಿಸ್ಥಿತಿ ದುರ್ಲಾಭ ಬೇಡ

ಪುಟ 1 ➜ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರಗಳ ಪೂರೈಕೆಗೂ ಸರಕಾರ ಅಗತ್ಯ ಸಿದ್ಧತೆಗಳ ಮಾಡಿಕೊಂಡಿದೆ. ಯುದ್ಧ ಸೃಷ್ಟಿಸಿರುವ ಪರಿಣಾಮಗಳು ಅಥವಾ ಬಿಕ್ಕಟ್ಟು ಅಲ್ಪಕಾಲೀನವಿರಲಿ,ಮಧ್ಯಮಾವಧಿ ಅಥವಾ ದೀರ್ಘಕಾಲೀನ ತೊಂದರೆಯೊಡ್ಡಲಿದ್ದರೂ, ಇವನ್ನು ನಿಭಾಯಿಸಲು ಅಗತ್ಯ ಸಮಗ್ರ ಕಾರ್ಯತಂತ್ರವನ್ನು ಸರಕಾರ ಸಿದ್ಧಪಡಿಸುತ್ತಿದೆ ಎಂದು ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ.

ಕಾರ್ಯ ತತ್ಪರ ಅಂತರ್ ಸಚಿವಾಲಯ ಸಮಿತಿ: ಸರಕಾರ ಈಗಾಗಲೆ ರಚಿಸಿರುವ ಅಂತರ್ ಸಚಿವಾಲಯ ಸಮಿತಿ, ಆಮದು-ರಫ್ತು ಪ್ರಕ್ರಿಯೆಗಳಿಗೆ ಎದುರಾಗಿರುವ ಯಾವುದೇ ತೊಡಕುಗಳ ಪರಾಮರ್ಶಿಸಲು ನಿಯತವಾಗಿ ಸಭೆ ಸೇರುತ್ತಿದೆ ಮತ್ತು ಸಮಸ್ಯೆಗಳಿಗೆ ಅಗತ್ಯ ಪರಿಹಾರ ಕಂಡುಕೊಳ್ಳಲು ಸತತವಾಗಿ ಶ್ರಮಿಸುತ್ತಿದೆ. ಕೋವಿಡ್ ಪಿಡುಗಿನಿಂದ ವಿವಿಧ ರಂಗಗಳಿಗೆ ಎದುರಾಗಿದ್ದ ಸವಾಲು ನಿಭಾಯಿಸಲು ಸರಕಾರ ರಚಿಸಿದ್ದ, ತಜ್ಞರು ಮತ್ತು ಅಧಿಕಾರಿಗಳನ್ನು ಒಳಗೊಂಡ ಸಮಿತಿ ಮಾದರಿಯಲ್ಲೇ, ಉನ್ನತಾಧಿಕಾರದ ಏಳು ಹೊಸ ಸಮಿತಿಗಳನ್ನು ಸರಕಾರ ನಿನ್ನೆಯಷ್ಟೆ ರಚಿಸಿದೆ. ಈ ಸಮಿತಿಗಳು ಪೂರೈಕೆ ಸರಪಳಿ, ಪೆಟ್ರೋಲಿಯಂ ಹಾಗೂ ಡೀಸೆಲ್, ರಸಗೊಬ್ಬರ, ನೈಸರ್ಗಿಕ ಅನಿಲ ಮತ್ತು ಹಣದುಬ್ಬರವೇ ಇತ್ಯಾದಿ ಸಂಕ್ಲಿಷ್ಟ ವಿಚಾರಗಳಿಗೆ ಸಂಬಂಧಿಸಿ, ತಕ್ಷಣಕ್ಕೆ ಮತ್ತು ದೀರ್ಘಕಾಲಕ್ಕೂ ಅನ್ವಯಿಸುವ ಅಗತ್ಯ ಕ್ರಮ ಕೈಗೊಳ್ಳುವ ಹೊಣೆಗಾರಿಕೆ ಹೊಂದಿವೆ. ಈ ರೀತಿಯ ಸಮಗ್ರ ಪ್ರಯತ್ನಗಳಿಂದ ಪ್ರಸ್ತುತ ಎದುರಾಗಿರುವ ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ನಮಗೆ ಸಾಧ್ಯವಾಗುವುದೆಂಬ ಸಂಪೂರ್ಣ ಆತ್ಮವಿಶ್ವಾಸ ತನಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಪ್ರಜೆಗಳ ಕ್ಷೇಮವೇ ಪರಮೋಚ್ಚ ಧ್ಯೇಯ: ಪ್ರಸ್ತುತ ಸಂಘರ್ಷದ ಪ್ರತಿಕೂಲ ಪರಿಣಾಮಗಳು ದೀರ್ಘಕಾಲ ಕಾಡಲಿದೆ ಎಂಬ ಅಭಿಮತ ಬಲವಾಗಿದೆ. ಆದರೂ ದೇಶದ ಪ್ರಜೆಗಳ ಹಿತರಕ್ಷಣೆ ತನ್ನ ನೇತೃತ್ವದ ಸರಕಾರದ ಪರಮೋಚ್ಚ ಧ್ಯೇಯ. ಸರಕಾರ ಅತ್ಯಂತ ಸನ್ನದ್ಧ ಮತ್ತು ಕ್ರಿಯಾಶೀಲ ಸ್ಥಿತಿಯಲ್ಲಿದ್ದುಕೊಂಡು, ತುಂಬು ಗಾಂಭೀರ್ಯದೊಂದಿಗೆ ಅಗತ್ಯ ಕಾರ್ಯತಂತ್ರಗಳನ್ನು ರೂಪಿಸುತ್ತಿದೆ. ಅಗತ್ಯ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ಇದೇ ವೇಳೆ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಸಂಘಟಿತ ಪ್ರಯತ್ನಗಳು ತೀರಾ ಮುಖ್ಯ. ಪಶ್ಚಿಮ ಏಷ್ಯಾ ಸಂಘರ್ಷದ ದುಷ್ಪರಿಣಾಮಗಳು ಭಾರತದ ಮೇಲೆ ಅಧಿಕ ಪರಿಣಾಮ ಬೀರದಂತೆ ತಡೆಯಲು ಸರಕಾರ ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಭರವಸೆ ನೀಡಿದ ಪ್ರಧಾನಿ ಮೋದಿ, ಎಲ್ಲಾ ಸನ್ನಿವೇಶಗಳಲ್ಲೂ ಸರಕಾರ ರೈತಾಪಿ ಸಂಕುಲದ ಜತೆಗಿರಲಿದೆ ಎಂದು ಧೈರ್ಯ ತುಂಬಿದರು.

ದೀರ್ಘಕಾಲೀನ ಯುದ್ಧ ಸೃಷ್ಟಿಸಲಿದೆ ದುಷ್ಪರಿಣಾಮ: ಮುಂಬರುವ ಬಿತ್ತನೆ ಋತುವಿಗೆ ರಸಗೊಬ್ಬರ ಸಾಕಷ್ಟು ಪ್ರಮಾಣದಲ್ಲಿ ಲಭಿಸುವಂತಾಗಲು ಎಲ್ಲಾ ಪ್ರಯತ್ನಗಳನ್ನು ಸರಕಾರ ಮಾಡುತ್ತಿದೆ. ಪ್ರಸ್ತುತ ಬಿಕ್ಕಟ್ಟಿನ ಹೊರತೂ ಅತ್ಯಧಿಕ ಆರ್ಥಿಕ ಬೆಳವಣಿಗೆಯನ್ನು ಕಾಯ್ದುಕೊಳ್ಳುವುದು ನಮ್ಮ ಜವಾಬ್ದಾರಿಯೆಂದು ಗಮನ ಸೆಳೆದ ಪ್ರಧಾನಿ ಮೋದಿ, ಪಶ್ಚಿಮ ಏಷ್ಯಾದಲ್ಲಿನ ಸಮರವು ಆತಂಕದ ವಿಷಯವಾಗಿದೆ. ಮಾತುಕತೆ, ರಾಜತಾಂತ್ರಿಕತೆ ಮುಖೇನ ವಲಯದಲ್ಲಿ ಶಾಂತಿ ಸ್ಥಾಪನೆ ಭಾರತದ ಆಶಯವಾಗಿದೆ. ಯುದ್ಧ ಅಂತ್ಯವಾಗಬೇಕು. ಹೋರ್ಮುಜ್ ಜಲಸಂಧಿ ನೌಕಾಯಾನಗಳಿಗೆ ಮತ್ತೆ ತೆರೆದುಕೊಳ್ಳಬೇಕು ಎಂಬುದು ಭಾರತದಸಂಕಲ್ಪವಾಗಿದೆ.ಎಲ್ಲಾ ಸಮಸ್ಯೆಗಳನ್ನು ಶಾಂತಿಯುತ ಬಗೆಹರಿಸುವಂತೆ ಎಲ್ಲಾ ವರ್ಗಗಳನ್ನು ಉತ್ತೇಜಿಸಲು ಭಾರತ ಪ್ರಯತ್ನಿಸುತ್ತಿದೆ. ಪಶ್ಚಿಮ ಏಷ್ಯಾ ಬಿಕ್ಕಟ್ಟು ದೀರ್ಘಕಾಲ ಮುಂದುವರೆದಲ್ಲಿ ಗಂಭೀರ ಪರಿಣಾಮಗಳು ಖಂಡಿತ ಎಂದು ಪ್ರಧಾನಿ ಮೋದಿ ಎಚ್ಚರಿಸಿದ್ದಾರೆ.

ಯಾವುದೇ ಸವಾಲು ಎದುರಿಸಲು ಸಿದ್ಧರಾಗಿರಿ

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸ್ವರೂಪ ತೀರಾ ಭಿನ್ನವಾದುದು. ಬಿಕ್ಕಟ್ಟು ಸೃಷ್ಟಿಸಿರುವ ಪರಿಣಾಮಗಳಿಗೆ ವಿಭಿನ್ನ ರೀತಿಯಲ್ಲೇ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿದೆ. ಪ್ರತಿ ಸವಾಲುಗಳನ್ನು ನಾವು ತೀರಾ ಸಂಯಮ, ತಾಳ್ಮೆ ಮತ್ತು ಶಾಂತಚಿತ್ತದಿಂದ ಎದುರಿಸಬೇಕಿದೆ. ನಿರಂತರವಾಗಿ ಬದಲಾಗುತ್ತಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಎದುರಾಗುವ ಸಂಭಾವ್ಯ ಯಾವುದೇ ಸವಾಲುಗಳ ಎದುರಿಸಲು ಸಜ್ಜಾಗಿರಿ ಎಂದು ಜನರಿಗೆ ಪ್ರಧಾನಿ ಮೋದಿ ಕರೆ ನೀಡಿದ್ದಾರೆ.

ರಕ್ಷಣಾ ಸಚಿವರ ಮೇಲೆ ಆರೋಪ ಹೊರಿಸಿದ ಟ್ರಂಪ್!

ವಾಷಿಂಗ್ಟನ್: ಇರಾನ್ ವಿರುದ್ಧ ಅಮೆರಿಕ ಮಿಲಿಟರಿ ಕಾರ್ಯಾಚರಣೆ ನಡೆಸಲು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೆಟೆ ಹೆಗ್ಸೆತ್ ಕಾರಣ ವಿನಾ ತಾನಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಚಿತ್ರ ಆರೋಪ ಮಾಡಿದ್ದಾರೆ. ಈ ಮೂಲಕ ಯುದ್ಧದ ಹೊಣೆಗಾರಿಕೆಯನ್ನು ರಕ್ಷಣಾ ಕಾರ್ಯದರ್ಶಿಗಳ ತಲೆಗೆ ಜಾರಿಸಿಬಿಟ್ಟಿದ್ದಾರೆ. ಟೆಹ್ರಾನ್ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸುವ ಸಲಹೆಯನ್ನು ಮೊತ್ತ ಮೊದಲು ನೀಡಿದ್ದು ಹೆಗ್ಸೆತ್ ಎಂದು ಟ್ರಂಪ್ ಸುದ್ದಿಗಾರರ ಬಳಿ ಆಪಾದಿಸಿದ್ದಾರೆ! ಇರಾನ್ ಅಣ್ವಸ್ತ್ರಗಳನ್ನು ತಯಾರಿಸದಂತೆ ತಡೆಯಲು ತಮಗೆ ಸಾಧ್ಯವಿಲ್ಲ, ಹಾಗಾಗಿ ಮಿಲಿಟರಿ ಕಾರ್ಯಾಚರಣೆಯೇ ಸೂಕ್ತವೆಂದು ಪ್ರಥಮವಾಗಿ ಸಲಹೆ ನೀಡಿದ್ದು ಹೆಗ್ಸೆತ್ ಎಂದು ಟ್ರಂಪ್ ದೂರಿದ್ದಾರೆ. ಇರಾನ್ ಮಾಧ್ಯಮಗಳೇನೇ ಹೇಳಿದರೂ ನಾವು ಟೆಹ್ರಾನ್ ಜತೆ ತೀರಾ ಉತ್ತಮ ರೀತಿಯಲ್ಲಿ ಮಾತುಕತೆ ನಡೆಸಿದ್ದೇವೆ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ. ಉಪಾಧ್ಯಕ್ಷ ಜೆಡಿ ವ್ಯಾನ್ಸ್‌ಗೆ ಯುದ್ಧ ವಿಚಾರದಲ್ಲಿ ತನಗಿದ್ದಷ್ಟು ಕುತೂಹಲ ಇಲ್ಲ ಎಂದು ಟ್ರಂಪ್ ಈ ಹಿಂದೆ ಹೇಳಿದ್ದು ಉಲ್ಲೇಖನೀಯ.

ಮರ್ಯಾದಾ ಹತ್ಯೆಗೆ ಕಡಿವಾಣ

ಪುಟ 1 ➜ ತಮ್ಮ ಸಾಂವಿಧಾನಿಕ ಹಕ್ಕನ್ನು ಚಲಾಯಿಸುವವರ, ವಿಶೇಷವಾಗಿ ಯುವ ವಯಸ್ಕರ ವಿರುದ್ಧ ಮರ್ಯಾದೆಗೇಡು ಹತ್ಯೆಗಳನ್ನು ಒಳಗೊಂಡಂತೆ ಕ್ರೂರ ಸ್ವರೂಪದ ಹಿಂಸಾಚಾರಗಳು ವ್ಯಕ್ತವಾಗುತ್ತಿವೆ. ಕೊಲೆ, ಹಲ್ಲೆ ಮತ್ತು ಅಪರಾಧಿಕ ಬೆದರಿಸುವಿಕೆಯಂತಹ ಅಪರಾಧಗಳು ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರಡಿ ಶಿಕ್ಷಾರ್ಹವಾಗಿದ್ದರೂ, ಈ ಉಪಬಂಧಗಳು ಜೀವಂತ ಹೆಣ್ಣುಮಕ್ಕಳಿಗೆ ಮರಣದ ಆಚರಣೆಗಳನ್ನು (ತಿಥಿ) ಮಾಡುವುದರಿಂದ, ಕಾನೂನುಬದ್ಧ ಪಿತ್ರಾರ್ಜಿತ ಹಕ್ಕುಗಳನ್ನು ನಿರಾಕರಿಸುವುದರಿಂದ, ಸಾಮಾಜಿಕ ಬಹಿಷ್ಕಾರದಿಂದ, ವಿಷಪ್ರಾಶನ ಮೂಲಕ ಅಥವಾ ಇತರ ನಿಗೂಢ ವಿಧಾನಗಳ ಮೂಲಕ ಹಾನಿಯನ್ನುಂಟು ಮಾಡುವ ಕಪಟ ಪ್ರಯತ್ನಗಳಿಂದ ಪರಿಗಣಿಸಲಾದ ಜಾತಿ ಮರ್ಯಾದೆಯನ್ನು ಸಂರಕ್ಷಿಸುವ ನಿರ್ದಿಷ್ಟ ಸಾಮಾಜಿಕ ಉದ್ದೇಶವನ್ನು ಅಥವಾ ವ್ಯಾಪಕ ಶ್ರೇಣಿಯ ದಬ್ಬಾಳಿಕೆಯ ಅಭ್ಯಾಸಗಳನ್ನು ಸಮರ್ಪಕವಾಗಿ ಪರಿಹರಿಸುತ್ತಿಲ್ಲವಾದ್ದರಿಂದ. ಅಂಥ ಕೃತ್ಯಗಳು ಭಾರತ ಸಂವಿಧಾನದ 14, 15, 19 ಮತ್ತು 21ನೇ ಅನುಚ್ಛೇದಗಳಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವುದಲ್ಲದೆ, ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಸಾಧನವಾಗಿ ಅಂತರ್ಜಾತಿ ವಿವಾಹಗಳನ್ನು ಪ್ರತಿಪಾದಿಸಿದ ಬಸವಣ್ಣ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರಂತಹ ಸಮಾಜ ಸುಧಾರಕ ಯುಗಪ್ರವರ್ತಕರ ದೃಷ್ಟಿಕೋನವನ್ನು ದುರ್ಬಲಗೊಳಿಸುತ್ತವೆ ಎಂದರು.

ಈಗಾಗಲೇ ಇರುವ ಕಾನೂನುಗಳು, ಅಪಾಯದಲ್ಲಿರುವ ದಂಪತಿಗಳ ರಕ್ಷಣೆಗಾಗಿ ಪೂರ್ವಭಾವಿ ಕಾರ್ಯವ್ಯವಸ್ಥೆಗಳು, ಕಡ್ಡಾಯ ಪೊಲೀಸ್ ಹಸ್ತಕ್ಷೇಪ, ತ್ವರಿತಗತಿಯ ನ್ಯಾಯಿಕ ತೀರ್ಪು ಮತ್ತು ಅನುವಂಶಿಕವಾದ ಅಂಥ ನಾಗರಿಕ ಹಕ್ಕುಗಳ ಮರುಸ್ಥಾಪನೆಯಲ್ಲಿ ಕೆಲವು ನ್ಯೂನ್ಯತೆಗಳನ್ನು ಹೊಂದಿರುತ್ತವೆ. ಇದಕ್ಕೇಂದೇ ಮೀಸಲಾದ ಶಾಸನವು ಇಲ್ಲವಾದ್ದರಿಂದ, ದುಷ್ಕೃತ್ಯವನ್ನು ಎಸಗಿದವರು ಆಗಾಗ್ಗೆ ಕಠಿಣ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿರುವುದರಿಂದ ಮತ್ತು ಸಂತ್ರಸ್ತರು ಅಥವಾ ಬದುಕುಳಿದವರು ಅಸಮರ್ಪಕವಾದ ಪರಿಹಾರ ಹಾಗೂ ಪುನರ್ವಸತಿಯನ್ನು ಪಡೆಯುತ್ತಿರುವುದರಿಂದ ಮತ್ತು ಭಾರತದ ಸಂವಿಧಾನವು ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಯನ್ನು ಸುಭದ್ರಗೊಳಿಸುವ ಭ್ರಾತೃತ್ವದ ತತ್ತ್ವವನ್ನು ಪ್ರತಿಪಾದಿಸುತ್ತದೆ ಹಾಗೂ ಈ ತತ್ತ್ವವು ಜಾತಿ ಆಧಾರಿತ ತಾರತಮ್ಯವನ್ನು ನಿರ್ಮೂಲನೆ ಮಾಡಲು ಮತ್ತು ಅಂತರ್ಜಾತಿ ವಿವಾಹಗಳ ಮನ್ನಣೆ ಮತ್ತು ರಕ್ಷಣೆಯ ಮೂಲಕ ಸಾಮಾಜಿಕ ಒಗ್ಗಟ್ಟನ್ನು ಉತ್ತೇಜಿಸಲು ಒತ್ತಾಯಿಸುತ್ತದೆ.

ಆದ್ದರಿಂದ, ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ಉಪಬಂಧಿಸಲು ಮತ್ತು ಜಾತಿ ಆಧಾರಿತ ಅಪರಾಧಗಳನ್ನು ಪ್ರತಿಬಂಧಿಸಲು ಮತ್ತು ನಿಷೇಧಿಸಲು, ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು, ಅಂತರ್ಜಾತಿ ವಿವಾಹಕ್ಕೆ ಗೌರವವನ್ನು ನೀಡಲು, ವೈಯಕ್ತಿಕ ಆಯ್ಕೆಗಳಲ್ಲಿ ಬಲವಂತದ ಜಾತಿ ಆಧಾರಿತ ತಾರತಮ್ಯವನ್ನು ಪ್ರತಿಬಂಧಿಸಲು ಮತ್ತು (ಡ) ಅಂತರ್ಜಾತಿಯ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದಕ್ಕೆ ಇವ ನಮ್ಮವ ಇವ ನಮ್ಮವ ವೇದಿಕೆ ಯನ್ನು ರಚಿಸಲು, ಶಾಸನವನ್ನು ರಚಿಸುವುದು ಆಗತ್ಯವೆಂದು ಪರಿಗಣಿಸಲಾಗಿದ್ದು, ಆದ್ದರಿಂದ ಈ ವಿಧೇಯಕವನ್ನು ಅಂಗೀಕರಿಸುವಂತೆ ಕೋರಿದರು. ಆಡಳಿತ ಹಾಗೂ ವಿರೋಧ ಪಕ್ಷ ಸದಸ್ಯರು ಈ ವಿಧೇಯಕದ ಮೇಲೆ ಸುದೀರ್ಘವಾಗಿ ಮಾತನಾಡಿದರು.

ಪ್ರಮುಖ ಉದ್ದೇಶಗಳು

ಪುಟ 1 ➜ ವಯಸ್ಕರಾದ ಇಬ್ಬರು ವ್ಯಕ್ತಿಗಳು ಪರಸ್ಪರ ಒಪ್ಪಿಗೆಯಿಂದ ಮದುವೆಯಾಗುವ ಸಾಂವಿಧಾನಿಕ ಹಕ್ಕನ್ನು ಎತ್ತಿಹಿಡಿಯುವುದು. ಇದಕ್ಕೆ ಪೋಷಕರ ಅಥವಾ ಸಮಾಜದ ಪೂರ್ವಾನುಮತಿ ಅಗತ್ಯವಿಲ್ಲ ಎಂದು ವಿಧೇಯಕ ಸ್ಪಷ್ಟಪಡಿಸುತ್ತದೆ.ಮರ್ಯಾದೆ'ಯ ಹೆಸರಿನಲ್ಲಿ ನಡೆಯುವ ಹತ್ಯೆಗಳಿಗೆ ಕನಿಷ್ಠ 5 ವರ್ಷಗಳ ಜೈಲು ಶಿಕ್ಷೆಯನ್ನು ವಿಧೇಯಕವು ಪ್ರಸ್ತಾಪಿಸಿದೆ. ಗಂಭೀರ ಗಾಯಗೊಳಿಸುವ ಅಥವಾ ದೈಹಿಕ ಹಿಂಸೆ ನೀಡುವ ಅಪರಾಧಗಳಿಗೆ 3 ರಿಂದ 5 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ. ಬೆದರಿಕೆ ಎದುರಿಸುತ್ತಿರುವ ಅಂತರ್ಜಾತಿ ಅಥವಾ ಅಂತರ್ಧರ್ಮೀಯ ದಂಪತಿಗಳಿಗೆ ದೂರು ನೀಡಿದ 6 ಗಂಟೆಗಳ ಒಳಗಾಗಿ ಪೊಲೀಸ್ ರಕ್ಷಣೆ ಒದಗಿಸಲು ಕಾಯ್ದೆ ಕಡ್ಡಾಯಗೊಳಿಸುತ್ತದೆ.

ಇಂದು ಸರ್ವಪಕ್ಷ ಸಭೆ

ಹೊಸದಿಲ್ಲಿ : ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷಕ್ಕೆ ಸಂಬಂಧಿಸಿ ಸರಕಾರ ಬುಧವಾರ ಸರ್ವಪಕ್ಷಗಳ ಸಭೆ ಆಯೋಜಿಸಿದೆ ಎಂದು ಮೂಲಗಳು ತಿಳಿಸಿವೆ. ಪಶ್ಚಿಮ ಏಷ್ಯಾ ಸನ್ನಿವೇಶಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಸಂಸತ್ತನ್ನು ಉದ್ದೇಶಿಸಿ ಹೇಳಿಕೆ ನೀಡಿದ ಬೆನ್ನಲ್ಲೇ ಸರ್ವಸಭೆ ವಿಚಾರ ಪ್ರಕಟವಾಗಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಉದ್ಭವಿಸಿರುವ ಸಂಕ್ಲಿಷ್ಟ ಜಾಗತಿಕ ಸನ್ನಿವೇಶಗಳು ದೀರ್ಘಕಾಲ ಮುಂದುವರಿಯುವ ಆತಂಕವಿದೆ. ಹಾಗಾಗಿ ಕೋವಿಡ್ ಸಮಯದಲ್ಲಿ ಏಕತೆ ಮೆರೆದಂತೆ, ಸಂಭಾವ್ಯ ಯಾವುದೇ ಸವಾಲುಗಳನ್ನು ಎದುರಿಸಲು ಏಕತೆಯಿಂದಿರುವಂತೆ ಮತ್ತು ಸನ್ನದ್ಧರಾಗಿರುವಂತೆ ಪ್ರಧಾನಿ ಮೋದಿ ಸೋಮವಾರ ದೇಶವಾಸಿಗಳಿಗೆ ಕರೆನೀಡಿದ್ದರು.

ಪಶ್ಚಿಮ ಏಷ್ಯಾ ಬಿಕ್ಕಟ್ಟು ದೇಶದ ಇಂಧನ, ರಸಗೊಬ್ಬರ, ರಾಷ್ಟ್ರೀಯ ಭದ್ರತೆ ಮತ್ತಿತರ ರಂಗಗಳ ಮೇಲೆ ಪರಿಣಾಮ ಬೀರಿವೆ. ಯುದ್ಧ ವಲಯದಲ್ಲಿ ವಾಸವಿರುವ ಭಾರತೀಯರ ಮೇಲೂ ಪರಿಣಾಮ ಬೀರಿದೆ ಎಂದು ಲೋಕಸಭೆಗೆ ನೀಡಿದ ಹೇಳಿಕೆಯಲ್ಲಿ ಆತಂಕ ವ್ಯಕ್ತಪಡಿಸಿದ್ದ ಪ್ರಧಾನಿ ಮೋದಿ, ಜನಸಾಮಾನ್ಯರಿಗೆ ತೀರಾ ತೊಂದರೆಯಾಗಕೂಡದೆಂದು ಸರಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಮಾಹಿತಿ ನೀಡಿದ್ದರು. ಬಿಕ್ಕಟ್ಟಿಗೆ ಸಂಬಂಧಿಸಿ ನಮ್ಮ ಒಗ್ಗಟ್ಟಿನ ಧ್ವನಿ ಭಾರತದ ಸಂಸತ್ತಿನಿಂದ ಜಗತ್ತಿಗೆ ತಲುಪಬೇಕೆಂದು ಕರೆ ನೀಡಿದ್ದರು.

ಕಿರುಸುದ್ದಿ

ದಲಿತ ಸಮುದಾಯದವರು ಕಾಂಗ್ರೆಸ್‌ಗೆ ಬುದ್ಧಿ ಕಲಿಸಲಿದ್ದಾರೆ: ಮಹೇಶ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭೆ ಉಪಚುನಾವಣೆಯಲ್ಲಿ ದಲಿತ ಸಮುದಾಯದವರು ಕಾಂಗ್ರೆಸ್ ಪಕ್ಷಕ್ಕೆ ಬುದ್ಧಿ ಕಲಿಸಲಿದ್ದಾರೆ ಎಂದು ಮಾಜಿ ಸಚಿವ ಎನ್.ಮಹೇಶ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಮೂರು ವರ್ಷದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಅನುದಾನವನ್ನು ಸರ್ಕಾರದ ಪಂಚ ಗ್ಯಾರಂಟಿಗಳಿಗೆ ಬಳಸಿಕೊಳ್ಳುವ ಮೂಲಕ ಈವರ್ಗದ ಜನರಿಗೆ ಮಾರಕವಾಗುವ ರೀತಿ ಕೆಲಸ ಮಾಡಿದ್ದಾರೆ. ಮೂರು ವರ್ಷದಲ್ಲಿ ಎಸ್ಸಿ,ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಅನುದಾನದಲ್ಲಿ 53 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿಗೆ ಬಳಸಿಕೊಳ್ಳಲಾಗಿದೆ. ಇದು ಇಡೀ ರಾಜ್ಯದ ಜನರಿಗೆ ಗೊತ್ತಿದೆ ಎಂದು ಹೇಳಿದರು. ಎಸ್ಸಿ,ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲು ಬರುವುದಿಲ್ಲ, ಇದನ್ನು ಬಳಸಿಕೊಂಡ ಬಗ್ಗೆ ಮತದಾರರ ತಲೆಯಲ್ಲಿದೆ. ಈ ಸರ್ಕಾರದ ವಿರುದ್ಧ ದಲಿತ ಸಮುದಾಯದವರು ಆಕ್ರೋಶಗೊಂಡಿದ್ದು ಏ.9ರಂದು ನಡೆಯುವ ಮತದಾನದಂದು ಬಾಗಲಕೋಟೆ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರಿಗೆ ಜನ ಬೆಂಬಲಿಸಲಿದ್ದಾರೆ ಎಂದು ಹೇಳಿದರು.

ಅಪಘಾತ: ಇಬ್ಬರ ಸಾವು

ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆಯ ಅರ್ಬನ್ ಓಯಸಿಸ್ ಮಾಲ್ ಹತ್ತಿರ ರಸ್ತೆ ಅಪಘಾತವಾಗಿ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಸೋಮವಾರ ತಡರಾತ್ರಿ ನಡೆದಿದೆ. ತಾಜನಗರ ನಿವಾಸಿಗಳಾದ ಮೀಜಮುಲ್ಲಾ ಮುಲ್ಲಾ(25), ಫಯಾಜ್ ಭಾಗವಾನ(18) ಮೃತಪಟ್ಟವರು. ರಾತ್ರಿ ಗೋಕುಲ ರಸ್ತೆ ವಿಮಾನ ನಿಲ್ದಾಣದಿಂದ ಹೊಸೂರ ಕಡೆ ಬರುತ್ತಿದ್ದರು. ಮಳೆ,ಗಾಳಿಗೆ ಕೇಬಲ್ ವೈರ್ ತುಂಡರಿಸಿ ಅವರ ಮೇಲೆ ಬಿದ್ದಿದೆ. ಅದನ್ನು ತಪ್ಪಿಸಲು ಹೋದಾಗ ಬೈಕ್ ನಿಯಂತ್ರಣ ತಪ್ಪಿ ಅಪಘಾತವಾಗಿದೆ. ಗಂಭೀರವಾಗಿ ಗಾಯಗೊಂಡ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಸಂಚಾರಿ ಪೊಲೀಸರು ತಿಳಿಸಿದರು. ಸ್ಥಳಕ್ಕೆ ಉತ್ತರ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಮೃತ ದೇಹಗಳನ್ನು ನಗರದ ಕೆಎಂಸಿಆರ್‌ಐ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದ್ದಾರೆ. ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ಕೇಬಲ್ ವೈರ್ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಸೆಕ್ಯೂರಿಟಿ ಗಾರ್ಡ್ ಸಾವು: ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆ ಅಂಡರ್‌ಗ್ರೌಂಡ್ ನೀರಿನ ಟ್ಯಾಂಕಿನಲ್ಲಿ ಬಿದ್ದು ಸೆಕ್ಯೂರಿಟಿ ಗಾರ್ಡ್ ಮೃತಪಟ್ಟ ಘಟನೆ ನಡೆದಿದೆ. ಗದಗ ಮೂಲದ ಇಲ್ಲಿನ ತಾರಿಹಾಳ ನಿವಾಸಿ ಹನುಮಂತಪ್ಪ ತಳವಾರ(66) ಮೃತಪಟ್ಟವರು. ಗಾಮನಗಟ್ಟಿ ಕೈಗಾರಿಕಾ ಪ್ರದೇಶದ ಫ್ಯಾಕ್ಟರಿವೊಂದರಲ್ಲಿ ಕೆಲಸ ಮಾಡುತ್ತಿದ್ದು, ಮಾ.22ರಂದು ಬಿದ್ದು ಮೃತಪಟ್ಟಿದ್ದು, ನವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಬೇಳೆ	6750	6750
ಕಡಲೆಕಾಳು	1811	5310
ಉದ್ದಿನಬೇಳೆ	10100	10900
ಉದ್ದಿನಕಾಳು	3019	6425
ಧನಿಯಾ	6111	6111
ಒಣ ಮೆಣಸಿನಕಾಯಿ	4500	20525
ಬಟಾಣಿ	4900	5350
ಹೆಸರುಕಾಳು	550	5200
ಹುರುಳಿ ಕಾಳು	3252	3816
ಬೆಲ್ಲ	4200	4952
ಜೋಳ	1105	4106
ಮೆಕ್ಕೆಜೋಳ	1356	1815
ಮಡಿಕೆ (ಮಟಕಿ)	5926	12138
ಸಾಸುವೆ	4525	4525
ಈರುಳ್ಳಿ	500	2200
ಆಲೂಗಡ್ಡೆ	1500	1800
ಅಕ್ಕಿ	4900	17724
ಕುಸುಬೆ	4710	4991
ಸೋಯಾಬಿನ್	3885	5556
ತೊಗರಿ	2525	3561
ತೊಗರಿ ಬೇಳೆ	6550	11000
ಗೋಧಿ	1710	2525

ಸರ್ಕಾರ ಸಮಿತಿ ರಚಿಸಿ ತನಿಖೆಗೆ ಕಾಲಾವಕಾಶ ನೀಡಲಿ: ಸೊಬರದಮಠ



ಹುಬ್ಬಳ್ಳಿ: ಮಲಪ್ರಭಾ ಬಲದಂಡೆ ಮತ್ತು ಎಡದಂಡೆ ಪುನರ್ ಅಭಿವೃದ್ಧಿ 2,168.39 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸಿದ್ದು, ಇದರಲ್ಲಿ ಸಾಕಷ್ಟು ಅವ್ಯವಹಾರವಾಗಿದೆ. ಆದ್ದರಿಂದ ಸರ್ಕಾರ ಐದು ಜನರ ಸಮಿತಿ ರಚಿಸಿ, 10 ದಿನ ಸಮಗ್ರ ತನಿಖೆ ನಡೆಸಲು ಕಾಲಾವಕಾಶ ನೀಡಬೇಕು. ಇಲ್ಲವಾದರೆ ರೈತರು ಬೀದಿಗಿಳಿದು ಹೋರಾಟ ಹಾಗೂ ಕಾನೂನು ಹೋರಾಟ ಮಾಡಲಾಗುವುದು ಎಂದು ರೈತ ಸೇನಾ ಕರ್ನಾಟಕ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ವೀರೇಶ ಸೊಬರದಮಠ ಸ್ವಾಮೀಜಿ ಎಚ್ಚರಿಕೆ ನೀಡಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲು ಈ ಕಾಮಗಾರಿಗೆ 1250 ಕೋಟಿ ಡಿಪಿಆರ್ ಸಿದ್ಧಪಡಿಸಲಾಗಿತ್ತು. ಬಳಿಕ ಹಣವನ್ನು 2,168 .39 ಕೋಟಿಗೆ ಹೆಚ್ಚಿಸಿ ಡಿಪಿಆರ್‌ನಲ್ಲಿ ಇಲ್ಲದಿದ್ದರೂ ಪ್ರವಾಸಿ ಮಂದಿರ, ವಸತಿಗೃಹಗಳನ್ನು ನಿರ್ಮಿಸಲಾಗಿದೆ. ಅವುಗಳ ಕಾಮಗಾರಿಗಳು ಕಳಪೆಯಾಗಿವೆ ಎಂದು ದೂರಿದರು.

ಕಾಮಗಾರಿಯಲ್ಲಿ ನಡೆದ ಅವ್ಯವಹಾರದ ಕುರಿತು ಕಳೆದ ವರ್ಷ ಜೂನ್‌ನಲ್ಲಿ ಲೋಕಾಯುಕ್ತಕ್ಕೆ ದೂರು ನೀಡಲಾಗಿತ್ತು. ತನಿಖಾಧಿಕಾರಿ ಯೋಗೇಶ ಎಂಬುವರು ತನಿಖೆ ನಡೆಸಿ, ಎಲ್ಲವೂ ಸರಿ ಇದೆ ಎಂಬುದಾಗಿ ವರದಿ ನೀಡಿದರು. ತನಿಖಾಧಿಕಾರಿ ಮತ್ತು ನೀರಾವರಿ ಇಲಾಖೆಯ ಸೂಪರಿಂಟೆಂಡೆಂಟ್ ಎಂಜಿನಿಯರ್ ಅವರು ಹೊಂದಾಣಿಕೆ ಮಾಡಿಕೊಳ್ಳುವಂತೆ ಆಮಿಷವೊಡ್ಡಿದ್ದರು. ಈ ಕುರಿತು ಆಡಿಯೋ ಮತ್ತು ಕಳಪೆ ಕಾಮಗಾರಿಯ ಚಿತ್ರಗಳನ್ನು ಒಳಗೊಂಡ ಸಿಡಿಗಳನ್ನು ಲೋಕಾಯುಕ್ತ ಮತ್ತು ಮುಖ್ಯಮಂತ್ರಿಗೆ ಕಳಿಸಲಾಗಿದೆ ಎಂದು ತಿಳಿಸಿದರು.

ಅಷ್ಟೇ ಅಲ್ಲದೇ ನನಗೆ ಪ್ರಕರಣದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವಂತೆ ಕೆಲವು ಅಧಿಕಾರಿಗಳು ಆಮಿಷವೊಡ್ಡಿದ್ದು, ಅವರ ಬಗ್ಗೆಯೂ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು. ತನಿಖೆಗೆ ಆಗ್ರಹಿಸಿ ಒಂದು ವಾರದಲ್ಲಿ ಲೋಕಾಯುಕ್ತಕ್ಕೆ ಮತ್ತೆ ಅರ್ಜಿ ಸಲ್ಲಿಸಲಾಗುವುದು. ಇದಕ್ಕೆ ಸ್ಪಂದಿಸದಿದ್ದರೆ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರೊಂದಿಗೆ ಹೋರಾಟ ನಡೆಸುವ ಜತೆಗೆ, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಲಾಗುವುದು ಎಂದರು.

ಕಾಲುವೆಯ ಕೊನೆ ಭಾಗದ ರೈತರ ಜಮೀನಿಗೂ ನೀರು ತಲುಪಬೇಕು ಎಂಬುದು ಕಾಮಗಾರಿ ಉದ್ದೇಶವಾಗಿತ್ತು. ಅದು ಈಡೇರಿಲ್ಲ, ಜಮೀನುಗಳಿಗೆ ತೆರಳು ಸರ್ವಿಸ್ ರಸ್ತೆ ಸರಿಯಾಗಿಲ್ಲ, ಸಣ್ಣ ಕಾಲುವೆ ಮೇಲೆ ಸಿ.ಡಿ ನಿರ್ಮಿಸಿಲ್ಲ ಎಂದು ಆರೋಪಿಸಿದರು.

ಕಾರಂಜಾ ಸಂತ್ರಸ್ತರಿಗೆ ಪರಿಹಾರ ಘೋಷಿಸಲು ಆಗ್ರಹ

ಬೀದರ್: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳೇ ಕಳೆದಿವೆ. ಬಜೆಟ್‌ನಲ್ಲಿ ಕಾರಂಜಾ ಸಂತ್ರಸ್ತರಿಗೆ ಪರಿಹಾರ ಹಣ ಘೋಷಣೆ ಮಾಡಿದೆ ಸಿಎಂ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮತ್ತು ಜಿಲ್ಲೆಯ ಇನ್ನೋರ್ವ ಸಚಿವ ರಹೀಂ ಖಾನ್ ಕಾರಂಜಾ ಸಂತ್ರಸ್ತರಿಗೆ ದೋಖಾ ಮಾಡಿದ್ದಾರೆ ಎಂದು ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿದರು.

ಸಂತ್ರಸ್ತರು ತಮಗೆ ಪರಿಹಾರದ ಹಣ ಬಿಡುಗಡೆ ಪ್ರತಿಭಟಿಸುತ್ತಿದ್ದರೆ, ಪರಿಹಾರದಕುರಿತುಜಿಲ್ಲಾಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಬಳಿ ಮನವಿ ಪತ್ರ ಕೊಟ್ಟು ಮಾತನಾಡಿಸಲು ಹೋದವರ ಮೇಲೆಯೇ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದು ಜಿಲ್ಲೆಯ 28 ಗ್ರಾಮಗಳ ಕಾರಂಜಾ ಸಂತ್ರಸ್ತ ಹಿತರಕ್ಷಣಾ ವೇದಿಕೆಯ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾರಂಜಾ ಸಂತ್ರಸ್ತ ಹಿತರಕ್ಷಣಾ ವೇದಿಕೆಯ ರೈತರಾದ ಸೋಮನಾಥ ಪಾಟೀಲ, ಬಳವಂತರಾವ ಪಾಟೀಲ್, ಅಶೋಕರಾವ ಡಾಕುಳಗಿ, ಪ್ರದೀಪ ಹಿಲಾಲಪುರ, ಪವನ ಮೊಗದಾಳ್ ಸೇರಿದಂತೆ ಇನ್ನಿತರರು ಇದ್ದರು.



ವಿದೇಶಿ ಪ್ರವಾಸಿ ಮಹಿಳೆಯಿಂದ ಭಿಕ್ಷಾಟನೆ

ಗೋಕರ್ಣ: ಪ್ರವಾಸಿ ವೀಸಾ ಪಡೆದು ನಮ್ಮ ದೇಶಕ್ಕೆ ಬಂದ ವಿದೇಶಿ ಪ್ರವಾಸಿ ಮಹಿಳೆ ಇಲ್ಲಿನ ರಸ್ತೆಯಂಚಿನಲ್ಲಿ ಕುಳಿತು ಭಿಕ್ಷಾಟನೆ ಮಾಡುತ್ತಿದ್ದಾಳೆ.

ಜಪಾನ್ ದೇಶದ ಪ್ರಜೆ ಯುಕೋ ಎಂದು ತನ್ನ ಪರಿಚಯಿಸಿಕೊಳ್ಳುವ ಈ ಮಹಿಳೆ ಪ್ರತಿನಿತ್ಯ ಮಹಾಗಣಪತಿ ಮಂದಿರದ ಮಂಭಾಗದಲ್ಲಿರುವ ಇಂದ್ರೇಶ್ವರ ದೇವಾಲಯದ ಬಳಿ ಕುಳಿತು ಮುಂದೆ ತಾಟಿನಲ್ಲಿ ಕೃಷ್ಣನ ಮೂರ್ತಿ ಇಟ್ಟಿದ್ದು, ಇದಕ್ಕೆ ಜನರು ಹಣ ಹಾಕಿ ತೆರಳುತ್ತಿದ್ದಾರೆ.

ಹಾಡು ಹೇಳುತ್ತಾ ಬಸ್, ರೈಲಿನಲ್ಲಿ ಕೈಚಾಚುವ ಭಿಕ್ಷಾಟನೆಯನ್ನ ಮಾಡುವವರನ್ನ ನಾವು ನೋಡುತ್ತೇವೆ ಆದರೆ, ಪ್ರವಾಸಿ ತಾಣದಲ್ಲಿ ವಿದೇಶಿ



ಮಹಿಳೆ ಕೊಳಲು ನುಡಿಸುತ್ತಾ ರಸ್ತೆ ಅಂಚಿನಲ್ಲಿ ಕುಳಿತು ಹಣ ಪಡೆಯುತ್ತಿರುವ ದೃಶ್ಯ ಎಲ್ಲರ ಗಮನ ಸೆಳೆಯುತ್ತಿದೆ.

ಭಿಕ್ಷೆ ಬೇಡುವುದನ್ನ ಸರ್ಕಾರ ನಿಷೇಧಿಸಿದೆ. ಆದರೂ ವಿದೇಶಿ ಮಹಿಳೆ ಇಲ್ಲಿ ಭಿಕ್ಷಾಟನೆ ಮಾಡುತ್ತಿರುವ ಬಗ್ಗೆ ಕ್ರಮ ತೆಗೆದುಕೊಳ್ಳುವವರು ಇಲ್ಲವೇ ಎಂದು ಜನರು ಪ್ರಶ್ನೆ ಮಾಡುತ್ತಿದ್ದಾರೆ.

ಕುಸ್ತಿ: ಕೊಲ್ಲಾಪುರದ ಹಿಂದ ಕೇಸರಿ ಮಾವುಲಿಗೆ ಗೆಲುವು



ರನ್ನ ಬೆಳಗಲಿ: ಪಟ್ಟಣದ ಶ್ರೀ ಬಂದಲಕ್ಷ್ಮೀದೇವಿ ಜಾತ್ರೆ ಹಾಗೂ ಮಾರುತೇಶ್ವರ ಕಾರ್ತಿಕೋತ್ಸವ ಅಂಗವಾಗಿ ಸೋಮವಾರ ಹಮ್ಮಿಕೊಂಡ ರಾಷ್ಟ್ರಮಟ್ಟದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿಯಲ್ಲಿ ಭಾರತ ಕೇಸರಿ ಕೊಲ್ಲಾಪುರದ ಪೈಲ್ವಾನ್ ಮಾವುಲಿ ಜಮದಾಡೆ ಗೆಲುವಿನ ನಗೆ ಬೀರಿದರು.

ಬಂದಲಕ್ಷ್ಮೀ ದೇವಸ್ಥಾನದ ಮೈದಾನದ ಕುಸ್ತಿ ಕಣದಲ್ಲಿ ಪ್ರಮುಖ ಐದು ಜೋಡಿ ಸೇರಿ 33ಕ್ಕೂ ಹೆಚ್ಚು ಜೋಡಿ ಕುಸ್ತಿಪಟುಗಳು ಜಂಗಿ ನಿಕಾಲಿ ಕುಸ್ತಿ ಆಡಿದರು.

ಮೊದಲನೇ ಕ್ರಮಾಂಕದ ಕುಸ್ತಿಯಲ್ಲಿ ಸಾಂಗಲಿಯ ಮಧ್ಯಪ್ರದೇಶ ಕೇಸರಿ ಸುದೇಶ ಠಾಕೂರ ಅವರನ್ನು ಕೊಲ್ಲಾಪುರದ ಮಾವುಲಿ ಜಮದಾಡೆ ಸೋಲಿಸಿ ಸಂಭ್ರಮಿಸಿದರು.

ಎರಡನೇ ಕ್ರಮಾಂಕದ ಕುಸ್ತಿಯಲ್ಲಿ ಬೆಳಗಾವಿಯ ಕರ್ನಾಟಕ ಕಂಠೀರವ ನಾಗರಾಜ ಬಸಿಡೋಣಿ ಅವರನ್ನು ಸಾಂಗ್ಲಿಯ ಮಹಾರಾಷ್ಟ್ರ ಚಾಂಪಿಯನ್ ಪ್ರದೀಪ ಠಾಕೂರ, ಮೂರನೇ ಕ್ರಮಾಂಕದ ಕುಸ್ತಿಯಲ್ಲಿ ಬೆಳಗಾವಿ ಶಿವಾನಂದ ದಡ್ಡಿ ಅವರನ್ನು ಸಾಂಗ್ಲಿಯ ಋಷಿಕೇಶ ದೇವಕರ, ನಾಲ್ಕನೇ ಕ್ರಮಾಂಕದ ಕುಸ್ತಿಯಲ್ಲಿ ರಬಕವಿಯ ಸಾಗರ ಜಗದಾಳ ಅವರನ್ನು ಸಾಂಗ್ಲಿಯ ದಿನೇಶ ಗುಂಟಿ ಹಾಗೂ ಐದನೇ ಕ್ರಮಾಂಕದ ಕುಸ್ತಿಯಲ್ಲಿ ದಾವಣಗೆರೆಯ ಬಸವರಾಜ ಯಲ್ಲಟ್ಟಿ ಅವರನ್ನು ಬೆಳಗಾವಿಯ ಸಂಜು ಇಂಗಳಗಿ ಸೋಲಿಸಿದರು. ಈ ಸಂದರ್ಭದಲ್ಲಿ ಮಹಿಳಾ ಕುಸ್ತಿ ಪೈಲ್ವಾನರಿಗೂ ಅವಕಾಶ ಕಲ್ಪಿಸಲಾಯಿತು.

ಶ್ರೀ ಬಂದಲಕ್ಷ್ಮೀದೇವಿ ಮರು ರಥೋತ್ಸವ ಸಂಭ್ರಮದಿಂದ ನೆರವೇರಿತು. ಬಂದಲಕ್ಷ್ಮೀದೇವಿ ದೇವಸ್ಥಾನದಿಂದ ಅಕ್ಕಮಹಾದೇವಿ ದೇವಸ್ಥಾನದವರೆಗೆ ಮರು ರಥೋತ್ಸವ ಆರಂಭಗೊಂಡಿತು. ಮಂಗಳವಾರ ಬೆಳಗಿನ ಜಾವ ತೇರಿನ ಮನೆ ತಲುಪಿದ್ದು, ರಾಮಾಯಣ ಸಂಗ್ರಾಮದ ಗೊಂಬೆಯ ವೇಶ, ಜೋಕರ್ ಗೊಂಬೆಗಳು,ಬೃಹದಾಕಾರದ ಆಕಾರದ ಮಹಿಷ, ಯಕ್ಷಗಾನ, ದುರ್ಗಾ ದೇವಿ, ಗೊಂಬೆಗಳು, ಮಲ್ಲಿಕಾರ್ಜುನ, ಮಹಾಲಿಂಗೇಶ್ವರ ಖಂಡ್ಯಾಳ ಬಾಸಿಂಗ್, ಹತ್ತಕ್ಕಿಂತ ಹೆಚ್ಚು ಪಲ್ಲಕ್ಕಿಗಳು, ಝಾಂಜ್ ಪತಕ್, ಕುದುರೆ ಕುಣಿತ, ಡೊಳ್ಳುವಾದನ, ಹಲಗೆವಾದನ, ಕರಡಿಮೇಳ, ಮುಂತಾದ ಜಾನಪದ ಕಲಾ ಮೇಳಗಳು

ಮರುರಥೋತ್ಸವ ಸೊಬಗನ್ನು ಹೆಚ್ಚಿಸಿದವು. ಈ ವೈಭವ ಕಣ್ತುಂಬಿಕೊಂಡ ಸಾವಿರಾರು ಭಕ್ತರು ರಥಕ್ಕೆ ಬೆಂಡು, ಬತ್ತಾಸು ತೂರಿ ನಮಿಸಿದರು.

ಹುದ್ದೆಗಳ ಭರ್ತಿಗೆ ವಿಳಂಬವೇಕೆ?: ಕಾಂತಕುಮಾರ್

ಕಲಬುರಗಿ: ಧಾರವಾಡದಲ್ಲಿ ಅಕ್ಸಾ ಸಂಘಟನೆಯಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ನಡೆಸಿದ ಪ್ರತಿಭಟನೆಗೆ ಮಣಿದು



ತಿಂಗಳೊಳಗೆ ಹುದ್ದೆಗಳ 57 ಸಾವಿರ ಹುದ್ದೆಗಳ ನೇಮಕಾತಿ ಪ್ರಾರಂಭ ಮಾಡುವುದಾಗಿ ಭರವಸೆ ನೀಡಿ, ಇದೀಗ ವಿಳಂಬ ಮಾಡುತ್ತಿರುವುದೇಕೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ್ ಪ್ರಶ್ನಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸುಮಾರು 2,84,000 ಸರ್ಕಾರಿ ಹುದ್ದೆ ಖಾಲಿಯಿದ್ದು, ಕಳೆದ 5-6 ವರ್ಷಗಳಿಂದ ರಾಜ್ಯದಲ್ಲಿ ಸರಿಯಾಗಿ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ, ಪರಿಣಾಮವಾಗಿ ರಾಜ್ಯದ ಯುವಕರು ನಿರುದ್ಯೋಗ ಸಮಸ್ಯೆಯಿಂದ ಹಾಗೂ ಮಾನಸಿಕವಾಗಿ ಒತ್ತಡಕ್ಕೆ ಒಳಗಾಗಿದ್ದಾರೆ. ಇದನ್ನು ಖಂಡಿಸಿ ನಮ್ಮ ಅಕ್ಸಾ ಸಂಘಟನೆಯಿಂದ ಧಾರವಾಡ ಸೇರಿದಂತೆ ರಾಜ್ಯಾದ್ಯಂತ ಹೋರಾಟ ನಡೆಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಮುಖಂಡರಾದ ಚಂದ್ರಶೇಖರ ಅಧ್ಯಗೋಳ,ಡಾ. ಶಾಂತಪ್ಪ, ಫಿರೋಜ್ ಗಾಯಕ್ವಾಡ್, ಶ್ರೀಶೈಲ, ಅರ್ಜುನ್, ಈರಣ್ಣ, ಸಂತೋಷ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪ್ರತಿಭಟನೆಗೆ ಪೊಲೀಸರ ನಿರಾಕರಣೆ

ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆ ಭರ್ತಿ ಮಾಡುವಂತೆ ಆಗ್ರಹಿಸಿ ಕಳೆದ ಮಾ.23ರಂದು ನಗರದ ಜಗತ್ ವೃತ್ತದಿಂದ ಡಿಸಿ ಕಚೇರಿಯವರೆಗೆ ಪ್ರತಿಭಟನೆ ನಡೆಸುವುದಾಗಿ, ಪೂರ್ವದಲ್ಲೇ ಮಾ.17ರಂದೇ ಪೊಲೀಸ್ ಇಲಾಖೆಗೆ ಶಾಂತಿಯುತ ಪ್ರತಿಭಟನೆಗೆ ಅನುಮತಿ ನೀಡುವಂತೆ ಮನವಿ ಸಲ್ಲಿಸಲಾಗಿತ್ತು. ಮೇಲಾಗಿ ಇಲಾಖೆ ಧ್ವನಿ ವರ್ಧಕಕ್ಕೆ ದುಡ್ಡು ಸಹ ತೆಗೆದುಕೊಂಡಿದ್ದಾರೆ. ಕೊನೆ ಘಳಿಗೆಯಲ್ಲಿ ಅನುಮತಿ ನಿರಾಕರಿಸಲಾಗಿದೆ ಎಂದು ಅಧ್ಯಕ್ಷ ಕಾಂತಕುಮಾರ್ ಹೇಳಿದರು.


> **ಕೆಪಿಎಸ್ಸಿ ಪರೀಕ್ಷೆಯಲ್ಲೂ ಅಕ್ರಮ ನಡೆದಿದೆ. ಈ ಕುರಿತು ಸರ್ಕಾರ ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ. ಕೂಡಲೇ ಅಕ್ರಮ ನಡೆದಿರುವ ಪರೀಕ್ಷೆಗಳ ತನಿಖೆಯನ್ನು ಸಿಬಿಐಗೆ ವಹಿಸಬೇಕು.ಕಲಬುರಗಿಯ ಪ್ರತಿಭಟನೆ ಕುರಿತು ಕಲಬುರಗಿ ವಿಭಾಗೀಯ ಹೈಕೋರ್ಟ್ ಪೀಠಕ್ಕೆ ರಿಟ್ ಅರ್ಜಿ ಸಲ್ಲಿಸಲಾಗಿದ್ದು, ನ್ಯಾಯಾಲಯದ ಮೇಲೆ ನಮಗೆ ಸಂಪೂರ್ಣ ಭರವಸೆ ಇದೆ. ನ್ಯಾಯಾಲಯದ ಅನುಮತಿ ಪಡೆದು ಬರುವ ಮಾ.27ರಂದು 500 ವಿದ್ಯಾರ್ಥಿಗಳ ಬೃಹತ್ ಶಾಂತಿಯುತ ಪ್ರತಿಭಟನೆ ನಡೆಸಲಾಗುವುದು.**
>
> ■ ಕಾಂತಕುಮಾರ್, ಅ.ಕ. ರಾ.ವಿ.ಸಂಘದ ಅಧ್ಯಕ್ಷ

ಪರಿಶೀಲಿಸಲು ಕೋರ್ಟ್ ಸೂಚನೆ

ಕಲಬುರಗಿ ವಿಭಾಗೀಯ ಹೈಕೋರ್ಟ್‌ಪೀಠವು ಪ್ರತಿಭಟನೆಗೆ ಸಂಬಂಧಿಸಿದಂತೆ ಅರ್ಜಿದಾರರು ಮತ್ತೊಮ್ಮೆ ಮನವಿ ಸಲ್ಲಿಸಲು ಹೇಳಿ, ಅದನ್ನು ಕಲಬುರಗಿ ನಗರ ಪೊಲೀಸ್ ಆಯುಕ್ತರು ಕಾನೂನಿನಂತೆ ಪರಿಶೀಲಿಸಿ ಕ್ರಮ ಕೈಗೊಂಡು ಕೋರ್ಟ್‌ಗೆ ತಿಳಿಸಲು ಸೂಚಿಸಿದೆ.

ಆನ್‌ಲೈನ್ ಗೇಮ್‌ನಲ್ಲಿ ಹಣ ಕಳೆದುಕೊಂಡ ಎಂಬಿಬಿಎಸ್ ವಿದ್ಯಾರ್ಥಿ ಆತ್ಮಹತ್ಯೆ

ಬೀದರ್: ಆನ್‌ಲೈನ್ ಗೇಮ್‌ನ ಚಟಕ್ಕೆ ಬಿದ್ದು ಹಣ ಕಳೆದುಕೊಂಡ ಹಿನ್ನೆಲೆಯಲ್ಲಿ ಬೀದರ್‌ನ ಬ್ರಿಮ್ಸ್ ವೈದ್ಯಕೀಯ ಕಾಲೇಜಿನ ವಸತಿ ನಿಲಯದಲ್ಲಿ ಎಂಬಿಬಿಎಸ್ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.



ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಬ್ರಿಮ್ಸ್) ಯಲ್ಲಿ ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದ ಅನಿಷ್ಕಾರ್ ಚವ್ಹಾಣ್ (21) ಮೃತ ವಿದ್ಯಾರ್ಥಿ.

ಮೂಲತಃ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಸಲಗರ್ ತಾಂಡಾದನಿವಾಸಿಯಾಗಿದ್ದ ಮೃತ ವಿದ್ಯಾರ್ಥಿ, ಆನ್‌ಲೈನ್ ಗೇಮ್ ನಲ್ಲಿ ಸುಮಾರು ರೂ.80 ಸಾವಿರ ರೂಪಾಯಿ ಕಳೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಈ ಕಾರಣದಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿ ಬ್ರಿಮ್ಸ್ ಹಾಸ್ಟೆಲ್ ಕೊಠಡಿಯಲ್ಲಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬುದಾಗಿ ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

ನ್ಯೂಟೌನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಘಟನೆ ತಿಳಿದು ಬಂದ ತಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತು.

ಸಿಗದ ವಾಣಿಜ್ಯ ಸಿಲಿಂಡರ್ ಹೋಟೆಲ್ ಮಾಲೀಕ ಆತ್ಮಹತ್ಯೆ

ಹುಕ್ಕೇರಿ: ವಾಣಿಜ್ಯ ಗ್ಯಾಸ್ ಸಿಲಿಂಡರ್ ಲಭ್ಯವಾಗದ ಹಿನ್ನೆಲೆಯಲ್ಲಿ ಹೋಟೆಲ್ ವ್ಯವಹಾರ ಸ್ಥಗಿತಗೊಂಡು, ಸಾಲದ ಬಡ್ಡಿ ಹೆಚ್ಚಳದ ಒತ್ತಡ ತಾಳಲಾರದೆ ಹೋಟೆಲ್



ಮಾಲೀಕರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಘಟನೆ ವಿವರ: ಹುಕ್ಕೇರಿ ಪಟ್ಟಣದ ಹಳೇ ಬಸ್ ನಿಲ್ದಾಣ ಬಳಿಯ ಹನುಮಾನ ಹೋಟೆಲ್ ನಡೆಸುತ್ತಿದ್ದ ರಾಮ ಹಳ್ಳೂರಿ (50)ಕಳೆದ ಕೆಲವು ದಿನಗಳಿಂದ ವಾಣಿಜ್ಯ ಗ್ಯಾಸ್ ಸಿಲಿಂಡರ್ ಸಿಗದ ಕಾರಣ ಹೋಟೆಲ್ ಸಂಪೂರ್ಣವಾಗಿ ಬಂದ್ ಆಗಿತ್ತು. ಇದರಿಂದ ಆದಾಯ ಇಲ್ಲದೇ ಆರ್ಥಿಕ ಸಂಕಷ್ಟ ಗಂಭೀರಗೊಂಡಿತ್ತು. ಸಾಲದ ಒತ್ತಡ ಮತ್ತು ವ್ಯಾಪಾರ ನಷ್ಟದಿಂದ ಮಾನಸಿಕವಾಗಿ ಕುಗ್ಗಿದ ಮೃತ ರಾಮ ಹಳ್ಳೂರಿ ಮಂಗಳವಾರ ಬೆಳಗ್ಗೆ ಹೋಟೆಲ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅವರ ಪುತ್ರ ಉದಯ ಹಳ್ಳೂರಿ ತಿಳಿಸಿದ್ದಾನೆ. ಹುಕ್ಕೇರಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆತ್ಮಹತ್ಯೆ ಘಟನೆಯ ಕುರಿತು ತನಿಖೆ ಪ್ರಾರಂಭಿಸಿದ್ದಾರೆ.

ಜೀವಂತ ಉಡ ಸಾಗಾಟ: ವ್ಯಕ್ತಿ ಬಂಧನ

ವಿಜಯನಗರ: ತಾಲೂಕಿನ ಶಂಕರ ನಗರ ಕ್ಯಾಂಪ್ ಬಳಿ ಕೃಷ್ಣಮೃಗವೊಂದು ಅಸಹಜವಾಗಿಮೃತಪಟ್ಟಿದ್ದರೆ, ಚಿಲಕನಹಟ್ಟಿ ತಾಳೆ ಬಸಾಪುರ ತಾಂಡ ಹತ್ತಿರ ಜೀವಂತ ಉಡವನ್ನು ಸಾಗಿಸುತ್ತಿದ್ದ ವ್ಯಕ್ತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಚಿಲಕನಹಟ್ಟಿ ಗ್ರಾಮದ ಹನುಮಂತಪ್ಪ ಎಂಬಾತ ಸೋಮವಾರ ಜೀವಂತ ಉಡವನ್ನು ತನ್ನ ಬೈಕ್‌ನಲ್ಲಿ ಸಾಗಿಸುತ್ತಿದ್ದದನ್ನು ಪತ್ತೆ ಹಚ್ಚಿದ ಅರಣ್ಯ ಅಧಿಕಾರಿಗಳು, ಆತನನ್ನು ಹಾಗೂ ಉಡವನ್ನು ವಶಕ್ಕೆ ಪಡೆದರು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಹಾಗೂ ಉಡವನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಬಳಿಕ ಕಾಡಿನ ಸೂಕ್ತ ಸ್ಥಳದಲ್ಲಿ ಬಿಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಳ್ಳಾರಿ ಹೆದ್ದಾರಿಯ ಶಂಕರನಗರ ಕ್ಯಾಂಪ್‌ನಿಂದ ನಾಗಪ್ಪ ಕ್ಯಾಂಪ್‌ಗೆ ಹೋಗುವ ರಸ್ತೆ ಬದಿಯಲ್ಲಿ ಸೋಮವಾರ ಕೃಷ್ಣಮೃಗವೊಂದು



ನಾಲಿಗೆ ಕಡಿದುಕೊಂಡು, ರಕ್ತ ಕಾರಿಕೊಂಡು ಸತ್ತು ಬಿದ್ದಿರುವುದು ಕಂಡುಬಂದಿದೆ. ಪಶುವೈದ್ಯರು ಅದರ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ನ್ಯಾಯಾಲಯದ ಅನುಮತಿ ಪಡೆದು ಅರಣ್ಯ ಪ್ರದೇಶದಲ್ಲಿ ದಹಿಸಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಸಿಎಫ್ ಟಿ.ಭಾಸ್ಕರ್, ಆರ್‌ಎಫ್‌ಒ ಕೌಶಿಕ್ ದಳವಾಯಿ, ಪಶುವೈದ್ಯಾಧಿಕಾರಿ ಗುರುಬಸವರಾಜ್, ಡಿಆರ್‌ಎಫ್‌ಒಗಳಾದ ಜಿ.ಪ್ರತಾಪ್, ಎಚ್.ನಾಗರಾಜ್, ಬಿಎಫ್‌ಒ ಭರಮಪ್ಪ, ಯಂಕಪ್ಪ, ವಿಠ್ಠಲ, ಮಲ್ಲಿಕಾರ್ಜುನ, ರಾಮಣ್ಣ ಇತರರು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಐದು ಮರಿಗಳಿಗೆ ಜನ್ಮ ನೀಡಿದ ಮೇಕೆ

ನರಗುಂದ: ಮೇಕೆಯೊಂದು ಐದು ಮರಿಗಳಿಗೆ ಜನ್ಮ ನೀಡಿರುವಂತಹ ಅಪರೂಪದ ಘಟನೆ ತಾಲೂಕಿನ ಅರಿಷಿಣಗೋಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಂಕ್ರವ್ವ ತಳವಾರ ಇವರ ಹತ್ತು ವರ್ಷಗಳಿಂದ ಮೇಕೆಗಳನ್ನು ಸಾಕುತ್ತಾ ಬಂದಿದ್ದಾರೆ. 5 ಮರಿಗಳಿಗೆ ಜನ್ಮ ನೀಡಿದ ಆಡು ಒಂಬತ್ತು ಬಾರಿ ಮರಿಗಳಿಗೆ ಜನ್ಮ ನೀಡುತ್ತಾ ಬಂದಿದೆ. ಪ್ರತಿ ಬಾರಿ ಎರಡ್ಮೂರು ಮರಿಗಳಿಗೆ ಜನ್ಮ ನೀಡುತ್ತಿದ್ದ ಮೇಕೆಯು ಈ ಬಾರಿ ಐದು ಮರಿಗಳಿಗೆ ಜನ್ಮ ನೀಡಿದ್ದು ಶಂಕ್ರವ್ವಳಿಗೆ ಅಚ್ಚರಿ ಮೂಡಿಸಿದೆ. ಐದು ಆಡಿನ ಮರಿಗಳು ಆರೋಗ್ಯವಾಗಿವೆ. ಆಡುಗಳು ಹೆಚ್ಚೆಂದ್ರೆ ಮೂರು ಮರಿಗಳಿಗೆ ಜನ್ಮ ನೀಡುತ್ತವೆ. ಆದರೆ, ಶಂಕ್ರವ್ವ ತಳವಾರ ಅವರ ಆಡು ಮಾತ್ರ ಐದು ಮರಿಗೆ ಜನ್ಮ ನೀಡಿದೆ. ಮೂರು ಗಂಡು ಮರಿಗಳು ಹಾಗೂ ಎರಡು ಹೆಣ್ಣು ಮರಿಗಳು ಇವೆ. ಆಡಿನ ಮರಿಗಳನ್ನು ನೋಡಲು ಗ್ರಾಮಸ್ಥರು ಬಂದು ಹೋಗುತ್ತಿದ್ದಾರೆ. ಪಶು ವೈದ್ಯಾಧಿಕಾರಿ ವೈ. ಎಸ್.ಚಂದ್ರಗಿರಿ ಮಾತನಾಡಿ, ಅರಿಷಿಣಗೋಡಿ ಗ್ರಾಮದ ಶಂಕ್ರವ್ವ ತಳವಾರ ಅವರ ಆಡೊಂದು ಐದು ಮರಿಗಳಿಗೆ ಜನ್ಮ ನೀಡಿದ್ದು ವಿಶೇಷವಾಗಿದೆ. ಆಡು ತಳಿಗಳು ಎರಡ್ಮೂರು ಮರಿಗಳಿಗೆ ಜನ್ಮ ನೀಡುತ್ತವೆ. ಆದ್ರೆ ಈ ಆಡು ಐದು ಮರಿಗಳಿಗೆ ಜನ್ಮ ನೀಡಿ ಅಚ್ಚರಿ ಮೂಡಿಸಿದೆ ಎಂದು ತಿಳಿಸಿದ್ದಾರೆ.



ಸಂಪಾದಕೀಯ

ಸವಾಲುಗಳಿಗೆ ಸಿದ್ಧವಾಗಬೇಕಿದೆ

ಯುದ್ಧ ಮತ್ತು ಜಗತ್ತು, ಯುದ್ಧ ಮತ್ತು ಶಾಂತಿ–ಇವುಗಳ ಬಗ್ಗೆ ಮಾನವೇತಿಹಾಸದ ಆರಂಭದಿಂದಲೂ ಅನೇಕ ವ್ಯಾಖ್ಯಾನಗಳು ಬಂದಿವೆ. ಸಾಧಾರಣವಾಗಿ ಎಲ್ಲಾ ಕಾಲಘಟ್ಟಗಳಲ್ಲೂ ಜಗತ್ತು ಯುದ್ಧವನ್ನು ಎದುರಿಸಿರುವುದರಿಂದ ಯುದ್ಧ ಎಲ್ಲಾ ಕಾಲದಲ್ಲೂ, ಎಲ್ಲರಿಂದಲೂ ವಿಮರ್ಶೆಗೆ ಒಳಗಾಗಿದೆ. ಬದಲಾದ ಕಾಲದಲ್ಲಿ ಬದಲಾದ ಯುದ್ಧದ ಸ್ವರೂಪವನ್ನು ಕೂಡ ಜಗತ್ತು ನೋಡಿದೆ. ಯುದ್ಧದ ಸ್ವರೂಪ ಬದಲಾದರೂ ಅದರ ಪರಿಣಾಮಗಳು ಎಲ್ಲಾ ಕಾಲದಲ್ಲೂ ಒಂದೇ ಎನ್ನುವ ಮಂಡನೆ ಹಿಂದಿನಿಂದಲೂ ನಡೆಯುತ್ತಿರುವುದನ್ನು ನೋಡಿದ್ದೇವೆ. ಅಷ್ಟೇ ಏಕೆ ನಾಗರಿಕತೆಗಳ ಪ್ರಯಾಣ ಯುದ್ಧಗಳಿಂದಲೇ ನಡೆದಿದೆ ಎನ್ನುವ ಸಿದ್ಧಾಂತಗಳು ಇಂದಿಗೂ ಚರ್ಚೆಗೊಳಗಾಗುತ್ತಿವೆ. ಹಾಗಾಗಿ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಭಾರತ ಸಹಿತ ಎಲ್ಲಾ ದೇಶಗಳ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಇಂದು ಯಾರೂ, ಯಾರಿಗೂ ತರ್ಕ ಮಂಡನೆಗಳ ಮೂಲಕ ಹೇಳಿಕೊಳ್ಳಬೇಕಾಗಿಲ್ಲ. ಜಗತ್ತೇ ಒಂದು ಹಳ್ಳಿ ಎನ್ನುವ ವಾತಾವರಣದಲ್ಲಿ ಆದಿಂದು ಎಲ್ಲರ ಅನುಭವಕ್ಕೂ ಬಂದಿದೆ.



ಆದರೆ ಎಲ್ಲೋ ನಡೆಯುವ ಯುದ್ಧವನ್ನು ಇನ್ನೆಲ್ಲೋ ಎದುರಿಸುವುದು ಅಷ್ಟು ಸುಲಭವಲ್ಲ. ಆಟವನ್ನು ನೋಡುವಂತೆ ಯುದ್ಧವನ್ನಿಂದು ನೋಡಲಾಗುವುದಿಲ್ಲ. ಅದರಲ್ಲೂ ಒಂದು ದೇಶ ಇನ್ನೆಲ್ಲೋ ನಡೆಯುವ ಯುದ್ಧಕ್ಕೆ ತನ್ನ ದೇಶವನ್ನು ಸಿದ್ಧಗೊಳಿಸುವುದು ಇನ್ನೂ ಕಷ್ಟ. ಅದರಲ್ಲೂ ಸದ್ಯದ ಯುದ್ಧದ ಸಂದರ್ಭದಲ್ಲಂತೂ ಇನ್ನೂ ಕ್ಲಿಷ್ಟ. ಮಧ್ಯಪ್ರಾಚ್ಯದ ಯುದ್ಧ ಮಾನಸಿಕತೆಯನ್ನು ಎರಡು ಭಿನ್ನ ಧಾರೆಗಳು ಪ್ರತ್ಯೇಕವಾಗಿ ಬಿಂಬಿಸುತ್ತವೆ. ಇರಾನ್ ಪರ ಮತ್ತು ಅಮೆರಿಕ ಪರ ಎನ್ನುವ ದೊಡ್ಡ ಗುಂಪುಗಳಿವೆ. ಇಂಥ ಪರಿಸ್ಥಿತಿಯಲ್ಲಿ ಯುದ್ಧವನ್ನು ಮತ್ತು ಅದರ ಪರಿಣಾಮಗಳನ್ನು ಎದುರಿಸಲು ಸಿದ್ಧವಾಗಬೇಕು ಎಂದರೆ ಅದು ಬೇರೆಯೇ ಚಿಂತನೆಯನ್ನು ಸೃಷ್ಟಿಸುವ ಅಪಾಯವಿರುತ್ತದೆ. ಈಗ ಭಾರತಕ್ಕೆ ಇರುವುದು ಅಂಥ ಸವಾಲು. ಅದು ತೈಲ ವ್ಯಾಪಾರದಿಂದ ಮತ್ತಷ್ಟು ಗೊಂದಲಮಯವಾಗಿ ಕಾಣಿಸುತ್ತಲೂ ಇದೆ. ಆದ್ದರಿಂದ ಈ ಯುದ್ಧ ಕೊಂಚ ಹೆಚ್ಚೇ ಎನಿಸುವಷ್ಟು ಆರ್ಥಿಕತೆಯ ಮೇಲೆ ಪರಿಣಾಮವನ್ನು ಬೀರಿದೆ. ಪರಿಸ್ಥಿತಿ ಹೀಗಿರುವುದರಿಂದ ನರೇಂದ್ರ ಮೋದಿಯವರು 2 ದಿನಗಳ ಹಿಂದೆ ದೇಶವನ್ನು ಸಜ್ಜುಗೊಳಿಸಲು ನೀಡಿದ ಕರೆ ಸಂದರ್ಭಕ್ಕೆ ಉಚಿತವೂ ಆಗಿದೆ. ಕೋವಿಡ್ ಕಾಲದಲ್ಲಿ ಎದುರಿಸಿದಂಥ ಸವಾಲನ್ನು ಎದುರಿಸಲು ಸಿದ್ಧವಾಗಬೇಕೆಂದ ಅವರ ಹೇಳಿಕೆಯೇ ಯುದ್ಧದ ಪರಿಣಾಮಗಳ ಭೀಕರತೆಯನ್ನು ಹೇಳುತ್ತದೆ. ಸರ್ಕಾರಗಳು ಎಷ್ಟೇ ವ್ಯವಸ್ಥೆಗಳನ್ನು ಮಾಡಬಹುದು. ಆದರೆ ಜನರ ಮಾನಸಿಕತೆ ಅದಕ್ಕೆ ಸಿದ್ಧವಾಗುವುದು ಅತಿ ಮುಖ್ಯ. ಉದಾಹರಣೆಗೆ ಎಲ್‌ಪಿಜಿ ಸಿಲಿಂಡರ್ ವಿಷಯದಲ್ಲಿ ಸಾಮಾನ್ಯ ಜನರೂ ಗಾಬರಿಗೊಂಡಿದ್ದಾರೆ. ಇನ್ನು ಯುದ್ಧ ಎಷ್ಟು ದಿನಗಳವರೆಗೆ ಮುಂದುವರಿಯುತ್ತವೆ ಎನ್ನುವುದರ ಮೇಲೆ ಇತರ ಪರಿಣಾಮಗಳು ನಿರ್ಧಾರವಾಗುತ್ತದೆ. ಇಂಧನ ಭದ್ರತೆ, ವ್ಯಾಪಾರೋದ್ಯಮ ಯಥಾಸ್ಥಿತಿಗೆ ಮರಳಲು ಕಾಲ ಕೂಡಿಬರಬೇಕು. ಅದಕ್ಕೆ ಯುದ್ಧ ನಿಲ್ಲಬೇಕು. ಒಂದು ವೇಳೆ ಯುದ್ಧ ಸದ್ಯಕ್ಕೆ ನಿಲ್ಲದು ಎಂಬ ಸಂದರ್ಭ ಬಂದರೂ ಭಾರತದ ರಾಜತಾಂತ್ರಿಕತೆ ಪರಿಸ್ಥಿತಿ ಎದುರಿಸಲು ಸಿದ್ಧವಾಗಬೇಕು. ನೇರವಾಗಿ ಪ್ರಧಾನಮಂತ್ರಿಯವರೇ ಮುಂದಿನ ದಿನಗಳನ್ನು ಸೂಚ್ಯವಾಗಿ ಹೇಳಿರುವುದರಿಂದ ದೇಶಕ್ಕೆ ಅಭಯದ ಭಾವನೆ ಮೂಡಿದೆ.

ಸಾಧಕನಿಗೆ ಬಾಧಕವಾಗುವ ಲೋಕವಾಸನೆ

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಸಾಧಕನು ವಾಸನೆಗಳನ್ನು ಮೀರಬೇಕೆಂಬುದು ಹಿರಿಯರ ಉಪದೇಶವಾಣಿ. ಯಾವುದೇ ಕ್ಷೇತ್ರದ ಸಾಧಕನಿಗೂ ಇದು ಅನ್ವಯ. ಅಧ್ಯಾತ್ಮಸಾಧಕನಿಗೆ ಇದು ಹೆಚ್ಚು ಅನ್ವಯವಾಗುವಂಥದ್ದು. ವಾಸನೆಗಳೆಂದರೆ, ಒಂದೇ ವಿಷಯಕವಾದ ಸಂಸ್ಕಾರಗಳ ಒಟ್ಟುರೂಪ. ಅದು ವ್ಯಕ್ತಿಯನ್ನು ತನ್ನತ್ತ ಸೆಳೆದುಕೊಳ್ಳುತ್ತದೆ. ವಾಸನೆಗಳು ನಮ್ಮ ಮನಸ್ಸಿನಲ್ಲಿ ಉಂಟಾಗುತ್ತವೆ. ಇವಕ್ಕೆ ಮೂಲ ಸಾಮಗ್ರಿಗಳು ನಮ್ಮ ಹಳೆಯ ಸಂಸ್ಕಾರಗಳೇ ಆಗಿವೆ. ಯಾವ ರೀತಿಯ ವಿಷಯಗಳ ಸಂಪರ್ಕಕ್ಕೆ ಬರುತ್ತೇವೆಯೋ ಅಂಥ ಸಂಸ್ಕಾರಗಳ ಸಂಗ್ರಹ ನಮ್ಮ ಮನಸ್ಸಿನಲ್ಲಿ ಉಂಟಾಗುತ್ತಿರುತ್ತದೆ. ಅವೇ ಕಾಲಾಂತರದಲ್ಲಿ ವಾಸನೆಗಳು ಎನಿಸಿಕೊಳ್ಳುತ್ತವೆ. ಜನ್ಮತಃ ಒಬ್ಬೊಬ್ಬರಿಗೆ ಒಂದೊಂದರಲ್ಲಿ ಆಸಕ್ತಿಯು ಬಂದಿರುತ್ತದೆ. ಇದಕ್ಕೆ ಕಾರಣ ವಾಸನೆಗಳೇ ಆಗಿವೆ. ಇವು ತನ್ನತ್ತ ಸೆಳೆದುಕೊಳ್ಳುವಂತೆ ಮಾಡಿ ವ್ಯಕ್ತಿಯನ್ನು ಪ್ರಚೋದಿಸುತ್ತವೆ. ಇಂಥ ಪ್ರಬಲ ವಾಸನೆಗಳಿಗೆ ಅನುಗುಣವಾಗಿ ವ್ಯಕ್ತಿಯು ಒಳ್ಳೆಯದನ್ನೋ ಕೆಟ್ಟದ್ದನ್ನೋ ಆಯ್ದುಕೊಳ್ಳುತ್ತಾನೆ ಮತ್ತು ಅದನ್ನೇ ಮಾಡುತ್ತಿರುತ್ತಾನೆ. ಹೀಗೆ ಆಯಾ ವಾಸನೆಯು ಆತನ ಕ್ರಿಯಾಕಲಾಪಗಳಿಗೆ ಕಾರಣವಾಗಿದೆ. ಒಬ್ಬ ವ್ಯಕ್ತಿಯ ಅಂತಃಕರಣದಲ್ಲಿ ಅಸಂಖ್ಯವಿಷಯಕವಾದ ವಾಸನೆಗಳಿರುತ್ತವೆ. ಆದರೆ ಕಾಲದಿಂದ ಪಕ್ವಗೊಂಡ ಪ್ರಬಲವಾಸನೆಗಳು ತಮ್ಮ ಕಾರ್ಯವನ್ನು ಆರಂಭಿಸುತ್ತವೆ. ಉಳಿದವುಗಳು ಕಾಯುತ್ತವೆ. ವ್ಯಕ್ತಿತ್ವವೆಂದರೆ ಆಯಾ ವ್ಯಕ್ತಿಯ ಒಟ್ಟಾರೆ ವಾಸನೆಗಳ ಮೊತ್ತವಲ್ಲದೇ ಮತ್ತೇನೂ ಅಲ್ಲ. ಇದನ್ನೇ ಅನುಭವಗಳ ಮೊತ್ತ ಎಂಬುದಾಗಿ ಸಾಮಾನ್ಯ ಭಾಷೆಯಲ್ಲಿ ಲೋಕದಲ್ಲಿ ವ್ಯವಹರಿಸಲಾಗುತ್ತದೆ.

ಸಾಧಕವಾದ ವಾಸನೆಗಳೂ ಇವೆ, ಬಾಧಕವಾದ ವಾಸನೆಗಳೂ ಇವೆ. ಒಳ್ಳೆಯ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದರೂ, ಕೆಲವೊಮ್ಮೆ ಅತಿಯಾದಾಗ ಆ ವಾಸನೆಯು ಸಾಧಕನಿಗೆ ತೊಡಕಾಗಿ ಪರಿಣಮಿಸುತ್ತದೆ. ಹೀಗೆ ಸಾಧಕನಿಗೆ ತೊಡಕಾಗಿ ಪರಿಣಮಿಸಬಹುದಾದ ಮೂರು ರೀತಿಯ ವಾಸನೆಗಳನ್ನು ವಿವೇಕಚೂಡಾಮಣಿಯಲ್ಲಿ ಶ್ರೀಶಂಕರರು ಹೀಗೆ ಪ್ರದರ್ಶಿಸಿದ್ದಾರೆ:

ಲೋಕವಾಸನಯಾ ಜಂತೋಃ ಶಾಸ್ತ್ರವಾಸನಯಾಪಿ ಚ ।
ದೇಹವಾಸನಯಾ ಜ್ಞಾನಂ ಯಥಾವನ್ನೈವ ಜಾಯತೇ ॥ ಎಂಬುದಾಗಿ.

ಲೋಕವಾಸನೆ, ಶಾಸ್ತ್ರವಾಸನೆ ಮತ್ತು ದೇಹವಾಸನೆಗಳೆಂಬ ಮೂರುವಿಧ ವಾಸನೆಗಳಿಂದಾಗಿ ಯಥಾರ್ಥವಾದ ಜ್ಞಾನವು ಸಾಧಕನಿಗೆ ಉಂಟಾಗುವುದಿಲ್ಲ ಎಂಬುದು ಇದರ ಅರ್ಥ. ಅವುಗಳಲ್ಲಿ ಲೋಕವಾಸನೆ ಎಂಬುದು ಮೊದಲನೆಯದು. ಲೋಕವಾಸನೆ ಎಂದರೆ, ಲೋಕವು ತನ್ನನ್ನು ಹೊಗಳಲಿ ಎಂಬ ಇಚ್ಛೆ ಮತ್ತು ತನ್ನನ್ನು ನಿಂದಿಸಿಬಿಟ್ಟರೆ ಎಂಬ ಭಯ ಎಂಬುದಾಗಿ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು ತಮ್ಮ ವಿವೇಕಚೂಡಾಮಣಿಯ ವ್ಯಾಖ್ಯಾನದಲ್ಲಿ ವಿವರಿಸಿದ್ದಾರೆ.

ಅಷ್ಟೇ ಅಲ್ಲ, ಎಲ್ಲ ವಾಸನೆಗಳಲ್ಲಿ ಈ ಲೋಕವಾಸನೆಯು ಅತ್ಯಂತ ಪ್ರತಿಬಂಧಕವಾಗಿದೆಎಂದು ಅವರು ತಿಳಿಸುತ್ತಾರೆ. ಯಾಕೆಂದರೆ, ಲೋಕವು ಸರ್ವಥಾ ಮೆಚ್ಚುವಂತೆ ಯಾರಿಂದಲೂ ಜೀವಿಸಲು ಸಾಧ್ಯವಿಲ್ಲ. ಏನಾದರೊಂದು ಆರೋಪವನ್ನು ಅದು ಮಾಡುತ್ತಲೇ ಇರುತ್ತದೆ. ಆಕ್ಷೇಪ ವನ್ನು ಮಾಡುತ್ತಲೇ ಇರುತ್ತದೆ. ಇಲ್ಲಿ ಲೋಕವೆಂದರೆ ಜನ ಅಥವಾ ಸಮಾಜ. ಜನರನ್ನು ತುಷ್ಟರನ್ನಾಗಿಸುವುದು ಮನುಷ್ಯಮಾತ್ರರಿಂದ ಸಾಧ್ಯವೇ ಇಲ್ಲ. ಯಾವುದೋ ಒಂದು ಒಳ್ಳೆಯ ಕೆಲಸ ಮಾಡಿದರೆ ಮತ್ತೊಂದು ಯಾವುದೋ ದೋಷವನ್ನು ಅದು ಎತ್ತಿ ಆಡುತ್ತದೆ. ಕೆಲವರು ಹೊಗಳಿದರೆ ಹೆಚ್ಚಿನವರು ತೆಗಳುತ್ತಾರೆ. ಇದಕ್ಕೆ ಕಾರಣ ಲೋಕದಲ್ಲಿ ಮತ್ತೊಬ್ಬನ ಗುಣವನ್ನು ಗ್ರಹಿಸುವ, ಅಂಗೀಕರಿಸುವ ಬುದ್ಧಿ ಇಲ್ಲದಿರುವುದು. ಗುಣವು ಎಲ್ಲಿಯೇ ಇದ್ದರೂ ಗ್ರಹಿಸಬೇಕೆಂಬ ಔದಾರ್ಯ ಮತ್ತು ಉನ್ನತ ಚಿಂತನೆ ಹೆಚ್ಚಿನವರಲ್ಲಿ ಇರುವುದಿಲ್ಲ. ಹಾಗಾಗಿ ಅಸೂಯೆ ಮೊದಲಾದ ಕಾರಣಗಳಿಂದ ಲೋಕವು ಆತನನ್ನು ನಿಂದಿಸುತ್ತದೆ. ಯಾವುದಕ್ಕೂ ಬಗ್ಗದಾದಾಗ ಮಾತ್ರ ಆ ವಿಷಯದಲ್ಲಿ ಮೌನವಾಗುತ್ತದೆ. ಆಗ ಮತ್ತೊಂದು ವಿಷಯದಲ್ಲಿ ಛಿದ್ರಾನ್ವೇಷಣೆಯನ್ನು ಮುಂದುವರೆಸುತ್ತದೆ. ಇದು ಲೋಕದ ಸ್ವಭಾವ. ಒಟ್ಟಿನಲ್ಲಿ ಲೋಕವನ್ನು ಮೆಚ್ಚಿಸುವುದಕ್ಕೆ ಸಾಧ್ಯವಿಲ್ಲ.

ಲೋಕವನ್ನು ಮೆಚ್ಚಿಸಬೇಕೆಂಬ ಇಚ್ಛೆ ಎಲ್ಲರಲ್ಲಿಯೂ ಇರುತ್ತದೆ. ಯಾರಾದರೂ ಹೊಗಳಿದರೆ ಎಲ್ಲರಿಗೂ ಖುಷಿಯಾಗುತ್ತದೆ. ಸ್ತುತಿಗಿರುವ ಆಕರ್ಷಣೆಯೇ ಅದು. ಹೆಚ್ಚೆಚ್ಚು ಜನ ಹೊಗಳಿದಷ್ಟೂ ವ್ಯಕ್ತಿಯು ತನ್ನಲ್ಲಿ ಉತ್ಕೃಷ್ಟತೆಯನ್ನು ಆರೋಪಿಸಿಕೊಳ್ಳುತ್ತಾನೆ. ಆಮೇಲೆ ಅದೇ ನಿಜವೆಂದು ಭಾವಿಸಲು ತೊಡಗುತ್ತಾನೆ. ತನ್ನಲ್ಲಿ ಇಲ್ಲದ ಗುಣವನ್ನೂ ತನ್ನಲ್ಲಿ ಆರೋಪಿಸಿಕೊಂಡು ತಾನು ಶ್ರೇಷ್ಠ ಎಂಬ ಭಾವವನ್ನು ಬೆಳೆಸಿಕೊಳ್ಳುತ್ತಾ ವಾಸ್ತವದಿಂದ ಆತ ದೂರ ಸರಿಯುತ್ತಾನೆ. ಆ ಕಾರಣಕ್ಕಾಗಿ ಲೋಕದ ಸ್ತುತಿಗಾಗಿ ಸಾಧಕನು ಇಚ್ಛಿಸಬಾರದೆಂಬುದಾಗಿ ಶಾಸ್ತ್ರವು ತಿಳಿಸುತ್ತದೆ. ಲೋಕದ ಸ್ತುತಿಯನ್ನು ಬಯಸುವವನು ಕ್ರಮೇಣ ಕಾಪಟ್ಯವನ್ನೇ ಹೊಂದುತ್ತಾನೆ. ಲೋಕದ ಹೊಗಳಿಕೆಯ ಅಭಿನಿವೇಶ ಆತನನ್ನು ಹೊಗಳಿಕೆಗಾಗಿ ಏನನ್ನಾದರೂ ಮಾಡುತ್ತಲೇ ಇರುವಂತೆ ಪ್ರೇರಿಸುತ್ತದೆ. ಅದರ ಹಾನಿಯೇನೆಂದರೆ, ಆ ವ್ಯಕ್ತಿಯು ತಾನು ಮಾಡಬೇಕಿದ್ದ ನಿಜವಾದ ಸಾಧನಾಮಾರ್ಗದಿಂದ ಚ್ಯುತನಾಗಿ, ಮತ್ತೊಬ್ಬರಿಗಾಗಿ ಜೀವಿಸಲು ತೊಡಗುತ್ತಾನೆ. ಸಾಧನಾಮಾರ್ಗದಲ್ಲಿರುವವನಿಗೆ ಈ ವಿಷಯದಲ್ಲಿ ಮೋಹವಿರಲೇಬಾರದು. ಹೊಗಳಿಕೆಗಳು ಶಾಶ್ವತವಲ್ಲ ಎಂಬ ಎಚ್ಚರಿಕೆ ಎಲ್ಲ ಸಾಧಕನಿಗೂ ಇರಲೇಬೇಕಾದದ್ದು. ಹಾಗಿದ್ದರೆ, ಸಾಧಕನು ಯಾವುದನ್ನು ಅವಲಂಬಿಸಬೇಕು ಎಂದರೆ, ಶಾಸ್ತ್ರದ ಮಾತನ್ನು ಮತ್ತು ಗುರುವಿನ ಉಪದೇಶವನ್ನು ಮಾತ್ರ ನೆಚ್ಚಬೇಕು. ಗುರುವು ಶಿಷ್ಯನಿಗೆ ಹಿತವಾದುದನ್ನು ಮಾತ್ರ ಉಪದೇಶಿಸುತ್ತಾನೆ. ಅಲ್ಲಿ ವಂಚನೆಯಾಗಲೀ, ಲಾಭದ ದೃಷ್ಟಿಯಾಗಲೀ ಇರುವುದಿಲ್ಲ. ಹಾಗಾಗಿ ಸಾಧಕನು ತನ್ನ ಗುರುವನ್ನು ನೆರಳಿನಂತೆ ಅನುಸರಿಸಲು ತೊಡಗಿದರೆ, ಲೋಕದ ಈ ವಾಸನೆಯಿಂದ ಕಳಚಿಕೊಳ್ಳಬಹುದು.

ಲೋಕವಾಸನೆಯ ಮತ್ತೊಂದು ಮುಖ, ಅದು ನಿಂದೆಯ ಭಯ. ಲೋಕವು ತನ್ನನ್ನು ನಿಂದಿಸಿಬಿಟ್ಟರೆ ಎಂಬ ಭಯವೂ ಕೂಡ ಆತನನ್ನು ಸಾಧನೆಯ ಹಾದಿಯಿಂದ ವಿಮುಖಗೊಳಿಸುತ್ತದೆ. ಪ್ರತಿಯೊಂದಕ್ಕೂ ಸಮಾಜ ತನ್ನನ್ನು ಮೆಚ್ಚುತ್ತಲೇ ಇರಬೇಕು ಎಂಬ ಭಾವ ಬರಲು ನಿಂದನೆಯ ಭಯವೂ ಕೂಡ ಕಾರಣ. ಆಗ ಲೋಕವಾಸನೆ ಇನ್ನಷ್ಟು ತೀವ್ರವಾಗಿ ತನ್ನ ಸ್ವಂತಿಕೆಯನ್ನು ಆತ ಮರೆಯುತ್ತಾನೆ. ತನ್ನ ಧ್ಯೇಯವನ್ನು ಮರೆತು, ಸಾಗಬೇಕಿರುವ ದೀರ್ಘವಾದ ಹಾದಿಯಿಂದ ಭ್ರಷ್ಟನಾಗುತ್ತಾನೆ. ಹಾಗಾಗಿ ಲೋಕವಾಸನೆಯನ್ನು ಬಿಡಬೇಕು ಎಂಬುದಾಗಿ ಶಾಸ್ತ್ರವು ತಿಳಿಸುತ್ತದೆ. ಈ ಜಗತ್ತಿನಲ್ಲಿ ಸಾವಿರಾರು ಪಂಥಗಳಿವೆ. ಸಾವಿರಾರು ಮಾರ್ಗಗಳಿವೆ. ಯಾವೊಂದರಲ್ಲಿ ನಡೆಯುತ್ತಿದ್ದರೂ ಇನ್ನೊಂದು ಸರಣಿಯವರು ಅವನನ್ನು ಖಂಡಿಸುತ್ತಾರೆ. ಶಾಸ್ತ್ರಗಳೂ ನೂರಾರು. ಅದನ್ನು ಇಟ್ಟುಕೊಂಡು ವಾದಿಸುವವರೂ ನೂರಾರು. ಅವರು ಹೇಳಿದ್ದನ್ನು ಇವರೂ, ಇವರು ಹೇಳಿದ್ದನ್ನು ಮತ್ತೊಬ್ಬರೂ ಖಂಡಿಸುತ್ತಲೇ ತಮ್ಮ ತಮ್ಮ ವಾದವನ್ನು ಮಾಡುತ್ತಿರುತ್ತಾರೆ. ಲೋಕದ ಖಂಡನೆಗೆ ಒಳಗಾಗದ ಯಾವೊಂದೂ ಇಲ್ಲಿಲ್ಲ. ಒಳ್ಳೆಯ ಎಷ್ಟೇ ಕೆಲಸವನ್ನು ಮಾಡುತ್ತಿದ್ದರೂ, ಮಾಡಿರದ ಇನ್ನೊಂದು ಕೆಲಸವನ್ನು ತೋರಿಸಿ, ನೀನು ಇದನ್ನು ಮಾಡಿಲ್ಲವಲ್ಲ, ಉಳಿದದ್ದನ್ನೆಲ್ಲ ಮಾಡಿ ಏನು ಪ್ರಯೋಜನ ಎಂದು ಕೇಳುತ್ತದೆ. ಸಾಧನೆಯ ಹಾದಿಯಲ್ಲಿಯೇ ಇದ್ದರೂ ಅದು ಸರಿಯಲ್ಲ, ಇದು ಸರಿಯಲ್ಲ ಎಂಬುದಾಗಿ ಅನೇಕಚಿತ್ತವಿಭ್ರಾಂತರನ್ನಾಗಿ ಮಾಡುತ್ತದೆ. ಹಾಗಾಗಿ ಈ ಆಗ್ರಹದಿಂದ ಸಾಧಕನು ಮುಕ್ತನಾಗದ ಹೊರತೂ ಆತ ದೀರ್ಘವಾದ ಹಾದಿಯಲ್ಲಿ ನಿರುಮ್ಮಳವಾಗಿ ಸಾಗಲು ಸಾಧ್ಯವಿಲ್ಲ. ತನ್ನನ್ನು ತಾನು ಮಾಡುವ ಕಾರ್ಯದಿಂದ ಗುರುತಿಸಬೇಕು, ಹೊಗಳಬೇಕು ಎಂಬ ಮನ್ನಣೆಯ ದಾಹ ಉಂಟಾದಷ್ಟೂ ಅದು ಆತನನ್ನು ತನ್ನ ಸ್ಥಾನದಿಂದ ಕೆಳಗಿಳಿಸುತ್ತಲೇ ಇರುತ್ತದೆ. ಕೆಳಗಿಳಿದದ್ದು ಗೊತ್ತಾಗುವುದಿಲ್ಲ ಅಷ್ಟೇ.

ವಿದ್ಯಾರಣ್ಯಸ್ವಾಮಿಗಳು ತಮ್ಮ ಜೀವನ್ಮುಕ್ತಿವಿವೇಕವೆಂಬ ಗ್ರಂಥದಲ್ಲಿ ಈ ವಿಷಯದ ಬಗ್ಗೆ ವಿಸ್ತೃತವಾಗಿ ತಿಳಿಸಿದ್ದಾರೆ. ಅದರಲ್ಲಿ **ಕೋ ಲೋಕಮಾರಾಧಯಿತುಂ ಸಮರ್ಥಃ**? ಎಂದು ಮಾರ್ಮಿಕವಾಗಿ ಕೇಳುತ್ತಾರೆ. ಲೋಕವನ್ನು ರಂಜಿಸಲು ಯಾರು ತಾನೇ ಸಮರ್ಥನಾದಾನು ಎಂಬುದಾಗಿ. ಅದರಲ್ಲಿ ಬರುವ ಮತ್ತೊಂದು ಶ್ಲೋಕ ಹೀಗಿದೆ:

ವಿದ್ಯತೇ ನ ಖಲು ಕಶ್ಚಿದುಪಾಯಃ ಸರ್ವಲೋಕಪರಿತೋಷಕರೋ ಯಃ।
ಸರ್ವಥಾ ಸ್ವಹಿತಮಾಚರಣೀಯಂ ಕಿಂ ಕರಿಷ್ಯತಿ ಜನೋ ಬಹುಜಲ್ಪಃ॥

ಎಂಬುದಾಗಿ. ಅಂದರೆ, ಎಲ್ಲ ಜನರನ್ನೂ ಒಪ್ಪಿಸುವ, ಮೆಚ್ಚಿಸುವ ಉಪಾಯವು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಹೀಗಿರುವಾಗ ಸರ್ವಥಾ ಆತ್ಮಕಲ್ಯಾಣಕ್ಕಾಗಿ ವ್ಯಕ್ತಿಯು ನಿರಂತರವಾಗಿ ತೊಡಗಿಕೊಳ್ಳಬೇಕು. ಜನರು ಬಹಳವಾಗಿ ಹಲುಬುವ ಸ್ವಭಾವದವರು. ಹಾಗಾಗಿ ತನಗೆ ಮತ್ತು ಪರರಿಗೆ ಒಳಿತನ್ನೇ ಸರ್ವದಾ ಅನುಸರಿಸುತ್ತಾ ಮುನ್ನಡೆಯುತ್ತಿರಬೇಕು. ತನ್ನ ಸಂಪ್ರದಾಯ, ತನ್ನ ಗುರೂಪದೇಶ, ತನ್ನ ಧರ್ಮ, ತನ್ನ ಕರ್ತವ್ಯಕ್ಕೆ ಅನುಗುಣವಾಗಿ ಯಾವುದೇ ಮೆಚ್ಚುಗೆಯನ್ನು ಬಯಸದೇ, ನಿರ್ಲಿಪ್ತವಾಗಿ ಮಾಡುತ್ತ ಹೋದಷ್ಟೂ ಲೋಕವು ನಮ್ಮನ್ನು ಅನುಸರಿಸಲು ತೊಡಗುತ್ತದೆ. ಎಲ್ಲಿ ನಾವು ಲೋಕವನ್ನು ಅನುಸರಿಸುವುದನ್ನು ನಿಲ್ಲಿಸುತ್ತೇವೋ ಅಲ್ಲಿಂದ ನಮ್ಮ ಒಳಿತಿನ ಪಯಣ ಆರಂಭವಾಗುತ್ತದೆ. ಲೋಕಕ್ಕೆ ಕಿವಿಗೊಟ್ಟರೆ ನಾವು ದಿಕ್ಕಿಲ್ಲದಂತೆ ಆಗುತ್ತೇವೆ. ಈ ದೃಷ್ಟಿಯಿಂದಲೇ ಕೃಷ್ಣನು ಭಗವದ್ಗೀತೆಯಲ್ಲಿ **ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್** ಎಂಬುದಾಗಿ ಹೇಳಿದ್ದು. ಹೀಗೆ ಲೋಕವಾಸನೆಯನ್ನು ಗೆಲ್ಲದವನು ಹೆಚ್ಚಿನ ಸಾಧನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ವಸ್ತುತಃ ಲೋಕವಾಸನೆಯನ್ನು ಗೆಲ್ಲುವುದೇ ನಿಜವಾದ ಸಾಧನೆ.

ಸುಭಾಷಿತಕಾರನು ಕೂಡ ಇದನ್ನೇ ಹೇಳುತ್ತಾನೆ.
ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು....
ನ್ಯಾಯ್ಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ ಎಂಬುದಾಗಿ. ಸಾಕ್ಷಾತ್ ಪರಮಾತ್ಮನೇ ಆಗಿರುವ ಶ್ರೀ ರಾಮಚಂದ್ರನನ್ನೂ, ಲಕ್ಷ್ಮೀದೇವಿಯೇ ಆಗಿರುವ ಸೀತಾಮಾತೆಯನ್ನೇ ಲೋಕವು ಬಿಡಲಿಲ್ಲ ಎಂದಾದರೆ ಸಾಮಾನ್ಯರ ವಿಷಯದಲ್ಲಿ ಹೇಳುವುದೇನಿದೆ?

ಟ್ರಂಪ್ ಬಾಲ ಮಡಚಿದರೆ? ಅಥವಾ...

ಟ್ರಂಪ್ ಹಠಾತ್ತನೆ ಇರಾನ್ ಮೇಲಿನ ದಾಳಿಗೆ 5 ದಿನಗಳ ವಿರಾಮ ಘೋಷಿಸಲು ಕಾರಣವೇನು? ಮಿಲಿಟರಿ ಕಾರಣವೆ ಅಥವಾ ಆರ್ಥಿಕ ಒತ್ತಡ ಕಾರಣವೆ? ಅಥವಾ ಶೇರು ಮಾರುಕಟ್ಟೆಯಲ್ಲಿ 'ಆಟವಾಡಲು' ಈ ಘೋಷಣೆ ಮಾಡಲಾಯಿತೆ?

▶ ದಿನೇಶ್

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಠಾತ್ತನೆ ಇರಾನ್ ಮೇಲಿನ ದಾಳಿಯನ್ನು 5 ದಿನಗಳ ಮಟ್ಟಿಗೆ ಸ್ಥಗಿತಗೊಳಿಸಿದ್ದಾರೆ. ಇದೇ ಟ್ರಂಪ್ ಕೆಲವೇ ಗಂಟೆಗಳ ಮೊದಲಷ್ಟೇ ಹೊರ್ಮುಜ್ ಜಲಸಂಧಿಯ ಮೇಲಿನ ಇರಾನ್ ಹಿಡಿತ ವನ್ನು ಮುಕ್ತಗೊಳಿಸುವುದಾಗಿ ಗಡುವು ವಿಧಿಸಿ ಎಚ್ಚರಿಕೆ ನೀಡಿದ್ದರು.

ಬಳಿಕ ಅವರ ವರಸೆ ಬದಲಾಯಿತು. "ಇರಾನ್‌ನೊಂದಿಗೆ ಫಲಪ್ರದ ಮಾತುಕತೆಯ ಬಳಿಕ 5 ದಿನ ದಾಳಿ ನಿಲ್ಲಿಸಲು ನಿರ್ಧರಿಸಲಾಗಿದೆ. ಇರಾನ್ ಜತೆಗೆ ಇನ್ನಷ್ಟು ಮಾತುಕತೆ ನಡೆಯಲಿದೆ" ಎಂದು ಹೇಳಿ ಅಚ್ಚರಿ ಮೂಡಿಸಿದರು. ಆದರೆ ಇರಾನ್ ತಕ್ಷಣವೇ ಇದಕ್ಕೆ ಪ್ರತಿಕ್ರಿಯಿಸಿ, ಈ ರೀತಿ ಮಾತುಕತೆ ನಡೆದಿರುವುದನ್ನು ನಿರಾಕರಿಸಿತು. ಇದು ಅಮೆರಿಕವು ಸೋಲೊಪ್ಪಿಕೊಂಡ ಸಂಕೇತ ಎಂದು ಬಣ್ಣಿಸಿತು. ಕುತೂಹಲಕರ ವಿಷಯವೆಂದರೆ ಟ್ರಂಪ್ 5 ದಿನಗಳ ವಿರಾಮ ಘೋಷಿಸಿದೊಡನೆ ಜಾಗತಿಕ ತೈಲ ಬೆಲೆಯಲ್ಲಿ ಇಳಿಕೆಯಾಯಿತು. ಶೇರು ಮಾರುಕಟ್ಟೆಗಳು ಒಮ್ಮೆಗೆ ಏರಿಕೆ ಕಂಡವು.

ಒಮ್ಮೆಗೆ ಎಲ್ಲರ ಮನದಲ್ಲಿ ಪ್ರಶ್ನೆ ಮೂಡತೊಡಗಿತು. ಟ್ರಂಪ್ ಯುದ್ಧಕ್ಕೆ ವಿರಾಮ ಘೋಷಿಸಿದ್ದು ಶೇರು ಮಾರುಕಟ್ಟೆಯನ್ನು ಉತ್ತೇಜಿಸುವ ತಂತ್ರವಾಗಿಯೆ? ಆರಂಭಶೂರತ್ವ ತೋರುವ ಟ್ರಂಪ್ ಕೊನೆಗೊಮ್ಮೆ ಅಂಜಿಕೆಯಿಂದ ಬಾಲಮಡಚುತ್ತಾರೆಯೆ? ಅಮೆರಿಕದಲ್ಲಿ Trump Always Chickens Out (TACO) ಎಂಬ ಮಾತು ಇತ್ತೀಚೆಗೆ ಪ್ರಸಿದ್ಧಿ ಪಡೆದಿದೆ. ಅಂದರೆ ಆರಂಭದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಬಹಳ ಶೌರ್ಯದ ಮಾತನಾಡುವ ಟ್ರಂಪ್ ಕೊನೆಗೊಮ್ಮೆ ಬಾಲ ಮಡಚುತ್ತಾರೆ ಎಂಬುದಾಗಿ. ತೆರಿಗೆ ಹೇರಿಕೆಯಿಂದ ಹಿಡಿದು ಬಹಳಷ್ಟು ವಿಷಯಗಳಲ್ಲಿ ಟ್ರಂಪ್ ಇದೇ ರೀತಿಯ ವರ್ತನೆ ತೋರಿದ ಹಿನ್ನೆಲೆಯಲ್ಲಿ ಮಾಧ್ಯಮವೊಂದರ ಅಂಕಣಕಾರ ರಾಬರ್ಟ್ ಆರ್ಮ್‌ಸ್ಟ್ರಾಂಗ್ ಈ ಪದವನ್ನು ಸೃಷ್ಟಿಸಿದ್ದಾರೆ.

ಟ್ರಂಪ್ ರಕಠಿಣ ನಿರ್ಧಾರಗಳು ಅಮೆರಿಕದ ಶೇರು ಮಾರುಕಟ್ಟೆಯಲ್ಲಿ ಭಾರೀ ಕುಸಿತಕ್ಕೆ ಕಾರಣವಾದಾಗಲೆಲ್ಲ ಟ್ರಂಪ್ ಒತ್ತಡಕ್ಕೆ ಮಣಿಯುತ್ತಾರೆನ್ನುವುದು ಸಾಬೀತಾಗಿದೆ. ಪ್ರಸಕ್ತ ಪರಿಸ್ಥಿತಿ ಹಾಗೂ ಇತ್ತೀಚಿನ ಬೆಳವಣಿಗೆಗಳು ಕೂಡಾ ಇದೇ ಸ್ಥಿತಿಯನ್ನು ಹೋಲುತ್ತಿದೆ ಎಂದು ವಿಶ್ಲೇಷಣಾಕಾರರು ನುಡಿಯುತ್ತಿದ್ದಾರೆ. ಒಂದನೆಯದಾಗಿ, ಟ್ರಂಪ್ ಇಸ್ರೇಲಿನ ಜತೆಗೂಡಿ ಇರಾನ್ ಮೇಲೆ ಹಠಾತ್ತನೆ ಯುದ್ಧ ಸಾರುತ್ತಾರೆ. ಇದರಿಂದ ತೈಲ ಪೂರೈಕೆ ಜಾಗತಿಕವಾಗಿ ಅಸ್ತವ್ಯಸ್ತವಾಗುತ್ತದೆ. ತೈಲ ಬೆಲೆ ಬ್ಯಾರೆಲ್‌ಗೆ 100 ಡಾಲರ್ ದಾಟುತ್ತದೆ. ಎರಡನೆ ಹಂತದಲ್ಲಿ, ತೈಲ ಬೆಲೆ ಏರಿಕೆಯಿಂದಾಗಿ ಅಮೆರಿಕದಲ್ಲೂ ಹಣದುಬ್ಬರ ಉಂಟಾಗುತ್ತದೆ. ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ವಾಲ್‌ಸ್ಟ್ರೀಟ್‌ನಲ್ಲಿ ಶೇರುಧಾರಣೆ ಕುಸಿಯುತ್ತದೆ. ಮೂರನೇ ಹಂತದಲ್ಲಿ, ಟ್ರಂಪ್ ಅನಿರೀಕ್ಷಿತ ವಾಗಿ 5 ದಿನಗಳ ಕದನವಿರಾಮ ಘೋಷಿಸುತ್ತಾರೆ. ಶೇರು ಮಾರುಕಟ್ಟೆ ಒಮ್ಮೆಗೆ ಚೇತರಿಕೆ ಕಾಣುತ್ತದೆ. ತೈಲ ಬೆಲೆ ಕುಸಿಯುತ್ತದೆ. ಇದು TACO ಕ್ಷಣ ಎಂಬುದಾಗಿ ಅಮೆರಿಕದಲ್ಲಿ ವಿಶ್ಲೇಷಿಸುತ್ತಿದ್ದಾರೆ. ಅಮೆರಿಕದ ಹೂಡಿಕೆದಾರರ ಪಾಲಿಗಂತೂ ಟ್ರಂಪ್‌ರ ಈ ಚರ್ಯೆಯು ಚಿರಪರಿಚಿತ ಎಂಬಂತಾಗಿದೆ.

ಆರ್ಥಿಕ ಒತ್ತಡಕ್ಕೆ ಮಣಿಯುವ ಟ್ರಂಪ್

ಟ್ರಂಪ್ ಅವರು ಆರ್ಥಿಕ ಒತ್ತಡಕ್ಕೆ ಬೇಗ ಮಣಿಯುತ್ತಾರೆ ಎಂಬ ಮಾತು ಈಗ ಹೆಚ್ಚು ಪ್ರಚಲಿತದಲ್ಲಿದೆ. ಅಮೆರಿಕದಲ್ಲಿ ಶೇರು ಮಾರುಕಟ್ಟೆ ತೀವ್ರ ಕುಸಿತ ಕಂಡಾಗ, ತೈಲ ಬೆಲೆ ಏರಿಕೆಯಾದಾಗ, ಟ್ರಂಪ್‌ರ ನೀತಿಯು ತಕ್ಷಣವೇ ಬದಲಾಗುತ್ತದೆ. ಮೊದಲಿಗೆ ಶೇರು ಮಾರುಕಟ್ಟೆಯಲ್ಲಿ ಹೆದರಿಕೆ ಹುಟ್ಟಿಸಿ, ಬಳಿಕ ನಿರಾಳತೆ ಸೃಷ್ಟಿಸಿ, ನಂತರ ಮಾರುಕಟ್ಟೆಯು ಏರುವಂತೆ ಮಾಡುವುದು ಟ್ರಂಪ್‌ರ ಕಾರ್ಯತಂತ್ರವೂ ಆಗಿಬಿಟ್ಟಿದೆ. ಆದರೆ, ಈ ಹಿಂದೆ ತೆರಿಗೆ ಏರಿಕೆಯ ಕೋಲಾಹಲವನ್ನು ತಣಿಸಲು ಟ್ರಂಪ್ ಶಕ್ತರಾದರೂ ಯುದ್ಧದಿಂದ ಉಂಟಾಗಿರುವ ಶೇರು ಮಾರುಕಟ್ಟೆ ಕೋಲಾಹಲವನ್ನು ಶಮನಗೊಳಿಸಲು ಟ್ರಂಪ್ ಪೂರ್ಣ ಶಕ್ತರಾಗದಿರಲೂ ಬಹುದು ಎಂದು ಪರಿಣತರು ಎಚ್ಚರಿಸುತ್ತಾರೆ. ಯುದ್ಧದಿಂದ ಹೊರಬರುವುದು ಅಷ್ಟು ಸುಲಭವಲ್ಲ. ಯುದ್ಧವು ಇನ್ನಷ್ಟು ಕಾಲ ಮುಂದುವರಿದರೆ ಅದು ತೈಲ ಬೆಲೆ ಏರಿಕೆಗೆ ಕಾರಣವಾಗಲಿದೆ, ಹಣದುಬ್ಬರ ಹೆಚ್ಚಿಸಲಿದೆ ಹಾಗೂ ಶೇರು ಮಾರುಕಟ್ಟೆ ಅಸ್ತವ್ಯಸ್ತಗೊಳಿಸಲಿದೆ ಎಂದೂ ಅವರು ಎಚ್ಚರಿಕೆ ನೀಡುತ್ತಾರೆ.



ಹೊಣೆ ಜಾರಿಸಲು ಟ್ರಂಪ್ ಯತ್ನ

ಇರಾನ್ ಮೇಲೆ ಯುದ್ಧ ಸಾರುವುದು ತನ್ನ ನಿರ್ಣಯವಲ್ಲ ಎಂದು ಹೇಳಿ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳಲು ಟ್ರಂಪ್ ಈಗ ಯತ್ನಿಸುತ್ತಿದ್ದಾರೆ. ಇರಾನ್ ಮೇಲೆ ಯುದ್ಧ ಸಾರುವ ನಿರ್ಧಾರ ತಾಳಿದ್ದು ಪೆಂಟಗನ್ ಮುಖ್ಯಸ್ಥ ಪೀಟ್ ಹೆಗ್‌ಸೆತ್ ಎಂದು ಹೇಳುವ ಮೂಲಕ ಅವರನ್ನು ಬಲಿಪಶು ಮಾಡಲು ಪ್ರಯತ್ನಿಸುತ್ತಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಟ್ರಂಪ್‌ರವರು ತಮ್ಮ ಬಳಿಯೇ ಕುಳಿತಿದ್ದ ಪೀಟ್ ಹೆಗ್‌ಸೆತ್‌ರತ್ತ ತಿರುಗಿ "ಪೀಟ್, ಇರಾನ್ ಮೇಲೆ ಯುದ್ಧ ಸಾರೋಣವೆಂದು ನೀನು ಹೇಳಿದ್ದಲ್ಲವೆ. ಅವರು ಪರಮಾಣು ಬಾಂಬು ಹೊಂದಬಾರದೆಂಬ ಕಾರಣಕ್ಕಾಗಿ ಲೆಟ್ಸ್ ಡೂ ಇಟ್ ಎಂದು ಹೇಳಿದ್ದಿಯಲ್ಲವೆ" ಎಂದು ನುಡಿದರು.

ಟ್ರಂಪ್‌ರ TACO ಕ್ಷಣಗಳು

ಟ್ರಂಪ್‌ರ ಕೆಲವು ನಿರ್ಧಾರಗಳು ಶೇರು ಮಾರುಕಟ್ಟೆಯಲ್ಲಿ ತಲ್ಲಣ ಹುಟ್ಟಿಸಿದಾಗಲೆಲ್ಲ ಟ್ರಂಪ್ ಒತ್ತಡಕ್ಕೆ ಮಣಿದು ತಮ್ಮ ನಿರ್ಧಾರದಿಂದ ಹಿಂದೆ ಸರಿದ ಹಲವಾರು ನಿದರ್ಶನಗಳು ಕಾಣ ಸಿಗುತ್ತವೆ. ಕಳೆದ ವರ್ಷ ಏಪ್ರಿಲ್ 2ರಂದು ಟ್ರಂಪ್ ತೆರಿಗೆ ಹೇರಿಕೆಯನ್ನು ಪ್ರಕಟಿಸಿದ್ದರು. ಇದರಿಂದ ಶೇರು ಮಾರುಕಟ್ಟೆಯಲ್ಲಿ ಕೋಲಾಹಲವಾಗಿತ್ತು. ಶೇರು ಬೆಲೆಗಳು ತೀವ್ರವಾಗಿ ಕುಸಿದಿದ್ದವು. ಮರುದಿನವೇ ಟ್ರಂಪ್ ತಮ್ಮ ನಿರ್ಧಾರದಿಂದ ಹಿಂದೆ ಸರಿದು, ತೆರಿಗೆ ಹೇರಿಕೆಯ ಮೇಲೆ 90 ದಿನಗಳ ವಿರಾಮ ಘೋಷಿಸಿರುವುದಾಗಿ ಪ್ರಕಟಿಸಿದ್ದರು. ಅವರು ಹಾಗೆ ಹೇಳಿದೊಡನೆ ಶೇರು ಮಾರುಕಟ್ಟೆಯು ಹಿಂದೆಂದೂ ಕಾಣದ ಏರಿಕೆ ಕಂಡಿತ್ತು. ಗ್ರೀನ್‌ಲ್ಯಾಂಡ್‌ಗೆ ಸಂಬಂಧಿಸಿಯೂ ಟ್ರಂಪ್ ಇದೇ ರೀತಿ ಉಲ್ಟಾ ಹೊಡೆದಿದ್ದರು. ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವುದಾಗಿ ಹೇಳುತ್ತಾ ಬಂದಿದ್ದ ಟ್ರಂಪ್ ಅದರಿಂದ ಶೇರು ಮಾರುಕಟ್ಟೆ ಕುಸಿದು, ಡಾಲರ್ ಮೌಲ್ಯವೂ ಕುಸಿತ ಕಂಡ ಮೇಲೆ ತಮ್ಮ ನಿರ್ಧಾರ ಬದಲಿಸಿ "ಬಲಪ್ರಯೋಗದಿಂದ ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವುದಿಲ್ಲ" ಎಂದು ಪ್ರಕಟಿಸಿದರು. ಆ ಬಳಿಕ ಶೇರು ಮಾರುಕಟ್ಟೆ ಚೇತರಿಕೆ ಕಂಡಿತ್ತು.

ಲಾಭ ಮಾಡಿಕೊಂಡವರಾರು?



ಟ್ರಂಪ್ ಘೋಷಣೆಯಿಂದ ಶೇರು ಮಾರುಕಟ್ಟೆಯಲ್ಲಿ ಉಂಟಾದ ಏರುಪೇರಿನಿಂದ ಕೆಲವರು ಅತ್ಯಧಿಕ ಲಾಭ ಮಾಡಿಕೊಂಡಿರುವ ವರದಿಯಾಗಿದೆ. ಅವರಿಗೆ ಟ್ರಂಪ್ ಇಂತಹ ಘೋಷಣೆ ಹೊರಡಿಸುವ ಕುರಿತಂತೆ ಮುನ್ಸೂಚನೆ ಇತ್ತೆ ಎಂಬ ಕುರಿತಂತೆ ಅಮೆರಿಕದ ಕೆಲವು ಆರ್ಥಿಕ ಪರಿಣತರು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಟ್ರಂಪ್ ಘೋಷಣೆ ಮಾಡಿದ ಸಮಯ, ಸಂದರ್ಭ ಹಾಗೂ ತೈಲ ಶೇರುಗಳ ಮಾರಾಟ ಮತ್ತು ಖರೀದಿಗಳು ಇಂತಹ ಅನುಮಾನವನ್ನು ಪುಷ್ಟೀಕರಿಸಿವೆ. ಟ್ರಂಪ್ ಯುದ್ಧ ವಿರಾಮ ಘೋಷಿಸಿದ ಹಾಗೂ ಬಳಿಕ ಇರಾನ್ ಅದನ್ನು ನಿರಾಕರಿಸಿದ ನಡುವಿನ ಕೇವಲ 20 ನಿಮಿಷಗಳ ಅಂತರದಲ್ಲಿ ಕೋಟ್ಯಂತರ ಡಾಲರ್‌ಗಳಷ್ಟು ಲಾಭ ಮಾಡಿಕೊಂಡವರಾರು ಎಂಬ ಪ್ರಶ್ನೆ ಎದ್ದಿದೆ.

▶ ಶೇರು ಮಾರುಕಟ್ಟೆ ಏಳುಬೀಳು

ಟ್ರಂಪ್ ಯುದ್ಧ ಸ್ಥಾಗಿತ್ಯವನ್ನು ಘೋಷಿಸಿದ ಬೆಳವಣಿಗೆಗೆ ಶೇರು ಮಾರುಕಟ್ಟೆ ಸ್ಪಂದಿಸಿದ ಬಗೆಯನ್ನೆ ನೋಡಿ. ಟ್ರಂಪ್ ಯುದ್ಧ ವಿರಾಮ ಘೋಷಿಸಿದ ಬೆನ್ನಿಗೇ ತೈಲ ಬೆಲೆಯಲ್ಲಿ ಶೇ.10.9ರಷ್ಟು ಇಳಿಕೆಯಾಯಿತು. ಕೆಲದಿನಗಳ ಹಿಂದೆ ಬ್ಯಾರೆಲ್‌ಗೆ 120 ಡಾಲರ್‌ನ ಸಮೀಪ ಬಂದಿದ್ದ ದರವು 99.44 ಡಾಲರ್‌ಗೆ ಕುಸಿಯಿತು. ಶೇರು ಮಾರುಕಟ್ಟೆ ಕೂಡಾ ಗೂಳಿಯೋಟ ಕಂಡಿತು. ಆದರೆ ಟ್ರಂಪ್ ಹೇಳಿಕೆಯನ್ನು ಇರಾನ್ ನಿರಾಕರಿಸಿ, ಯಾವುದೇ ಮಾತುಕತೆ ನಡೆದಿಲ್ಲ ಎಂದು ಹೇಳಿದೊಡನೆ ತೈಲ ಬೆಲೆ ಮತ್ತೆ ಏರಿಕೆ ಕಂಡಿತು ಹಾಗೂ ಶೇರು ಮಾರುಕಟ್ಟೆ ಕುಸಿಯಿತು. ಈ ಕೆಲವೇ ನಿಮಿಷಗಳ ವ್ಯವಹಾರದಲ್ಲಿ ಹಲವರು ಲಾಭ ಮಾಡಿಕೊಂಡರು. ಹಲವರು ಹಣ ಕಳಕೊಂಡರು. ಅಮೆರಿಕದ ಪತ್ರಕರ್ತರೊಬ್ಬರು ಬರೆದರು "ಟ್ರಂಪ್ ತಮ್ಮ ಕಾರಿನಿಂದಿಳಿದು ತಮ್ಮ ಡೆಸ್ಕ್ ತಲುಪುವ ವೇಳೆಗೆ ಶೇರು ಮಾರುಕಟ್ಟೆ 1.7 ಟ್ರಿಲಿಯ ಡಾಲರ್ ಗಳಿಸುವಂತೆ ಹಾಗೂ ತೈಲ ಬೆಲೆ 17 ಡಾಲರ್‌ನಷ್ಟು ಕುಸಿಯುವಂತೆ ಮಾಡಿದರು. ಆದರೆ ಅವರು ತಮ್ಮ ಕಚೇರಿಯಲ್ಲಿ ಕಾಫಿ ಕುಡಿಯಲು ತಯಾರಾಗುವ ವೇಳೆಗೆ ಇರಾನ್ ಅವರ ಹೇಳಿಕೆ ನಿರಾಕರಿಸಿದ್ದರಿಂದ ಅರ್ಧದಷ್ಟು ಗಳಿಕೆ ಒಮ್ಮೆಗೆ ಮಾಯವಾಯಿತು"

ಮಧ್ಯಪ್ರಾಚ್ಯ ಯುದ್ಧ ಮತ್ತು ಭಾರತದ ರಾಜತಾಂತ್ರಿಕತೆ

▶ ಡಾ. ಜಗದೀಶ ಮಾನೆ



ಅಮೆರಿಕ ಭಾರತದ ಜೊತೆ ಎಂಥ ಡರ್ಟಿ ಗೇಮ್ ಆಡ್ತಿದೆ ಎಂದರೆ, ಸುಖಾಸುಮ್ಮನೆ ಹೇಳಿಕೆ ಕೊಟ್ಟು ಸುಮ್ಮನಿರುವುದು. "ಭಾರತಕ್ಕೆ ರಷ್ಯಾದಿಂದ ತೈಲ ಖರೀದಿಸಲು ನಾವು 30 ದಿನಗಳ ಕಾಲಾವಕಾಶ ಕೊಟ್ಟಿದ್ದೇವೆ" ಇತ್ತೀಚೆಗೆ ಅಮೆರಿಕ ಹೀಗೆಂದು ಟ್ವೀಟ್ ಮಾಡಿತ್ತು. ಇದು ಮೇಲ್ನೋಟಕ್ಕೆ ಭಾರತ ಯಾರಿಂದ, ಯಾವಾಗ ತೈಲ ಖರೀದಿಸಬೇಕು ಎನ್ನುವುದನ್ನು ಅಮೆರಿಕವೇ ನಿರ್ಧರಿಸುತ್ತದೆ ಎನ್ನುವಂತಿತ್ತು.

ಅಮೆರಿಕದ ಆ ಒಂದು ಹೇಳಿಕೆ ವಿರೋಧ ಪಕ್ಷದವರಿಗೆ ಆಹಾರವಾಗಿತ್ತು. ಭಾರತ ಅಮೆರಿಕದ ಕೈಗೊಂಬೆ, ಅಮೆರಿಕಕ್ಕೆ ಶರಣಾಗಿದೆ, ವಿದೇಶಾಂಗ ನೀತಿಗಳು ಅಮೆರಿಕ ಹೇಳಿದಂತೆ ನಡೆಯುತ್ತಿದೆ ಎಂದೆಲ್ಲ ಆರೋಪಿಸಲಾಗಿತ್ತು. ಇಂದು ಅಮೆರಿಕದ ಕೀಚಕ ನೀತಿಗೆ ಜಗತ್ತು ನಲುಗುತ್ತಿದೆ. ಇರಾನ್, ಅರಬ್ ದೇಶಗಳು ಮತ್ತು ವೆನೆಜುವೆಲಾ ತತ್ತರಿಸಿದೆ. ಇರಾನ್ ಮೇಲಿನ ದಾಳಿ ಕೇವಲ ಖಮೇನಿಯ ಪರಮಾಧಿಕಾರವನ್ನು ನಿಲ್ಲಿಸುವುದು ಎಂದಾದರೆ ಆ ಉದ್ದೇಶ ಈಗಾಗಲೆ ಈಡೇರಿದೆ. ಆದರೆ ಈ ಅರೆ ಹುಚ್ಚ ಟ್ರಂಪ್‌ಗೆ ತಾನೇನು ಮಾಡಲು ಹೊರಟಿದ್ದೇನೆ ಎಂಬುದು ತನಗೇ ಗೊತ್ತಿಲ್ಲ! ಟ್ರಂಪ್ ಹೇಳಿಕೆಗೆ ನಮ್ಮ ವಿದೇಶಾಂಗ ಸಚಿವರಾದ ಜೈಶಂಕರ್ ಅವರು "ಭಾರತದ ತೈಲ ಖರೀದಿಗೆ ಯಾವ ದೊಣ್ಣೆನಾಯಕನ ಅಪ್ಪಣೆಯು ಬೇಕಿಲ್ಲ" ಎಂದು ಮುಟ್ಟಿ ನೋಡಿಕೊಳ್ಳುವಂತಹ ತಿರುಗೇಟು ಕೊಟ್ಟಿದ್ದರು. ಮೊನ್ನೆ ತುರ್ತು ಸಂದರ್ಭದಲ್ಲಿ ಇರಾನ್ ತನ್ನ ಯುದ್ಧ ನೌಕೆಯನ್ನು ಭಾರತದ ಸಮುದ್ರ ತೀರದಲ್ಲಿ ಕೆಲಕಾಲ ನಿಲ್ಲಿಸಿಕೊಳ್ಳಲು ಭಾರತಕ್ಕೆ ಮನವಿ ಮಾಡಿತ್ತು. ಆಗ ಅನೇಕರಲ್ಲಿ ಈ ಸಂದರ್ಭದಲ್ಲಿ ಭಾರತ ಅಮೆರಿಕಾವನ್ನು ಎದುರು ಹಾಕಿಕೊಂಡು ಇರಾನಿಗೆ ಸಹಾಯ ಮಾಡುವುದು ಸರಿಯೇ ಎಂಬ ಪ್ರಶ್ನೆಗಳು ಮೂಡಿದ್ದವು. ಇರಾನಿನ ಆ ನೌಕೆಯಲ್ಲಿ ಬಹುತೇಕ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮುಖ್ಯವಾಗಿ ನೌಕೆಯಲ್ಲಿ ತಾಂತ್ರಿಕ ದೋಷ ಕಂಡುಬಂದಿತ್ತು. ಹೀಗಾಗಿ ಮಾನವೀಯತೆಯ ಆಧಾರದ ಮೇಲೆ ಭಾರತ ಅವರಿಗೆ ಸ್ಥಳಾವಕಾಶಕ್ಕೆ ಅನುಮತಿ ನೀಡಿತ್ತು. ಭಾರತದ ಈ ನಿರ್ಧಾರದಲ್ಲಿ ಅದೆಷ್ಟು ಚಾಣ್ಮೆ, ದೊಡ್ಡತನ ಇತ್ತೆಂದರೆ ಅದಕ್ಕೆ ಅಮೆರಿಕಾ ಕೂಡ ಸುಮ್ಮನಾಗಿತ್ತು. ಯಾಕೆಂದರೆ ಈ ಸಂದರ್ಭದಲ್ಲಿ ಯಾರೂ ಮಾನವೀಯತೆಯ ವಿರೋಧವಾಗಿರುವುದನ್ನು ಒಪ್ಪುವುದಿಲ್ಲ. ರಷ್ಯಾ–ಉಕ್ರೇನ್ ಯುದ್ಧದ ಸಂದರ್ಭದಲ್ಲೂ ನೀವು ಯಾರ ಪರ ಎಂದು ಕೇಳಿದ್ದಕ್ಕೆ ಜೈಶಂಕರ್ ನಾವು ಯಾರ ಪರವೂ ಅಲ್ಲ, ಭಾರತ ಯಾವತ್ತೂ ಶಾಂತಿಯ ಪರ ನಿಲ್ಲುತ್ತದೆ ಎಂದಿದ್ದರು. ಭಾರತ ತನ್ನ ಅಭಿವೃದ್ಧಿಯ ಜತೆ ಜತೆಗೆ ಇತರ ದೇಶಗಳೂ ಬೆಳೆಯಬೇಕೆಂದು ಬಯಸುತ್ತದೆ. ಉದಾಹರಣೆಗೆ ಅಫ್ಘಾನಿಸ್ತಾನದಲ್ಲಿ ಆಹಾರ ಸಮಸ್ಯೆ ಎದುರಾದಾಗ ಸುಮಾರು 50,000 ಟನ್ ಗೋಧಿಯನ್ನು ನೀಡಲಾಗಿತ್ತು. ಶ್ರೀಲಂಕಾದ ಆರ್ಥಿಕ ಸಂಕಷ್ಟದಲ್ಲಿ 3.8 ಬಿಲಿಯನ್ ಡಾಲರ್ ಹಣವನ್ನು ನೆರವಿನ ರೂಪದಲ್ಲಿ ನೀಡಿತ್ತು. ಮಯನ್ಮಾರ್‌ಗೂ ಹತ್ತು ಸಾವಿರ ಟನ್ ಆಹಾರವನ್ನು ಒದಗಿಸಿತ್ತು. ಕೋವಿಡ್ ಸಂದರ್ಭದಲ್ಲಿ ವ್ಯಾಕ್ಸಿನ್ ಅನ್ನು ಹಲವು ದೇಶಗಳಿಗೆ ಕೊಟ್ಟಿತ್ತು.

ವಾಸ್ತವದಲ್ಲಿ ರಾಜತಾಂತ್ರಿಕತೆ ಅಂದರೆ ಯಾವುದು ಸರಿಯಾದ ಕೆಲಸವೋ ಅದನ್ನೇ ಸರಿಯಾದ ರೀತಿಯಲ್ಲಿ, ರಾಷ್ಟ್ರದ ಹಿತಾಸಕ್ತಿಯ ಅಡಿಯಲ್ಲಿ ಮಾಡುವುದು. ಇದನ್ನು ಜೈಶಂಕರ್ ಅವರಂತೂ ಕರಗತ ಮಾಡಿಕೊಂಡಿದ್ದಾರೆ. ಅವರು ವಿದೇಶಾಂಗ ಮಂತ್ರಿಗಳಾದ ಬಳಿಕ ಭಾರತದ ಸುರಕ್ಷತೆ ಮತ್ತು ಭಾರತದ ಆರ್ಥಿಕ ಅಭಿವೃದ್ಧಿ ಎರಡನ್ನೂ ಗುರಿಯಾಗಿಸಿಕೊಂಡು ತಂತ್ರಗಳನ್ನು ರೂಪಿಸಿದ್ದಾರೆ. ಅದರಲ್ಲೂ ಈ ಡಿಪ್ಲೊಮೆಟಿಕ್ ಪರಿಸ್ಥಿತಿಯಂತೂ ಬಹಳ ಸೂಕ್ಷ್ಮವಾಗಿದೆ. ಅದರಂತೆ ಜಗತ್ತು ಇದೀಗ ಎರಡು ಭಾಗಗಳಾಗಿರುವಂತೆ ತೋರುತ್ತಿದೆ. ರಷ್ಯಾ, ಚೀನಾ, ಇರಾನ್ ಮತ್ತು ಉತ್ತರ ಕೊರಿಯಾ ರಾಷ್ಟ್ರಗಳು ಒಂದೆಡೆಯಾದರೆ, ಮತ್ತೊಂದೆಡೆ ಅಮೆರಿಕಾ, ಇಸ್ರೇಲ್, ಜರ್ಮನಿ ಇಂಗ್ಲೆಂಡ್ ಮತ್ತು ನ್ಯಾಟೊ ಪಡೆ. ಹೀಗಿರುವ ಸಂದರ್ಭದಲ್ಲಿ ಭಾರತ ಹೇಗೆ ನಡೆದುಕೊಳ್ಳುತ್ತದೆ ಎಂಬುದನ್ನು ನೋಡಲು ಬಹುತೇಕ ರಾಷ್ಟ್ರಗಳು ಚಾತಕ ಪಕ್ಷಿಯಂತೆ ಕಾಯುತ್ತಿವೆ. ಮತ್ತು ಅವರಿಗೆ ಉತ್ತರವೂ ಸಿಕ್ಕಿದೆ.

ಭಾರತ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ದೇಶ ಮತ್ತು ಅತ್ಯಂತ ವೇಗವಾಗಿ ಬೆಳೆಯುವ ಆರ್ಥಿಕತೆಯ ರಾಷ್ಟ್ರವಾಗಿದೆ. ಹೀಗಾಗಿ ಈ ಯುದ್ಧದ ಸಂದರ್ಭದಲ್ಲಿ ನಮ್ಮ ಸುತ್ತಲೂ ಬೆಂಕಿ ಹತ್ತಿಕೊಂಡಿರುವಾಗ ಮಧ್ಯದಲ್ಲಿರುವ ನಮ್ಮ ಪಾತ್ರ ಬಹಳ ಮುಖ್ಯ. ಹೀಗಾಗಿ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಬಹಳ ಎಚ್ಚರಿಕೆಯಿಂದಲೇ ಭಾರತ ಹೆಜ್ಜೆ ಇಡುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲು ಜೈಶಂಕರ್ ಸೂಕ್ತ ವ್ಯಕ್ತಿ. ಮೇಲ್ನೋಟಕ್ಕೆ ಅಮೆರಿಕ ಏನೇ ಹೇಳಿಕೆ ಕೊಟ್ಟರೂ ಅದನ್ನು ಭಾರತ ಬಹಳ ಸೂಕ್ಷ್ಮವಾಗಿ ಗಮನಿಸುತ್ತದೆ. ಅಮೆರಿಕ ತನ್ನ ಹಿತಾಸಕ್ತಿಗಾಗಿ ಬೇರೆ ಬೇರೆ ದೇಶಗಳ ಮೇಲೆ ಪ್ರಹಾರ ಮಾಡುವುದು ಅದರ ಹುಟ್ಟುಗುಣ. ಈ ಹಿಂದೆ ಅಫ್ಘಾನಿಸ್ತಾನದಲ್ಲಿದ್ದ ಯುಎಸ್‌ಎಸ್‌ಆರ್ ಹಿಡಿತವನ್ನು ತಪ್ಪಿಸುವ ದೃಷ್ಟಿಯಿಂದಲೇ ಅಮೆರಿಕಾ ತಾಲಿಬಾನನ್ನು ಬೆಳೆಸಿತ್ತು. ಪರಿಣಾಮ, ಒಂದೊಮ್ಮೆ ಅದೇ ತಾಲಿಬಾನ್ ಮುಖ್ಯಸ್ಥ ಅಮೇರಿಕಾದ ಮೇಲೆ ತಿರುಗಿ ಬಿದ್ದ. ಇದರಿಂದ ಹೈರಾಣಾದ ಅಮೆರಿಕಾ ಸುಮಾರು 20 ವರ್ಷಗಳ ಕಾಲದವರೆಗೆ ಅಫ್ಘಾನಿಸ್ತಾನದಲ್ಲಿ ತಳ ಊರುವ ಪರಿಸ್ಥಿತಿ ಎದುರಾಗಿತ್ತು. ಭಾರತ ತನ್ನ ಹಿತಾಸಕ್ತಿಯನ್ನು ಉಳಿಸಿಕೊಂಡು ಜತೆಗೆ ಅಮೇರಿಕಾದೊಂದಿಗೆ ದ್ವೇಷ ಕಟ್ಟಿಕೊಳ್ಳದೆ ಅವರ ದಬ್ಬಾಳಿಕೆ, ಆಕ್ರಮಣಕಾರಿ ವಿಧಾನವನ್ನು ವಿರೋಧಿಸುತ್ತ ಬಂದಿದೆ. ಇನ್ನು ಇಸ್ರೇಲ್ ಭಾರತದ ಪರಮಾಪ್ತ ರಾಷ್ಟ್ರವಾಗಿದೆ. ಹಾಗೆಂದು ಇರಾನ್ ಏನೂ ಭಾರತಕ್ಕೆ ಶತ್ರು ರಾಷ್ಟ್ರವಲ್ಲ. ಅದು ಕೂಡ ಭಾರತದ ಜೊತೆ ಉತ್ತಮ ವ್ಯಾಪಾರ ಸಂಬಂಧಗಳನ್ನು ಹೊಂದಿದೆ. ಇನ್ನೂ ರಷ್ಯಾ ಅಂತೂ ಭಾರತದೊಂದಿಗೆ ಸಹಸ್ರಾರು ದಶಕಗಳಿಂದ ಪರಮಾಪ್ತ ದೇಶ. ಉತ್ತಮ ಸ್ನೇಹ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿವೆ. ಆದರೆ ಈ ಯುದ್ಧದ ಸಂದರ್ಭದಲ್ಲಿ ರಷ್ಯಾವು



ಇರಾನನ್ನು ಬೆಂಬಲಿಸುತ್ತಿದೆ. ಅತ್ತ ಇನ್ನೊಂದು ಪರಮಾಪ್ತ ರಾಷ್ಟ್ರ ಇಸ್ರೇಲ್ ಅಮೆರಿಕ ಪರವಾಗಿ ಇರಾನ್ ವಿರುದ್ಧ ಹೋರಾಟ ನಡೆಸಿದೆ. ಇದೊಂದು ರೀತಿಯಲ್ಲಿ ಭಾರತಕ್ಕೆ ಧರ್ಮಸಂಕಟ. ಈ ಪರಿಸ್ಥಿತಿಯಲ್ಲಿ ಕೂಡ ಭಾರತ ಬಹಳ ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡುತ್ತಿದೆ. ಜೈಶಂಕರರು ಇರಾನ್, ಇಸ್ರೇಲ್ ಮತ್ತು ಅಮೇರಿಕಾದ ತಾಳಕ್ಕೂ ಕುಣಿದಿಲ್ಲ, ಅವರ ತಪ್ಪುಗಳನ್ನು ಬಲವಾಗಿ ವಿರೋಧಿಸುತ್ತಾ, ಸಂಭಂದವನ್ನೂ ಹಾಳು ಮಾಡಿಕೊಳ್ಳದೆ ಸೂಕ್ಷ್ಮವಾಗಿ ತಾಳ್ಮೆಯಿಂದ ಪ್ರತಿಕ್ರಿಸುತ್ತಿದ್ದಾರೆ. ಜೊತೆಗೆ ಭಾರತದ ವಿದೇಶಾಂಗ ನೀತಿ ಕೂಡ ಹಾಗೆಯೇ ಇದೆ. ಭಾರತ ಎಂದೂ ತಾನಾಗಿ ಯಾರ ಮೇಲೂ ದಾಳಿ ಮಾಡುವುದಿಲ್ಲ ಮತ್ತು ಯಾವುದೇ ರಾಷ್ಟ್ರ ಆರ್ಥಿಕವಾಗಿ ನಾಶವಾಗಲಿ ಎಂದು ಬಯಸುವುದಿಲ್ಲ. ಆದರೆ ಭಾರತದ ತಂಟೆಗೆ ಬಂದ ಯಾರನ್ನೂ ಬಿಡುವುದಿಲ್ಲ! ಪ್ರತಿಕ್ರಿಯೆಗೆ ತಾಳ್ಮೆಯಿಂದ ಕಾದು ಕೊನೆಗೆ ಮುಟ್ಟಿ ನೋಡಿಕೊಳ್ಳುವ ಉತ್ತರವನ್ನು ಕೊಡುವುದರಲ್ಲಿ ಜೈಶಂಕರ್ ಎತ್ತಿದ ಕೈ. ಅವರ ಬಾಡಿ ಲ್ಯಾಂಗ್ವೇಜ್ ಅನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಅರ್ಥವಾಗುತ್ತದೆ. ಅವರು ಯಾವುದೇ ಸಮಸ್ಯೆಗಳನ್ನು ತಣ್ಣಗೆ, ಆತ್ಮವಿಶ್ವಾಸದಿಂದ ಉತ್ತರಗಳನ್ನು ಕೊಡುತ್ತಾರೆ. ಆಪರೇಷನ್ ಸಿಂಧೂರದ ಸಂದರ್ಭದಲ್ಲೂ If the fire, we fire. zero tolerance ಅಂದರೆ ನಾವಿರುವುದೇ ಹೀಗೆ ಎಂಬ ಖಡಕ್ ಸಂದೇಶ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಟ್ರಂಪ್ ತಾನೇ ಯುದ್ಧ ನಿಲ್ಲಿಸಿರುವುದಾಗಿ ಪದೇ ಪದೇ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರು. ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೆ ಸುಮ್ಮನಾಗಿಬಿಟ್ಟರು. ಕೆಲವು ಬಾರಿ ಸುಮ್ಮನಾಗಿರಬೇಕು. ಎಲ್ಲದಕ್ಕೂ ಹೇಳಿಕೆಗಳೇ ಉತ್ತರವಾಗುವುದಿಲ್ಲ, ಮೌನವೂ ಒಂದೊಮ್ಮೆ ಪರಿಹಾರವಾಗುತ್ತದೆ. ಅದೆ ಭಾರತದ ತಂತ್ರಗಾರಿಕೆ. ಆರಂಭದಲ್ಲಿ ಇರಾನಿಗೆ ಅಮೆರಿಕವೇ ಶಸ್ತ್ರಾಸ್ತ್ರಗಳನ್ನು ಪೂರೈಸಿತ್ತು ಮತ್ತು ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳನ್ನೂ ಅಮೇರಿಕವೆ ಬೆಳೆಸಿತ್ತು. ನಂತರ ಅವರ ಮೇಲೆ ದಾಳಿ ಮಾಡಿತು. ಇದು ಅಮೆರಿಕಾದ ಕುತಂತ್ರ. ಇದರ ಅರ್ಥ, ಯಾವುದೇ ರಾಷ್ಟ್ರ ಯಾರ ಮೇಲೂ ಅವಲಂಬನೆ ಆಗಬಾರದು. ತನ್ನ ಶಕ್ತಿ ಆಧಾರದ ಮೇಲೆ ತಾನೇ ಬೆಳೆಯಬೇಕು. ಅದು ಸಣ್ಣ ರಾಷ್ಟ್ರವಾದರೂ ಅವರಲ್ಲಿ ಗಟ್ಟಿತನ ಉಳಿಯುತ್ತದೆ. ಉದಾಹರಣೆಗೆ ಇಸ್ರೇಲ್.

ಈ ಯುದ್ಧವನ್ನು ಗಮನಿಸುತ್ತಿದ್ದರೆ. ಮುಂಬರುವ ವರ್ಷಗಳಲ್ಲಿ ಯಾವುದೇ ಒಂದು ರಾಷ್ಟ್ರ ಮಾತ್ರ ದೊಡ್ಡ ರಾಷ್ಟ್ರವಾಗಿ ಉಳಿಯುವುದಿಲ್ಲ. ಪ್ರತಿಯೊಂದು ರಾಷ್ಟ್ರಗಳು ಕೂಡ ಪ್ರಬಲಶಕ್ತಿಶಾಲಿಯಾಗುತ್ತವೆ. ಭಾರತ ಇದೇ ರೀತಿ ತನ್ನ ಜಾಣ ನಡೆಯನ್ನು ಪ್ರದರ್ಶಿಸುತ್ತಲಿರುತ್ತದೆ. ಮುಂಬರಲಿರುವ ದಿನಗಳಲ್ಲಿ ಜೈಶಂಕರ್ ಅವರ ಜಾಣ್ಮೆ, ಪ್ರಬುದ್ಧತೆ, ರಾಜತಾಂತ್ರಿಕ ನೀತಿಗಳು ಭಾರತಕ್ಕೆ ಇನ್ನೂ ಸಾಕಷ್ಟು ಹೆಚ್ಚಿನ ಲಾಭಗಳಾಗಲಿದೆ.

ವಿಶ್ವಾದ್ಯಂತ ಕಟ್ಟುನಿಟ್ಟಿನ ಕ್ರಮ ಜಾರಿ

ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸಂಘರ್ಷಗಳು ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಅಸಾಧಾರಣ ಬಿಕ್ಕಟ್ಟನ್ನು ಸೃಷ್ಟಿಸಿವೆ. ಇದು ಇಂಧನವನ್ನು ಉಳಿಸಲು, ನಿರ್ಣಾಯಕ ವಲಯಗಳಿಗೆ ಆದ್ಯತೆ ನೀಡಲು ಮತ್ತು ತಮ್ಮ ಜನರಿಗೆ ಇಂಧನದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಗೊಳಿಸಲು ವಿಶ್ವದಾದ್ಯಂತದ ದೇಶಗಳನ್ನು ಅನಿವಾರ್ಯತೆ ಎದುರಾಗಿದೆ. ಏಷ್ಯಾದಿಂದ ಆಫ್ರಿಕಾ ಮತ್ತು ಯುರೋಪ್ ವರೆಗೆ, ಸರ್ಕಾರಗಳು ಸೀಮಿತ ಇಂಧನ ದಾಸ್ತಾನುಗಳನ್ನು ದೀರ್ಘಕಾಲದವರೆಗೆ ಬಳಸುವ ಉದ್ದೇಶದಿಂದ ಹೆಚ್ಚುವರಿ ಸಾರ್ವಜನಿಕ ರಜೆಗಳು, ಮನೆಯಿಂದಲೇ ಕೆಲಸ, ಇಂಧನ ಪಡಿತರ ಮತ್ತು ಕೈಗಾರಿಕೆಗಳ ಸ್ಥಗಿತ ಸೇರಿದಂತೆ ಹಲವಾರು ಕ್ರಮಗಳನ್ನು ಕೈಗೊಂಡಿವೆ.

ಜಾಗತಿಕ ತೈಲ ಕಂಟಕದಿಂದ ಹೊರಬರಲು ಜಾಗತಿಕವಾಗಿ ಹೊಸ ಕ್ರಮ



ಶ್ರೀಲಂಕಾ

ಶಾಲೆಗಳು, ವಿಶ್ವವಿದ್ಯಾನಿಲಯಗಳು ಮತ್ತು ಅತ್ಯಗತ್ಯವಲ್ಲದ ಸರ್ಕಾರಿ ನೌಕರರಿಗೆ ಬುಧವಾರದಂದು ಕಡ್ಡಾಯ ಸಾರ್ವಜನಿಕ ರಜೆ ಘೋಷಿಸಲಾಗಿದೆ.ರಾಷ್ಟ್ರೀಯ ಇಂಧನ ಪಾಸ್ (ಕ್ಯು ಆರ್-ಆಧಾರಿತ ಪಡಿತರ) ಅನ್ನು ಪುನಃ ಪರಿಚಯಿಸಲಾಗಿದೆ. ಖಾಸಗಿ ವಾಹನಗಳಿಗೆ ವಾರಕ್ಕೆ 15 ಲೀಟರ್ ಮತ್ತು ಸಾರ್ವಜನಿಕ ಸಾರಿಗೆಗೆ 200 ಲೀಟರ್ ಮಿತಿ ವಿಧಿಸಲಾಗಿದೆ.

ಬಾಂಗ್ಲಾದೇಶ

ವಿದ್ಯುತ್ ಹೊರೆಯನ್ನು ಕಡಿಮೆ ಮಾಡಲು ಎಲ್ಲಾ ವಿಶ್ವವಿದ್ಯಾನಿಲಯಗಳು, ವಿದೇಶಿ ಪಠ್ಯಕ್ರಮದ ಶಾಲೆಗಳು ಮತ್ತು ತರಬೇತಿ ಕೇಂದ್ರಗಳನ್ನು ಮುಚ್ಚಲಾಗಿದ್ದು, ಆನ್ ಲೈನ್ ತರಗತಿಗಳಿಗೆ ಸ್ಥಳಾಂತರಿಸಲಾಗಿದೆ. ಮನೆಗಳಿಗೆ 5 ಗಂಟೆಗಳ ಕಾಲ ಸರದಿಯಂತೆ ವಿದ್ಯುತ್ ಕಡಿತ ಮಾಡಲಾಗುತ್ತಿದ್ದು, ಸಿದ್ಧ ಉಡುಪು ರಫ್ತು ವಲಯಕ್ಕೆ ವಿದ್ಯುತ್ ಆದ್ಯತೆ ನೀಡಲಾಗಿದೆ.

ಈಜಿಪ್ಟ್

ಮಾರ್ಚ್ 28 ರಿಂದ ಅನ್ವಯವಾಗುವಂತೆ ಮಾಲ್ ಗಳು, ರೆಸ್ಟೋರೆಂಟ್ ಗಳು ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳನ್ನು ವಾರದ ದಿನಗಳಲ್ಲಿ ರಾತ್ರಿ 9 ಗಂಟೆಗೆ ಮುಚ್ಚಬೇಕು. ಸರ್ಕಾರಿ ಕಟ್ಟಡಗಳನ್ನು ಸಂಜೆ 6 ಗಂಟೆಗೆ ಮುಚ್ಚಬೇಕು. ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು ಬೆಳಗುವ ಜಾಹೀರಾತು ಫಲಕಗಳನ್ನು ಆರಿಸಲಾಗಿದೆ.

ಪಾಕಿಸ್ತಾನ

ಸರ್ಕಾರಿ ನೌಕರರಿಗೆ ವಾರದಲ್ಲಿ ನಾಲ್ಕು ದಿನಗಳ ಕೆಲಸ ಮತ್ತು ಶೇ. 50 ರಷ್ಟು 'ಮನೆಯಿಂದಲೇ ಕೆಲಸ'ದ ವ್ಯವಸ್ಥೆ ಮಾಡಲಾಗಿದೆ. ಶಾಲೆ ಮತ್ತು ಕಾಲೇಜುಗಳನ್ನು ಎರಡು ವಾರಗಳ ಕಾಲ ಮುಚ್ಚಲಾಗಿದೆ.ಸರ್ಕಾರಿ ಇಲಾಖೆಗಳಿಗೆ ನೀಡುವ ಇಂಧನ ಹಂಚಿಕೆಯನ್ನು ಶೇ. 50 ರಷ್ಟು ಕಡಿತಗೊಳಿಸಲಾಗಿದೆ.

ನ್ಯೂಜಿಲೆಂಡ್

ಮೋಟಾರು ಚಾಲಕರು ವಾರದಲ್ಲಿ ಒಂದು ದಿನ ಚಾಲನೆ ಮಾಡದ ದಿನವನ್ನು ತಾವೇ ಆಯ್ಕೆ ಮಾಡಿಕೊಳ್ಳುವ 1979ರ ಕಾಲದ ಕಾರು-ರಹಿತ ದಿನ ನೀತಿಯನ್ನು ಪುನಶ್ಚೇತನಗೊಳಿಸಲು ಸರ್ಕಾರ ಪರಿಗಣಿಸುತ್ತಿದೆ. ವಿಮಾನ ಇಂಧನದ ಹೆಚ್ಚಿನ ಬೆಲೆಯಿಂದಾಗಿ 'ಏರ್ ನ್ಯೂಜಿಲೆಂಡ್'ನ ಸುಮಾರು 1,100 ವಿಮಾನ ಪ್ರಯಾಣಗಳನ್ನು ರದ್ದುಗೊಳಿಸಲಾಗಿದ್ದು, ಇದರಿಂದ 44,000 ಪ್ರಯಾಣಿಕರಿಗೆ ತೊಂದರೆಯಾಗಿದೆ.

ದಕ್ಷಿಣ ಆಫ್ರಿಕಾ

ಇಂಧನವನ್ನು ಸಮಾನವಾಗಿ ವಿತರಿಸಲು ಮತ್ತು ಜನರು ಭಯದಿಂದ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದನ್ನು ತಡೆಯಲು ಖನಿಜ ಮತ್ತು ಪೆಟ್ರೋಲಿಯಂ ಸಂಪನ್ಮೂಲಗಳ ಇಲಾಖೆಯು ಉದ್ಯಮ ಮಟ್ಟದಲ್ಲಿ ನಿಯಂತ್ರಿತ ಹಂಚಿಕೆ ಕ್ರಮಗಳನ್ನು ಜಾರಿಗೆ ತಂದಿದೆ.



ಫಿಲಿಪಿನ್ಸ್

ಸರ್ಕಾರಿ ನೌಕರರಿಗೆ ವಾರದಲ್ಲಿ ನಾಲ್ಕು ದಿನಗಳ ಕೆಲಸದ ಅವಧಿಗೆ ಇಳಿಸಲಾಗಿದೆ. 'ಮನೆಯಿಂದಲೇ ಕೆಲಸ'ದ ಪದ್ಧತಿಯನ್ನು ಅಳವಡಿಸಿಕೊಳ್ಳಲು ಖಾಸಗಿ ವಲಯಕ್ಕೆ ಉತ್ತೇಜನ. ಸಾರ್ವಜನಿಕ ವಲಯದ ಅತ್ಯಗತ್ಯವಲ್ಲದ ಪ್ರಯಾಣಗಳ ಮೇಲೆ ನಿಷೇಧ.

ಭೂತಾನ್

ಸಂಗ್ರಹಣೆಯನ್ನು ತಡೆಯಲು ಜೆರ್ರಿ ಕ್ಯಾನ್ ಗಳಲ್ಲಿ ಇಂಧನ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.ಮನೆಯಿಂದಲೇ ಕೆಲಸ'ದ ಚೌಕಟ್ಟನ್ನು ಸಕ್ರಿಯಗೊಳಿಸಲಾಗಿದೆ.ತುರ್ತು ಸೇವೆಗಳಿಗೆ ಇಂಧನ ಪೂರೈಕೆಯಲ್ಲಿ ಆದ್ಯತೆ ನೀಡಲಾಗಿದೆ.

ಇರಾನ್ ಮೇಲೆ 3,000 ದಾಳಿ!

ಇರಾನ್ ವಿರುದ್ಧ ಆಪರೇಷನ್ ರೋರಿಂಗ್ ಲಯನ್ ಭಾಗವಾಗಿ ಇಸ್ರೇಲ್ ಸೇನೆಯೊಂದೇ ಈವರೆಗೆ 3,000 ಸ್ಥಳಗಳ ಮೇಲೆ ದಾಳಿ ನಡೆಸಿರುವುದಾಗಿ ಹೇಳಿದೆ. ಇತ್ತೀಚೆಗೆ ಇರಾನ್‌ನ ಖಂಡಾಂತರ ಕ್ಷಿಪಣಿ ಸಂಗ್ರಹಾಗಾರ ಮತ್ತು ಕ್ಷಿಪಣಿ ಉಡಾವಣಾ ಕೇಂದ್ರಗಳೂ ಸೇರಿ ಒಟ್ಟು 50 ಸ್ಥಳಗಳ ಮೇಲೆ ಇಸ್ರೇಲ್ ವಾಯುಪಡೆ (ಐಎಎಫ್) ನಡೆಸಿದೆ. ಸೋಮವಾರವೂ 10ಕ್ಕೂ ಹೆಚ್ಚು ಗುರಿಗಳ ಮೇಲೆ ಐಎಎಫ್ ವೈಮಾನಿಕ ದಾಳಿಯನ್ನು ನಡೆಸಿದೆ.

5 ದಿನಗಳಿಗೆ ದಾಳಿ ಮುಂದೂಡಿದ ಟ್ರಂಪ್? ಇರಾನ್ ವಿದ್ಯುತ್ ಸ್ಥಾವರಗಳು ಮತ್ತು ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವ ಯೋಜನೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 5 ದಿನಗಳ ಕಾಲ ಮುಂದೂಡಿದ್ದಾರೆ. ಆದರೆ ಇವುಗಳನ್ನು ಹೊರತುಪಡಿಸಿ ಇರಾನ್ ಮೇಲಿನ ಇತರ ಗುರಿಗಳ ಮೇಲಿನ ದಾಳಿಯನ್ನು ಅಮೆರಿಕ ಸೇನೆ ಮುಂದುವರಿಸಿದೆ. ಭಾರತೀಯ ಕಾಲಮಾನ ಸೋಮವಾರ ತಡರಾತ್ರಿ ಇರಾನ್ ಅಧಿಕಾರಿಗಳೊಂದಿಗಿನ ಮಾತುಕತೆ ಫಲಕಾರಿಯಾಗಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದರು. ಇರಾನ್ ವಿದ್ಯುತ್ ಸ್ಥಾವರ ಮತ್ತು ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು 5 ದಿನಗಳವರೆಗಷ್ಟೇ ತಡೆಹಿಡಿದಿದ್ದೇವೆ ಎಂದು ಅಮೆರಿಕ ನಿಯೋಗದ ಅಧಿಕಾರಿಗಳು ಹೇಳಿದ್ದಾರೆ. ಇರಾನ್ ಮೇಲಿನ ತನ್ನ ಎಪಿಕ್ ಫ್ಯೂರಿ ಕಾರ್ಯಾಚರಣೆಯನ್ನು ಅಮೆರಿಕ ಮಂಗಳವಾರವೂ ಮುಂದುವರಿಸಿದೆ.

ಶಾಂತಿ ಮಾತುಕತೆಗೆ ಶೆಹಬಾಜ್ ಮಧ್ಯಸ್ಥಿಕೆ

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಇರಾನ್ ಅಧ್ಯಕ್ಷ ಮಸೂದ್ ಪೆಝೆಷ್ಕಿಯನ್ ಅವರೊಂದಿಗೆ ಮಾತುಕತೆ ನಡೆಸಿ ಯುದ್ಧದ ಬಗ್ಗೆ ಶಾಂತಿ ಸ್ಥಾಪನೆಗೆ ಪಾಕಿಸ್ತಾನ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದಾರೆ. ಷರೀಫ್ ಅವರು ಪೆಝೆಷ್ಕಿಯನ್ ಅವರಿಗೆ ಪರ್ಷಿಯನ್ ಹೊಸ ವರ್ಷದ ಶುಭಾಶಯಗಳನ್ನು ಕೋರಿ, ಖಡಿ ಪ್ರದೇಶದ ಗಂಭೀರ ಪರಿಸ್ಥಿತಿ ಕುರಿತು ಚರ್ಚಿಸಿ, ಉದ್ವಿಗ್ನತೆ ತಗ್ಗಿಸಲು, ಸಂವಾದ ಮತ್ತು ರಾಜತಾಂತ್ರಿಕ ಮಾತುಕತೆಯ ತುರ್ತು ಅಗತ್ಯವಿದೆ ಎಂದು ಒಪ್ಪಿಕೊಂಡಿರುವುದಾಗಿ ತಿಳಿಸಿದ್ದಾರೆ.

ಮಾತುಕತೆಯ ನಡುವೆಯೂ ಮುಂದುವರಿದ ಕ್ಷಿಪಣಿ ದಾಳಿ

• **ದುಬೈ:** ಇಸ್ರೇಲ್‌ನ ಕೇಂದ್ರ ಟೆಲ್ ಅವಿವ್ ಮೇಲೆ ಕ್ಷಿಪಣಿ ದಾಳಿ ಮತ್ತು ಇರಾನ್‌ನ ನಿರಂತರ ಆಕ್ರಮಣಗಳ ನಡುವೆಯೂ, ಯುದ್ಧ ಕೊನೆಗೊಳಿಸಲು ಅಮೆರಿಕ ಇರಾನ್‌ನೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಮಾರುಕಟ್ಟೆ ಮೇಲೆ ಗಡುವು ವಿಸ್ತರಣೆ ಪ್ರಭಾವ: ಇರಾನ್‌ನ ವಿದ್ಯುತ್ ಕೇಂದ್ರಗಳ ಮೇಲೆ ವೈಮಾನಿಕ ದಾಳಿ ನಡೆಸುವುದಾಗಿ ಈ ಹಿಂದೆ ಎಚ್ಚರಿಕೆ ನೀಡಿದ್ದ ಅಧ್ಯಕ್ಷ ಟ್ರಂಪ್, ಹಾರ್ಮುಜ್ ಜಲಸಂಧಿಯನ್ನು ಹಡಗು ಸಂಚಾರಕ್ಕೆ ಮುಕ್ತಗೊಳಿಸಲು ಇರಾನ್‌ಗೆ ನೀಡಿದ್ದ ಗಡುವನ್ನು ವಿಸ್ತರಿಸಿದ್ದಾರೆ. ಈ ಐದು ದಿನಗಳ ಕಾಲಾವಕಾಶದಿಂದಾಗಿ ಕಚ್ಚಾ ತೈಲ ಬೆಲೆ ತಾತ್ಕಾಲಿಕವಾಗಿ ಪ್ರತಿ ಬ್ಯಾರೆಲ್‌ಗೆ 100 ಅಮೆರಿಕನ್ ಡಾಲರ್‌ಗಿಂತ ಕೆಳಕ್ಕೆ ಇಳಿದಿತ್ತು. ಆದರೆ ನಂತರ ಬ್ರೆಂಟ್ ಕ್ರೂಡ್ ಬೆಲೆ 104 ಡಾಲರ್‌ಗೆ ಏರಿಕೆಯಾಯಿತು. ಈ ವಿಳಂಬ, ವಿದ್ಯುತ್ ಜಾಲಗಳು ಮತ್ತು ನೀರಿನ ನಿರ್ಲವಣೀಕರಣ ಘಟಕಗಳ ಮೇಲಿನ ಸಂಭವನೀಯ ದಾಳಿಗಳ ಆತಂಕದಿಂದ ತಾತ್ಕಾಲಿಕ ಸಮಾಧಾನ ನೀಡಿದೆ.



ಪ್ರಾದೇಶಿಕ ಸಂಘರ್ಷ

ಶಾಂತಿ ಮಾತುಕತೆಗಳ ವರದಿಗಳನ್ನು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗೇರ್ ಕಾಲಿಬಾಫ್ ಸೇರಿದಂತೆ ಇರಾನ್ ಅಧಿಕಾರಿಗಳು ನಿರಾಕರಿಸಿದ್ದು, ತಪ್ಪು ಮಾಹಿತಿ ಎಂದು ಕರೆದಿದ್ದಾರೆ. ಈ ಮಧ್ಯೆ, ಇರಾನ್ ಮತ್ತು ಲೆಬನಾನ್ ವಿರುದ್ಧದ ದಾಳಿಗಳು ಮುಂದುವರಿಯಲಿವೆ, ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ರಷ್ಯಾ, ಓಮನ್ ಮತ್ತು ಪಾಕಿಸ್ತಾನ ಸೇರಿದಂತೆ ಹಲವು ರಾಷ್ಟ್ರಗಳ ಪ್ರತಿನಿಧಿಗಳೊಂದಿಗೆ ಸಂಘರ್ಷದ ಕುರಿತು ಚರ್ಚೆ ನಡೆಸಿದ್ದಾರೆ.

ಸೇನಾ ದಾಳಿ ಮತ್ತು ಸಾವು-ನೋವುಗಳು

ಮಂಗಳವಾರ ಮುಂಜಾನೆ ಇರಾನ್ ಹಾರಿಸಿದ ಹಲವು ಕ್ಷಿಪಣಿಗಳು ಇಸ್ರೇಲ್ ತಲುಪಿದ್ದು, 100 ಕೆಜಿ ತೂಕದ ಸ್ಫೋಟಕ ಹೊತ್ತ ಕ್ಷಿಪಣಿಯೊಂದು ಟೆಲ್ ಅವಿವ್ ರಸ್ತೆಗೆ ಅಪ್ಪಳಿಸಿ ನಾಲ್ವರು ಗಾಯಗೊಂಡಿದ್ದಾರೆ. ಲೆಬನಾನ್‌ನ ಬೈರುತ್ ಉಪನಗರಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ ಇಬ್ಬರು ಸಾವನ್ನಪ್ಪಿದ್ದಾರೆ. ಸೌದಿ ಅರೇಬಿಯಾ, ಇರಾನ್‌ನ 19 ಡ್ರೋನ್ ಗಳನ್ನು ಹೊಡೆದುರುಳಿಸಿರುವುದಾಗಿ ಹೇಳಿದೆ. ಕುವೈತ್‌ನಲ್ಲಿ ವಾಯು ರಕ್ಷಣಾ ವ್ಯವಸ್ಥೆಯ ಅವಶೇಷಗಳಿಂದಾಗಿ ವಿದ್ಯುತ್ ವ್ಯತ್ಯಯ ಉಂಟಾಗಿದೆ.

ಉದ್ವಿಗ್ನತೆಯ ಹಿನ್ನೆಲೆ

ಫೆಬ್ರವರಿ 28 ರಂದು ಪ್ರಾರಂಭವಾದ ಈ ಯುದ್ಧದಿಂದಾಗಿ ಇರಾನ್‌ನಲ್ಲಿ 1,500 ಕ್ಕೂ ಹೆಚ್ಚು ಮತ್ತು ಇಸ್ರೇಲ್‌ನಲ್ಲಿ 15 ಜನರು ಸಾವನ್ನಪ್ಪಿದ್ದಾರೆ. ಸಾವಿರಾರು ಅಮೆರಿಕನ್ ಮೆರೀನ್ ಸೈನಿಕರು ಈ ಪ್ರದೇಶದತ್ತ ಧಾವಿಸುತ್ತಿದ್ದು, ಖರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಊಹಾಪೋಹಗಳು ಎದ್ದಿವೆ. ಒಂದು ವೇಳೆ ಭೂಸೇನೆ ಆಕ್ರಮಣ ಮಾಡಿದರೆ ಪರ್ಷಿಯನ್ ಕೊಲ್ಲಿಯಲ್ಲಿ ಮೈನ್‌ಗಳನ್ನು ಅಳವಡಿಸುವುದಾಗಿ ಇರಾನ್ ಬೆದರಿಕೆ ಹಾಕಿದೆ.

ಯಾವುದೇ ಮಾತುಕತೆ ಇಲ್ಲ

ಈ ಮಧ್ಯೆ, ಅಮೆರಿಕ ಜತೆ ಯಾವುದೇ ಮಾತುಕತೆ ನಡೆದಿಲ್ಲ, ವಿತ್ತೀಯ ಮತ್ತು ತೈಲ ಮಾರುಕಟ್ಟೆಗಳನ್ನು ತಲ್ಲಣಗೊಳಿಸಲು ನಕಲಿ ಸುದ್ದಿಗಳನ್ನು ಹರಿಯಬಿಡಲಾಗುತ್ತಿದೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮದ್ ಬಘರ್ ಖಾಲಿಬಫ್ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.ಅಮೆರಿಕ ಕದನ ವಿರಾಮದ ಚಿಂತನೆ ನಡೆಸುತ್ತಿದ್ದರೂ, ಇಸ್ರೇಲ್ ಇರಾನ್ ಮತ್ತು ಲೆಬನಾನ್ ವಿರುದ್ಧ ಸಮರ ನಿರಂತರಗೊಳಿಸಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ. ಇರಾನ್ ಮಂಗಳವಾರವೂ ಇಸ್ರೇಲ್ ಮತ್ತು ಕೊಲ್ಲಿ ಅರಬ್ ರಾಷ್ಟ್ರಗಳ ಮೇಲೆ ಡ್ರೋನ್-ಕ್ಷಿಪಣಿ ದಾಳಿ ನಡೆಸಿದೆ. ಇಸ್ರೇಲ್‌ನ್ನು ಗುರಿಯಾಗಿಸಿ ಇರಾನ್ ಮೂರು ಸುತ್ತು ಕ್ಷಿಪಣಿ ದಾಳಿ ನಡೆಸಿದೆ ಎಂದು ಇಸ್ರೇಲ್‌ನ ಹೋಮ್ ಫ್ರಂಟ್ ಕಮಾಂಡ್ ತಿಳಿಸಿದೆ.

ಕಿರುಸುದ್ದಿ

ಜೈಶಂಕರ್, ರೂಬಿಯೊ ದೂರವಾಣಿ ಮಾತು

• **ಹೊಸದಿಲ್ಲಿ:** ಇರಾನ್ ವಿರುದ್ಧದ ಅಮೆರಿಕ-ಇಸ್ರೇಲಿ ಯುದ್ಧಕ್ಕೆ ಸಂಬಂಧಿಸಿದಂತೆ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಪರಿಸ್ಥಿತಿ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗೆ ಚರ್ಚಿಸಿದ್ದಾರೆ.ಮಧ್ಯಪ್ರಾಚ್ಯ ಯುದ್ಧದ ಬಗ್ಗೆ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ರೂಬಿಯೊ ಅವರೊಂದಿಗೆ ವಿವರವಾದ ಚರ್ಚೆ ನಡೆಸಿದ್ದೇನೆ. ಎಂದು ಜೈಶಂಕರ್ ಎಕ್ಸ್‌ನಲ್ಲಿ ಹೇಳಿದರು.

ಸೇನಾ ವಿಮಾನ ಪತನ 66 ಮಂದಿ ಸಾವು

• **ಕೊಲಂಬಿಯಾ:** ಸೇನಾ ವಿಮಾನವೊಂದು ಟೇಕ್ ಆಫ್ ಕೂಡಲೇ ಪತನಗೊಂಡು 66 ಮಂದಿ ಮೃತಪಟ್ಟಿರುವ ಘಟನೆ ದಕ್ಷಿಣ ಕೊಲಂಬಿಯಾದಲ್ಲಿ ನಡೆದಿದೆ. ಸೇನಾದಲ್ಲಿ 125 ಮಂದಿ ಪ್ರಯಾಣಿಸುತ್ತಿದ್ದು, ಇನ್ನುಳಿದ ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ದುರಂತ ಅಪಘಾತ ಅಮೆಜಾನ್ ಪ್ರದೇಶದಲ್ಲಿರುವ ಪುಟುಮಾಯೋ ಪ್ರಾಂತ್ಯದ ದೂರದ ಪಟ್ಟಣವಾದ ಪ್ಯೂರ್ಟೋ ಲೆಗುಇಜಾಮೋದಲ್ಲಿ ಸಂಭವಿಸಿದೆ.

ಇಡಿ ಅಧಿಕಾರಿಗಳಿಗೂ ಮೂಲಭೂತ ಹಕ್ಕಿದೆ

» ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಸುಪ್ರೀಂ ಚಾಟಿ

• **ಹೊಸದಿಲ್ಲಿ :** ಐ-ಪ್ಯಾಕ್ ಕಚೇರಿ ಮೇಲಿನ ಇಡಿ ದಾಳಿ ವೇಳೆ ಅಡ್ಡಿಪಡಿಸಿದ ಆರೋಪದ ಪ್ರಕರಣದಲ್ಲಿ, ಇಡಿ ಅರ್ಜಿಯ ಸಿಂಧುತ್ವ ಪ್ರಶ್ನಿಸಿದ ಪಶ್ಚಿಮ ಬಂಗಾಳ ಸರ್ಕಾರವನ್ನು ಸುಪ್ರೀಂ ಕೋರ್ಟ್ ಕಠಿಣವಾಗಿ ಪ್ರಶ್ನಿಸಿದೆ. 'ಇಡಿ ಅಧಿಕಾರಿಗಳಿಗೂ ಮೂಲಭೂತ ಹಕ್ಕುಗಳಿವೆ; ಅವರು ಅಧಿಕಾರಿಗಳೆಂಬ ಕಾರಣಕ್ಕೆ ನಾಗರಿಕತ್ವ ಕಳೆದುಕೊಳ್ಳುವುದಿಲ್ಲ' ಎಂದು ಕೋರ್ಟ್ ತೀಕ್ಷ್ಣವಾಗಿ ಹೇಳಿದೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಎನ್.ವಿ. ಅಂಜಾರಿಯಾ ಪೀಠ ವಿಚಾರಣೆ ನಡೆಸಿತು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪರ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ಇಡಿ ಅಧಿಕಾರಿಗಳು ಸಂವಿಧಾನದ 32ನೇ ವಿಧಿಯಡಿ ಅರ್ಜಿ ಸಲ್ಲಿಸಲು ಸ್ಪಷ್ಟವಾಗಿ ಮೂಲಭೂತ ಹಕ್ಕು ಉಲ್ಲಂಘನೆ ತೋರಿಸಬೇಕೆಂದು ವಾದಿಸಿದರು. 'ಕರ್ತವ್ಯ ನಿರ್ವಹಣೆಗೆ ಅಡ್ಡಿಯಾಗುವುದು ಮೂಲಭೂತ ಹಕ್ಕು ಉಲ್ಲಂಘನೆ ಅಲ್ಲ' ಎಂದರು. ಇದಕ್ಕೆ ಪ್ರತಿಯಾಗಿ ಕೋರ್ಟ್, 'ಮುಖ್ಯಮಂತ್ರಿಯೇ ತನಿಖೆಗೆ ಅಡ್ಡಿಯಾದರೆ, ಅದೇ ಸರ್ಕಾರದ ಬಳಿ ಪರಿಹಾರ ಕೇಳಬೇಕೇ?' ಎಂದು ಪ್ರಶ್ನಿಸಿತು. ಇದಕ್ಕೆ ಸಿಬಲ್, 'ಅಪರಾಧ ನಡೆದಿದೆ ಎಂದು ಊಹಿಸಬೇಡಿ' ಎಂದು ಉತ್ತರಿಸಿದರು. ಕೋರ್ಟ್ ತಕ್ಷಣ, 'ನಾವು ಊಹಿಸುತ್ತಿಲ್ಲ; ಅದು ಆರೋಪ. ಅದನ್ನು ಪರಿಶೀಲಿಸಬೇಕಿದೆ' ಎಂದು ಸ್ಪಷ್ಟಪಡಿಸಿತು.

ಪಾಕಿಸ್ತಾನ ವಿಶ್ವದ ಅತ್ಯಂತ ಮಾಲಿನ್ಯ ಹೊಂದಿದ ದೇಶ

» ಬಾಂಗ್ಲಾಗೆ ಎರಡನೇ ಸ್ಥಾನ
» ಆರನೇ ಸ್ಥಾನದಲ್ಲಿ ಭಾರತ

• **ಹೊಸದಿಲ್ಲಿ:** ವಿಶ್ವದಲ್ಲಿ ವಾಯುಮಾಲಿನ್ಯ ಗಂಭೀರ ಮಟ್ಟ ತಲುಪಿದ್ದು, ಪಾಕಿಸ್ತಾನವೇ ವಿಶ್ವದ ಅತ್ಯಂತ ಮಾಲಿನ್ಯ ಹೊಂದಿದ ದೇಶವಾಗಿದೆ ಎಂದು ಹೊಸದೊಂದು ವರದಿ ಬಹಿರಂಗಪಡಿಸಿದೆ. ಬಾಂಗ್ಲಾದೇಶ ಮತ್ತು ತಾಜಿಕಿಸ್ತಾನ್ ನಂತರದ ಸ್ಥಾನಗಳಲ್ಲಿ ಇದ್ದು, ಭಾರತ ಆರನೇ ಸ್ಥಾನದಲ್ಲಿದೆ. ಸ್ವಿಜರ್ಲೆಂಡ್‌ನ ವಾಯು ಗುಣಮಟ್ಟ ತಂತ್ರಜ್ಞಾನ ಸಂಸ್ಥೆ ಐಕ್ಯುಏರ್ ಈ ವರದಿ ಪ್ರಕಟಿಸಿದ್ದು, 143 ದೇಶಗಳ ಮಾಲಿನ್ಯ ಮಟ್ಟ ಅವಲೋಕಿಸಿದೆ. ಇನ್ನು ಚೀನಾ 20ನೇ ಸ್ಥಾನದಲ್ಲಿದ್ದು, ಅಮೆರಿಕಾ 120ನೇ ಮತ್ತು ಬ್ರಿಟನ್ 110ನೇ ಸ್ಥಾನದಲ್ಲಿವೆ. ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿದ ವಾರ್ಷಿಕ ಸರಾಸರಿ ಪಿಎಂ2.5 ಮಾನದಂಡವನ್ನು ಕೇವಲ 13 ದೇಶಗಳು ಪೂರೈಸಿವೆ. ಫ್ರೆಂಚ್ ಪಾಲಿನೇಶಿಯಾ, ಪ್ಯುರ್ಟೋ ರಿಕೋ, ಅಮೆರಿಕದ ವರ್ಜಿನ್ ದ್ವೀಪಗಳು, ಬಾರ್ಬಡೋಸ್, ನ್ಯೂ ಕ್ಯಾಲಿಡೋನಿಯಾ, ಐಸ್ಲ್ಯಾಂಡ್, ಬೆರ್ಮುಡಾ, ರಿಯೂನಿಯನ್, ಅಂಡೋರಾ, ಆಸ್ಟ್ರೇಲಿಯಾ, ಗ್ರೆನೇಡಾ, ಪನಾಮಾ ಮತ್ತು ಎಸ್ಟೋನಿಯಾ ಈ ಪಟ್ಟಿಯಲ್ಲಿ ಸೇರಿವೆ. ನಗರಗಳ ಮಟ್ಟದಲ್ಲಿ ಉತ್ತರ ಪ್ರದೇಶದ ಲೋನಿ ವಿಶ್ವದಲ್ಲೇ ಅತ್ಯಂತ ಮಾಲಿನ್ಯಗೊಂಡ ನಗರವಾಗಿದ್ದು, ಚೀನಾದ ಹೋಟಾನ್ ಮತ್ತು ಮೇಘಾಲಯದ ಬೈರ್ನಿಹಾಟ್ ನಂತರದ ಸ್ಥಾನಗಳಲ್ಲಿ ಇವೆ. ದಿಲ್ಲಿ ನಾಲ್ಕನೇ ಸ್ಥಾನದಲ್ಲಿದ್ದು, ಪಾಕಿಸ್ತಾನದ ಫೈಸಲಾಬಾದ್ ಐದನೇ ಸ್ಥಾನದಲ್ಲಿದೆ. ವಿಶ್ವದ ಅತ್ಯಂತ ಮಾಲಿನ್ಯಗೊಂಡ 25 ನಗರಗಳಲ್ಲಿ ಭಾರತ, ಪಾಕಿಸ್ತಾನ ಮತ್ತು ಚೀನಾದ ನಗರಗಳೇ ಹೆಚ್ಚಿನವುಗಳಾಗಿವೆ.

ಬಿಕ್ಕಟ್ಟಿನ ನಡುವೆಯೂ ಇಂಧನ ಪೂರೈಕೆ ಭರವಸೆ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿ ಉಲ್ಬಣಿಸಿರುವ ಪ್ರಾದೇಶಿಕ ಉದ್ವಿಗ್ನತೆಯ ನಡುವೆಯೂ ದೇಶದಲ್ಲಿ ಎಲ್‌ಪಿಜಿ, ಪೆಟ್ರೋಲ್ ಮತ್ತು ಡೀಸೆಲ್‌ನ ಸಾಕಷ್ಟು ಪೂರೈಕೆಯನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ಭರವಸೆ ನೀಡಿದೆ. ಇಂಧನ ದಾಸ್ತಾನುಗಳು ಸ್ಥಿರವಾಗಿರುವುದರಿಂದ ಸಾರ್ವಜನಿಕರು ಯಾವುದೇ ಕಾರಣಕ್ಕೂ ಪ್ಯಾನಿಕ್ ಬುಕಿಂಗ್ ಅಥವಾ ಅನಗತ್ಯ ಸಂಗ್ರಹಣೆಗೆ ಮುಂದಾಗಬಾರದು ಎಂದು ವಿನಂತಿಸಲಾಗಿದೆ.

ಪೂರೈಕೆ ಸರಪಳಿಯ ಸ್ಥಿರತೆ: ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ, ದೇಶಾದ್ಯಂತ ಎಲ್ಲಾ ಪ್ರಮುಖ ಇಂಧನಗಳ ಸಾಕಷ್ಟು ದಾಸ್ತಾನುಗಳನ್ನು ಪ್ರಸ್ತುತ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಪಶ್ಚಿಮ ಏಷ್ಯಾದ ಭೌಗೋಳಿಕ ರಾಜಕೀಯ ಪರಿಸ್ಥಿತಿ ಸರಬರಾಜಿನ ಮೇಲೆ ಸ್ವಲ್ಪ ಮಟ್ಟಿನ ಒತ್ತಡ ಉಂಟುಮಾಡಿದ್ದರೂ, ಯಾವುದೇ ವಿತರಣಾ ಕೇಂದ್ರಗಳಲ್ಲಿ ಇಂಧನದ ಕೊರತೆ ಅಥವಾ 'ಡ್ರೈ-ಔಟ್' ವರದಿಯಾಗಿಲ್ಲ. ಎಲ್ಲಾ ಗೃಹಬಳಕೆಯ ಗ್ರಾಹಕರಿಗೆ ಶೇ. 100 ರಷ್ಟು ಸಾಮರ್ಥ್ಯದಲ್ಲಿ ಪಿಎನ್‌ಜಿ ಪೂರೈಕೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕಾರ್ಯತಂತ್ರದ ಬಫರ್, ವಿತರಣಾ ನಿರ್ವಹಣೆ: ನಿರಂತರ ಲಭ್ಯತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಹೆಚ್ಚುವರಿ ಎಲ್‌ಪಿಜಿ ಸರಕುಗಳನ್ನು ಈಗಾಗಲೇ ಸಿದ್ಧಪಡಿಸಿ ಭಾರತಕ್ಕೆ ರವಾನಿಸಲಾಗಿದೆ. ಹಾರ್ಮುಜ್ ಜಲಸಂಧಿಯಂತಹ ಪ್ರಮುಖ ಇಂಧನ ಮಾರ್ಗಗಳಲ್ಲಿ ಉಂಟಾಗಬಹುದಾದ ಅಡೆತಡೆಗಳನ್ನು ಸಮರ್ಥವಾಗಿ ಎದುರಿಸಲು ಭಾರತ ಅಗತ್ಯ ಪೂರೈಕೆ ಯೋಜನೆಗಳನ್ನು ಹೊಂದಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.


ಎಐಎಡಿಎಂಕೆ ಪ್ರಣಾಳಿಕೆಯಲ್ಲಿ ಉಚಿತ ಫ್ರಿಡ್ಜ್!

• **ಚೆನ್ನೈ:** ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ (ಎಐಎಡಿಎಂಕೆ) ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಮಂಗಳವಾರ ಪ್ರಸಕ್ತ ವಿಧಾನಸಭಾ ಚುನಾವಣೆಗೆ ಪಕ್ಷದ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದರು. ಈ ಹಿಂದೆ, ಮೂರು ಕಂತುಗಳಲ್ಲಿ, ಅವರು 15 ಪ್ರಮುಖ ಭರವಸೆಗಳನ್ನು ಘೋಷಿಸಿದ್ದಾರೆ. ಸಂಪೂರ್ಣ ಪ್ರಣಾಳಿಕೆಯು ಈಗ 297 ಭರವಸೆಗಳನ್ನು ಹೊಂದಿದೆ. ರಾಜ್ಯದಲ್ಲಿ ಪಡಿತರ ಕಾರ್ಡುದಾರರಿಗೆ ಒಂದು ರೆಫ್ರಿಜರೇಟರ್ ಅನ್ನು ಉಚಿತವಾಗಿ ಒದಗಿಸಲಾಗುವುದು. ಇದಲ್ಲದೆ, ಈಗಾಗಲೇ ವಿತರಿಸಲಾಗಿರುವ ಉಚಿತ ಅಕ್ಕಿಯ ಜತೆಗೆ, ಒಂದು ಕೆ.ಜಿ. ಬೇಳೆ ಮತ್ತು ಒಂದು ಲೀಟರ್ ಅಡುಗೆ ಎಣ್ಣೆಯನ್ನು ಸಹ ಉಚಿತವಾಗಿ ಪೂರೈಸಲಾಗುವುದು. ಎಐಎಡಿಎಂಕೆ ಪ್ರಣಾಳಿಕೆಯು ಎಲ್ಲಾ ಕೃಷಿ ಉತ್ಪನ್ನಗಳಿಗೆ, ವಿಶೇಷವಾಗಿ ಆಹಾರ ಧಾನ್ಯಗಳು, ಬೇಳೆಕಾಳುಗಳು ಮತ್ತು ಎಣ್ಣೆಕಾಳುಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ನಿಗದಿಪಡಿಸುವ ಭರವಸೆ ನೀಡಿದೆ.

ವಿದೇಶೀಯರಿಗೆ ಇಲ್ಲಿ ಉದ್ಯೋಗಾವಕಾಶ ಲಭಿಸದಂತೆ ಎಚ್ಚರ ವಹಿಸಿ: ಭಾಗ್ವತ್

ನುಸುಳುಕೋರರನ್ನು ಪತ್ತೆಹಚ್ಚಿ ಅಧಿಕಾರಿಗಳಿಗೊಪ್ಪಿಸಿ

• **ಮಥುರಾ:** ಭಾರತದಲ್ಲಿ ಅಕ್ರಮ ವಲಸಿಗರ ಸಂಖ್ಯೆ ಮೇರೆ ಮೀರುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್, ಸೂಕ್ತ ನಿಗಾ ಮುಖೇನ ಅಕ್ರಮ ನುಸುಳುಕೋರರನ್ನು ಪತ್ತೆಹಚ್ಚಿ ಅಧಿಕಾರಿಗಳಿಗೊಪ್ಪಿಸಬೇಕು, ಅಕ್ರಮವಾಗಿ ವಲಸೆ ಬಂದ ವಿದೇಶೀಯರಿಗೆ ಇಲ್ಲಿ ಯಾವುದೇ ಉದ್ಯೋಗಾವಕಾಶ ಲಭಿಸದಂತೆ ಎಚ್ಚರ ವಹಿಸಬೇಕೆಂದು ಜನರಿಗೆ ಕರೆ ನೀಡಿದ್ದಾರೆ.



ಕನಿಷ್ಠ ಮೂರು ಮಕ್ಕಳ ನೀತಿ ಅನಿವಾರ್ಯ: ಸನಾತನ ಹಿಂದು ಸಂಸ್ಕೃತಿ-ಪರಂಪರೆ ಬೇರುಗಳು ಗಟ್ಟಿಯಾಗಬೇಕಾದರೆ, ಜನಾಂಗಗಳು,ಪೀಳಿಗೆಗಳು ಉಳಿಯಬೇಕಾದರೆ ಹಿಂದುಗಳು ಕನಿಷ್ಠಪಕ್ಷ ಮೂವರು ಮಕ್ಕಳನ್ನು ಹೊಂದುವ ನೀತಿಯನ್ನು ಅನುಸರಿಸುವುದು ಅನಿವಾರ್ಯ. ಜನಸಂಖ್ಯಾತಜ್ಞರೇ ಈ ಬಗ್ಗೆ ಎಚ್ಚರಿಸಿದ್ದಾರೆಂಬುದನ್ನು ನೆನಪಿಸಿದ ಭಾಗ್ವತ್‌ಜೀ, ಬಲವಂತದ ಮತೀಯ ಮತಾಂತರಗಳು ಸರಿಯಲ್ಲ, ಇದು ಸಾಮಾಜಿಕ ಸ್ವಾಸ್ಥ್ಯ, ಸಾಮರಸ್ಯ, ಸಹಬಾಳ್ವೆಗೆ ಧಕ್ಕೆ ಉಂಟು ಮಾಡುತ್ತದೆ. ಮಥುರಾದಲ್ಲಿ ಹೊಸ ಆಶ್ರಮವೊಂದನ್ನು ಉದ್ಘಾಟಿಸಿ ಸರಸಂಘಚಾಲಕ್ ಮಾತನಾಡಿದರು.

ಅಪಾಯ ಕಟ್ಟಿಟ್ಟ ಬುತ್ತಿ: ಸ್ವಸ್ಥ ಆರೋಗ್ಯಕರ ಕುಟುಂಬಕ್ಕಾಗಿ ವೈದ್ಯರು ಮೂವರು ಮಕ್ಕಳ ನೀತಿಯನ್ನು ಶಿಫಾರಸು ಮಾಡುತ್ತಾರೆ. ಬಾಲ್ಯದಲ್ಲಿ ಹಿರಿಯರು-ಕಿರಿಯರೊಂದಿಗೆ ಮಕ್ಕಳ ಬೆರೆಯುವಿಕೆಯು , ಮುಂದೆ ಸಾಮಾಜಿಕ ಕೌಶಲಗಳ ಕಲಿತುಕೊಳ್ಳಲು, ಸಮೂಹವೊಂದರೊಳಗೆ ಹೊಂದಾಣಿಕೆಯಿಂದ ಬಾಳುವ ಸಾಮರ್ಥ್ಯವನ್ನು ಮೈಗೂಡಿಸಲು ಮಕ್ಕಳಿಗೆ ನೆರವಾಗುತ್ತೆ. ಸಂತಾನೋತ್ಪತ್ತಿ ದರವು ಮೂರಕ್ಕಿಂತ ಕಡಿಮೆಯಾದಲ್ಲಿ ದೀರ್ಘಕಾಲೀನ ಅಪಾಯಗಳು ಕಟ್ಟಿಟ್ಟ ಬುತ್ತಿ ಎಂದು ಜನಸಂಖ್ಯಾ ಅಧ್ಯಯನಗಳು ಎಚ್ಚರಿಸಿವೆ. ಕಡಿಮೆ ಜನನ ಪ್ರಮಾಣವನ್ನು ಹೊಂದಿರುವ ರಾಷ್ಟ್ರಗಳು ಈಗಾಗಲೆ ಕನಿಷ್ಠ ಮೂರಕ್ಕಿಂತಲೂ ಅಧಿಕ ಮಕ್ಕಳನ್ನು ಹೊಂದುವ ನೀತಿಗೆ ಮೊರೆಹೋಗಿವೆ ಎಂದು ಭಾಗ್ವತ್ ಗಮನ ಸೆಳೆದರು.

ಜನಸಂಖ್ಯಾ ನೀತಿಯ ಮರುಪರಾಮರ್ಶೆ ಅಗತ್ಯ : ಭಾರತದ ಜನಸಂಖ್ಯಾ ನೀತಿಯ ಮರುಪರಿಶೀಲನೆ ಅಗತ್ಯವೆಂದು ಆಗ್ರಹಿಸಿದ ಭಾಗ್ವತ್, ಈ ವಿಚಾರದಲ್ಲಿ ಕಾನೂನು ಕ್ರಮಗಳನ್ನು ಅನುಷ್ಠಾನಿಸುವಾಗ , ಮೊದಲಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ತೀರಾ ಮುಖ್ಯವೆಂದು ಪ್ರತಿಪಾದಿಸಿದರು. ಸಮಾಜದ ಒಳಿತಿಗಾಗಿ ಒಂದು ಕುಟುಂಬ ಎರಡಕ್ಕಿಂತಲೂ ಮೂರು ಮಕ್ಕಳನ್ನು ಹೊಂದುವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಸಲಹೆಯಿತ್ತರು.

ಧರ್ಮಕ್ಕನುಸಾರ ಬದುಕು ಸನಾತನ ಭಾರತದ ಹಿರಿಮೆ: ಮೆರಿಕ, ಚೀನಾಗಳ ಆಕ್ರಮಣಕಾರಿ ಧೋರಣೆಯನ್ನು ಉಲ್ಲೇಖಿಸಿದ ಭಾಗ್ವತ್‌ಜೀ, ಈ ವಿಚಾರದಲ್ಲಿ ಇತರರ ಅಭಿಮತಗಳಿಗೂ ಅವಕಾಶವೀವ ಭಾರತದ ನಡೆ ಪ್ರಶಂಸಾರ್ಹ ಎಂದು ಹೊಗಳಿದರು. ತನ್ನ ಆರ್ಥಿಕ ಮಾದರಿ ಮಾತ್ರ ಶ್ರೇಷ್ಠ , ಎಲ್ಲರೂ ಇದನ್ನೇ ಅನುಸರಿಸಬೇಕೆಂದು ಅಮೆರಿಕ ಒತ್ತಡ ಹೇರಬಹುದು. ಚೀನಾ ಕೂಡ ಇದೇ ವರಸೆ ಹೊಂದಿರಬಹುದು. ಆದರೆತನ್ನ ಧೋರಣೆಯನ್ನು ಇತರರಿಗೆಹೇರದಿರುವುದು ಭಾರತದ ವಿಶೇಷತೆ. ಬದಲಾಗಿ ಪ್ರತಿಯೋರ್ವರ ಅಭಿಪ್ರಾಯಗಳೂ ಸರಿಯಾದ್ದೆಂಬುದು ಭಾರತದ ನಂಬುಗೆ ಮತ್ತು ಧರ್ಮ, ಸತ್ಯ ಹಾಗೂ ಸಾಂಸ್ಕೃತಿಕ ಹಿರಿಮೆಗನುಗುಣವಾಗಿ ಜೀವಿಸುವುದೆಂದರೆ ಹೀಗೇನೆ. ಜಗತ್ತು ಆಕ್ರಮಣಕಾರಿಯಾಗಿರಬಹುದು. ಆದರೆ ನಮ್ಮ ಸನಾತನ ಮಾದರಿಯು ನೈತಿಕ ಚಾರಿತ್ರ್ಯ, ಸನ್ನಡತೆಗಳನ್ನು ಎತ್ತಿ ಹಿಡಿಯುವಂತದ್ದು ಮತ್ತು ಇದು ಜಾಗತಿಕ ಸಮುದಾಯಕ್ಕೆ ಮಾರ್ಗದರ್ಶಿ ಕೂಡ ಎಂದು ಗಮನ ಸೆಳೆದರು.

ಬದುಕಿನ ಬಗ್ಗೆ ಜ್ಞಾನ ನೀಡುವ ಪ್ರಥಮ ಶಾಲೆ ಆಶ್ರಮ

ಬದುಕಿಗೊಂದು ದೃಷ್ಟಿಕೋನ ನೀಡುವಲ್ಲಿ, ವ್ಯಕ್ತಿಗೆ ಆತನ ಧರ್ಮ ಸಂಸ್ಕೃತಿಯ ಹಿರಿಮೆ ಬಗ್ಗೆ ಅಭಿಮಾನ ಮೂಡಿಸುವಲ್ಲಿ ಮತ್ತು ಆಕ್ರಮಣಕಾರಿ ಪ್ರವೃತ್ತಿಯನ್ನು ಮೊಟಕಿ ಹಾಕುವಲ್ಲಿ ಆಶ್ರಮಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಕಾರಣಗಳಿಂದಲೆ ಆಶ್ರಮ ಉದ್ಘಾಟನೆಗೆ ತಾನು ಸಂಪ್ರೀತಿಯಿಂದ ಬಂದಿರುವೆ. ಭಾರತೀಯ ಸಂಸ್ಕೃತಿಯಲ್ಲಿ ಆಶ್ರಮ ಪದಕ್ಕೊಂದು ವಿಶಿಷ್ಟತೆಯಿದೆ. ಇತರ ಯಾವುದೇ ಭಾಷೆಗಳಿಗೆ ಇದರ ಅರ್ಥಪೂರ್ಣ ತರ್ಜಿಮೆ ಅಸಾಧ್ಯ. ಬದುಕಿನ ಬಗ್ಗೆ ಮೊತ್ತಮೊದಲು ಜ್ಞಾನ ಬೋಧಿಸುವ ಪ್ರಥಮ ಶಾಲೆಗಳೇ ಆಶ್ರಮಗಳು. ಆಶ್ರಮಗಳಲ್ಲಿ ಅನುಶಾಸನಬದ್ಧರಾಗಿ ಜೀವಿಸಿ, ವಿದ್ಯಾರ್ಜನೆ ಮಾಡಿದವರು ಮುಂದೆ ದಶಕಗಳ ಕಾಲ ಅತ್ಯಂತ ಪರಿಣಾಮಕಾರಿಯಾಗಿ ಸಮಾಜ ಸೇವೆ ಮಾಡಬಲ್ಲರು ಎಂದರು.

ಪ್ರಧಾನಿಗೆ ಕರೆ ಮಾಡಿದ ಅಮೆರಿಕ ಅಧ್ಯಕ್ಷ

ಮಧ್ಯಪ್ರಾಚ್ಯ ಬಿಕ್ಕಟ್ಟು ಟ್ರಂಪ್- ಮೋದಿ ಚರ್ಚೆ

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆ, ಶಾಂತಿ ಸ್ಥಾಪನೆ ಮತ್ತು ಉದ್ವಿಗ್ನತೆ ಇಳಿಕೆಗೆ ಭಾರತ ಒತ್ತು ನೀಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆ ದೂರವಾಣಿ ಮಾತುಕತೆ ನಡೆಸಿದ ಬಳಿಕ ಅವರು ಈ ಮಾತು ಹೇಳಿದ್ದಾರೆ.

ಜಾಗತಿಕ ಸಾಗಾಟದ ಪ್ರಮುಖ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿ ಭದ್ರತೆ ಹಾಗೂ ಮುಕ್ತ ಸಂಚಾರವೇ ಈ ಮಾತುಕತೆಯ ಕೇಂದ್ರಬಿಂದುವಾಗಿತ್ತು. ವಿಶ್ವ ವ್ಯಾಪಾರದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ಈ ಜಲಸಂಧಿ ಯಾವ ಪರಿಸ್ಥಿತಿಯಲ್ಲೂ ಮುಕ್ತವಾಗಿಯೇ ಇರಬೇಕು ಎಂಬುದರ ಕುರಿತು ಇಬ್ಬರು ನಾಯಕರು ಸಹಮತ ವ್ಯಕ್ತಪಡಿಸಿದರು.

ಅಮೆರಿಕ ಅಧ್ಯಕ್ಷ ಟ್ರಂಪ್ ಈ ಕರೆ ಮಾಡಿದ್ದು, ಇರಾನ್ ಹಾರ್ಮುಜ್ ಜಲಸಂಧಿಯನ್ನು ಮರುತೆರೆಯಲು ನೀಡಿದ್ದ ಗಡುವನ್ನು ಐದು ದಿನಗಳವರೆಗೆ ವಿಸ್ತರಿಸಿದ ಹಿನ್ನೆಲೆಯಲ್ಲಿ ಈ ಚರ್ಚೆ ನಡೆದದ್ದು ಗಮನಾರ್ಹವಾಗಿದೆ.

'ಟ್ರಂಪ್ ಅವರಿಂದ ಕರೆ ಬಂದಿದೆ. ಮಧ್ಯಪ್ರಾಚ್ಯದ ಪರಿಸ್ಥಿತಿ ಕುರಿತು ಉಪಯುಕ್ತವಾದ ಚರ್ಚೆ ನಡೆದಿದೆ. ಭಾರತವು ಉದ್ವಿಗ್ನತೆ ಕಡಿತ ಮತ್ತು ಶೀಘ್ರ ಶಾಂತಿ ಸ್ಥಾಪನೆಗೆ ಬೆಂಬಲ ನೀಡುತ್ತದೆ. ಹಾರ್ಮುಜ್ ಜಲಸಂಧಿ ವಿಶ್ವಕ್ಕೆ ಮುಕ್ತ, ಸುರಕ್ಷಿತ ಮತ್ತು ಸುಲಭ ಪ್ರವೇಶಯೋಗ್ಯವಾಗಿರಬೇಕು,' ಎಂದು ಮೋದಿ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಉಪಕಾರಾಗೃಹದಲ್ಲಿ ಭದ್ರತಾ ಲೋಪ

ವಿಚಾರಣಾಧೀನ ಕೈದಿ ಪರಾರಿ: ಮತ್ತೆ ವಶಕ್ಕೆ

ಗೋಕಾಕ: ನಗರದಲ್ಲಿ ಇರುವ ಉಪಕಾರಾಗೃಹದಲ್ಲಿ ಭದ್ರತಾ ಲೋಪವಾಗಿದ್ದು, ಚಿಕ್ಕೋಡಿ ನ್ಯಾಯಾಲಯದ ಆದೇಶದಂತೆ ಜೈಲು ಸೇರಿದ್ದ ಕೈದಿಯೊಬ್ಬ ಕಾರಾಗೃಹ ಗೋಡೆ ಏರಿ ಪರಾರಿಯಾಗಿ ಸಾರ್ವಜನಿಕರಿಂದ ಮತ್ತೆ ಕಂಬಿ ಎಣಿಸುವಂತಾಗಿದೆ.

ಚಿಕ್ಕೋಡಿ ತಾಲೂಕಿನ ಉಮರಾಣಿ ಗ್ರಾಮದ ರಾಘವೇಂದ್ರ ಅಲಿಯಾಸ್ ರಘು ಶಿವಗೌಡ ಕರೆಣ್ಣವರ ಎಂಬ ವಿಚಾರಣಾಧೀನ ಕೈದಿ ಚಿಕ್ಕೋಡಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 84/2026 ರ ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೊಳಗಾಗಿ ಮಾರ್ಚ್ 22ರಂದು ಗೋಕಾಕ ಜೈಲು ಸೇರಿದ ಕೆಲವೇ ಗಂಟೆಗಳಲ್ಲಿ ಸೋಮವಾರ ಗೋಕಾಕ ಕಾರಾಗೃದದ ಮುಂಭಾಗದ ಕಾಂಪೌಂಡ್ ಪಕ್ಕದಲ್ಲಿದ್ದ ಎಕ್ಕಿ ಗಿಡವನ್ನೇರಿ, ಬಳಿಕ ಮರದ ಕಟ್ಟಿಗೆಯ ಸಹಾಯದಿಂದ ಹಿಂಬದಿಯ ಕಾಂಪೌಂಡ್ ಗೋಡೆ ಜಿಗಿದು ಎಲ್‌ಇಟಿ ಕಾಲೇಜು ರಸ್ತೆಯ ಮೂಲಕ ಪರಾರಿಯಾಗಿದ್ದನು.

ಕಾರಾಗೃಹದಿಂದ ಪರಾರಿಯಾಗಿದ್ದ ವಿಚಾರಣಾಧೀನ ಕೈದಿ ಯರಗಟ್ಟಿಗೆ ತಲುಪಿದ್ದ ಆರೋಪಿಯ ಬಗ್ಗೆ ಅಲ್ಲಿನ ಸ್ಥಳೀಯರಿಗೆ ಸಂಶಯ ಬಂದು ಯರಗಟ್ಟಿ ಪೊಲೀಸರಿಗೆ ಮಾಹಿತಿ ನೀಡಿದ್ದು, ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಸಾರ್ವಜನಿಕರ ಜಂಟಿ ಕಾರ್ಯಾಚರಣೆಯ ಫಲವಾಗಿ ಪರಾರಿಯಾಗಿದ್ದ ರಾಘವೇಂದ್ರನನ್ನು ವಶಕ್ಕೆ ಪಡೆದು ಮತ್ತೆ ಜೈಲಿಗೆ ಒಪ್ಪಿಸಿದ್ದಾರೆ.

ವಿಚಾರಣಾಧೀನ ಕೈದಿ ರಾಘು ಪರಾರಿ ಕುರಿತು ಮತ್ತು ಭದ್ರತಾ ಲೋಪದ ಕುರಿತು ಗೋಕಾಕ ನಗರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

ಕೆಕೆಆರ್‌ಟಿಸಿ ಬಸ್ ಡಿಕ್ಕಿ: ಮಹಿಳೆ ಸಾವು, ಕುಟುಂಬಸ್ಥರ ಆಕ್ರೋಶ

ಕಲಬುರಗಿ: ನಗರದಲ್ಲಿನ ಕೇಂದ್ರ ಬಸ್ ನಿಲ್ದಾಣದಲ್ಲಿ ನಡೆದ ದುರ್ಘಟನೆಯಲ್ಲಿ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ಸೋಮವಾರ ನಡೆದಿದೆ. ಅಫಜಲಪುರ ತಾಲೂಕಿನ ಹೇರೂರು (ಬಿ) ಗ್ರಾಮದ ನಿವಾಸಿ ಮಹಾದೇವಿ ಶೇಕಪ್ಪ (58) ಮೃತಪಟ್ಟವರು. ಅವರು ಕಲಬುರಗಿಯಲ್ಲಿ ತಮ್ಮ ಮಗಳ ಮನೆಯಲ್ಲಿ ವಾಸ್ತವ್ಯ ಹೂಡಿದ್ದು, ವಾಪಸ್ ತಮ್ಮ ಊರಿಗೆ ತೆರಳಲು ಬಸ್ ಹತ್ತಲು ಬಂದಿದ್ದರು. ಈ ವೇಳೆ ವೇಗವಾಗಿ ಬಂದ ಕೆಕೆಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಮಹಾದೇವಿ ಕೆಳಗೆ ಬಿದ್ದಿದ್ದು, ಅವರ ಕಾಲಿನ ಮೇಲೆ ಬಸ್ ಹರಿದಿದೆ ಎಂದು ತಿಳಿದುಬಂದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ತಕ್ಷಣ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಜಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಘಟನೆಯ ಬಳಿಕ ಬಸ್ ಚಾಲಕರ ನಿರ್ಲಕ್ಷ್ಯಕ್ಕೆ ಆಕ್ರೋಶಗೊಂಡ ಮೃತರ ಕುಟುಂಬಸ್ಥರು, ಬಸ್ ಡಿಪೋ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು. ಈ ಸಂಬಂಧ ಕಲಬುರಗಿ ಟ್ರಾಫಿಕ್-01 ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

CHANGE OF NAME

I, KHWAJAHUSAIN ALLABAKSH BAGEWADI (My Old Name) Resident of H No: 328/D Ward No 2, Pendari Galli, Near Panka Masjid, Bagalkot, Karnataka 587101, have changed my name as **KHWAJAHUSAIN BAGEWADI** (My New Name) for all purposes affidavit Dtd.: 24-03-2026 sworn before notary **M C Hiremath**.

CHANGE OF NAME

I, **JAYARUL ISLAM SEKHA** (old name) Resident of W No: 6 Near Farukya Masjid Nadaf Galli Halapeth, Bagalkot, Karnataka - 587101, have changed my name as **JIYARUL ISLAM SEKH** (new name) henceforth I will be called and recognized by new name for all future purposes, dated: 24/03/2026.

CHANGE OF NAME

I, **NITINKUMR APPASAHEB PATIL** (old name) Resident of 5/84, Laxmi Nivas Pattankudi, Chikodi Belagavi, have changed my name as **NITINKUMAR APPASAHEB PATIL** (new name) henceforth I will be called and recognized by new name for all future purposes, dated: 24/03/2026.

CHANGE OF NAME

I, **H H HUNNUR** have my changed my minor child name from **RUKSANA HUNNUR** (old name) To **RUKSANA HUSENSAB HUNNUR** (new name) Resident of No 1 Jumma Masjid At Boodanur, Post: Salahalli, Tq: Ramadurg, Belagavi - 591130, Karnataka, henceforth I will be called and recognized by new name for all future purposes, dated: 24/03/2026.

CHANGE OF NAME

I, **H H HUNNUR** have my changed my minor child name from **HABIBULLA** (old name) To **HABIBULLA HUSENSAB HUNNUR** (new name) Resident of No 1 Jumma Masjid At Boodanur, Post: Salahalli, Tq: Ramadurg, Belagavi - 591130, Karnataka, henceforth I will be called and recognized by new name for all future purposes, dated: 24/03/2026.

CHANGE OF NAME

I, **DARSHANA BALAKRISHNA DESAI** (old name) Resident of 1525/A, Jagawada, Nagphond, Sadashivgad, Karwar, District: Uttara Kannada, State: Karnataka, Pin Code: 581352, have changed my name as **KARISHMA KISHOR DESAI** (new name) henceforth I will be called and recognized by new name for all future purposes, dated: 24/03/2026.

CHANGE OF NAME

I, **MOHAMMED ISMAIL** (my old name), **MOHAMMED ALI KALADAGI** (My Father Old Name) Resident of House No. 409, Ward No. 02, Near Pankha Masjid, Pendar Galli, Bagalkot 587101 District Bagalkot. State Karnataka, have changed my name as **MOHAMMED ISMAIL KALADGI** (My New Name) My Father New Name **MOHAMMAD ALI** for all purposes affidavit Dtd.: 23-03-2026 sworn before notary **M C Hiremath**.

ಕ್ರಿ.ಮಿ. ನಂ. 40/2026

ಮಾನ್ಯ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ

ನೋಟಿಸು

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ತನ್ನ ತಾಯಿಯವರಾದ ಶ್ರೀಮತಿ ಶಾರವ್ವ ಕೋಂ. ಗುರುನಾಥರಡ್ಡಿ ಇನಾಮತಿ ಇವರು ದಿ: 28-01-2022 ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕ ಮಲ್ಲಿಗವಾಡ ಗ್ರಾಮದ ಮನೆಯಲ್ಲಿ ಫೋತಿಯಾಗಿದ್ದು ಇರುತ್ತದೆ ಅಂತಾ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಈ ಕುರಿತು ಸಾರ್ವಜನಿಕರದು ಯಾರದಾದರೂ ಯಾವುದೇ ರೀತಿಯ ತಂಟೆ ತಕರಾರು ವಗೈರೆ ಇದ್ದಲ್ಲಿ ದಿನಾಂಕ 27-04-2026 ರಂದು ಬೆಳಿಗ್ಗೆ 10-30 ಗಂಟೆಗೆ ಮುದ್ದತ್ತನ್ನು ಈ ನ್ಯಾಯಾಲಯದಲ್ಲಿ ನೇಮಿಸಿದ್ದು ಆ ದಿವಸ ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರ ತಕರಾರು ಸಲ್ಲಿಸಬೇಕು, ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವುದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನ ದಿ:24-03-2026 ರಂದು ಕೊಡಲ್ಪಟ್ಟಿತು.

ಕೋರ್ಟ ಮೊಹರು

ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು
ಮಾನ್ಯ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ

ಹುಬ್ಬಳ್ಳಿ
ದಿ:24-03-2026
(ಜ.ಡಿ.ಜಂಂತ್ಲಿ)
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ.

ಕ್ರಿ.ಮಿ.ನಂ : 76/2026

ಬ್ಯಾಡಗಿ ಸಿವ್ಹಿಲ್ ಜಡ್ಜ್ ಹಾಗೂ ಜೆ.ಎಮ್.ಎಫ್.ಸಿ. ಇವರ ನ್ಯಾಯಾಲಯಕ್ಕೆ

ಅರ್ಜಿದಾರರು: 1) ಶ್ರೀಮತಿ ವಿಜಯಲಕ್ಷ್ಮೀ ಕೋಂ ಬಸವರಾಜ ಹಾಗೂ ಇನ್ನೊಬ್ಬರು

ವಿರುದ್ಧ

ಎದುರುಗಾರರು: 1) ಜನನ ಮರಣ ನೋಂದಣಾಧಿಕಾರಿಗಳು ತಹಶೀಲ್ದಾರರು.ಬ್ಯಾಡಗಿ ಹಾಗೂ ಇನ್ನೊಬ್ಬರು.

ಈ ದಿವಸ ದಿನಾಂಕ 4ನೇ ಮಾರ್ಚ-2026 ರಂದು ತಮ್ಮ ಸಹಿ ಹಾಗೂ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.

ನ್ಯಾಯಾಲಯದ ಆದೇಶ ಮೇರೆಗೆ
ಸಹಿ/-ಶಿರಸ್ತೇದಾರರು
ಸಿವ್ಹಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯ, ಬ್ಯಾಡಗಿ

ಸಹಿ/- ಶ್ರೀಮತಿ ಎಮ್.ಹೆಚ್.ಜಗಳೆ
ಅರ್ಜಿದಾರರ ಪರ ನ್ಯಾಯವಾದಿಗಳು, ಬ್ಯಾಡಗಿ

ಕ್ರಿಮಿನಲ್ ಮಿಸಲೇನಿಯಸ್ ನಂ.108/2026

ಮಾನ್ಯ ಜೆ.ಎಮ್. ಎಫ್.ಸಿ. ನರಗುಂದ ಇವರ ನ್ಯಾಯಾಲಯ

ಅರ್ಜಿದಾರ: ಪ್ರಭಾಕರ ತಂ. ಮೆಹಗೇರಪ್ಪ ಪತ್ತಾರ

ವಿರುದ್ಧ

ಎದುರುಗಾರ: ಜನನ-ಮರಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ ನರಗುಂದ.

ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ದಿವಸ ದಿ: 18-03-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.

ನರಗುಂದ
18-03-2026

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ

(ಎಮ್ ಜಿ ಕುಲಕರ್ಣಿ)
ಅರ್ಜಿದಾರರ ಪರ ವಕೀಲರು, ವಿನಾಯಕ ನಗರ ನರಗುಂದ.

ಕ್ರಿಮಿನಲ್ ಮಿಸಲೇನಿಯಸ್ ನಂ:109/2026

ಮಾನ್ಯ ಜೆ ಎಂ ಎಫ್ ಸಿ ನರಗುಂದ ಇವರ ನ್ಯಾಯಾಲಯ

ಅರ್ಜಿದಾರರು :1) ಮಂಜುಳಾ ಕೋಂ ಮಲ್ಲಪ್ಪ ಕುರಿ ಮತ್ತು ಇತರರು

ವಿರುದ್ಧ

ಎದುರುದಾರರು : ಜನನ-ಮರಣ ನೋಂದಣಾಧಿಕಾರಿಗಳು, ಪುರಸಭೆ ನರಗುಂದ

ಈ ದಿವಸ ದಿ:18-03-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.

ನರಗುಂದ
17-03-2026

ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ

ಅರ್ಜಿದಾರರ ಪರ ವಕೀಲರು,
ಶಿ ಎಸ್ ಪಾಟೀಲ ವಕೀಲರು ನರಗುಂದ.

IN THE COURT OF THE 5th ADDITIONAL CIVIL JUDGE & JMFC AT BALLARI

Crl. M.C. No. 64/2026

Between:-1) VEERESH S/O LATE HONNURAPPA aged about 52 years R/o ward No.2, near Kollapuram Temple Sindegeri village, Kurugodu taluk, Ballari District.

2)HARIJANA MUKAMMA W/O HARIJANA NAGAPPA, aged about 55 years, both are R/o ward No.1, S.C. colony, Halekote village, Siruguppa taluk, Ballari District.

...Petitioners

And

The register of Birth & Death's Register Thasildhar, Taluk office, Kurugodu

..Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's mother by namely HULIGEMMA W/O LATE HONNURAPPA was died on 02-06-1998 at Sindhigeri village, Kurugodu taluk, Ballari District in the above mentioned address.

Therefore, If any persons are interested you are hereby directed to appear in this court in person or by a pleader duly instructed on 29-04-2026 at about 11.00 a.m to show cause against the above suit failing which the suit will be heard and determined ex-parte against you.

Given under my hand and seal of the court on this 24th day March-2026

By Order of the court.
Shirestedar,
5th Addl Civil Judge and JMFC
Ballari.

H.Mallikarjuna
Advocate for the petitioner

IN THE COURT OF THE 5th ADDITIONAL CIVIL JUDGE & JMFC AT BALLARI

Crl. M.C. No. 63/2026

Between:-1) VEERESH S/O LATE HONNURAPPA aged about 52 years R/o ward No.2, near Kollapuram Temple Sindegeri village, Kurugodu taluk, Ballari District

2)HARIJANA MUKAMMA W/O HARIJANA NAGAPPA, aged about 55 years, both are R/o ward No.1, S.C. colony, Halekote village, Siruguppa taluk, Ballari District.

...Petitioners

And

The register of Birth & Death's Register Thasildhar, Taluk office, Kurugodu

..Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's father by namely HONNURAPPA S/O LATE BASAMMA was died on 01-06-1987 at Sindhigeri village, Kurugodu taluk, Ballari District in the above mentioned address.

Therefore, If any persons are interested you are hereby directed to appear in this court in person or by a pleader duly instructed on 29-04-2026 at about 11.00 a.m to show cause against the above suit failing which the suit will be heard and determined ex-parte against you.

Given under my hand and seal of the court on this 24th day March-2026

By Order of the court.
Shirestedar,
5th Addl Civil Judge and JMFC
Ballari.

H.Mallikarjuna
Advocate for the petitioner

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 281/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 282/2026

ಅರ್ಜಿದಾರರು: ಕುರುಕಾಣಿ ಸಿದ್ಧಿಂಗಪ್ಪ ತಂದೆ ದಿ.ಕುರುಕಾಣಿ ನಾಗಪ್ಪ ವಯಸ್ಸು 42 ವರ್ಷ, ಸಾ|| ಬಾವಿಹಳ್ಳಿ, ಹೋಳಗುಂದಿ ಅಂಚೆ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ.

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರು ತನ್ನ ಕುಟುಂಬದ ಹಿರಿಯರ ಮರಣದಿನಾಂಕದ ವಿವರ.

1.ಹೆಸರು: ಕುರುಕಾಣಿ ವಿರುಪಾಕ್ಷಪ್ಪ ತಂದೆ ಕುರುಕಾಣಿ ಮುದುಕಪ್ಪ , ಸಂಬಂಧ: ಅಜ್ಜ, ಮರಣ ದಿನಾಂಕ: 04-10-1975, ಸ್ಥಳ: ಬಾವಿಹಳ್ಳಿ

2.ಹೆಸರು: ಕುರುಕಾಣಿ ಹಂಪಮ್ಮ ಗಂಡ ವಿರುಪಾಕ್ಷಪ್ಪ, ಸಂಬಂಧ: ಅಜ್ಜಿ, ಮರಣ ದಿನಾಂಕ:01-08-1980, ಸ್ಥಳ: ಬಾವಿಹಳ್ಳಿ

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 20-05-2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕಪಕ್ಷೀಯ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 04-03-26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ

ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ,

ಸಹಿ/- ಶ್ರೀ ಮಣ್ಣುವಿನಗೌಡ. ಎ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ,

ಎಫ್.ಡಿ.ಪಿ. ನಂಬರ 26/2025

ಮೇ|| ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾದಾಮಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :1) ಶ್ರೀಮತಿ. ಕೆನಾಲವ್ವ ಗಂಡ ಹನಮಪ್ಪ ಕೇಲಾವಿ. ಸಾ||#102. 1ನೇ ವಾರ್ಡ, ತಾಯಮ್ಮನ ಗುಡಿ ಹತ್ತಿರ ಕಜ್ಜಿಡೋಣಿ, ತಾಲೂಕ ಮತ್ತು ಜಿಲ್ಲಾ ಬಾಗಲಕೋಟ.

ವಿರುದ್ಧ

ಎದುರುದಾರರು : 1) ವಿಠ್ಠಲ ತಂದೆ ಹನಮಂತಪ್ಪ ಪೂಜಾರ,

ಇಂದು ದಿನಾಂಕ 24/3/2026ರಂದು ಮೇ: ನ್ಯಾಯಾಲಯದ ಆದೇಶ ಮತ್ತು ಮೋಹರಿನೊದಿಗೆ ಕೊಡಲ್ಪಟ್ಟಿರುತ್ತದೆ.

ಸ್ಥಳ: ಬಾದಾಮಿ
ದಿನಾಂಕ :18-3-26

ಮೇ:ನ್ಯಾಯಾಲಯದ ಆದೇಶ
ಸಹಿ/-ಮೇ:ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಬಾದಾಮಿ

ವಾದಿಯರ ಪರ ವಕೀಲರು
ಸಹಿ/-ಎಸ್. ಎಮ್. ದ್ಯಾವಣ್ಣವರ ವಕೀಲರು, ಬಾದಾಮಿ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ

ಕ್ರಿಮಿನಲ್ ಸಂಖ್ಯೆ : 36/2026

ಅರ್ಜಿದಾರರು: ಶ್ರೀ ಹೆಚ್. ಪಾಲನಗೌಡ ತಂದೆ ಅಂದನಗೌಡ ವಯಸ್ಸು 45 ವರ್ಷ, ಸಾ|| ಕೊಯಿಲಾರಗಟ್ಟಿ ಹೂವಿನಹಡಗಲಿ ತಾ|| ವಿಜಯನಗರ ಜಿ||

ವಿರುದ್ಧ

ದಿನಾಂಕ: 24/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.

ಸಹಿ/-ಶ್ರೀ. ಕೆ.ಚಂದ್ರಪ್ಪ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕ್ರಿಮಿನಲ್ ಮಿಸಲೇನಿಯಸ್: 59/2026

ಈ ಹೊತ್ತು ದಿನಾಂಕ: 24-03-2026 ರಂದು ನನ್ನ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತು.

ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/- ಶಿರಸ್ತೆದಾರ
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ ಕುಂದಗೋಳ

ಶ್ರೀ ಆರ್.ಎನ್.ಕಮತದ
ಅರ್ಜಿದಾರರ ಪರ ವಕೀಲರು, ಕುಂದಗೋಳ

ಓ. ಹಾಗು ಎಸ್.ಸಿ. ಸಂಖ್ಯೆ: 03/2026

ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಹಗರಿಬೊಮ್ಮನಹಳ್ಳಿ, ಸಿಟ್ಟಿಂಗ್ ಅಟ್ ಹೂವಿನಹಡಗಲಿ.

ಅರ್ಜಿದಾರರು:1) ಶ್ರೀಮತಿ ಕೆ.ಜಯಮ್ಮ ಗಂಡ ಲೇ|| ಆರ್.ಎಲ್.ಹೀರಾನಾಯ್ಕ, ವಯಸ್ಸು 50 ವರ್ಷ. ಸಾ|| ಕೊಮಾರನಹಳ್ಳಿ ತಾಂಡ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ದಿನಾಂಕ: 06/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಶಿರಸ್ತೆದಾರರು
ಹಿರಿಯ ಶ್ರೇಣಿ ನ್ಯಾಯಾಧೀಶರ ನ್ಯಾಯಾಲಯ & ಜೆ.ಎಂ. ಎಫ್.ಸಿ., ಹೆಚ್.ಬಿ.ಹಳ್ಳಿ/ಹೂವಿನಹಡಗಲಿ.

ಶ್ರೀ ಹೆಚ್.ನಾಗೇಶ್
ಅರ್ಜಿದಾರರ ಪರ ವಕೀಲರು ಹೂವಿನಹಡಗಲಿ

O. S. No. 112/2025
IN THE COURT OF THE HON'BLE ADDL. CIVIL JUDGE, MUDHOL AT : MUDHOL

BETWEEN:

Plaintiff : 1) Smt. Tulasavva D/o. Gopal Lamani @ Goudar

Defendants :1) Shri. Keshav s/o. Bhirappa Lamani @ Goudar And others

To,

Defendant No 3 :Shri. Hemant Sharma Age : 50 years, Occ: Agri.,R/o. Mudhol, Tq: Mudhol. Dist : Bagalkote.

SUIT SUMMONS

WHEREAS, the plaintiff has filed the top noted suit seeking the relief of declaration and permanent injunction in respect of the suit property against you and other defendants. The hon'ble court was pleased to issue suit summons to the defendant no.3/you through process server and also by Registered Post AD on last occasions but you are avoiding the same. Therefore, you are hereby called upon to appear before the court either in person or through pleader duly instructed to answer the claim of the plaintiff on 03/06/2026 at 11 A.M. failing which the matter will be heard and adjudicated in your absence placing you ex-parte.

Given under the hand and seal of the court on this the 16_day on marach 2026.

By Order of the Court
Shirastedar (ADM)
Addl. Civil Judge Court, Mudhol.

M. S. Kuri
Advocate for Plaintiff

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ

ಕ್ರಿಮಿನಲ್ ಸಂಖ್ಯೆ : 159/2026
ಕ್ರಿಮಿನಲ್ ಸಂಖ್ಯೆ : 160/2026

ಅರ್ಜಿದಾರರು: ಶ್ರೀ ಕೊಟ್ರಪ್ಪ ಪಿ. ವಯಸ್ಸು 42 ವರ್ಷ, ಉ|| ವ್ಯವಸಾಯ, ಬಲೇಕೊಳಚಿ ಗ್ರಾಮ, ಹೂವಿನಹಡಗಲಿ ತಾ., ವಿಜಯನಗರ ಜಿಲ್ಲೆ.

ವಿರುದ್ಧ

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 03-06-2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕಪಕ್ಷೀಯ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು. ದಿನಾಂಕ:16-03-26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ

ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ,

ಸಹಿ/- ಶ್ರೀ ಅರುಣ ರಾಜ್ಞ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ,

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ

ಕ್ರಿಮಿನಲ್ ಸಂಖ್ಯೆ : 292/2026
ಕ್ರಿಮಿನಲ್ ಸಂಖ್ಯೆ : /2026

ಅರ್ಜಿದಾರರು:ಶ್ರೀ ಜಲುಗೋಡು ಚಂದ್ರಪ್ಪವಯಸ್ಸು: 51ವರ್ಷ, ಉ|| ವ್ಯವಸಾಯ, ಇಟ್ಗಿ ಗ್ರಾಮ, ಹೂವಿನಹಡಗಲಿ ತಾ. ವಿಜಯನಗರ ಜಿಲ್ಲೆ.

ವಿರುದ್ಧ

ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.

ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಅಸಲು ದಾವಾ ನಂ:63/2014

ಸ್ಥಳ: ಬಾದಾಮಿ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 361/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 362/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 363/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 364/2026

ಸಹಿ/-ಶಿರಸ್ತೆದಾರರು
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಹೊವಿ/ಸ/ಇಂ-1/2025-26/ 4468 ದಿನಾಂಕ :18.03.2026

ಅಲ್ಪಾವಧಿ ಕೊಟೇಷನ್ ಪ್ರಕಟಣೆ

ಈ ಕೆಳಕಾಣಿಸಿದ ಐಟಂಗಳಿಗೆ ಶೀಲ್ಡ್ ಕವರ್ ಮುಖಾಂತರ ಕೋಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ಲಕೋಟೆ ಕೊಟೇಷನ್ ಪದ್ಧತಿಯನ್ನು ಅನುಸರಿಸಲಾಗುವುದು. ಅರ್ಹ ಸಂಸ್ಥೆಗಳು ಈ ಕೆಳಕಾಣಿಸಿದ ಐಟಂಗಳಿಗೆ ಕೋಟೆಷನ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಅರ್ಹ ಸಂಸ್ಥೆಗಳು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, (ಎಸ್.ಪಿ.ಕಛೇರಿ ಹಿಂಭಾಗ ಟಿ.ಬಿ.ಡ್ಯಾಮ್ ರಸ್ತೆ) ವಿಜಯನಗರ ಜಿಲ್ಲೆ ಕಛೇರಿಯ ವಿಳಾಸವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಕಛೇರಿಯ ನಾಮಫಲಕದಲ್ಲಿ ಗಮನಿಸಬಹುದಾಗಿದೆ ಹಾಗೂ ಯಾವುದೇ ಕೋಟೆಷನ್‌ಗಳನ್ನು ಯಾವುದೇ ಕಾರಣ ಇಲ್ಲದೆ ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿದ್ದಾರೆ.

ಕ್ರ ಸಂ	ಕಾಮಗಾರಿಯ ವಿವರ	ಯೂನಿಟ್
	ಹರಪನಹಳ್ಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಉನ್ನತೀಕರಣ ಹಾಗೂ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಒದಗಿಸುವುದು ಕಾಮಗಾರಿಗಳ ಅಂದಾಜು ಪತ್ರಿಕೆ ತಯಾರಿಸುವ ಸಲುವಾಗಿ	
	ಈ ಕೆಳಕಾಣಿಸಿದ ಐಟಂಗಳು	
	Part -I (Medical Equipments)	
1	Fully Automatic SVR Biotech YD 200 Urine Analyzer	No
2	Labro 145 152 L Mild steel 152 L vertical Double wall autoclave	No
3	S.CURE ECG Machine 12 Channel	No
4	Servomate Three Phase 40 kVA Servo Voltage Stabilizer	No
5	Stainless Steel Electric SS 304 Dead Body Freezer Box (size 2x7x3 ft), Frequency 50 Hz	No
6	Fully Electric Surgical Operation Table Hydraulic	No
7	Covidien Ligasure Vessel Sealing System E3	No
8	Infusion Pump Volumetric	No
9	Maroon C-Arm Pro Kiran Lead Aprons	No
10	Implant Remover Kit	No
11	Singlr Port MEDIEARTH Digital Tourniquet Machine	No
12	PSM Pneumatic Manual	No
13	Gromed Ortho TC K Wire Cutter	No
14	Orthopedic Wire Tightener	No
15	BONE NIBBLER LARGE	No
16	Welch Allyn Retinoscope 3.50V 18X26X7cm	No
17	Bio Medix A -Scan Biometer	No
18	Colonoscopy Endoscopy machine	NO
19	BPL Fetal Doppler FD 9713N	NO
20	NST Machine for Hospital	No
21	MaxClave Dry Pro Suction Machine	No
22	BP Apparatus Digital	No
23	Bpl 3 Channel ECG Machine (white) Brand BPL 4.7	No
24	Strecher Trolley Stainless Steel (Normal long use)	No
	Part -II (Administrative/Establishment Equipments)	
1	Refregetors 185Litres LG	No
2	Xerox Machine with auto duplex continuous copying	No
3	Hp All in one 12th Gen windows 11 intel core i3 (60.50cm) 8GB	No
4	Modern visitors chair S Type Model	No
5	Epson inkjet Mono Computer Printers	No

ಮೇಲ್ಕಾಣಿಸಿದ ಐಟಂಗಳ Detail Specification ಗಳನ್ನು ಈ ಕಛೇರಿಯಿಂದ ಪಡೆದು ಕೊಟೇಷನ್‌ಗಳನ್ನು ಸಲ್ಲಿಸುವುದು.

ಕೊಟೇಷನ್‌ಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

1)ಕೊಟೇಷನ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **01.04.2026 ರಂದು 16.00 ಗಂಟೆಯ ವರೆಗೆ**

2)ಕೊಟೇಷನ್‌ಗೆ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **02.04.2026 ರಂದು 11.30 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹೊಸಪೇಟೆ ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ./612

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರುರವರ ಕಛೇರಿ, ವಿದ್ಯುತ್ ವಿಭಾಗ, ವಾಣಿವಿಲಾಸ ಆವರಣ,
ಕೆ.ಆರ್.ಎಸ್ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು-570020

ಟೆಂ.ಪ್ರ.ಸಂ.ಮೈನಪಾ/ಕಾ.ಅ(ವಿ)/ಜಿಎನ್-22/2025-26 ದಿನಾಂಕ: 20.03.2026

ಟೆಂಡರ್ ಪ್ರಕಟಣೆ ಸಂಖ್ಯೆ-22
ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ

ಕ್ರ ಸಂ	ವಿವರ	ಕಾಮಗಾರಿಗಳ ಸಂಖ್ಯೆ	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಸಂಜೆ 5.00 ಗಂಟೆ ನಂತರ ಕೆಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 5.00 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 5.30 ಗಂಟೆ ನಂತರ ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Tender Works (KW-1)	03	19.93	20.03.2026	30.03.2026	01.04.2026
2	Tender Works(KW-2)	01	25.00			
3	Re-Tender Works (KW-1)	02	8.32			
4	Goods Works (KG-2)	12	334.05	20.03.2026	30.03.2026	01.04.2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ವಿ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/1874/ಶಿರಡಿ ಸಾಯಿ/2025-26

ಕರ್ನಾಟಕ ಸರ್ಕಾರ GOVERNMENT OF KARNATAKA

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.

Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
e-mail-ids:directorbmcrcballari@gmail.com,
website : https://bmcrc.karnataka.gov.in

ಸಂ:ಬಿಎಂಸಿಆರ್‌ಸಿ/ಟೆಂಡರ್/ಸಾಮಾನ್ಯ-1/03/2025-26 ದಿನಾಂಕ:20.03.2026

ಇ-ಟೆಂಡರ್ ಅಧಿಸೂಚನೆ

ಬಿಎಂಸಿಆರ್‌ಸಿ ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸ್ವಚ್ಛತಾ ಮತ್ತು ನೈರ್ಮಲ್ಯ ಸೇವೆಗಳಿಗಾಗಿ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ದ್ವಿ-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು ದಿನಾಂಕ:20.03.2026 ರಿಂದ ದಿನಾಂಕ:21.04.2026ರ ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.737.00 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ www.bmcrc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/- ಡೀನ್ ಹಾಗು ನಿರ್ದೇಶಕರು,
ಬಿಎಂಸಿ ಆರ್ ಸಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/1178/ಕೆಎಸ್‌ಎಂಸಿಎ/2025-26

CHANGE OF NAME

I, **MAHAMMAD HANEEF KOLHAR** (My Old Name) Resident of #4/C, Sector No: 47 VTC Navanagar Bagalkot 587103 District: Bagalkot, State Karnataka, have changed my name as **MAHAMMADHANIF KOLHAR** (My New Name) for all purposes affidavit Dtd.: 23-03-2026 sworn before notary **M C Hiremath**.

ವ್ಯಯಕ್ತಿಕ ಹೇಸರು ಬದಲಾವಣೆ

ನಾನು, ಶ್ರೀಮತಿ ಕಸ್ತೂರಿ
c/o ದುಂಡಪ್ಪ ದೊಡಹಟ್ಟಿ
ಬೆಳಗಲಿ ತಾ: ಮುಧೋಳ
ಜಿ: ಬಾಗಲಕೋಟ, ಜನ್ಮ ದಿನಾಂಕ:
01/01/1969 ಯಾದ ನಾನು ನನ್ನ
ಹೇಸರನ್ನು **ಕಸ್ತೂರೇವ್ವ ದೊಡಹಟ್ಟಿ**
ಎಂದು ಬದಲಾಯಿಸಿಕೊಂಡಿರುತ್ತೇನೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.
ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 122/2026

ಅರ್ಜಿದಾರರು: ಶ್ರೀಮತಿ ರೇಣುಕಾ ಗಂಡ ಸಂಕಪ್ಪ, ವಯಸ್ಸು 47 ವರ್ಷ, ವ್ಯವಸಾಯ, ವಾಸಿ ಇಟ್ಟಿಗಿ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ಸ್‌ಪೆಕ್ಟರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಮಾವನ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ಮಾವನಾದ ಕೊರವರ ಹಾಲಪ್ಪ ತಂದೆ ಸಂಜೀವಪ್ಪ ಕೊರವರ ಇವರು ದಿನಾಂಕ:14.08.1997 ರಂದು ಇಟ್ಟಿಗಿ ಗ್ರಾಮದ ನಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವಾಗಿ ಯಾರಿಂದಾದರೂ ಈ ಬಗ್ಗೆ ತಕರಾರು ಸಲ್ಲಿಸುವ ವರಿದ್ದರೆ ಖಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 01/04/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕಪಕ್ಷೀಯ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.

ದಿನಾಂಕ: 24/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/–ಶಿರಸ್ತೇದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ
ಹೂವಿನಹಡಗಲಿ.

ಸಹಿ/–ಶ್ರೀ. ಕೆ.ಚಂದ್ರಪ್ಪ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ,

ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್: 55/2025–26 ದಿನಾಂಕ: 23.03.2026

ಟೆಂಡರ್ ಪ್ರಕಟಣೆ (KPP Portal ಮುಖಾಂತರ)

ಶಿವಮೊಗ್ಗ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ KPP PORTAL ಮುಖಾಂತರ ಟೆಂಡ ಆಹ್ವಾನಿಸಲಾಗಿದೆ. KPP PORTAL ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) ಪರಿಶಿಷ್ಟ ಜಾತಿ (SC) ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: INDENT 54513 2) ಇತರ ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: INDENT 56202, 54415 & 56071 3) ಇಂಡೆಂಟ್ ಸಂಖ್ಯೆ 56202 KPP PORTAL ಮೂಲಕ ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:30.03.2026 (ಸಂಜೆ: 4.00 ಗಂಟೆಗೆ) 4) ಇಂಡೆಂಟ್ ಸಂಖ್ಯೆ: 56202 ಕಾಮಗಾರಿಗಳಿಗೆ KPP PORTAL ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01.04.2026 (ಸಂಜೆ: 4.30 ಗಂಟೆಗೆ) 5) ಇಂಡೆಂಟ್ ಸಂಖ್ಯೆ 56202 ಕಾಮಗಾರಿಗೆ KPP PORTAL ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ: 02.04.2026 (ಸಂಜೆ: 4.30 ಗಂಟೆಗೆ) 6) ಇಂಡೆಂಟ್ ಸಂಖ್ಯೆ: 54415, 56071 & 54513 KPP PORTAL ಮೂಲಕ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:06.04.2026 (ಸಂಜೆ: 4.00 ಗಂಟೆಗೆ) 7) ಇಂಡೆಂಟ್ ಸಂಖ್ಯೆ 54415, 56071 & 54513 ಕಾಮಗಾರಿಗಳಿಗೆ KPP PORTAL ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:07.04.2026 (ಸಂಜೆ: 4.30 ಗಂಟೆಗೆ) 8) ಅನುದಾನ: ಕೇಂದ್ರ ಸರ್ಕಾರದ 15 ನೇ ಹಣಕಾಸು ಆಯೋಗದ ಅನುದಾನಕ್ಕೆ ಬಡ್ಡಿ ಮೊತ್ತದ ಅನುದಾನ ಹಾಗೂ 2025–26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ ಸೂಚನೆ: ಹೆಚ್ಚಿನ ವಿವರಗಳನ್ನು KPP PORTAL ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. ಹಾಗೂ ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು KPP PORTAL ಮುಖಾಂತರ ಸೂಚಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/25–26/131/03/2066

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382–220556 ಇ–ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಜಿ–1/2025–26/58 ದಿ: 23.03.2026

ಟೆಂಡರ್ ಪ್ರಕಟಣೆ–58/2025–26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025–26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಪ್ರವರ್ಗ 2 ಎ): (1) 2025–26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದಡಿ ಕುಮಟಾ ತಾಲೂಕಿನ ಗೋಕರ್ಣ ಕಾಳಿಕಾಂಬ ದೇವಸ್ಥಾನದಿಂದ ತೂಬಿನಗುಂಡಿ ತನಕ ಗಟಾರ ನಿರ್ಮಾಣ 2. ಕುಮಟಾ ತಾಲೂಕಿನ ತೊರ್ಕೆ ಪಂ.ದ ಗೋಕರ್ಣ ಮುಖ್ಯ ರಸ್ತೆಯ ಒಂದು ಬದಿಯಲ್ಲಿ ಗಟಾರ ನಿರ್ಮಾಣ 3. ಹಿರೇಗುತ್ತಿ ಪಂಚಾಯತ್ ಮೊರಬಾ ಗ್ರಾಮದ ಹೊಸನಗರ ಶಾಲೆ ಹತ್ತಿರ ರಸ್ತೆ ನಿರ್ಮಾಣ. RDPR/2025-26/RD/WORK_INDENT24792, ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 60,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) ಸದರ–ಕುಮಟಾ ತಾಲೂಕಿನ ದೇವಗಿರಿ ಪಂ ಹೊಡಭಾಗ ಶಾಲೆಯ ಹತ್ತಿರ ಭಾವಿತೋಡಿಯಿಂದ ಗಟಾರ ನಿರ್ಮಾಣ 2. ಕುಮಟಾ ತಾಲೂಕಿನ ದೇವಗಿರಿ ಪಂ.ದ ಹರನೀರ್ ರಸ್ತೆ ನಿರ್ಮಾಣ 3. ಕುಮಟಾ ತಾಲೂಕಿನ ದೇವಗಿರಿ ಪಂ.ದ ನ್ಯಾಷನಲ್ ಹೈವೆಯಿಂದ ವಿನಾಯಕ ಭಂಡಾರಿ ಮನೆಯವರೆಗೆ ರಸ್ತೆ ನಿರ್ಮಾಣ. RDPR/2025-26/RD/WORK_INDENT24829, ಅಂದಾಜು ಮೊತ್ತ: ರೂ. 27.00 ಲಕ್ಷ, ಮುಂಗಡ ಠೇವಣಿ: ರೂ. 54,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (3) ಕುಮಟಾ ತಾಲೂಕಿನ ಹಿರೇಗುತ್ತಿ ಪಂಚಾಯತ ಕೋಳಿಮಂಜ್ಗುಣಿ ಸ್ಮಶಾನದಿಂದ ಸಾಹಿಗ್ರಾಮ ರಸ್ತೆ ನಿರ್ಮಾಣ 2. ಕುಮಟಾ ತಾಲೂಕಿನ ಹಿರೇಗುತ್ತಿ ಪಂ.ದ ನಾಡವರ ಕೊಪ್ಪದ ಬ್ರಿಡ್ಜನಿಂದ ನಾಯಕ ಗದ್ದೆಯ ಹತ್ತಿರ ತಡೆಗೋಡೆ ಹಾಗೂ ಸಿಸಿ ರಸ್ತೆ ನಿರ್ಮಾಣ. RDPR/2025-26/RD/WORK_INDENT24805, ಅಂದಾಜು ಮೊತ್ತ: ರೂ. 23.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 02.04.2026 ರ ಅಪರಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 04.04.2026 ಅಪರಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು, ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರು,
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1242/25-26 dt. 24.03.2026

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ

ಸರ್ ಎಂ. ವಿಶ್ವೇಶ್ವರಯ್ಯ ರಸ್ತೆ,
ಜಲಮಂಡಳಿ ಆವರಣ, ಧಾರವಾಡ–580 001. NVT QC NABCB
ಕಚೇರಿ: 0836–2447090, Email: kwbcen@gmail.com

ಟೆಂಡರ್ ಪ್ರಕಟಣೆ CALL-2(ಎಲೆಕ್ಟ್ರಾನಿಕ್ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಆರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ–ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:2498 ದಿನಾಂಕ: **23–03–2026**. **ಕಾಮಗಾರಿಯ ಹೆಸರು**:– ಯೋಜನೆಯ ಉಳಿತಾಯದ ಮೊತ್ತದಡಿ ದಾಂಡೇಲಿ ಪಟ್ಟಣ ಒಳಚರಂಡಿ ಯೋಜನೆಯಡಿ ನಿರ್ಮಿಸಲಾಗಿರುವ ವಿವಿಧ ಘಟಕಗಳ 5 ವರ್ಷಗಳ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ. (ಇಡುಗಂಟು ಟೆಂಡರ್–ವೇರಿಂಯೇಷನ್ ಇರುವುದಿಲ್ಲ). **INDENT NO.KUWSDB/2025-26/WS/WORK_INDENT/490/CALL-2.** ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.

ವಾ.ಸಾ.ಇ./ಧಾರವಾಡ/1386/
2025–26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರಕಾರ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ

ಸಾರ್ವಜನಿಕ ಆಸ್ಪತ್ರೆ ಯಲಬುರ್ಗಾ

Mail Id: cmoghyelburga@gmail.com
Tel.No: 08534-220155

ಸಂ:ಸಾಆಯ/ಟೆಂಡರ್/2025–26/429 ದಿನಾಂಕ:23.03.2026

ಅಲ್ಪಾವಧಿ ಟೆಂಡರ್

ವಿಷಯ: ಸಾರ್ವಜನಿಕ ಆಸ್ಪತ್ರೆ ಯಲಬುರ್ಗಾಕ್ಕೆ ಅತೀ ಅವಶ್ಯವಿರುವ ಔಷಧ ಮತ್ತು ರಾಸಾಯನಿಕಗಳನ್ನು ಖರೀದಿಸಲು e-Procurement ಮೂಲಕ ಟೆಂಡರ್ ಕರೆದಿರುವ ಬಗ್ಗೆ.

ಸಾರ್ವಜನಿಕ ಆಸ್ಪತ್ರೆ ಯಲಬುರ್ಗಾ ಜಿ॥ಕೊಪ್ಪಳ ಆಸ್ಪತ್ರೆಗೆ ಅತೀ ಅವಶ್ಯವಿರುವ ಔಷಧ ಮತ್ತು ರಾಸಾಯನಿಕಗಳನ್ನು ಸರಬರಾಜು ಮಾಡಲು ಅಂದಾಜು ಮೌಲ್ಯ **ರೂ.8,94,000/–ಗಳ** e-Procurement ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿದೆ.

(1) ಟೆಂಡರ್ ಅರ್ಜಿ ಪ್ರಾರಂಭದ **ದಿನಾಂಕ : 23.03.2026** (2) ಟೆಂಡರ್ ಅರ್ಜಿ ಕೊನೆಯ **ದಿನಾಂಕ : 01.04.2026 ಸಂಜೆ 04.30** ಗಂಟೆಗೆ (3) ತಾಂತ್ರಿಕ ಬಿಡ್ ತೆರೆಯುವೆ **ದಿನಾಂಕ : 02.04.2026 ಸಂಜೆ 05.00** ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ ಯಲಬುರ್ಗಾ

ವಾ.ಸಾ.ಇ/ಕೊಪ್ಪಳ/772/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಜಿಲ್ಲಾ ಆಯುಷ್ ಕಛೇರಿ, ಕಲಬುರಗಿ.

ಜಿಲ್ಲಾ ಆಯುಷ್ ಕಾರ್ಯಾಲಯ, ಸರ್ಕಾರಿ ಯುನಾನಿ ಆಸ್ಪತ್ರೆ (50 ಹಾಸಿಗೆ) ಮೊದಲನೇ ಮಹಡಿ,
ಆಳಂದ ಚೆಕ್ ಪೋಸ್ಟ ಹತ್ತಿರ, ದುಬೈ ಕಾಲೋನಿ ಕಲಬುರಗಿ–585101
ದೂರವಾಣಿ/ಫ್ಯಾಕ್ಸ ಸಂ:08472–224314 ಇ–ಮೇಲ್: dao.gulbarga09@gmail.com

ಸಂ:ಜಿಆಅ/ಕ/ವಾ.ಸೇ/20/2025–26 ದಿನಾಂಕ: 23–03–2026

:: ಅಲ್ಪಾವದಿ (Call-3) ಇ–ಟೆಂಡರ್ ಪ್ರಕಟಣೆ (ದ್ವೀ–ಲಕೋಟೆ ಪದ್ದತಿ)

ಜಿಲ್ಲಾ ಆಯುಷ್ ಅಧಿಕಾರಿಗಳು, ಕಲಬುರಗಿ ಇವರ ಅಧೀಕೃತ ಸರ್ಕಾರಿ ಕೆಲಸಗಳಿಗಾಗಿ ಪ್ರವಾಸ ಮಾಡಲು ಹಾಗೂ ಜಿಲ್ಲಾ ಆಯುಷ್ ಕಛೇರಿ ಉಪಯೋಗಕ್ಕಾಗಿ ಬಾಡಿಗೆ ಆಧಾರದ ಮೇಲೆ 2026–27/2027–28 ನೇ ಸಾಲಿನಲ್ಲಿ ಚಾಲಕ ಸಮೇತ ಹವಾನಿಯಂತ್ರಿತ (AC) 4+1/6+1 ಸೀಟರ್ ವಾಹನವನ್ನು ನೋಂದಾಯಿತ ಟ್ರಾವೇಲ್ ಏಜೆನ್ಸಿ/ಸಂಸ್ಥೆಗಳಿಂದ/ವಾಹನ ಮಾಲಿಕರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವೀ–ಲಕೋಟೆ ಪದ್ದತಿಯಲ್ಲಿ ಅಲ್ಪಾವದಿ ಮೂರನೇ ಬಾರಿಗೆ ಇ–ಟೆಂಡರ್ ಆಹ್ವಾನಿಸಲಾಗಿದೆ ವಾಹನವು 2021 ರಿಂದ ಇತ್ತೀಚಿನ ಮಾಡೆಲ್ ಆಗಿರಬೇಕು ಟೆಂಡರ್ ನಮೂನೆಗಳಿಗಾಗಿ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://kppp.karnataka.gov.inನಲ್ಲಿ ನೋಡಬಹುದಾಗಿದೆ.

1) ಚಾಲಕ ಸಮೇತ ವಾಹನಗಳ ವರ್ಗ : **4+1/6+1 ಸೀಟರ್. ಹಳದಿ ಬೋರ್ಡ್ ಹೊಂದಿರಬೇಕು. 2021ರಿಂದ ಇತ್ತೀಚಿನ ಹವಾನಿಯಂತ್ರಿತ (AC) ವಾಹನ ಬೇಕಾಗಿದೆ.** 2) ಬೇಕಾಗಿರುವ ವಾಹನಗಳ ಸಂಖ್ಯೆ: **ವಾಹನಗಳ ಸಂಖ್ಯೆ–01,** 3) ಅವಧಿ : **ಒಂದು ವರ್ಷದ ಅವಧಿಗೆ**


1) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕ:24–03–2026 ರಿಂದ 02–04–2026, 2) ಟೆಂಡರ್ ದಾಖಲೆಗಳನ್ನು ಭರ್ತಿ ಮಾಡಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ: 02–04–2026 ಸಂಜೆ 4.00 ಗಂಟೆಯವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04–04–2026, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 07–04–2026, 5) ಒಟ್ಟು ಟೆಂಡರ್ ಮೊತ್ತ: **480000/-**, 6) ಇ.ಎಮ್.ಡಿ ಪಾವತಿಸಬೇಕಾದ ಮೊತ್ತ 12000/–

ಸಹಿ/– ಟೆಂಡರ್ ಆಹ್ವಾನ ಪ್ರಾಧಿಕಾರ/ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾ ಆಯುಷ್ ಕಛೇರಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1206/ಕೆ.ಎಸ್.ಎಂ.ಸಿ.&ಎ/2025–26

ವ್ಯಯಕ್ತಿಕ ಹೇಸರು ಬದಲಾವಣೆ

ನಾನು, ಶ್ರೀಮತಿ ಗೌರವ್ವ
ದುಂಡಪ್ಪ ದೊಡಹಟ್ಟಿ
ಬಳಗಲಿ ತಾ: ಮುಧೋಳ ಜಿ:
ಬಾಗಲಕೋಟ, ಜನ್ಮ ದಿನಾಂಕ:
01/01/1991 ಯಾದ ನಾನು ನನ್ನ
ಹೇಸರನ್ನು **ಗೌರವ್ವ ದೊಡಹಟ್ಟಿ**
ಎಚಿದು ಬದಲಾಯಿಸಿಕೊಂಡಿರುತ್ತೇನೆ.



ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕಾರ್ಯಪಾಲಕ ಇಂಜಿನಿಯರ್,

ಲೋಕೋಪಯೋಗಿ ಇಲಾಖೆ, ನಂ.2 ಕಟ್ಟಡಗಳ ವಿಭಾಗ,

1ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು.
ದೂ: 080–22122856.

ಸಂಖ್ಯೆ: 21/2025–26 ದಿನಾಂಕ: 24.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಇಲಾಖೆಯು ಬೆಂಗಳೂರಿನ ಸೂಚಿತ ವಿವಿಧ ಸ್ಥಳಗಳಲ್ಲಿ ಮಸ್ಕಿಟೋ ಮೆಷ್ ಅನ್ನು ಒದಗಿಸುವುದು ಹಾಗೂ ಅಳವಡಿಸುವುದು, ಪೇಂಟಿಂಗ್, ಹಾಳಾಗಿರುವ ಪೈಪ್‌ಲೈನ್‌ಗಳನ್ನು ಬದಲಾಯಿಸುವುದು, ಹಾಳಾಗಿರುವ ಗೋಡೆಗಳು, ಸಜ್ಜಾಗಳ ರೀಪ್ಲಾಸ್ಟರಿಂಗ್, ಹಾಳಾಗಿರುವ ಟೈಲ್ಸ್‌ಗಳನ್ನು ಬದಲಾಯಿಸುವುದು, ಮಾಡ್ಯುಲರ್ ಕಿಚನ್, ಚಿಮಣಿಗಳ ದುರಸ್ತಿ, ಫ್ರಂಟ್‌ಯಾರ್ಡ್ ಹಾಗೂ ಬ್ಯಾಕ್‌ಯಾರ್ಡ್ ಟೈಲ್ಸ್‌ಗಳನ್ನು ಒದಗಿಸುವುದು, ಲೀಕೇಜ್ ತಡೆಗಟ್ಟುವುದು, ವಾರ್ಡ್‌ರೋಬ್ ಒದಗಿಸುವುದು, ಆಫೀಸ್ ಸ್ಟೇಷನರಿ ಒದಗಿಸುವುದು, ಸೆಲ್ಲರ್ ರೂಮ್‌ಗಳ ನವೀಕರಣ, ವರ್ಕ್ ಸ್ಟೇಷನ್, ಟೇಬಲ್‌ಗಳು, ಚೇರುಗಳ ಸರಬರಾಜು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ **ಒಟ್ಟು 10 ಕಾಮಗಾರಿಗಳಿಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕ್ರ.ಸಂ.1ಕ್ಕೆ **CAT-II (A)**, ಕ್ರ.ಸಂ.2ಕ್ಕೆ ಪ.ಜಾ., ಕ್ರ.ಸಂ.3 ಮತ್ತು 4ಕ್ಕೆ ಪ.ಪಂ. ಮತ್ತು ಕ್ರ.ಸಂ.5 ರಿಂದ 10ರವರೆಗೆ ಇತರರಿಗೆ ಮೀಸಲಿರಿಸಿದೆ. ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಠ ರೂ. 3,76,124.34** ಮತ್ತು ಗರಿಷ್ಠ **ರೂ. 23,07,348.10,** ಇಎಂಡಿ: **ಕನಿಷ್ಠ ರೂ.4,800/–** ಮತ್ತು ಗರಿಷ್ಠ **ರೂ.57,700/–.** ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 02.04.2026, ಸಂಜೆ 05.30 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 04.04.2026, ಬೆಳಿಗ್ಗೆ 10.30 ಗಂಟೆಗೆ.** ಸಂಪೂರ್ಣ ಕಾಮಗಾರಿಯ ವಿವರ, ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಮೀಸಲಾತಿ ಹಾಗೂ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್

ವಾಸಾಸಂಇ/ಉನಿ-ಸಿ.ಪಿ/6417/ಕೆಎಸ್‌ಎಂಸಿಎ/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಬೆಣ್ಣೆತೊರಾ ಯೋಜನೆ ವಿಭಾಗ ನಂ–4, ಹೆಬ್ಬಾಳ, ತಾ॥ಕಾಳಗಿ

ಸಂಖ್ಯೆ:ಕಾ.ನಿಅ/ಕ.ನೀ.ನಿ.ನಿ/ಬೆ.ತೊ.ಯೋ/ವಿಭಾಗ/ಹೆಬ್ಬಾಳ/ಪಿ.ಬಿ–2/2025–26/2500 ದಿನಾಂಕ: 24–03–2026

:: ಅಲ್ಪಾವಧಿ ಟೆಂಡರ ಅಧಿಸೂಚನೆ (ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ) ::

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಚಂದ್ರಂಪಳ್ಳಿ ಯೋಜನೆಯಡಿಯಲ್ಲಿ ಬರುವ 2 ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಾಲ್ ಮುಖಾಂತರ ಟೆಂಡರಗಳನ್ನು ಅಹ್ವಾನಿಸಲಾಗಿದ್ದು ಟೆಂಡರಿಗಿಟ್ಟ ಕನಿಷ್ಟ ಮೊತ್ತ **ರೂ. 2,14,169.79/–** ಗರಿಷ್ಟ ಮೊತ್ತ **ರೂ. 18,25,232.95/–** ಗಳಾಗಿರುತ್ತದೆ. ಇ.ಎಂ.ಡಿ. ಮೊತ್ತ ಕನಿಷ್ಟ ರೂ. 5,400/– ರಿಂದ ಗರಿಷ್ಟ ರೂ. 45,650/– ಗಳಾಗಿರುತ್ತವೆ.

ಕಾಮಗಾರಿಗಳಿಗೆ ಏಕಲಕೋಟೆ ಪದ್ದತಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಾಲ್ ಮುಖಾಂತರ ಅಹ್ವಾನಿಸಲಾಗಿದ್ದು ಟೆಂಡರಗಳನ್ನು ಪಡೆಯುವ, ಸಲ್ಲಿಸುವ ಮತ್ತು ತೆರೆಯುವ ದಿನಾಂಕಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ. 1) ಖಾಲಿ ಟೆಂಡರ್ ಪುಸ್ತಕಗಳು ಪಡೆಯುವ ದಿನಾಂಕ : **24.03.2026 ರಿಂದ 31.03.2026 ಸಂಜೆ 17:00 ಗಂಟೆಯವರೆಗೆ,** 2) ಭರ್ತಿ ಮಾಡಿದ ಟೆಂಡರ್ ಪುಸ್ತಕಗಳು ಸಲ್ಲಿಸಲು ಕೊನೆಯ ದಿನಾಂಕ : **31.03.2026 ಸಂಜೆ 17:00 ಗಂಟೆಯವರೆಗೆ,** 3) ಭರ್ತಿ ಮಾಡಲಾದ ಬಿಡ್ಡನ್ನು ತೆರೆಯುವ ದಿನಾಂಕ : **01.04.2026 ಸಂಜೆ 17:15 ಗಂಟೆಯ ನಂತರ.**

ಗುತ್ತಿಗೆದಾರರು ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಅಂಗೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,
ಬೆಣ್ಣೆತೊರಾ ಯೋಜನೆ ವಿಭಾಗ ನಂ–4, ಹೆಬ್ಬಾಳ, ತಾ॥ ಕಾಳಗಿ

ವಾ.ಸಾ.ಸಂ.ಇ/ಕಲಬುರಗಿ/1211/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರಕಾರ

ಹಿರಿಯ ಉಪ ನಿರ್ದೇಶಕರ ಕಾರ್ಯಾಲಯ,

ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ನೂತನ ಕಟ್ಟಡ ಹೊಸಪೇಟೆ ರಸ್ತೆ ಬಲಗಡೆ

ಎಲ್.ಪಿ.ಜಿ.ಗ್ಯಾಸ್ ಪ್ಲಸ್ ಬಂಕ್ ಹಿಂಭಾಗ, ಡಾಲರ್ಸ್ ಕಾಲೋನಿ ಹತ್ತಿರ, ಕೊಪ್ಪಳ –583231
ಇ–ಮೇಲ್ : aclackoppal@gmail.com

Office of the Senior Deputy Director,
Local Audit Circle, New building Hospet Road, Right Side,
LPG gas plus bunk back side, Near Dollars colony, KOPPAL-583231
E mail ID: aclackoppal@gmail.com

ಸಂಖ್ಯೆ : ಹಿಉನಿ/ಸ್ಥಲೆಪವಕೊ/ಹೊ.ಟೆಂ/2025–26/634 ದಿನಾಂಕ : 23.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ : 2026–27 ನೇ ಸಾಲಿನ **ದಿನಾಂಕ : 01.04.2026** ರಿಂದ **31.03.2027** ವರೆಗೆ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕೊಪ್ಪಳ ಕಚೇರಿಗೆ ಹೊರಗುತ್ತಿಗೆ ಬೆರಳಚ್ಚುಗಾರರ (02) ಹಾಗೂ ಗ್ರೂಪ್"ಡಿ" (02) ಸೇವೆಯನ್ನು ಮಾನವ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಬಗ್ಗೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2026–27 ನೇ ಸಾಲಿನ **ದಿನಾಂಕ : 01.04.2026 ರಿಂದ ದಿನಾಂಕ : 31.03.2027** ರವರೆಗೆ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕೊಪ್ಪಳ ಕಚೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು (02) ಹಾಗೂ ಗ್ರೂಫ್ "ಡಿ" (02) ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾಗಳಲ್ಲಿ ಪಾರದರ್ಶಕತೆ ಅಧಿನಿಯಮ (ಕೆಟಿಪಿಪಿ 1999) ನಿಯಮಗಳು 2000 ರ ಪ್ರಕಾರ ಇ–ಪ್ರೋಕ್ಯೂರಮೆಂಟ್ ಒಂದು ವರ್ಷದ ಅವಧಿಗೆ ಅರ್ಹ ಹೊರಗುತ್ತಿಗೆ ಸಂಪನ್ಮೂಲ ಏಜೆನ್ಸಿಯವರಿಂದ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಆಸ್ತಕಿಯುಳ್ಳ ಟೆಂಡರ್‌ದಾರರು ಟೆಂಡರ್ ವೆಬ್‌ಸೈಟ್ www.kppp.karnataka.gov.in. (KSAAD/2025-26/SE0076) ನಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಟೆಂಡರ್ ಪ್ರಾಧಿಕಾರ ಹಾಗೂ ಪ್ರಕಟಣಾ ವಿವರ : (1) ಟೆಂಡರ್ ಕರೆದ ಪ್ರಾಧಿಕಾರದ ಹೆಸರು ಮತ್ತು ವಿಳಾಸ : ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕೊಪ್ಪಳ (2) ಟೆಂಡರ್ ಉದ್ದೇಶ : ಹೊರಮೂಲ ಸಂಸ್ಥೆಯ ಮೂಲಕ ಮಾನವ ಸಂಪನ್ಮೂಲ ಸೇವೆ ಪಡೆಯಲು (3) ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : **10.15 ಲಕ್ಷಗಳು** (4) ಇ.ಎಂ.ಡಿ ಮೊತ್ತ : **25375 ರೂ.ಗಳಲ್ಲಿ** (5) ಟೆಂಡರ್ ಸಲ್ಲಿಸಲು ಆರಂಭ **ದಿನಾಂಕ : 18.03.2026** (6) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ : 09.04.2026** (7) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ : 13.04.2026. ಸಂಜೆ.4.00 ಕ್ಕೆ** (8) ಟೆಂಡರ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 15.04.2026 ಬೆಳಿಗ್ಗೆ 11.00 ಕ್ಕೆ** (9) ಟೆಂಡರ್ ತೆರೆಯುವ ಸ್ಥಳ : ಹಿರಿಯ ಉಪ ನಿರ್ದೇಶಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಕೊಪ್ಪಳ.

ಸಹಿ/– ಹಿರಿಯ ಉಪ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ಕೊಪ್ಪಳ.

ವಾ.ಸಾ.ಇ/ಕೊಪ್ಪಳ/767/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರಕಾರ

ಉಪನಿರ್ದೇಶಕರ ಕಛೇರಿ,

ಪದವಿ ಪೂರ್ವ ಶಿಕ್ಷಣ ಇಲಾಖೆ, ಗದಗ

Phone No. **08372-220622** Email : **ddjgpue@gmail.com**

ಸಂ:ಪಪೂಶಿಇ:ಉನಿ–ಜಿಜಿ:/2025–26 ದಿನಾಂಕ: 24–03–2026

MANNUAL TENDER NOTIFICATION

ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆ, ಗದಗ ಜಿಲ್ಲೆ ಗದಗ ಈ ಕಛೇರಿ ಕೆಲಸ ಕಾರ್ಯಗಳಿಗೆ ವಾಹನ ಚಾಲಕರೊಂದಿಗೆ (4 WHEELER CAR LMV NON-AC CAR – Car model-2023ರ ನಂತರದ್ದಾಗಿರತಕ್ಕದ್ದು) 01 ವಾಹನಗಳ ಸೇವೆಯನ್ನು ದಿನಾಂಕ : **01.04.2026** ರಿಂದ **31.03.2027**ರ ವರೆಗೆ 1 ಆರ್ಥಿಕ ವರ್ಷದ ಅವಧಿಯ ವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ **(KPTT)** 1999 ನಿಯಮಗಳು 2000 ರ ಪ್ರಕಾರ **(MANUAL TECHNICAL BID AND FINANCIAL BID SYSTEM)** ಎರಡು ಲಕೋಟೆಗಳ ಮೂಲಕ ಟೆಂಡರ್ ಕರೆಯಲಾಗಿದೆ.

(1) ಟೆಂಡರ್‌ದಾರನು **MANUAL** ಮೂಲಕ ಟೆಂಡರ್ ಸಲ್ಲಿಸುವುದು, ಈ ಬಗ್ಗೆ ಟೆಂಡರ್‌ದಾರರು ನಿಗದಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಹೊಂದಿರತಕ್ಕದ್ದು. (2) ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **25.03.2026** ರಿಂದ **16.04.2026**ರ ಅಪರಾಹ್ನ 4:30 ಗಂಟೆಯ ಒಳಗೆ ಭೌತಿಕವಾಗಿ ಟೆಂಡರ್ ಲಕೋಟೆಗಳನ್ನು ಸಲ್ಲಿಸುವುದು. (3) ಟೆಂಡರ್ ಮತ್ತು ಇ.ಎಂ.ಡಿ ಮೊತ್ತ **5000/– ರೂಗಳ** ಡಿ.ಡಿಯನ್ನು ತಪ್ಪದೇ **MANUAL** ಮುಖಾಂತರ ಮುಚ್ಚಿದ ಲಕೋಟೆಗಳನ್ನು ಸಲ್ಲಿಸತಕ್ಕದ್ದು. (4) ವಾಹನ ಬಾಡಿಗೆ ದರ ಒಂದು ತಿಂಗಳಿಗೆ ಗರಿಷ್ಠ **35000/–** ರೂ. ಗಳಾಗಿರುತ್ತದೆ.

ಸಹಿ/– ಉಪ ನಿದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಗದಗ ಜಿಲ್ಲೆ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/722/2025–26

ಕರ್ನಾಟಕ ಸರ್ಕಾರ

ಜಿಲ್ಲಾ ಆಸ್ಪತ್ರೆ, ವಿಜಯಪುರ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

ಸಂಖ್ಯೆ: ಜಿಆವಿ/ಟೆಂಡರ/ಇ–14974/2025–26/1706 ದಿನಾಂಕ:20.03.2026

ಟೆಂಡರ್ ಪ್ರಕಟಣೆ

ವಿಜಯಪುರ ಜಿಲ್ಲಾ ಆಸ್ಪತ್ರೆಗೆ 2026–27 ನೇ ಸಾಲಿಗಾಗಿ, ಆಸ್ಪತ್ರೆಯ ದೈನಂದಿನ ಎಲ್ಲ ಕಾರ್ಯಗಳಿಗಾಗಿ ಗ್ರೂಪ್–ಡಿ/ಸ್ವಚ್ಚತಾ ಕೆಲಸಗಾರರ ಹಾಗೂ ನಾನ್–ಕ್ಲಿನಿಕಲ್ ಸೇವಾ ಸೌಲಭ್ಯದ ನಿರ್ವಹಣೆಗಾಗಿ ಹೊರಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗಿನಂತೆ ಆಹ್ವಾನಿಸಲಾಗಿದೆ.

ಕ್ರ.ಸಂ	ಟೆಂಡರ್ ವಿವರ	ಟೆಂಡರ್ ನಂಬರ	ಷರಾ
01	ವಿಜಯಪುರ ಜಿಲ್ಲಾ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ನಾನ್–ಕ್ಲಿನಿಕಲ್ ಸೇವಾ ಸೌಲಭ್ಯದ ನಿರ್ವಹಣೆ ಮಾಡುವದು.	DHFWS/2025-26/SE2083	
02	ವಿಜಯಪುರ ಜಿಲ್ಲಾ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ / ಗಣಕಯಂತ್ರ ಸಹಾಯಕ/ ಭದ್ರತಾ ಸಿಬ್ಬಂದಿ (Security Gaurd) ನಿಡುವದು	DHFWS/2025-26/SE2079	

ಹೆಚ್ಚಿನ ವಿವರಗಳನ್ನು www.kppp.karnataka.gov.in ನ ವೆಬ್‌ಸೈಟ್‌ನಲ್ಲಿ ಮೇಲಿನ ಟೆಂಡರ್ ನಂಬರಗಳ ಪ್ರಕಾರ ಪಡೆಯಬಹುದು.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು,ಜಿಲ್ಲಾ ಆಸ್ಪತ್ರೆ, ವಿಜಯಪುರ

ವಾಸಾಸಂಇ/ವಿಜಯಪುರ/832/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,

ಲೋಕೋಪಯೋಗಿ ಇಲಾಖೆ, ನಂ.3ನೇ ಉಪವಿಭಾಗ, ಕಾರ್ಕಳ

ಕಚೇರಿ ದೂರವಾಣಿ ಸಂಖ್ಯೆ : 08258–230202 E-mail : aeepwdkkl@gmail.com
ನಂ: ಲೋಇಕಾ/ಎನ್‌ಐಟಿ–6/2025–26/ಸಿ1/1586/ದಿನಾಂಕ: 24/03/2026

ಟೆಂಡರ್ ಪ್ರಕಟಣೆ

ಈ ಕೆಳಗಿನ ಕೆಲಸಕ್ಕಾಗಿ ಪ್ರತ್ಯೇಕ ಮೊಹರಾದ ಟೆಂಡರನ್ನು ಮ್ಯಾನ್ಯುವೆಲ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ ರೀತ್ಯಾ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿ ನಿಯಮಿತ ಫಾರಂನಲ್ಲಿ ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ, ಕಾರ್ಕಳ ಉಪವಿಭಾಗ, ಕಾರ್ಕಳ ಇವರು ದಿನಾಂಕ: 08.04.2026ರ ಅಪರಾಹ್ನ 5.30 ಗಂಟೆಯ ವರೆಗೆ ಟೆಂಡರನ್ನು ಸಾಧ್ಯವಾದಲ್ಲಿ ಅದೇ ದಿನ ತೆರೆಯಲಾಗುವುದು

ಖಾಲಿ ಟೆಂಡರು ಫಾರಂಗಳಿಗೆ ಅರ್ಜಿಗಳನ್ನು ನಿಗಧಿಪಡಿಸಿದ ಬೆಲೆಯೊಂದಿಗೆ (ಇದನ್ನು ಹಿಂದಿರುಗಿಸುವುದಿಲ್ಲ) ದಿನಾಂಕ:04.04.2026ರ ವರೆಗೆ ಕೆಲಸದ ಎಲ್ಲಾ ದಿನಗಳಂದು ಕಛೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಅರ್ಜಿ ಜೊತೆಗೆ ಗುತ್ತಿಗೆದಾರರು ಅವರ ರಿಜಿಸ್ಟ್ರೇಶನ್ ಸರ್ಟಿಫೈಡ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಖಾಲಿ ಟೆಂಡರು ಫಾರಂಗಳನ್ನು ಈ ಕಛೇರಿಯಲ್ಲಿ ದಿನಾಂಕ:07.04.2026ರ ಅಪರಾಹ್ನ 5.30 ಗಂಟೆಯ ವರೆಗೆ ನೀಡಲಾಗುವುದು.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ಹೊರತು ಪಡಿಸಿ) (ರೂ. ಗಳಲ್ಲಿ)	ಇಎಂಡಿ (ರೂ. ಗಳಲ್ಲಿ)	ಕಾಮಗಾರಿ ಪೂರ್ಣ ಗೊಳಿಸಲು ನಿಗದಿಪಡಿಸಿದ ಕಾಲಮಿತಿ	ಟೆಂಡರ್ ಫಾರಂ ಸಂಖ್ಯೆ	ಶೆಡ್ಯೂಲ್ ಬೆಲೆ ಜಿ.ಎಸ್.ಟಿ ಒಳಗೊಂಡಂತೆ	ಅರ್ಹ ಗುತ್ತಿಗೆದಾರರು
1	ಕಾರ್ಕಳ ತಾಲೂಕು ಕ್ರೀಡಾಂಗಣದಲ್ಲಿರುವ ಹೆಲಿಪ್ಯಾಡ್‌ಗೆ ಮರು ಡಾಂಬರೀಕರಣ.	403812.00	10500.00	2 ತಿಂಗಳು	KW-1	500.00	4ನೇ ದರ್ಜೆ ಮತ್ತು ಮೇಲ್ಪಟ್ಟು
2	ಹೆಬ್ರಿ ತಾಲೂಕಿನ ಮುನಿಯಾಲು–ಕಬ್ಬಿನಾಲೆ–ಬಚ್ಚಪ್ಪು–ಹೆಬ್ರಿ ರಸ್ತೆಯ ಕಿಮೀ. 9.00ರಲ್ಲಿರುವ ಅತಿಯಾದ ಮಳೆಯಿಂದ ಹಾನಿಗೊಂಡ ಮೋರಿಯನ್ನು ಪುನರ್ ನಿರ್ಮಿಸುವುದು.	332017.00	8300.00	2 ತಿಂಗಳು	KW-1	500.00	4ನೇ ದರ್ಜೆ ಮತ್ತು ಮೇಲ್ಪಟ್ಟು
3	ಕಾರ್ಕಳ ಪ್ರವಾಸಿ ಮಂದಿರದ ಆವರಣಗೋಡೆಗೆ ರಕ್ಷಣಾ ಗ್ರಿಲ್ ಒದಗಿಸುವುದು.	408748.00	10500.00	2 ತಿಂಗಳು	KW-1	500.00	4ನೇ ದರ್ಜೆ ಮತ್ತು ಮೇಲ್ಪಟ್ಟು
4	ಕಾರ್ಕಳ ತಾಲೂಕು ಅಜೆಕಾರು–ಹೆರ್ಮುಂಡೆ–ಜಾರ್ಕಳ–ಕೆರವಾಶೆ ಜಿಲ್ಲಾಮುಖ್ಯರಸ್ತೆಯ ಕಿಮೀ. 8.80ರಿಂದ 12.50ರ ವರೆಗೆ ರಸ್ತೆಯನ್ನು ಅಭಿವೃದ್ಧಿಪಡಿಸುವುದು – ಸದರಿ ರಸ್ತೆ ಬದಿಯಲ್ಲಿನ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವುದು.	192602.00	4900.00	2 ತಿಂಗಳು	KW-1	500.00	4ನೇ ದರ್ಜೆ ಮತ್ತು ಮೇಲ್ಪಟ್ಟು

ಸಹಿ/–ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ನಂ.3 ಉಪವಿಭಾಗ, ಕಾರ್ಕಳ.

ವಿಜಯೋತ್ಸವ ದುರಂತ ವೇಳೆ ಮೃತರ ನೆನಪು | ಕಪ್ಪು ಪಟ್ಟಿ ಧರಿಸಿ ರಾಯಲ್ ಬೆಂಗಳೂರು ಆಟ

ಅಭಿಮಾನಿಗಳ ನೆನಪಿಗಾಗಿ 11 ಆಸನ ಖಾಲಿ

ಬೆಂಗಳೂರು: ಕಳೆದ ಆವೃತ್ತಿಯ ಗೆಲುವಿನ ಸಂಭ್ರಮಾಚರಣೆ ವೇಳೆ ಜೀವ ಕಳೆದುಕೊಂಡ 11 ಜನರನ್ನು ಸದಾ ನೆನಪಿಡುವ ನಿಟ್ಟಿನಲ್ಲಿ, ಆಟಗಾರರು ತಮ್ಮ ಮೊದಲ ತವರಿನ ಪಂದ್ಯಕ್ಕೆ ಮುಂಚಿತವಾಗಿ ಅಭ್ಯಾಸ ಅವಧಿಯನ್ನು 11 ನಂಬರ್ ಜೆರ್ಸಿಯಲ್ಲಿ ನಡೆಸಲಿದ್ದಾರೆ. ಪಂದ್ಯದ ಸಮಯದಲ್ಲಿ ಕಪ್ಪು ತೋಳುಪಟ್ಟಿಗಳನ್ನು ಧರಿಸಲಿದ್ದು, ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಎಡಾ ಆರ್‌ಸಿಬಿ ತವರು ಪಂದ್ಯದ ವೇಳೆ ಮೃತರ ಸ್ಮರಣಾರ್ಥ 11 ಆಸನಗಳನ್ನು ಖಾಲಿ ಇಡಲಾಗುವುದು ಎಂದು ಆರ್‌ಸಿಬಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಮೆನನ್ ಮಂಗಳವಾರ ಫ್ರಾಂಚೈಸಿಯ ಪೂರ್ವ ಋತುವಿನ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶನಿವಾರದಿಂದ ಶುರುವಾಗಲಿರುವ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ. ಎಲ್ಲಾ ತಂಡಗಳು ಅಭ್ಯಾಸದಲ್ಲಿ ವ್ಯಸ್ತವಾಗಿವೆ. ಈ ಮಧ್ಯೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಕಳೆದ ಬಾರಿಯ ದುರಂತ ಪಾಠವಾಗಿ ಕಲಿತು ಕೊಂಡು ಹೊಸ ಆರಂಭ ಪಡೆಯುವ ನಿರೀಕ್ಷೆಯಲ್ಲಿದೆ. ಪಂದ್ಯಗಳಿಗಾಗಿ ಆರ್‌ಸಿಬಿ, ಕೆಎಸ್‌ಸಿಎ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿವೆ. ಮೊದಲ ಪಂದ್ಯಕ್ಕೆ ಮೂರೇ ದಿನ ಬಾಕಿ ಇರುವಾಗ ಬೆಂಗಳೂರು ತಂಡ ನಗರದ ಖಾಸಗಿ ಹೋಟೆಲಿನಲ್ಲಿ ಮಾಧ್ಯಮಗೋಷ್ಠಿ ನಡೆಸಿತು.

ಜಂಟಿ ಕಾರ್ಯ: ಮೆನನ್: ಕ್ರೀಡಾಂಗಣ ನಿಯಂತ್ರಿಸುವ ಪರಿಷ್ಕೃತ ಚೌಕಟ್ಟನ್ನು ಮೆನನ್ ತಿಳಿಸಿದರು. ಬಿಸಿಸಿಐ, ಕೆಎಸ್‌ಸಿಎ ಮತ್ತು ಆರ್‌ಸಿಬಿ ನಡುವಿನ ಒಪ್ಪಂದ ಅಡಿಯಲ್ಲಿ, ರಾಜ್ಯ ಸಂಸ್ಥೆಯು ಪ್ರಮುಖ ಸಂಘಟಕರಾಗಿ ಕಾರ್ಯನಿರ್ವಹಿಸುತ್ತದೆ. ಫ್ರಾಂಚೈಸಿ ತುರ್ತು ಯೋಜನೆ, ಸ್ಟ್ಯಾಂಡರ್ಡ್ ಆಪರೇಟಿಂಗ್ ಕಾರ್ಯವಿಧಾನಗಳನ್ನು ಜಾರಿಗೆ ತರುತ್ತದೆ. ಕ್ರೀಡಾಂಗಣ ಒಪ್ಪಂದದ ಉಲ್ಲಂಘನೆಗೆ ಪರಿಹಾರ ನೀಡುತ್ತದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರೀಡಾಂಗಣದ ಒಳಗೆ ಮತ್ತು ಸುತ್ತಮುತ್ತಲಿನ ಹಲವಾರು ಹೊಸ ಪ್ರೇಕ್ಷಕರ ನಿರ್ವಹಣಾ ಕ್ರಮಗಳನ್ನು ಪರಿಚಯಿಸಿದೆ ಎಂದರು.

ಎಐ ಬಳಕೆ: ನಾವು ಜನಸಂದಣಿ ನಿರ್ವಹಣಾ ಕ್ರಮಗಳನ್ನು ಗಮನಾರ್ಹವಾಗಿ ಬಲಪಡಿಸಿದ್ದೇವೆ. ಡಾರ್ವಿನ್ ಎಂಬ ಎಐ ಸಾಧನದಿಂದ ಚಾಲಿತವಾದ ಒಳಗೆ, ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಒಳಗೊಂಡಂತೆ ಕ್ರೀಡಾಂಗಣದಾದ್ಯಂತ ನಾವು ಎಐ ನೇತೃತ್ವದ ಸಿಸಿಟಿವಿ ಪರಿಹಾರಗಳನ್ನು ಜಾರಿಗೆ ತಂದಿದ್ದೇವೆ. ಈ ವ್ಯವಸ್ಥೆಯು ಉತ್ತಮ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಖಚಿತಪಡಿಸಿಕೊಳ್ಳಲು ಸ್ಟ್ಯಾಂಡ್-ನಿರ್ದಿಷ್ಟ ಜನಸಂದಣಿ ಎಣಿಕೆಗಳನ್ನು ಒಳಗೊಂಡಂತೆ ನೈಜ-ಸಮಯದ ಎಚ್ಚರಿಕೆಗಳನ್ನು ಒದಗಿಸುತ್ತದೆ.



ನಾವು ನೀಡುವ ಗೌರವ

ಇದು ನಮ್ಮ ಅಭಿಮಾನಿಗಳಿಗೆ ಗೌರವವಾಗಿದೆ, ಅವರು ಯಾವಾಗಲೂ ನಮ್ಮ ಪ್ರಯಾಣದ ಭಾಗವಾಗಿ ಉಳಿಯುತ್ತಾರೆ ಎಂದು ಅವರು ಹೇಳಿದರು. ನಾನು ಸರ್ಕಾರಕ್ಕೆ ಧನ್ಯವಾದ ಹೇಳಲು ಬಯಸುತ್ತೇನೆ. ಜೂನ್ 4 ರಿಂದ ಇದು ಸುದೀರ್ಘ ಪ್ರಯಾಣವಾಗಿದೆ. ನ್ಯಾಯಯುತವು ಒದಗಿಸಿದ ಎಸ್‌ಒಪಿಗಳನ್ನು ಅನುಸರಿಸಲು ಮತ್ತು ಎಲ್ಲಾ ಶಿಫಾರಸುಗಳನ್ನು ಜಾರಿಯಲ್ಲಿಡಿ. ಪಂದ್ಯಕ್ಕೂ ಮುನ್ನ ನಮಗೆ ಸುರಕ್ಷಿತ ಮೈದಾನ ಸಿದ್ಧವಾಗಲಿದೆ ಎಂದು ಹೇಳಿದರು.

ಅಭಿಮಾನಿಗಳ ರಕ್ಷಣೆ ನಮ್ಮ ಮೊದಲ ಆದ್ಯತೆ. ಎಲ್ಲಾ ಸುರಕ್ಷಿತ ಕ್ರಮಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ. ಮುಖ್ಯವಾಗಿ 350 ಎಐ ಕ್ಯಾಮರಾ ಅಳವಡಿಕೆ ಮಾಡಲಾಗಿದೆ. ಕೆಎಸ್‌ಸಿಎ ಕೂಡ ನಮಗೆ ಬೆಂಬಲ ನೀಡುತ್ತಿದೆ. ಹೊಸ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಟಿಕೆಟುಗಳು ಮೊಬೈಲ್-ಟಿಕೆಟ್ ಆಗಿರುತ್ತವೆ.

■ ರಾಜೇಶ್ ಮೆನನ್, ಆರ್‌ಸಿಬಿ ಮುಖ್ಯ ಕಾರ್ಯನಿರ್ವಾಹಕ

ಪಾರ್ಕಿಂಗ್ ವ್ಯವಸ್ಥೆ

ಕ್ರೀಡಾಂಗಣದ ಆವರಣಕ್ಕೆ ಖಾಸಗಿ ವಾಹನಗಳಲ್ಲಿ ಬರುವುದನ್ನು ತಪ್ಪಿಸುವಂತೆ ಪೊಲೀಸರು ಕಟ್ಟುನಿಟ್ಟಾಗಿ ಸೂಚಿಸಿದ್ದಾರೆ. ಪಂದ್ಯ ವೀಕ್ಷಿಸಲು ಬರುವವರಿಗೆ ನಿಗದಿತ ಸ್ಥಳಗಳಲ್ಲಿ ಮಾತ್ರ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಗರುಡ ಮಾಲ್, ಸೆಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್, ಸೆಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್ ಹಾಗೂ ಫ್ರೀಡಂ ಪಾರ್ಕ್ ಆವರಣವನ್ನು ಅಧಿಕೃತ ಪಾರ್ಕಿಂಗ್ ಸ್ಥಳಗಳೆಂದು ಗುರುತಿಸಲಾಗಿದೆ. ಈ ನಿಗದಿತ ಸ್ಥಳಗಳಿಂದ ಕ್ರೀಡಾಂಗಣಕ್ಕೆ ತಲುಪಲು ವಿಶೇಷ ಶಟಲ್ ಬಸ್ ವ್ಯವಸ್ಥೆಯನ್ನು ಮಾಡಲಾಗಿದೆ.



ಮೆಟ್ರೋ ಪ್ರಯಾಣಕ್ಕೆ ಉತ್ತೇಜನ

ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಸಾರ್ವಜನಿಕ ಸಾರಿಗೆ, ವಿಶೇಷವಾಗಿ ಮೆಟ್ರೋ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಪಂದ್ಯದ ಟಿಕೆಟ್ ಹೊಂದಿರುವ ಪ್ರೇಕ್ಷಕರಿಗೆ ಮೆಟ್ರೋದಲ್ಲಿ ಉಚಿತವಾಗಿ ಪ್ರಯಾಣಿಸಲು (ಬರುವ ಮತ್ತು ಹೋಗುವ ಪ್ರಯಾಣಕ್ಕೆ) ಅವಕಾಶ ನೀಡಲಾಗಿದೆ. ಕ್ರೀಡಾಂಗಣಕ್ಕೆ ಹತ್ತಿರವಿರುವ ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರಸ್ತೆ ಮೆಟ್ರೋ ನಿಲ್ದಾಣಗಳನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ.

ವಾಹನಗಳ ಬಿಡುಗಡೆ, ಪಿಕಪ್ ಪಾಯಿಂಟ್

ಕ್ರೀಡಾಂಗಣದ ಗೇಟ್‌ಗಳ ಬಳಿ ವಾಹನಗಳನ್ನು ನಿಲ್ಲಿಸಲು ಅಥವಾ ಪ್ರೇಕ್ಷಕರನ್ನು ಇಳಿಸಲು (ಡ್ರಾಪ್) ಅವಕಾಶವಿರುವುದಿಲ್ಲ. ವಾಹನಗಳ ಪಿಕಪ್ ಮತ್ತು ಡ್ರಾಪ್‌ಗಾಗಿ ಕಬ್ಬನ್ ರಸ್ತೆ ಹಾಗೂ ಎಂ.ಜಿ. ರಸ್ತೆಯಲ್ಲಿ ಪ್ರತ್ಯೇಕ ಪಾಯಿಂಟ್‌ಗಳನ್ನು ನಿಗದಿಪಡಿಸಲಾಗಿದೆ. ಕ್ರೀಡಾಂಗಣದ ಪ್ರವೇಶ ದ್ವಾರಗಳು ಪಂದ್ಯ ಆರಂಭಕ್ಕೂ 4 ಗಂಟೆ ಮುಂಚಿತವಾಗಿಯೇ ತೆರೆಯಲಿದ್ದು, ಸಂಚಾರ ದಟ್ಟಣೆ ತಪ್ಪಿಸಲು ಪ್ರೇಕ್ಷಕರು ಬೇಗನೆ ಆಗಮಿಸುವಂತೆ ಕೋರಲಾಗಿದೆ. ಕ್ವೀನ್ಸ್ ರಸ್ತೆ ಭಾಗದಿಂದ ಸಾರ್ವಜನಿಕ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದ್ದು, ಕಬ್ಬನ್ ರಸ್ತೆ ಮತ್ತು ಲಿಂಕ್ ರಸ್ತೆಗಳ ಮೂಲಕ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ. ಈ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಯಶ್, ಜೋಶ್ ಅಲಭ್ಯ

ವೈಯಕ್ತಿಕ ಕಾರಣಗಳಿಂದಾಗಿ ಯಶ್ ದಯಾಳ್ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಅಲಭ್ಯರಾಗಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಕೂಡ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿ, ಯಶ್ ದಯಾಳ್ ವೈಯಕ್ತಿಕ ಕಾರಣಗಳಿಂದಾಗಿ ಅವರು ತಕ್ಷಣ ತಂಡವನ್ನು ಸೇರುವುದಿಲ್ಲ ಎಂದು ದೃಢಪಡಿಸಿದರು. ಜೋಶ್ ಹ್ಯಾಜಲ್‌ವುಡ್ ಅವರ ಲಭ್ಯತೆಯ ಬಗ್ಗೆ ಮಾತನಾಡುತ್ತಾ, ಫ್ರಾಂಚೈಸಿ ಕ್ರಿಕೆಟ್ ಆಸ್ಟ್ರೇಲಿಯಾದೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಹೇಳಿದರು. ಜೋಶ್ ಜತೆ ನಿರಂತರ ಸಂಪರ್ಕದಲ್ಲಿದ್ದೇವೆ. ಗಾಯದಿಂದಾಗಿ ಅವರು ಕ್ರಿಕೆಟ್‌ನಿಂದ ಸ್ವಲ್ಪ ದೂರ ಉಳಿದಿದ್ದಾರೆ, ಫಿಟ್‌ನೆಸ್ ಪ್ರಮಾಣ ಪಡೆದ ತಕ್ಷಣ ಅವರು ತಂಡಕ್ಕೆ ಸೇರುತ್ತಾರೆ ಎಂದು ಅವರು ಹೇಳಿದರು.

ದೇಶಿ ಬೌಲರ್‌ಗಳಿದ್ದಾರೆ: ತಂಡದ ಸಂಯೋಜನೆಯ ಬಗ್ಗೆ ಮಾತನಾಡಿರುವ ಮೊ ಬೊಬಾಟ್, ನಾವು ಚಾಂಪಿಯನ್‌ಗಳಾಗಿ ಮೈದಾನಕ್ಕಿಳಿಯಲಿದ್ದೇವೆ. ಮೊದಲಿನ ಪಂದ್ಯಗಳಲ್ಲಿ ಯಶ್ ದಯಾಳ್ ಅಲಭ್ಯರಿದ್ದಾರೆ. ಹ್ಯಾಜಲ್‌ವುಡ್ ಕೂಡ ಲಭ್ಯರಿಲ್ಲ, ಆದಾಗ್ಯೂ, ಬೌಲಿಂಗ್ ವಿಭಾಗದಲ್ಲಿ ನಾವು ಮುಂದಿದ್ದೇವೆ. ವಿವಿಧ ಬೌಲರುಗಳನ್ನು ತಂಡದಲ್ಲಿ ಹೊಂದಿದ್ದೇವೆ. ರಾಸಿಕ್ ಸಲಾಂ, ಮಂಗೇಶ್ ಯಾದವ್ ಅಂಥ ದೇಶಿ ಯುವ ಬೌಲರ್‌ಗಳನ್ನು ತಂಡ ಹೊಂದಿದೆ. ಹೀಗಾಗುವಾಗ ಹೆಚ್ಚಿನ ಸಂಗತಾನಿ ಬಳಲ್ಲ ಎಂದರು. ಈಗ ಗುರಿ ಸರಳವಾಗಿದೆ, ನಾವು ಕೊನೆಯದನ್ನು ಮುಗಿಸಿದ ರೀತಿಯಲ್ಲಿ ಈ ಋತುವನ್ನು ಪ್ರಾರಂಭಿಸುವುದು. ನಾವು ಪ್ರತಿ ತಂಡದ ಬಗ್ಗೆ ಸಾಕಷ್ಟು ಗೌರವವನ್ನು ಹೊಂದಿದ್ದೇವೆ ಮತ್ತು ಇದೀಗ, ನಮ್ಮ ಎಲ್ಲಾ ಗಮನವು ಸನ್ ರೈಸರ್ಸ್ ಹೈದರಾಬಾದ್ ವಿರುದ್ಧದ ಮೊದಲ ಪಂದ್ಯದ ಮೇಲೆ ಇದೆ ಎಂದು ಬೊಬಾಟ್ ತಿಳಿಸಿದರು.

ಕಿರುಸುದ್ದಿ

ಕೆಕೆಆರ್ ತಂಡಕ್ಕೆ ರಿಂಕು ಸಿಂಗ್ ಉಪನಾಯಕ

ಕೋಲ್ಕತಾ: ಕೋಲ್ಕತಾ ನೈಟ್ ರೈಡರ್ಸ್ ತಂಡಕ್ಕೆ ಬ್ಯಾಟರ್ ರಿಂಕು ಸಿಂಗ್ ಅವರನ್ನು ಉಪನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ವೇಗಿಗಳ ಗಾಯದಿಂದಾಗಿ ಭಾರೀ ಹಿನ್ನಡೆ ಅನುಭವಿಸಲಾರಂಭಿಸಿರುವ ಕೆಕೆಆರ್ ಮಂಗಳವಾರದಂದು ಈ ಬಗ್ಗೆ ಘೋಷಣೆ ಮಾಡಿತು. ಕಳೆದ ಬಾರಿಯ ಮೆಗಾ ಹರಾಜಿನ ವೇಳೆ ಚಾಂಪಿಯನ್ ತಂಡದಿಂದ ಶ್ರೇಯಸ್ ಅಯ್ಯರ್ ಅವರನ್ನು ಬಿಟ್ಟುಕೊಟ್ಟಿದ್ದ ಕೆಕೆಆರ್ ಅಚ್ಚರಿಯ ಆಯ್ಕೆಯಲ್ಲಿ ಅಜಿಂಕ್ಯ ರಹಾನೆ ಅವರನ್ನು ಖರೀದಿಸಿ ನಾಯಕರನ್ನಾಗಿ ಮಾಡಿತ್ತು. ಈ ಬಾರಿಯ ಹರಾಜಿನಲ್ಲಿ ವೆಂಕಟೇಶ್ ಅಯ್ಯರ್ ಸೇರಿದಂತೆ ಪ್ರಮುಖ ಆಟಗಾರರನ್ನು ಬಿಟ್ಟುಕೊಟ್ಟಿದೆ. ಗಾಯದಿಂದಾಗಿ ಬೌಲಿಂಗ್ ಪಡೆಯೇ ಬಿದ್ದಂತಿದೆ. ಹೀಗಿರುವಾಗ ಭವಿಷ್ಯದ ಕುರಿತಂತೆ ಪ್ರಮುಖ ನಿರ್ಧಾರ ಮಾಡಿರುವ ಕೆಕೆಆರ್ ರಿಂಕು ಸಿಂಗ್ ಅವರಿಗೆ ಉಪನಾಯಕ ಜವಾಬ್ದಾರಿ ನೀಡಿದೆ.

ಕ್ರೀಡಾ ಆರ್ಥಿಕತೆ: ಭಾರತ ಲೆಕ್ಕ 19 ಸಾವಿರ ಕೋಟಿ

ಬೆಂಗಳೂರು: ಭಾರತದ ಕ್ರೀಡಾ ಆರ್ಥಿಕತೆಯ ಗಾತ್ರ ಅಂದಾಜು 18,864 ಕೋಟಿ ರೂ.ತಲುಪಿದೆ ಎಂದು ಡಬ್ಲ್ಯು.ಪಿಪಿ ಮೀಡಿಯಾದ ವರದಿಯೊಂದು ಹೇಳಿದೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ಕ್ರೀಡಾ ಆರ್ಥಿಕತೆಯ ಗಾತ್ರ ಎರಡು ಬಿಲಿಯನ್ ಡಾಲರ್ ದಾಟಿದೆ. ಡಬ್ಲ್ಯು.ಪಿಪಿ ಮೀಡಿಯಾದ ವರದಿಯೊಂದರ ಪ್ರಕಾರ ಸ್ಪೋರ್ಟ್ಸ್ ಎಕಾನಮಿ ಗಾತ್ರ 2.13 ಬಿಲಿಯನ್ ಡಾಲರ್ ಮುಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಈ ಸುದ್ದಿಯನ್ನು ಹಂಚಿಕೊಂಡಿದ್ದಾರೆ. ಭಾರತದ ಕ್ರೀಡಾ ಆರ್ಥಿಕತೆಗೆ ಕ್ರಿಕೆಟ್ ಕೊಡುಗೆಯೇ ಶೇ. 89ರಷ್ಟಿದೆ. ಭಾರತೀಯ ಕ್ರೀಡಾ ಕ್ಷೇತ್ರದ ಆರ್ಥಿಕತೆ ಕಳೆದ ನಾಲ್ಕು ವರ್ಷದಲ್ಲಿ ಅದ್ವಿತೀಯವಾಗಿ ಹಿಗ್ಗಿದೆ. ಶೇ. 19ರ ಸಿಎಜಿಆರ್‌ನಲ್ಲಿ ಬೆಳೆದಿದೆ. ನಾಲ್ಕು ವರ್ಷದ ಹಿಂದೆ ಇದ್ದುದಕ್ಕೆ ಹೋಲಿಸಿದರೆ ಅದರ ಗಾತ್ರ ಎರಡು ಪಟ್ಟು ಹೆಚ್ಚಿದೆ. ಅಂದರೆ, ನಾಲ್ಕು ವರ್ಷದಲ್ಲಿ ಡಬಲ್ ಆಗಿದೆ. ಈ ಆರ್ಥಿಕತೆಯಲ್ಲಿ ಶೇ 89ರಷ್ಟು ಕೊಡುಗೆ ಕ್ರಿಕೆಟ್‌ನಿಂದಲೇ ಸಿಂದಿದೆ. 16633 ಕೋಟಿ ರೂ. ಕ್ರಿಕೆಟ್‌ನಿಂದಲೇ ಎಣಿಕೆಯಾಗಿದೆ ಎಂದು ವರದಿಯಾಗಿದೆ.

ಫಿಫಾ ಸರಣಿ ಆಡಲಿದೆ ಭಾರತ

ಹೊಸದಿಲ್ಲಿ: ಭಾರತೀಯ ಮಹಿಳಾ ಫುಟ್ಬಾಲ್ ತಂಡ ಏಪ್ರಿಲ್‌ನಲ್ಲಿ ಕೀನ್ಯಾದಲ್ಲಿ ನಡೆಯಲಿರುವ ಫಿಫಾ ಸರಣಿ 2026 ರಲ್ಲಿ ಭಾಗವಹಿಸಲಿದೆ. 2024 ರಲ್ಲಿ ಪಾದಾರ್ಪಣೆ ಮಾಡಿದ ನಂತರ ಅಂತಾರಾಷ್ಟ್ರೀಯ ಸ್ನೇಹಪರ ಉಪಕ್ರಮದ ಎರಡನೇ ಆವೃತ್ತಿಯಾಗಿದ್ದು, ನಾಲ್ಕು ಗುಂಪುಗಳನ್ನು ಒಳಗೊಂಡ ನಾಲ್ಕು ಗುಂಪುಗಳನ್ನು ಒಳಗೊಂಡಿರುತ್ತದೆ, ಎಂದು ರಾಷ್ಟ್ರವು ಎಲ್ಲಾ ಪಂದ್ಯಗಳನ್ನು ಆಯೋಜಿಸುತ್ತದೆ. ಮಂಗಳವಾರ ಕೀನ್ಯಾದಲ್ಲಿ ನಾಲ್ಕನೇ ಮಹಿಳಾ ಗುಂಪನ್ನು ಪಟ್ಟಿಗೆ ಸೇರಿಸಿದ ನಂತರ ಭಾರತ ಆಡಲಿದೆ ಎಂದು ಖಚಿತವಾಗಿದೆ. ಆಸ್ಟ್ರೇಲಿಯಾ ಮತ್ತು ಮಲಾವಿ ಕೂಡ ಇದೇ ಗುಂಪಿನಲ್ಲಿ ಸ್ಪರ್ಧಿಸಲಿವೆ. ಪಂದ್ಯಗಳು ಕೀನ್ಯಾದ ನೈರೋಬಿಯಲ್ಲಿರುವ ನ್ಯೋಯೋ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿವೆ. ಭಾರತೀಯ ಮಹಿಳಾ ತಂಡ ಇತ್ತೀಚೆಗೆ ಅಂಡರ್-17 ಮಹಿಳಾ ಏಷ್ಯನ್ ಕಪ್ 2026 ರಲ್ಲಿ ಆಡಿತ್ತು, ಅಲ್ಲಿ ಮೂರರಲ್ಲಿ ಮೂರು ಸೋಲುಗಳ ನಂತರ ಗುಂಪು ಹಂತದಿಂದ ನಿರ್ಗಮಿಸಿತು.

ಎಸಿಕ್ಸ್ ಅಥ್ಲೀಟ್ ವಿಶೇಷ ಶೂ ಬಿಡುಗಡೆ



ಬೆಂಗಳೂರು: ಜಾಗತಿಕ ಮಟ್ಟದ ಜಪಾನಿ ಕ್ರೀಡಾ ಬ್ರಾಂಡ್ ಹಾಗೂ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 2026'ರ ಅಧಿಕೃತ ಕ್ರೀಡಾ ಸಾಮಗ್ರಿ ಪಾಲುದಾರ ಸಂಸ್ಥೆಯಾದ ಎಸಿಕ್ಸ್ ಸಂಸ್ಥೆಯು ಬೆಂಗಳೂರು ನಗರದ ಬ್ರಿಗೇಡ್ ರಸ್ತೆಯ ಮಳಿಗೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಸೂಪರ್‌ಬ್ಲಾಸ್ಟ್ 3' ರನ್ನಿಂಗ್ ಶೂಗಳನ್ನು ಬಿಡುಗಡೆ ಮಾಡಿತು. ಎಲ್ಲಾ ವಯಸ್ಸಿನ ಓಟಗಾರರ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಶೂಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ಶೂ ಬಿಡುಗಡೆ ಕಾರ್ಯಕ್ರಮದಲ್ಲಿ ಮುಂಬರುವ ಟಿಸಿಎಸ್ ವರ್ಲ್ಡ್ 10ಕೆ 2026ರ ರೇಸ್ ದಿನದ ಅಧಿಕೃತ ಕ್ರೀಡಾ ಉಡುಪುಗಳನ್ನು ಪ್ರದರ್ಶಿಸಲಾಯಿತು. ಟೆನಿಸ್ ದಿಗ್ಗಜ ರೋಹನ್ ಬೋಪಣ್ಣ ಮತ್ತು ಖ್ಯಾತ ಸ್ಕ್ವಾಷ್ ಆಟಗಾರ್ತಿ ಜೋಷ್ನಾ ಚಿನ್ನಪ್ಪ ಅವರು ಈ ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದರು. ತರಬೇತಿ ಮತ್ತು ಶಿಸ್ತಿನ ಮಹತ್ವದ ಕುರಿತು ಮಾತನಾಡಿದ ಈ ಖ್ಯಾತ ಕ್ರೀಡಾಪಟುಗಳು, ಎಸಿಕ್ಸ್‌ನ 'ಸೌಂಡ್ ಮೈಂಡ್, ಸೌಂಡ್ ಬಾಡಿ' (ಸ್ವಸ್ಥ ಮನಸ್ಸು, ಸ್ವಸ್ಥ ಶರೀರ) ತತ್ವವನ್ನು ಶ್ಲಾಘಿಸಿದರು.

ಔಪಚಾರಿಕ ಪಂದ್ಯಗಳಿಗೆ ಭಾರತ ತಂಡ

ಹೊಸದಿಲ್ಲಿ: ಎಎಫ್‌ಸಿ ಏಷ್ಯನ್ ಕಪ್ 2027 ಪಂದ್ಯಾವಳಿಯ ಅರ್ಹತಾ ಸುತ್ತಿನ ಪಂದ್ಯಗಳಿಗಾಗಿ ಭಾರತ ತನ್ನ ತಂಡವನ್ನು ಪ್ರಕಟಿಸಿತು. ಭಾರತದ ಪುರುಷರ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಖಾಲಿದ್ ಜಮೀಲ್ ಮುಂಬರುವ ಎಎಫ್‌ಸಿ ಏಷ್ಯನ್ ಕಪ್ 2027 ಅರ್ಹತಾ ಪಂದ್ಯಕ್ಕಾಗಿ ಹಾಂಗ್ ಕಾಂಗ್ ವಿರುದ್ಧ 23 ಸದಸ್ಯರ ತಂಡವನ್ನು ಪ್ರಕಟಿಸಿದ್ದಾರೆ. ಹಿಂದಿನ ತಂಡಕ್ಕೆ ಹೋಲಿಸಿದರೆ ಈ ಬಾರಿ 14 ಬದಲಾವಣೆಗಳನ್ನು ಮಾಡಲಾಗಿದೆ. ಗೋಲ್‌ಕೀಪರ್ ಅಲ್ಬಿನೋ ಗೋಮ್ಸ್ ಮತ್ತು ಡಿಫೆಂಡರ್ ಬೆಕಿಯ್ ವರ್ಗೀಸ್ ಅವರನ್ನು ಅಚ್ಚರಿ ಆಯ್ಕೆಗಳಾಗಿ ಸೇರಿಸಲಾಗಿದೆ. ಅಲ್ಬಿನೋ ಗೋಮ್ಸ್ ಸುಮಾರು ಒಂದು ದಶಕದ ಬಳಿಕ ಮತ್ತೆ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಬೆಕಿಯ್ ವರ್ಗೀಸ್ ಮೊದಲ ಬಾರಿ ಹಿರಿಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ಭಾರತ ಈಗಾಗಲೇ ಅರ್ಹತಾ ಹೋರಾಟದಿಂದ ಹೊರಬಿದ್ದಿದೆ. ಆಡಿದ 5 ಪಂದ್ಯಗಳಲ್ಲಿ 3 ಸೋಲು ಮತ್ತು 2 ಡ್ರಾ ಫಲಿತಾಂಶಗಳೊಂದಿಗೆ ತಂಡಕ್ಕೆ ಇನ್ನೂ ಜಯ ಸಿಕ್ಕಿಲ್ಲ, ಆದರೂ ಮುಂದಿನ ಪಂದ್ಯಗಳು ಔಪಚಾರಿಕತೆಗೆ ಮಾತ್ರ ನಡೆಯಲಿವೆ.

ಭಾರತ ತಂಡ

ಗೋಲ್‌ಕೀಪರ್‌ಗಳು: ಅಲ್ಬಿನೋ ಗೋಮ್ಸ್, ಗುರುಪ್ರೀತ್ ಸಿಂಗ್ ಸಂಧು, ವಿಶಾಲ್ ಕೈತ್

ಡಿಫೆನ್ಸ್: ಅಭಿಷೇಕ್ ಸಿಂಗ್ ಟೆಕಚಂ, ಆಕಾಶ್ ಮಿಶ್ರಾ, ಅನ್ವರ್ ಅಲಿ, ಬೆಕಿಯ್ ವರ್ಗೀಸ್, ನಿಖಿಲ್ ಪೂಜಾರಿ, ರೋಷನ್ ಸಿಂಗ್ ನೋರೆಮ್, ಸಂದೇಶ್ ಜಿಂಗನ್, ರಾಹುಲ್ ಭೇಕೆ

ಮಿಡ್‌ಫೀಲ್ಡರ್: ಆಶಿಕ್ ಕುರುನಿಯನ್, ಡ್ಯಾನಿಶ್ ಫಾರೂಖ್ ಭಟ್, ಜೀಕ್ಸನ್ ಸಿಂಗ್ ಥೌನೋಜಾಮ್, ಲಾಲೆಂಗ್ಮಾವಿಯಾ ರಾಲ್ಟೆ, ಸಹಲ್ ಅಬ್ದುಲ್ ಸಮದ್

ಫಾರ್ವರ್ಡ್‌ಗಳು: ಎಡ್ಮಂಡ್ ಲಾಲ್ರಿಂಡಿಕಾ, ಫಾರುಖ್ ಚೌಧರಿ, ಲಾಲಿಯಾನ್‌ಜುವಾಲಾ ಛಾಂಗ್ಟೆ, ಲಿಸ್ಟನ್ ಕೊಲಾಕೊ, ಮನ್‌ವೀರ್ ಸಿಂಗ್, ರಹೀಂ ಅಲಿ, ರಿಯಾನ್ ವಿಲಿಯಮ್ಸ್

ಎಲ್ಲಿಸ್ ಬದಲಿಗೆ ಆಯ್ಕೆ | ದಿಲ್ಲಿ ತಂಡಕ್ಕೆ ಡಕೆಟ್ ಅಲಭ್ಯ

ಚೆನ್ನೈ ತಂಡಕ್ಕೆ ಸ್ಪೆನ್ಸರ್ ಜಾನ್ಸನ್

ಮುಂಬೈ: ಆಸ್ಟ್ರೇಲಿಯಾ ವೇಗಿ ನಾಥನ್ ಎಲ್ಲಿಸ್ ಗಾಯದ ಕಾರಣಗಳಿಂದಾಗಿ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ಹೊರಬಿದ್ದ ಬೆನ್ನಲ್ಲೇ ಅದೇ ಆಸ್ಟ್ರೇಲಿಯಾದ ಸ್ಪೆನ್ಸರ್ ಜಾನ್ಸನ್ ಅವರನ್ನು ಫ್ರಾಂಚೈಸಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಬದಲಿ ಆಟಗಾರನಾಗಿ ಆಯ್ಕೆ ಮಾಡಿಕೊಂಡಿದೆ.

ಐಪಿಎಲ್‌ಗೆ ದಿನಗಣನೆ ಶುರುವಾಗಿದೆ. ಆಸ್ಟ್ರೇಲಿಯಾ ಮೂಲದ ಪ್ರಮುಖ ಆಟಗಾರರು ಪಂದ್ಯಾವಳಿಯಲ್ಲಿ ಹಾಜರಾಗುತ್ತಿಲ್ಲ. ವಿಶೇಷವಾಗಿ ವೇಗಿಗಳಾದ ಜೋಶ್ ಹ್ಯಾಜೆಲ್‌ವುಡ್, ಮಿಚೆಲ್ ಸ್ಟಾರ್ಕ್, ನಾಥನ್ ಎಲ್ಲಿಸ್ ಸೇರಿದಂತೆ ಪ್ರಮುಖ ಆಟಗಾರರು ಗಾಯದಿಂದಾಗಿ ಪಂದ್ಯಾವಳಿಗೆ ಲಭ್ಯವಿಲ್ಲ ಎಂದಿದ್ದಾರೆ. ಹರಾಜಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಎಲ್ಲಿಸ್ ಅವರನ್ನು ಪ್ರಮುಖ ವೇಗಿಯಾಗಿ ಖರೀದಿಸಿತ್ತು. ಅವರ ಅನುಪಸ್ಥಿತಿ ಬೆನ್ನಲ್ಲೇ 1.5 ಕೋಟಿ ರೂ.ಗೆ ಜಾನ್ಸನ್ ಅವರನ್ನು ಖರೀದಿಸಿದೆ.

ಐಪಿಎಲ್ ತೊರೆದ ದಿಲ್ಲಿಯ ಡಕೆಟ್

ಇಂಗ್ಲೆಂಡ್ ಕ್ರಿಕೆಟ್ ತಂಡಕ್ಕೆ ಆಡುವ ಕುರಿತಂತೆ ಗಮನ ಹರಿಸುವುದಾಗಿ ಹೇಳಿರುವ ದಿಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭಿಕ ಆಟಗಾರ ಬೆನ್ ಡಕೆಟ್ ಐಪಿಎಲ್ ತ್ಯಜಿಸಿದರು. ಪಂದ್ಯಾವಳಿಗೆ ಮೂರೇ ದಿನ ಉಳಿದಿರುವಾಗಲೇ ಅವರ ದಿಢೀರ್ ನಿರ್ಧಾರ ಹೊರಬಿದ್ದಿದೆ. ಕೆ.ಎಲ್. ರಾಹುಲ್ ಅಂತಹ ಆಟಗಾರರನ್ನು ಹೊಂದಿರುವ ದಿಲ್ಲಿ ಕ್ಯಾಪಿಟಲ್, ಡು-ಪ್ಲೆಸಿ ಅವರನ್ನು ಬಿಡುಗಡೆ ಮಾಡಿದ್ದಲ್ಲದೆ ಇಂಗ್ಲೆಂಡ್ ಮೂಲದ ಬೆನ್ ಡಕೆಟ್ ಅವರನ್ನು ಖರೀದಿಸಿತ್ತು. ಈ ಬಗ್ಗೆ ಇಂಗ್ಲೆಂಡಿನ ಮಾಧ್ಯಮದೊಂದಿಗೆ ಮಾತನಾಡುತ್ತಾ ಅವರು, ಇದು ತುಂಬಾ ಕಠಿಣ ನಿರ್ಧಾರವಾಗಿತ್ತು. ನಾನು ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಕ್ಷಮೆಯಾಚಿಸುತ್ತೇನೆ. ದೇಶದ ಕ್ರಿಕೆಟ್ ಮೇಲೆ ಗಮನ ಹರಿಸುವ ನಿರ್ಧಾರಕ್ಕೆ ಬಂದಿದ್ದೇನೆ. ಐಪಿಎಲ್‌ನಿಂದ ಹೊರಬೀಳುತ್ತಿಲ್ಲ, ಮುಂದೊಂದು ದಿನ ದಿಲ್ಲಿ ತಂಡವನ್ನು ಪ್ರತಿನಿಧಿಸುವ ಆಸೆ ಹೊಂದಿದ್ದೇನೆ ಎಂದಿದ್ದಾರೆ. ಕಾರಣ ರಹಿತ ಟೂರ್ನಿ ಹಿಂದೆ ಸರಿದರೆ ಬಿಸಿಸಿಐನಿಂದ 3 ವರ್ಷ ನಿಷೇಧದ ನಿಯಮವಿದೆ.

ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ

ಬೆಂಗಳೂರು: ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣಕ್ಕೆ ಐಪಿಎಲ್ ಮರಳಿದ ಹೊತ್ತಲ್ಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕರ್ನಾಟಕದ ಬ್ರಾಂಡ್ ಕೆಎಂಎಫ್ 2026ರ ಆವೃತ್ತಿಯಲ್ಲಿ ಆರ್‌ಸಿಬಿಗೆ ಪ್ರಾಯೋಜಕತ್ವ ನೀಡಿದೆ.

ಬಹು ದಿನಗಳಿಂದ ಕೆಎಮ್‌ಎಫ್ ಈ ಪ್ರಾಯೋಜಕತ್ವದ ಬಗ್ಗೆ ಮಾತುಗಳು ಕೇಳಿಬರುತ್ತಿದ್ದವು. ಮಂಗಳವಾರದಂದು ಅಧಿಕೃತವಾಗಿ ಕೆಎಂಎಫ್ ಆರ್‌ಸಿಬಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಬಾರಿಯ ಕ್ರಿಕೆಟ್ ಋತುವಿಗೆ ಕರ್ನಾಟಕ ಹಾಲು ಮಹಾಮಂಡಳಿ ಆರ್‌ಸಿಬಿ ತಂಡದ ಅಧಿಕೃತ ಪಾಲುದಾರನಾಗಿ ಒಪ್ಪಂದ ಮಾಡಿಕೊಂಡಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಘೋಷಿಸಿದರು. ಈ ಮೂಲಕ ಸ್ಥಳೀಯ ಬ್ರ್ಯಾಂಡ್ ನಂದಿನಿಯನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಗುರುತಿಸುವಂತೆ ಮಾಡುವುದು ಮಂಡಳಿಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

4 ಕೋಟಿ ರೂ.ಗೆ ಒಪ್ಪಂದ: ಈ ಬಗ್ಗೆ ಬೆಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, ಈ ಒಪ್ಪಂದದ ಮೂಲಕ ನಂದಿನಿ ಉತ್ಪನ್ನಗಳು ದೇಶಕ್ಕೆ ಪರಿಚಯವಾಗಲಿವೆ. ಆರ್‌ಸಿಬಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವತಂಡ, ಹಾಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಂದಿನಿ ಉತ್ಪನ್ನ ಪರಿಚಯವಾಗಲಿದೆ. ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ದೇವದತ್ತ ಪಡಿಕ್ಕಲ್ ಅಂಥವರಿಂದ ಉತ್ಪನ್ನ ಪ್ರಚಾರಕ್ಕೆ ಮುಂದಾಗಿದ್ದೇವೆ. 4 ಕೋಟಿ ರೂ ವೆಚ್ಚದಲ್ಲಿ ಒಂದು ವರ್ಷದ ಟೆಂಡರ್ ಪಡೆದಿದೆ ಎಂದು ಮಾಹಿತಿ ನೀಡಿದ್ದಾರೆ.



» ಪಾಲುದಾರಿಕೆ ಈಗ ಅಧಿಕೃತ
» 4 ಕೋಟಿ ರೂ. ಒಪ್ಪಂದ
» ಕೊಹ್ಲಿ, ಪಡಿಕ್ಕಲ್, ಪಾಟಿದಾರ್ ಅವರಿಂದ ಬ್ರಾಂಡ್ ಪ್ರಚಾರ

ನಂದಿನಿ ವಿಶ್ವಾಸಾರ್ಹ ಕೇಂದ್ರ ಬಿಂದು: ಈ ಕುರಿತಾಗಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು, ಕರ್ನಾಟಕದ ಹೆಮ್ಮೆಯ ನಂದಿನಿ ಬ್ರ್ಯಾಂಡ್ ಕಳೆದ ಐಪಿಎಲ್ ಹಾಲಿ ಚಾಂಪಿಯನ್ ಆರ್‌ಸಿಬಿಯ ಅಧಿಕೃತ ಡೈರಿ ಪಾಲುದಾರನಾಗಿದೆ. ನಂದಿನಿಯ ವಿಶ್ವಾಸಾರ್ಹತೆ ಮತ್ತು ಆರ್‌ಸಿಬಿಯ ಕ್ರೀಡಾ ಬದ್ಧತೆ ಈ ಬಾರಿಯ ಐಪಿಎಲ್‌ನ ಆಕರ್ಷಣೆಯ ಕೇಂದ್ರಬಿಂದುವಾಗಲಿದೆ ಎಂದಿದ್ದಾರೆ.

₹16.6 ಸಾವಿರ ಕೋಟಿಗೆ ಆರ್‌ಸಿಬಿ ಖರೀದಿ

ಬೆಂಗಳೂರು: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಆದಿತ್ಯ ಬಿರ್ಲಾ ಹಾಗೂ ಟೈಮ್ಸ್ ಆಫ್ ಇಂಡಿಯಾ ಒಕ್ಕೂಟ 16,600 ಕೋಟಿಗೆ ಖರೀದಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ಕೆಲವೇ ದಿನಗಳು ಬಾಕಿಯಿದ್ದು, ಫ್ರಾಂಚೈಸಿಗಳಾದ ಆರ್‌ಸಿಬಿ ಮತ್ತು ಆರ್ ಆರ್ ತಂಡಗಳು ಮಾರಾಟಕ್ಕಿದ್ದವು. ಯುಎಸ್ ಮೂಲದ ಕಂಪನಿ ಆರ್‌ಆರ್ ತಂಡವನ್ನು ಖರೀದಿಸಿದೆ. ಬೆಂಗಳೂರು ತಂಡವನ್ನು ಆದಿತ್ಯ ಬಿರ್ಲಾ ಹಾಗೂ ಟೈಮ್ಸ್ ಆಫ್ ಇಂಡಿಯಾ ಒಕ್ಕೂಟ 16.6 ಸಾವಿರ ಕೋಟಿಗೆ ಖರೀದಿಸಿದೆ ಎಂದು ವರದಿಯಾಗಿದೆ. ಫ್ರಾಂಚೈಸಿಗೆ ಆದಿತ್ಯ ಬಿರ್ಲಾ ಗ್ರೂಪ್‌ನ ನಿರ್ದೇಶಕ ಆರ್ಯಮನ್ ವಿಕ್ರಮ್ ಬಿರ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದು, ಟೈಮ್ಸ್ ಆಫ್ ಇಂಡಿಯಾ ಗ್ರೂಪಿನ ಸತ್ಯನ್ ಗಜ್ವಾನಿ ಫ್ರಾಂಚೈಸಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ ಎಂದು ಹೇಳಲಾಗಿದೆ. ಕಳೆದ ಎರಡು ದಶಕಗಳಲ್ಲಿ, ಐಪಿಎಲ್ ಜಾಗತಿಕ ಕ್ರೀಡಾ ಶಕ್ತಿ ಕೇಂದ್ರವಾಗಿ ಮಾರ್ಪಟ್ಟಿದ್ದು ಇದು ಭಾರತೀಯ ಕ್ರಿಕೆಟನ ಮುಖವನ್ನೇ ಬದಲಾಯಿಸಿದೆ. ಇದುಗಳ ಕ್ರೀಡೆಯಲ್ಲಿ ಅತ್ಯಂತ ಪ್ರಭಾವಶಾಲಿ ಫ್ರಾಂಚೈಸಿಗಳಲ್ಲಿ ಒಂದಾದ ಆರ್‌ಸಿಬಿ, ಆದಿತ್ಯ ಬಿರ್ಲಾ ಗ್ರೂಪ್‌ಗೆ ತನ್ನ ಸಂಸ್ಕೃತಿ-ನಿರ್ಮಾಣದ ಪರಂಪರೆಯನ್ನು ಜಾಗತಿಕ ಕ್ರೀಡಾ ಕ್ಷೇತ್ರಕ್ಕೆ ವಿಸ್ತರಿಸಲು ಒಂದು ವಿಶಿಷ್ಟ ವೇದಿಕೆಯನ್ನು ನೀಡುತ್ತದೆ. ಈ ಆಸ್ತಿಯ ಪಾಲಕರಾಗಲು ನಾವು ಸಂತೋಷಪಡುತ್ತೇವೆ. ಈ ಅಸಾಧಾರಣ ಪರಂಪರೆಯನ್ನು ಮತ್ತಷ್ಟು ನಿರ್ಮಿಸಲು ಬದ್ಧರಾಗಿದ್ದೇವೆ ಎಂದು ಆದಿತ್ಯ ಬಿರ್ಲಾ ಗ್ರೂಪ್‌ನ ಅಧ್ಯಕ್ಷ ಕುಮಾರ್ ಮಂಗಲಂ ಬಿರ್ಲಾ ತಿಳಿಸಿದ್ದಾರೆ.

ದಾಖಲೆಯ ಮೊತ್ತಕ್ಕೆ ಆರ್‌ಆರ್ ಬಿಕರಿ: ಐಪಿಎಲ್ ಫ್ರಾಂಚೈಸಿ ರಾಜಸ್ಥಾನ ರಾಯಲ್ಸ್ ಫ್ರಾಂಚೈಸಿಯು ದಾಖಲೆಯ 15,286 ರೂ.ಗಳಿಗೆ ಬಿಕರಿಯಾಗಿದೆ. ಬಹು ದಿನಗಳಿಂದ ನಡೆಯುತ್ತಿದ್ದ ಬಿಡ್ಡಿಂಗ್ ಫೈಟ್ ಅಂತ್ಯಗೊಂಡಿದ್ದು, ಅಮೆರಿಕ ಮೂಲದ ಉದ್ಯಮಿ ಕಾಲ್ ಸೋಮಾನಿ ನೇತೃತ್ವದ ಒಕ್ಕೂಟ ಫ್ರಾಂಚೈಸಿಯನ್ನು ಮಂಗಳವಾರದಂದು ಖರೀದಿಸಿದೆ ಎಂದು ವರದಿಯಾಗಿದೆ. ಕಾಲ್ ಅವರ ಒಕ್ಕೂಟವು ಭಾರತ ಮೂಲದ ಬರ್ಮನ್ ಬೆಂಬಲಿತ ಟೈಮ್ಸ್ ಆಫ್ ಇಂಡಿಯಾದೊಂದಿಗೆ ಹರಾಜಿನಲ್ಲಿ ಪೈಪೋಟಿ ನಡೆಸಿತು. ಟಿಒಐ ಅಂದಾಜು 13500-13600 ಕೋಟಿ ರೂ. ತನ್ನ ಬಿಡ್ ಸಲ್ಲಿಸಿತ್ತು ಎಂದು ಹೇಳಲಾಗುತ್ತಿದೆ. ಐಪಿಎಲ್ ಶನಿವಾರದಿಂದ ಶುರುವಾಗಲಿದ್ದು, ರಿಯಾನ್ ಪರಾಗ್ ಅವರ ನೇತೃತ್ವದಲ್ಲಿ ರಾಜಸ್ಥಾನ ತಂಡ ಪಂದ್ಯಾವಳಿಯಲ್ಲಿ ಭಾಗವಹಿಸಲಿದೆ. ಉಭಯ ತಂಡಗಳು ಬಿಕರಿಯಾದರೂ ಅಧಿಕೃತ ಮಾಲಿಕತ್ವವನ್ನು ಐಪಿಎಲ್ ನಂತರ ಪಡೆಯಲಿದೆ.

ಸೇನ್, ಸಿಂಧು ಸೇರಿದಂತೆ ಪ್ರಮುಖ ಷಟ್ಲರ್‌ಗಳು ಆಯ್ಕೆ

ಥಾಮಸ್ ಕಪ್ ಫೈನಲ್ಸ್‌ಗೆ ಭಾರತ ತಂಡ

ಹೊಸದಿಲ್ಲಿ: ಭಾರತ ಬ್ಯಾಡ್ಮಿಂಟನ್ ಅಸೋಸಿಯೇಷನ್ (ಬಿಎಐ) ಥಾಮಸ್ ಮತ್ತು ಉಬರ್ ಕಪ್ 2026 ಫೈನಲ್ಸ್‌ಗೆ ಭಾರತ ಪುರುಷ ಮತ್ತು ಮಹಿಳಾ ತಂಡಗಳನ್ನು ಪ್ರಕಟಿಸಿದೆ. ಈ ಟೂರ್ನಿ ಏಪ್ರಿಲ್ 24ರಿಂದ ಮೇ 3ರವರೆಗೆ ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆಯಲಿದೆ.

ಮಂಗಳವಾರದಂದು ತಂಡ ಘೋಷಿಸಿದ ಬಿಎಐ ಮಹಾಸಚಿವ ಸಂಜಯ್ ಮಿಶ್ರಾ ಅವರು, ತಂಡದಲ್ಲಿ ಅನುಭವ ಮತ್ತು ಯುವ ಶಕ್ತಿಯ ಉತ್ತಮ ಸಮತೋಲನ ಇದೆ. ಹಿರಿಯ ಆಟಗಾರರು ಸ್ಥಿರತೆ ನೀಡುತ್ತಾರೆ, ಯುವಕರು ಉತ್ತಮ ಫಾರ್ಮ್‌ನಲ್ಲಿ ಇದ್ದಾರೆ ಎಂದು ಹೇಳಿದ್ದಾರೆ.

ಪುರುಷರ ತಂಡದಲ್ಲಿ 2022ರ ಐತಿಹಾಸಿಕ ಥಾಮಸ್ ಕಪ್ ಗೆದ್ದ ತಂಡದ ಪ್ರಮುಖ ಆಟಗಾರರನ್ನು ಉಳಿಸಲಾಗಿದೆ. ಲಕ್ಷ್ಯ ಸೇನ್, ಕಿಡಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್



ಸಿಂಗಲ್ಸ್ ವಿಭಾಗವನ್ನು ಮುನ್ನಡೆಸಲಿದ್ದಾರೆ. ಜೊತೆಗೆ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಡಬಲ್ಸ್‌ನಲ್ಲಿ ಪ್ರಮುಖ ಭರವಸೆ ಆಗಿದ್ದಾರೆ. ಯುವ ಆಟಗಾರ ಆಯುಷ್ ಶೆಟ್ಟಿ ಮೊದಲ ಬಾರಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ಪುರುಷರ ತಂಡದ ಗುಂಪು: ಚೀನಾ, ಕೆನಡಾ ಮತ್ತು ಆಸ್ಟ್ರೇಲಿಯಾ ಜೊತೆಗೆ ಎ ಗುಂಪಿನಲ್ಲಿ ಭಾರತ ಸೇರಿದೆ.

ಮಹಿಳಾ ತಂಡದಲ್ಲಿ: ಮಹಿಳಾ ತಂಡದಲ್ಲಿ ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ. ವಿ. ಸಿಂಧು ತಂಡವನ್ನು ಮುನ್ನಡೆಸಲಿದ್ದಾರೆ. ಜೊತೆಗೆ ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಲಿ ಪ್ರಮುಖ ಡಬಲ್ಸ್ ಜೋಡಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಯುವ ಆಟಗಾರ್ತಿಯರಾದ ಉನ್ನತಿ ಹೂಡಾ, ದೇವಿಕಾ ಸಿಹಾಗ್, ಇಶರಾಣಿ ಮತ್ತು ತ್ಯಾನ್ವಿ ಶರ್ಮಾ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಮಹಿಳಾ ತಂಡದ ಗುಂಪು: ಚೀನಾ, ಡೆನ್ಮಾರ್ಕ್ ಮತ್ತು ಉಕ್ರೇನ್ ಜೊತೆ ಭಾರತ ಎ ಗುಂಪಿನಲ್ಲಿ ಇದೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

1		2		3		4
	5					
6	7				8	
9		10		11	12	13
	14					
15				16		

5933

5932 ಉತ್ತರ

ಎಡದಿಂದ ಬಲಕ್ಕೆ:
1.ಪಾಶ 2.ದಿವಾನ
4.ತಾವ 6.ಗಾನಲೋಕ
8.ಮದುಮಗ 12.ಬರಗಾಲ
14.ವಿರಚಿತ 15.ತುಪ್ಪ
16.ರಭಸ 17.ಭಾಗ

ಮೇಲಿನಿಂದ ಕೆಳಕ್ಕೆ:
1.ಪಾಲುಗಾರ 2.ದಿನಾಂಕ
3.ಮದನ 5.ಪರಗಣ
7.ಲೋಕೋಪಕಾರ
9.ದುರಹಂಕಾರ
10.ಮಾರುಧಾತು
11.ಅಂತರಂಗ 13.ಬವರ
14.ವಿರಸ

ಎಡದಿಂದ ಬಲಕ್ಕೆ
1.ಬುಲ್-ಬುಲ್ ಹಕ್ಕಿ ಕನ್ನಡದಲ್ಲಿ... (4)
3.ಜನರದ ಗಾನಕ್ಕೆ ಮಾರುಹೋದ ಗಣಾದ (4)
5.ತಾವರೆಗಳಿಗೆ ಆಶ್ರಯಿತ ತಾಣ (5)
6.ಅಭಿಪ್ರಾಯ ತಿರುಗಿ ಕಚ್ಚಿಬಿಟ್ಟ (2)
8.ನಂಟನನ್ನು ಹೀಗೂ ಕರೆಯುತ್ತೇವೆ (2)
9.ವಾಸನೆಯನ್ನು ನೋಡು-ಅಘ್ರಾಣಿಸು (2)
12.ನೆರವಿಗೆ ಬಂದ ಸೂರ್ಯ (2)
14.ನಿರ್ದಿಷ್ಟ ಉದ್ದೇಶವಿಲ್ಲದ ಸಾಮಾನ್ಯ ಮಾತುಕತೆ (5)
15.ರುಚಿಕರ, ಸಕಲ ಲಕ್ಷಣಗಳಿಂದ ಕೂಡಿದ ಆಡುಗೆ (4)
16.ಕತ್ತಲೆ-ಅಜ್ಞಾನವನ್ನು ಹೋಗಲಾಡಿಸುವವನು (4)

ಮೇಲಿನಿಂದ ಕೆಳಕ್ಕೆ
1.ವರಿಷದ ಫಲವನ್ನು ಗಳಿಸಿದ ಸಂಪತ್ತು (4)
2. ವೇಳೆ ಕಡೆಯಲ್ಲಿರುವ ಸದ್ದಿನಿಂದ ಕೂಡಿದ್ದು (4)
3. ಅನ-ಕನಿ ಕೂಡಿ ವ್ಯಾಧಿಯಾಯ್ತು (4)
4. ಇದೀಗ ತಾನೇ ಮದುವೆಯಾದ ಹೆಣ್ಣು (4)
7.ಇದು ಅರಿವಿನ ಕೇಂದ್ರ-ಚಿತ್ತ (3)
8. ಅಮೂಲ್ಯವಾದ ಹಳದಿ ಬಣ್ಣದ ಲೋಹ (3)
9.ಮುಖ್ಯವಾದ ಆಟಗೋಲು (4)
10. ಸಮಯೋಚಿತ- ಕಾಲಕ್ಕೆ ತಕ್ಕಂತೆ ಎಂಬರ್ಥದ ಶಬ್ದ (4)
11.ತೇಜಸ್ವಿ-ಪ್ರಕಾಶಿಸುವಂಥದ್ದು (4)
12. ಜ್ಞಾನವನ್ನು ಹೊಂದಿರುವವನು-ವಿದ್ವಾಂಸ (4)

ಕಿರುಸುದ್ದಿ

ನವೋದಯ ಶಾಲೆಗೆ ಆಯ್ಕೆ



ಶಿರಹಟ್ಟಿ: ತಾಲೂಕಿನ ಕನಕವಾಡ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ನಮ್ರತಾ ವಿಶ್ವನಾಥ ಬಸಾಪುರ ಇವಳು ಗದಗ ಜಿಲ್ಲೆಯ ಪಿಎಮ್‌ಶ್ರೀ ಜವಾಹರ ನವೋದಯ ವಿದ್ಯಾಲಯ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆಯಾಗಿದ್ದಾಳೆ. ಈ ವಿದ್ಯಾರ್ಥಿನಿಯ ಆಯ್ಕೆಗೆ ಗ್ರಾಮದ ಕನಕವಾಡ ಶಾಲೆಯ ಗುರುಬಳಗ, ಎಸ್‌ಡಿಎಮ್‌ಸಿ ಅಧ್ಯಕ್ಷ ಈಶ್ವರಪ್ಪ ವಾಲಿ, ಉಪಾಧ್ಯಕ್ಷ,ಸರ್ವ ಸದಸ್ಯರು, ಗ್ರಾಪಂ ಸದಸ್ಯರು, ಶಾಲೆಯ ಹಳೆಯ ವಿದ್ಯಾರ್ಥಿ ಬಳಗ, ವರ್ಗದ ಗುರುಮಾತೆ ರೇಣಕ್ಕ ಕಿವಡಣ್ಣನವರ ಹರ್ಷ ವ್ಯಕ್ತಪಡಿಸಿದ್ದಾರೆ.

ಜಾಗೃತಿ ಕಾರ್ಯಕ್ರಮ ನಾಳೆ

ಗದಗ: ಶಿರಹಟ್ಟಿ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ ಲಕ್ಷ್ಮೇಶ್ವರ ಸಹಯೋಗದೊಂದಿಗೆ ಮಾ.26 ರಂದು ಸಂಜೆ 5ಕ್ಕೆ ಆಕ್ಕಿಗುಂದ ಗ್ರಾಮದಲ್ಲಿ ಅಸ್ಪೃಶ್ಯತೆ ನಿರ್ಮೂಲನೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಿರಹಟ್ಟಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ನಾಳೆ ಪೂರ್ವಭಾವಿ ಸಭೆ

ಗದಗ: ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಮ 119ನೇ ಜಂಯತಿ ಏ.5 ರಂದು ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ 135ನೇ ಜಯಂತಿ ಏ.14 ರಂದು ಆಚರಿಸುವ ಕುರಿತು ಮಾ.26 ರಂದು ಮಧ್ಯಾಹ್ನ 2.30ಕ್ಕೆ ಲಕ್ಷ್ಮೇಶ್ವರ ತಾಲೂಕು ಪಂಚಾಯತ್ ಸಭಾಭವನದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಲಕ್ಷ್ಮೇಶ್ವರ ತಹಶೀಲ್ದಾರ್ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಸಮ್ಮೇಳನ

ಲಕ್ಷ್ಮೇಶ್ವರ: ಇಲ್ಲಿಯ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ. ಅಗಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ, ಆಯ್ ಸಿ ಎಂ ಆರ್ ಟಿ ಇ ಟಿ, ಮೂರನೇ ಅಂತಾರಾಷ್ಟ್ರೀಯ ತಾಂತ್ರಿಕ ಸಮ್ಮೇಳನ ಮಾ.25 ಮತ್ತು 26, 2026 ರಂದು ಜರುಗಲಿದೆ
ಬೆಂಗಳೂರಿನ ನ್ಯಾನೋ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್ ನ ಹಿರಿಯ ವಿಜ್ಞಾನಿ ಡಾ. ಸಿ. ವಿ ಏಳಮಗ್ಗದ ಉದ್ಘಾಟಕರಾಗಿ ಆಗಮಿಸಲಿದ್ದಾರೆ. ಈ ಸಮ್ಮೇಳನದಲ್ಲಿ ಅಂತಾರಾಷ್ಟ್ರೀಯ ಭಾಷಣಕಾರರಾಗಿ ಥೈಲ್ಯಾಂಡ್ ದೇಶದ ಡಾ. ನರಮೋಲ್ ಚುವೊಂಗ್ ಅವರು ವರ್ಚುವಲ್ ಮೂಲಕ ಭಾಗವಹಿಸಲಿದ್ದಾರೆ. ದೇಶದ ವಿವಿಧ ಭಾಗಗಳಿಂದ ಸಂಶೋಧಕರು ಪ್ರಬಂಧ ಮಂಡನೆ ಮಾಡಲಿದ್ದಾರೆ ಎಂದು ಪ್ರಾಚಾರ್ಯ ಡಾ. ಪರಶುರಾಮ ಬಾರಕಿ ತಿಳಿಸಿದ್ದಾರೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್: ಕರು ಸಾವು

ಲಕ್ಷ್ಮೇಶ್ವರ: ಪಟ್ಟಣದ ಅಗಸ್ತ್ಯತೀರ್ಥ ಹತ್ತಿರ ಮಲ್ಲಪ್ಪ ಮರಿತಿಮ್ಮಪ್ಪ ಉಮಚಗಿ ಎಂಬುವರಿಗೆ ಸೇರಿದ ದನದಶೆಡ್‌ಗೆ ವಿದ್ಯುತ್ ಶಾರ್ಟ್‌ನಿಂದ 2 ಗೋವುಗಳಿಗೆ ಗಾಯವಾಗಿದ್ದು, 2 ಎತ್ತುಗಳು ಬೆಂಕಿಯಿಂದ ಹೊತ್ತಿದ ಮೇಲೆ ಹೊರಗಡೆ ಬಂದಿವೆ. ಒಂದು ಗೋವಿನ ಮರಿ 2 ವರ್ಷದ್ದು ಸಾವಿಗೀಡಾಗಿದ್ದು, ಹೆಚ್ಚಿನ ಅನಾಹುತ ಆಗುವುದನ್ನ ಅಗ್ನಿ ಶಾಮಕದವರು ತಡೆದಿದ್ದು ಬೆಂಕಿ ನಂದಿಸಿದ್ದಾರೆ, ಶೆಡ್ ನಲ್ಲಿ ಇದ್ದ 3ಟ್ರ್ಯಾಕ್ಟರ್ ಶೇಂಗಾ ಹೊಟ್ಟು ಸುಟ್ಟು ಹೋಗಿದ್ದು, ದನದಶೆಡ್ ಸಂಪೂರ್ಣ ಕರಕಲಾಗಿದೆ. 1ಟ್ರ್ಯಾಕ್ಟರ್ ಗೋವಿನ ಜೋಳದ ರವುದಿಸುಟ್ಟಿದ್ದು, 1ಲಕ್ಷ ಕ್ಕಿಂತಲೂ ಹೆಚ್ಚು ಹಾನಿ ಆಗಿದೆ ಎಂದು ಅಂದಾಜಿಸಲಾಗಿದೆ.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

ಗೆಜ್ಜಿ ಶೇಂಗಾ	3809-8505
ಅಜವಾನ	7469-8519
ಕಡಲೆ	2109-5425
ಹೆಸರು	3809-8505
ಹುರಳಿ	2669-4329
ಜೋಳ	1519-4637
ಗೋವಿನಜೋಳ	1400-1660
ಸಾಸವಿ	4024-4809
ಎಳ್ಳು	6269-6269
ಮಡಕಿ	9219-10317
ಹತ್ತಿ	7601-7601
ಕುಸಬಿ	4024-4809
ಸೂರ್ಯಕಾಂತಿ	5769-6762
ತೊಗರಿ	4044-4899
ಗೋಧಿ	1109-4821



ಗದಗ: ನಗರದ ರೋಟರಿ ಕ್ಲಬ್‌ನ ರೋಟರಿ ಐಕೇರ್ ಸೆಂಟರ್‌ದಲ್ಲಿ ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್‌ದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯರನ್ನು ಗುರುತಿಸಿ ಗೌರವಿಸಲಾಯಿತು. ಶೈಕ್ಷಣಿಕ ಮಾರ್ಗದರ್ಶಕಿ ಕವಿತಾ ದಂಡಿನ ಅವರನ್ನು ಸನ್ಮಾನಿಸಲಾಯಿತು. ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ಅಶ್ವಿನಿ ಜಗತಾಪ, ಶಿವಲೀಲಾ ಅಕ್ಕಿ, ವೀಣಾ ಕೋಟಿ, ಜಯಶ್ರೀ ಉಗಲಾಟ, ಶಿಲ್ಪಾ ಅಕ್ಕಿ, ಮೀನಾಕ್ಷಿ ಕೊರವನವರ, ಶಾರದಾ ಸಜ್ಜನರ, ಆಶಾ ಪಟ್ಟಣಶೆಟ್ಟಿ ಇದ್ದರು.

ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಹಾಯಧನ

ಲಕ್ಷ್ಮೇಶ್ವರ: ಸಮೀಪದ ಗೊಜನೂರು ವಲಯದ ಕುಂದ್ರಳ್ಳಿ ಕಾರ್ಯಕ್ಷೇತ್ರದ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಮಂಗಳವಾರ ಸುಮಾರು 1 ಲಕ್ಷ 50 ಸಾವಿರ ರೂ.ಗಳ ಸಹಾಯಧನದ ಚೆಕ್‌ನ್ನು ಧರ್ಮಸ್ಥಳ ಸಂಸ್ಥೆಯ ಗದಗ ಜಿಲ್ಲೆಯ ಜಿಲ್ಲಾ ನಿರ್ದೇಶಕರು ಕೇಶವ್ ದೇವಾಂಗ ದೇವಸ್ಥಾನ ಕಮಿಟಿ ಮುಖ್ಯಸ್ಥರಿಗೆ ವಿತರಿಸಿದರು. ಈ ವೇಳೆ ಮಾತನಾಡಿದ ಕೇಶವ ದೇವಾಂಗ ಅವರು, ಡಾ.ವೀರೇಂದ್ರ ಹೆಗ್ಗಡೆಯವರು ಅನುದಾನ ಕಳುಹಿಸಿಕೊಟ್ಟಿದ್ದು, ಅವರ ಮಾರ್ಗದರ್ಶನದಲ್ಲಿ ಸಮಾಜದಲ್ಲಿ ಅನೇಕ ದೇವಸ್ಥಾನಗಳ ಜೀರ್ಣೋದ್ಧಾರ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಇರುವಂತಹ ಕೆರೆ ಅಭಿವೃದ್ಧಿ ಕ್ರಮ, ಮಾಸಾಶನ ವಿತರಣೆ, ಸುಜ್ಞಾನನಿಧಿ ಕಾರ್ಯಕ್ರಮ ಹಾಗೂ ಇನ್ನಿತರ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡು ಸಮಾಜಮುಖಿ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ ಎಂದರು. ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷ ಮಂಜಪ್ಪ ಕಳಸದ, ಉಪಾಧ್ಯಕ್ಷ ಬಸಪ್ಪ ತಳವಾರ, ಸದಸ್ಯರುಗಳಾದ ರುದ್ರಯ್ಯ ಶೀಲವಂತರಮಠ, ಮಂಜುನಾಥ ಗೌರಿ, ರೇಣುಕಾ ದೇವಿ ದೇವಸ್ಥಾನದ ಕಮಿಟಿಯ ಅಧ್ಯಕ್ಷ ಯಶವಂತಗೌಡ ಪಾಟೀಲ, ಉಪಾಧ್ಯಕ್ಷ ಬಸವನಗೌಡ ಪಾಟೀಲ್, ಹಿರಿಯರಾದ ಶಿವಲಿಂಗಯ್ಯ ಬಾಳಿಹಳ್ಳಿಮಠ, ಎಂ.ಡಿ.ಪಾಟೀಲ್, ಹಾಲಪ್ಪ ಹಳ್ಳಿಕೇರಿ, ಹಾಲಪ್ಪ ಹಂಗಿನಕಟ್ಟಿ, ನಾಗರಾಜ ಪಾಟೀಲ್, ರಮೇಶ್ ಸೊರಟೂರು ಹಾಗೂ ತಾಲೂಕಿನ ಯೋಜನಾಧಿಕಾರಿ ಪುನೀತ್ ಓಲೇಕಾರ್ ಹಾಗೂ ವಲಯದ ಮೇಲ್ವಿಚಾರಕಿ ಗಂಗೋತ್ರಿ ಗೌಡ ಹಾಗೂ ಸೇವಾ ಪ್ರತಿನಿಧಿಗಳು ಮತ್ತು ಊರಿನ ಎಲ್ಲ ಸದಸ್ಯರು, ಹಿರಿಯರು ಉಪಸ್ಥಿತರಿದ್ದರು.



ಲಕ್ಷ್ಮೇಶ್ವರ: ಸಮೀಪದ ಗೊಜನೂರು ವಲಯದ ಕುಂದ್ರಳ್ಳಿ ಕಾರ್ಯಕ್ಷೇತ್ರದ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಮಂಗಳವಾರ ಸುಮಾರು 1 ಲಕ್ಷ 50 ಸಾವಿರ ರೂ.ಗಳ ಸಹಾಯಧನದ ಚೆಕ್‌ನ್ನು ಧರ್ಮಸ್ಥಳ ಸಂಸ್ಥೆಯ ಗದಗ ಜಿಲ್ಲೆಯ ಜಿಲ್ಲಾ ನಿರ್ದೇಶಕರು ಕೇಶವ್ ದೇವಾಂಗ ದೇವಸ್ಥಾನ ಕಮಿಟಿ ಮುಖ್ಯಸ್ಥರಿಗೆ ವಿತರಿಸಿದರು.

ಮದ್ಯವ್ಯಸನಿಗಳ ತಾಣವಾದ ಉದ್ಯಾನವನ | ಸಾರ್ವಜನಿಕರ ಆರೋಪ

ನಿರ್ವಹಣೆ ಇಲ್ಲದೆ ಸೊರಗಿದ ಉದ್ಯಾನವನ

ಯಲ್ಲಪ್ಪ (ಉಮೇಶ) ನವಲಗುಂದ

ನರೇಗಲ್ಲ: ಪಟ್ಟಣದ ಮಧ್ಯಭಾಗದಲ್ಲಿರುವ ಉದ್ಯಾನವನಗಳು ಜನರಿಗೆ ವಿಶ್ರಾಂತಿ, ವ್ಯಾಯಾಮ ಮತ್ತು ಮನರಂಜನೆಗಾಗಿ ಮುಖ್ಯವಾಗಿವೆ. ಆದರೆ ನರೆಗಲ್ಲ ಪಟ್ಟಣದಲ್ಲಿ ಉದ್ಯಾನವನವು ನಿರ್ಲಕ್ಷ್ಯದಿಂದ ಉಪಯೋಗಕ್ಕೆ ಬಾರದ ಸ್ಥಿತಿಗೆ ತಲುಪಿರುವದು ವಿಷಾದಕರ ಎಂದು ಸಾರ್ವಜನಿಕರು ಬೇಸರಿಸುತ್ತಿದ್ದಾರೆ.

ನರೇಗಲ್ ಪಟ್ಟಣದ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಉದ್ಯಾನವನದಲ್ಲಿ ಮಕ್ಕಳು,ಹಿರಿಯರುಮತ್ತುಸಾರ್ವಜನಿಕರು ಕುಳಿತುಕೊಳ್ಳುವ ಬೆಂಚ್‌ಗಳು ಸಂಪೂರ್ಣ ಹಾಳಾಗಿ ಆಟೋಪಕರಣಗಳು ಹಾಳಾಗಿವೆ ಮತ್ತು ಕಸದ ರಾಶಿ ಎಲ್ಲೆಡೆ ಕಂಡುಬರುತ್ತದೆ. ರಾತ್ರಿ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ಸುರಕ್ಷತೆ ಸಮಸ್ಯೆಯಾಗಿದೆ. ಇದರಿಂದ ಸಾರ್ವಜನಿಕರು, ವಿಶೇಷವಾಗಿ ಹಿರಿಯರು ಮಹಿಳೆಯರು ಮತ್ತು ಮಕ್ಕಳು, ಉದ್ಯಾನವನವನ್ನು ಬಳಸಲು ಹಿಂಜರಿಯುತ್ತಿದ್ದಾರೆ.

ಅಂದಾಜು 25,000 ಜನಸಂಖ್ಯೆಯನ್ನು ಹೊಂದಿರುವ ಈ ಪಟ್ಟಣ ಪಂಚಾಯಿತಿಯು 17 ವಾರ್ಡ್‌ಗಳನ್ನು ಹೊಂದಿದೆ. ಒಟ್ಟು 17 ಚುನಾಯಿತ ಸದಸ್ಯರು ಮತ್ತು 3 ನಾಮನಿರ್ದೇಶಿತ ಸದಸ್ಯರಿದ್ದರೂ ಇಲ್ಲಿಯವರೆಗೂ ಈ ಸಮಸ್ಯೆ ಬಗೆಹರಿಯುತ್ತಿಲ್ಲ. ಇಲ್ಲಿನ ಹಲವು ಬಡಾವಣೆಗಳಲ್ಲಿ ಉದ್ಯಾನವನಗಳು ಇರುವ ಕುರಿತು ಪಟ್ಟಣ ಪಂಚಾಯಿತಿಯ ದಾಖಲೆಯಲ್ಲಿದೆ. ಅಷ್ಟೇ ಅಲ್ಲದೇ ಅವುಗಳ ನಿರ್ವಹಣೆಗೆ ಪ್ರತಿ ವರ್ಷ ಹಣವನ್ನು ಮೀಸಲಿಡಲಾಗುತ್ತದೆ. ಅಭಿವೃದ್ಧಿ ಹೆಸರಿನಲ್ಲಿ ಪ್ರತಿ ವರ್ಷ ಟೆಂಡರ್ ಕರೆದು ಲಕ್ಷಾಂತರ ರೂಪಾಯಿ ಖರ್ಚು ಮಾಡಲಾಗುತ್ತದೆ. ಆದರೆ ಅವುಗಳಲ್ಲಿ ಯಾವ ಉದ್ಯಾನವನ ಕೂಡ ಇಂದಿಗೂ ಅಭಿವೃದ್ಧಿ ಕಂಡಿಲ್ಲ, ಹಸಿರಿನಿಂದ ಕಂಗೊಳಿಸುತ್ತಿಲ್ಲ, ನಿರ್ವಹಣೆಯ ಸಂಪೂರ್ಣ ವಿಫಲತೆಯಿಂದ ಹಾಳು ಕೊಂಪೆಯಾಗಿ ಮಾರ್ಪಟ್ಟಿದ್ದು, ಹಂದಿ, ನಾಯಿ, ಮಂಡ ಪೋಕರಿಗಳು ಹಾಗೂ ಕುಡುಕರ ಅಡ್ಡೆಯಾಗಿ ಮಾರ್ಪಟ್ಟಿವೆ. ಪಟ್ಟಣವನ್ನು ಹಸಿರಾಗಿಸುವ ಉದ್ದೇಶದಿಂದ ಪಟ್ಟಣದ ಬುಲ್ಡೋಜರ್ ನಗರ, ಅನ್ನದಾನೇಶ್ವರ ಮಹಾವಿದ್ಯಾಲಯ ಪಕ್ಕದಲ್ಲಿರುವ ಟೀಚರ್ಸ್ ಕಾಲೊನಿ, ಈಶ್ವರ ನಗರ, ಪಟ್ಟಣ ಪಂಚಾಯ್ತಿ ಹತ್ತಿರ ಇರುವ ಭೂತನಾಥೇಶ್ವರ ದೇವಸ್ಥಾನದ ಆವರಣದಲ್ಲಿ ಉದ್ಯಾನಗಳನ್ನು ನಿರ್ಮಿಸಲಾಗಿತ್ತು. ಆದರೆ ಉದ್ಯಾನ ನಿರ್ಮಾಣ ಮಾಡಿ ನಿರ್ವಹಣೆ ಮರೆತ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಉದ್ಯಾನವನಗಳಲ್ಲಿ ಗಿಡ-ಗಂಟೆಗಳು ಬೆಳೆದು ನಿಂತಿವೆ. ಮದ್ಯದ ಬಾಟಲಿಗಳು ಹಾಗೂ ಎಲ್ಲೆಂದರಲ್ಲಿ ಕಸ ತುಂಬಿದೆ ಕುಡುಕರ ಸ್ಥಾನವಾಗಿ ಮಾರ್ಪಟ್ಟಿವೆ ಎಂದು ಜನರು ದೂರುತ್ತಿದ್ದಾರೆ.

ಕೆಲವು ಉದ್ಯಾನವನಗಳ ಸಸ್ಯ ಜೀವಿಗಳಿಗಾಗಿ ಲಕ್ಷಾಂತರ ರೂ. ವೆಚ್ಚದಲ್ಲಿ ಕೊಳವೆಬಾವಿ ಕೊರೆಸಿ ಯಾವ ಪ್ರಯೋಜನಕ್ಕೂ ಬಾರದ ಸ್ಥಿತಿಯಲ್ಲಿವೆ. ಅಲ್ಲದೆ ಕಸದ ರಾಶಿ ತುಂಬಿಹೋಗಿರುವುದನ್ನು ಕಂಡು ನಾಮಕ ವ್ಯವಸ್ಥೆಗಾಗಿ ಉದ್ಯಾನವನ ಮಾಡಿ ಹಣ ಮಾಡಿಕೊಳ್ಳುವ ಹುನ್ನಾರ ನಡೆದಿದೆಯೆಂದು ಪಟ್ಟಣದ ನಾಗರಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಉದ್ಯಾನವನದ ಕಡೆ ಗಮನ ಹರಿಸಬೇಕು ಎಂಬುದು ಸಾರ್ವಜನಿಕರ ಆಶಯವಾಗಿದೆ.



ಹಾಳು ಕೊಂಪೆಯಂತಾದ ಉದ್ಯಾನವನ

ಪಟ್ಟಣದ ಉದ್ಯಾನವನಗಳಲ್ಲಿ ಯಾವುದೇ ನಿರ್ವಹಣೆ ಇಲ್ಲದೇ ಹಾಳು ಕೊಂಪೆಯಂತಾಗಿದೆ. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಸರಿಯಾದ ನಿರ್ವಹಣೆ ಮಾಡಿ ಸಾರ್ವಜನಿಕರಿಗೆ ಅನುಕೂಲಕರವಾದ ವಾತಾವರಣ ನಿರ್ಮಿಸುವಲ್ಲಿ ಮುಂದಾಗಬೇಕು ಎಂದು ಸ್ಥಳೀಯ ನಿವಾಸಿ ಹಸನ್ ಕೊಪ್ಪಳ, ಬಾಳಪ್ಪ ಕಳಕಣ್ಣವರ, ಹುಚ್ಚಪ್ಪ ನವಲಗುಂದ ಒತ್ತಾಯಿಸಿದರು.

> ನಾನು ಮುಖ್ಯಾಧಿಕಾರಿಯಾಗಿ ಮೂರು ತಿಂಗಳಾಗಿದ್ದು, ಮುಂಬರುವ 2026 ಮತ್ತು 27ನೇ ಸಾಲಿನ ಹಣಕಾಸಿನ ಯೋಜನೆಗಳಲ್ಲಿ ಮೂಲಸೌಕರ್ಯಗಳು ಹಾಗೂ ಉದ್ಯಾನವನಗಳಿಗೆ ಅಭಿವೃದ್ಧಿಗೆ ಹಣವನ್ನು ಮೀಸಲಿಟ್ಟು ಸರಿಯಾದ ರೀತಿಯಲ್ಲಿ ಉದ್ಯಾನವನ ಸಮರ್ಪಕ ಉಪಯೋಗಕ್ಕೆ ಬರುವಂತೆ ಮಾಡಲಾಗುವುದು.
>
> ■ ಮಲ್ಲೇಶ್ ಪಚ್ಚಿ, ನರೇಗಲ್ಲ ಪಪಂ ಮುಖ್ಯಾಧಿಕಾರಿ

- ಕೆಲವು ಉದ್ಯಾನವನಗಳ ಒಳಭಾಗದಲ್ಲಿ ಆಸನ ಮುರಿದಿರುವುದು, ಹೂವಿನ ಗಿಡಗಳು, ಹುಲ್ಲಿನ ಹಾಸುಗಳು ಒಣಗಿ ಹೋಗಿದೆ
- ಉದ್ಯಾನವನಗಳಲ್ಲಿ ತುಳುಕುತ್ತಿರುವ ಕಸದ ರಾಶಿ ತುಂಬಿ
- ಮೂಲ ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿದೆ ಎಂಬುದು ಜನರ ಆಗ್ರಹ

ಹಕ್ಕುಗಳ ತಿದ್ದುಪಡಿ ಮಸೂದೆಗೆ ಖಂಡನೆ

ಗದಗ: ಕೇಂದ್ರ ಸರ್ಕಾರದ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ತಿದ್ದುಪಡಿ ಮಸೂದೆ ಖಂಡಿಸಿ ನಗರದಲ್ಲಿ ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿ ಸಂಘಟನೆಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಮಸೂದೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಗಳ ಗೌರವ ಹಾಳು ಮಾಡುತ್ತದೆ. ಲಿಂಗತ್ವ ಅಲ್ಪಸಂಖ್ಯಾತರ ಗುರುತಿನ ಸ್ವಯಂ-ನಿರ್ಣಯದ ಹಕ್ಕನ್ನು ಕಸಿದುಕೊಳ್ಳುತ್ತದೆ. ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳಿಗೆ ಸಂವಿಧಾನ ನೀಡಿರುವ ರಕ್ಷಣೆಗಳಿಗೆ ಧಕ್ಕೆಯನ್ನುಂಟುಮಾಡುತ್ತದೆ. ಈ ಕೂಡಲೇ ಕೇಂದ್ರ ಸರ್ಕಾರ ತಿದ್ದುಪಡಿ ಹಿಂತೆಗೆದುಕೊಳ್ಳಬೇಕು. ಲಿಂಗತ್ವ ಗುರುತಿನ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ. 2017ರಲ್ಲಿ ಕರ್ನಾಟಕ ಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳ ರಾಜ್ಯ ನೀತಿಯನ್ನು ರೂಪಿಸಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳಿಗೆ ವೈಯಕ್ತಿಕವಾಗಿ ಮತ್ತು ಸಮೂಹವಾಗಿ ಸಂವಿಧಾನಿಕ ಭರವಸೆಗಳನ್ನು ಖಚಿತಪಡಿಸುವ ಮಾರ್ಗಸೂಚಿಗಳನ್ನು ನೀಡಿತು.ರಾಜ್ಯದ ಲಿಂಗತ್ವ ಅಲ್ಪಸಂಖ್ಯಾತ ನೀತಿಯಲ್ಲಿ ಉಲ್ಲೇಖಿಸಿದ ತತ್ವಗಳಿಗೆ ವಿರುದ್ಧವಾಗಿದೆ. ಇದು 'ಟ್ರಾನ್ಸ್‌ಜೆಂಡರ್' ಎಂಬ ಕಾನೂನು ವ್ಯಾಖ್ಯೆಯನ್ನು ಸೀಮಿತಗೊಳಿಸಿ ನಮ್ಮ ದೊಡ್ಡ ವಿಭಾಗವನ್ನು ಅಳಿಸಿಹಾಕುತ್ತದೆ. ಸರ್ಕಾರವು 'ನಿಜವಾದ ಹಿಂಸೆಗೆ ಒಳಗಾದ ವ್ಯಕ್ತಿಗಳನ್ನು' ಗುರುತಿಸುವ ಹೆಸರಿನಲ್ಲಿ ನಮ್ಮ ಸಮುದಾಯಗಳನ್ನು ವಿಭಜಿಸಲು ಪ್ರಯತ್ನಿಸುತ್ತದೆ. ಇಂತಹ ಹೊರತುಪಡಿಸುವ ತಿದ್ದುಪಡಿ ರಕ್ಷಣೆಗಳ ವ್ಯಾಪ್ತಿಯನ್ನು ಕೆಲವು 'ಸಾಮಾಜಿಕ-ಸಾಂಸ್ಕೃತಿಕ' ಗುರುತುಗಳಿಗೆ ಮತ್ತು ಅಂತರಲಿಂಗಿ ಲಕ್ಷಣಗಳಿರುವವರಿಗೆ ಮಾತ್ರ ಸೀಮಿತಗೊಳಿಸಿ, ಇತರ ಎಲ್ಲಾ ಲಿಂಗತ್ವ ವೈವಿಧ್ಯತೆಯ ಸಮುದಾಯಗಳ ಮೇಲೆ ಭೇದಭಾವ ಮಾಡುತ್ತದೆ.ಇನ್ನು ಮುಂದೆ ಈ ಮಸೂದೆ ಸರ್ಕಾರ ನೇಮಿಸಿದ ವೈದ್ಯಕೀಯ-ಅಧಿಕಾರ ವ್ಯವಸ್ಥೆಯ ಮೂಲಕ ನಮ್ಮ ದೇಹಗಳ ಮೇಲೆ ಹಿಂಸೆಯನ್ನು ಹೇರುತ್ತದೆ. ವೈದ್ಯಕೀಯ ಮಂಡಳಿಗಳಿಗೆ ಲಿಂಗತ್ವ ಅಲ್ಪಸಂಖ್ಯಾತ ಗುರುತನ್ನು ಪ್ರಮಾಣೀಕರಿಸುವ ಮತ್ತು ಖಾಸಗಿ ವೈದ್ಯಕೀಯ ಮಾಹಿತಿಯನ್ನು ಜಿಲ್ಲಾ ಅಧಿಕಾರಿಗಳಿಗೆ ಬಹಿರಂಗಪಡಿಸುವ ಅಧಿಕಾರ ನೀಡುತ್ತದೆ. ಭಾರತ ಸರ್ಕಾರವು 2026ರ ಮಸೂದೆ ಸಂಖ್ಯೆ 79 ಅನ್ನು ಹಿಂತೆಗೆದುಕೊಳ್ಳಬೇಕು ಮತ್ತು ಭವಿಷ್ಯದಲ್ಲಿ ಯಾವುದೇ ತಿದ್ದುಪಡಿ ಮಾಡುವ ಮೊದಲು ವಿವಿಧ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಗಳು, ನಾಗರಿಕ ಸಮಾಜ ಸಂಘಟನೆಗಳು, ಕಾನೂನು ತಜ್ಞರು ಮತ್ತು ಆರೋಗ್ಯ ವೃತ್ತಿಪರರೊಂದಿಗೆ ಅರ್ಥಪೂರ್ಣ ಮತ್ತು ಪಾರದರ್ಶಕ ಸಮಾಲೋಚನೆ ನಡೆಸಬೇಕು ಎಂದು ಮನವಿ ಮೂಲಕ ಒತ್ತಾಯಿಸಿದರು. ಆದಿತ್ಯ, ಪುಷ್ಪಾ, ಆರಾಧನಾ, ಸಿಂಚನಾ, ಶಾಲಿನಿ, ಈರಣ್ಣ, ಮಾಲತೇಶ ಇದ್ದರು.



ಸರ್ವ ಗುಣಗಳನ್ನು ಹೊಂದಿರುವವಳು ಮಹಿಳೆ

ನರಗುಂದ: ಮಹಿಳೆ ಜಗನ್ಮಾತೆ, ತ್ಯಾಗ, ಕರುಣೆ, ಮಮತೆ ಮುಂತಾದ ಗುಣಗಳನ್ನು ಹೊಂದಿದ್ದಾಳೆ. ಮಹಿಳೆಗೆ ಸಮಾಜದಲ್ಲಿ ಮಾತೃ ಸ್ಥಾನವನ್ನು ನೀಡಲಾಗಿದೆ. ಮಹಿಳೆ ಅಬಲೆಯಲ್ಲ, ಸಬಲೆ, ಅವಳು ಎಲ್ಲಾ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಕುಟುಂಬ ನಿರ್ವಹಣೆಯನ್ನು ಮಾಡಲಿದ್ದಾಳೆ ಎಂದು ಶಿರೋಳ ಶಿವಯೋಗಾಶ್ರಮದ ಮಾತೋಶ್ರೀ ಅಕ್ಕಮಹಾದೇವಿ ಶರಣಮ್ಮನವರು ಹೇಳಿದರು.

ತಾಲೂಕಿನ ಶಿರೋಳ ಗ್ರಾಮದ ಮಾತೃ ಮಹಿಳಾ ಮಂಡಳದವರಿಂದ ನಡೆದ ವಿಶ್ವ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿದ ನಂತರ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಶಾಲೆ, ಆಶ್ರಮ, ಕಂಡಕ್ಟರ್, ರಿಕ್ಷಾ ಚಾಲಕಿ ಮುಂತಾದ ಕ್ಷೇತ್ರದಲ್ಲಿ ಪುರುಷರಿಗೆ ಸಮನಾಗಿ ದುಡಿದು ಕುಟುಂಬವನ್ನು ಮುನ್ನಡೆಸುವಳು, ಕುಟುಂಬದ ಏಳ್ಗೆಯಲ್ಲಿ ಪ್ರಮುಖ ಪಾತ್ರ ವಹಿಸುವಳು. ಈಗಿನ ಭಾರತ ದೇಶದ ಹಣಕಾಸು ಸಚಿವೆ ನಿರ್ಮಲಾ ಸಿತಾರಾಮನ್ ಬಜೆಟ್ ಮಂಡಿಸಿ ಮಹಿಳೆರ ಸಾಧನೆಗೆ ಸ್ಫೂರ್ತಿ ಆಗಿದ್ದಾರೆಂದು ಹೇಳಿದರು.

ಭಾರತಿ ಹೊಂಗಲ ಮಾತನಾಡಿ, ಮಹಿಳೆ ಶಕ್ತಿಯ ಹಾಗೂ ತಾಳ್ಮೆಯ ಪ್ರತೀಕ ಅವರನ್ನು ಸಮಾಜದಲ್ಲಿ ಗುರುತಿಸಿ ಅವರಿಗೆ ಗೌರವಿಸುವುದು ಸಾಮಾಜಿಕ ಜವಾಬ್ದಾರಿಯಾಗಿದೆ. ಮಹಿಳೆಯರು ಮುಂದೆ ಬಂದು ಕರಕುಶಲತೆಯ ಬಗ್ಗೆ ತಿಳಿಯಿರಿ ಎಂದರು. ಬಿಜೆಪಿ ನರಗುಂದ ಮಂಡಲ ಅಧ್ಯಕ್ಷ ನಾಗನಗೌಡ್ರ ತಿಮ್ಮನಗೌಡ್ರ ಮಾತನಾಡಿ, ಪ್ರತಿ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳೇ ಮೇಲುಗೈ ಎಂಬುದನ್ನು ನಾವೀಗ ಕಾಣಬಹುದಾಗಿದೆ. ಇದಕ್ಕೆ ಮನೆಯವರ ಸಹಕಾರ ಮುಖ್ಯ ಯಾವದೇ ಸಾಧನೆ ಮಾಡಲು ಮೊದಲು ಮಹಿಳೆಗೆ ಆತ್ಮಸ್ಥೈರ್ಯ, ಸಾಧಿಸುವ ಛಲವೊಂದಿದ್ದರೆ ಸಾಕು ಎಂದರು. ಬಾಪುಗೌಡ್ರ ತಿಮ್ಮನಗೌಡ್ರ ಮಾತನಾಡಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಭಾರತಿ ಹೊಂಗಲ, ಶಾಂತಾ ಕುಪ್ಪಸ್ತ ಅವರನ್ನು ಸನ್ಮಾನಿಸಲಾಯಿತು. ಮಹಿಳೆಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ವಿತರಿಸಲಾಯಿತು. ಗುರುದೇವಿ ಶಾನವಾಡಮಠ, ಸುವರ್ಣ ಕೊಡಬಳ್ಳಿ, ದಾನಮ್ಮ ಕೆಂಚಗಳ್ಳಿ, ದ್ರಾಕ್ಷಾಯಿಣಿ ಜಂಗವಾಡ, ಶೋಭಕ್ಕ ಶಾಲದಾರ, ಕಸ್ತೂರಿ ಯಂಡಿಗೇರಿ, ಶಾರದಾ ಬಳ್ಳಾರಿ, ಅಕ್ಕಮಹಾದೇವಿ ಕೆಲವಡಿ, ರಾಚಮ್ಮ ವಸ್ತದ, ಶಾಂತವ್ವ ಕಂಬಳಿ ಹಾಗೂ ಮಾತೃ ಮಹಿಳಾ ಮಂಡಳದ ಸರ್ವ ಸದಸ್ಯರು ಇದ್ದರು. ಶೋಭಾ ಶಾಲದಾರ ನಿರ್ವಹಿಸಿದರು.



ಕ್ಷಯ ರೋಗ ನಿರ್ಮೂಲನೆಗೆ ಸರ್ವರೂ ಕೈಜೋಡಿಸಲಿ: ಡಾ.ಎಸ್.ಎಸ್. ನೀಲಗುಂದ

ಗದಗ: ಕ್ಷಯರೋಗವನ್ನು ಸೋಲಿಸಲು ನಾವೆಲ್ಲರೂ ಮುಂದಾಗೋಣ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್.ಎಸ್. ನೀಲಗುಂದ ಅಭಿಪ್ರಾಯಿಸಿದರು.

ನಗರದ ಡಾ.ಎಸ್.ವಿ.ತೋಟಗಂಟಿಮಠ, ನರ್ಸಿಂಗ್ ಕಾಲೇಜದಲ್ಲಿ ಮಂಗಳವಾರ ವಿಶ್ವ ಕ್ಷಯರೋಗ ದಿನಾಚರಣೆಯ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿ, ಕ್ಷಯ ರೋಗವನ್ನು ಶೀಘ್ರ ಪತ್ತೆಹಚ್ಚಿ ಸಮರ್ಪಕ ಚಿಕಿತ್ಸೆ ನೀಡುವ ಮೂಲಕ ಸಂಪೂರ್ಣ ನಿರ್ಮೂಲನೆ ಮಾಡಬಹುದಾಗಿದೆ ಎಂದರು.

ಡಾ.ಎಸ್.ವಿ. ತೋಟಗಂಟಿಮಠ ನರ್ಸಿಂಗ್ ಕಾಲೇಜದ ಪ್ರಾಚಾರ್ಯ ಶಿವಕುಮಾರ ಕಾತರಕಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮುಂದಿನ ದಿನಮಾನಗಳಲ್ಲಿ ಕ್ಷಯರೋಗ ನಿರ್ಮೂಲನೆ ಮಾಡುವುದು ಮತ್ತು ಜನಜಾಗೃತಿ ಮೂಡಿಸುವುದು ಅತ್ಯಾವಶ್ಯಕವಾಗಿದೆ ಎಂದರು.

ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಅರುಂಧತಿ ಕುಲಕರ್ಣಿ ಮಾತನಾಡಿ, ನಮ್ಮೆಲ್ಲರ ಜೊತೆ ಸಮುದಾಯದವರು ಹಾಗೂ ಸಂಘ ಸಂಸ್ಥೆಯವರು ಕೈಜೋಡಿಸುವುದರಿಂದ ದೇಶವನ್ನು ಹಾಗೂ ಕರ್ನಾಟಕವನ್ನು ಕ್ಷಯ ಮುಕ್ತ ಕರ್ನಾಟಕ ಆಗಿಸುವಲ್ಲಿ ಸಹಾಯವಾಗುತ್ತದೆ. ಈಗಾಗಲೇ ಪ್ರತಿ ಕ್ಷಯರೋಗ ಘಟಕದಿಂದ ಎರಡೆರಡು ಗ್ರಾಮ ಪಂಚಾಯತಿಗಳನ್ನು ಆಯ್ದುಕೊಂಡಿದ್ದು ಗ್ರಾಮ ಪಂಚಾಯತಿ ಸಿಬ್ಬಂದಿ ಹಾಗೂ ಚುನಾಯಿತ ಪ್ರತಿನಿಧಿಗಳ, ಕೆಹೆಚ್‌ಪಿಟಿ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರಿಂದ ಪ್ರತಿ ಹಂತದಲ್ಲೂ ಕ್ಷಯ ಮುಕ್ತ ಗ್ರಾಮವನ್ನಾಗಿಸಲು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ನರ್ಸಿಂಗ್ ಕಾಲೇಜಿನ ಸಂಯೋಜಕ ವಿನಯ ಕುಪ್ಪಸದ ಹಾಗೂ ಇತರರಿದ್ದರು. ಅನುಷ್ಕಾ ಪ್ರಾರ್ಥಿಸಿದರು. ಗಣೇಶ ಬಾಗಡೆ ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕ ಅಶ್ವತ್ಥರೆಡ್ಡಿ ವಂದಿಸಿದರು. ಎಫ್.ಪಿ. ಮೋದಿನ್ನವರ ನಿರೂಪಿಸಿದರು.



ಸೂರಣಗಿಯಲ್ಲಿ ಕ್ಷಯರೋಗ ದಿನಾಚರಣೆ



ಲಕ್ಷ್ಮೇಶ್ವರ: ತಾಲೂಕಿನ ಸೂರಣಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಕ್ಷಯರೋಗ ದಿನಾಚರಣೆಯನ್ನು ಆಚರಿಸಲಾಯಿತು.


ಎಸ್‌ಟಿಎಲ್‌ಎಸ್ ರವಿ ಕೊಪ್ಪದ ಮತ್ತು ಬಿಎಡ್‌ಇಒ ಎಫ್.ಬಿ.ಹೂಗಾರ ಮಾತನಾಡಿ, ಕ್ಷಯ ರೋಗವು ಸೂಕ್ಷ್ಮ ರೋಗಾಣುವಿನಿಂದ ಬರುತ್ತದೆ. ಕೆಮ್ಮಿದಾಗ ಅಥವಾ ಸೀನುವಾಗ ಹೊರಬರುವ ತುಂತುರುಗಳಿಂದ ಈ ರೋಗಾಣುಗಳು ಗಾಳಿಯ ಮೂಲಕ ಆರೋಗ್ಯವಂತ ವ್ಯಕ್ತಿಯ ಶ್ವಾಸಕೋಶ ಸೇರಿ ಅವನಿಗೂ ಸೋಂಕು ಬರಬಹುದು. ಲಕ್ಷಣಗಳು ಎರಡು ವಾರ ಅಥವಾ ಅದಕ್ಕಿಂತ ಮೇಲ್ಪಟ್ಟ ಸತತವಾದ ಕೆಮ್ಮು, ಜ್ವರ ಅದರಲ್ಲೂ ಸಂಜೆ ವೇಳೆ ಜ್ವರ ಬರುವುದು, ಕಫದಲ್ಲಿ ರಕ್ತ ಬೀಳುವುದು, ತೂಕ ಕಡಿಮೆಯಾಗುವುದು ಹಸಿವಾಗದಿರುವುದು ಇಂತಹ ಲಕ್ಷಣಗಳಿದ್ದರೆ ಕೂಡಲೇ ಕಫವನ್ನು ಪರೀಕ್ಷೆ ಮಾಡಿದಾಗ ಟಿಬಿ ಕಾಯಿಲೆ ಇರುವುದು ಅಥವಾ ಇಲ್ಲದಿರುವ ಬಗ್ಗೆ ತಿಳಿದು ಬರುತ್ತದೆ. ಇದಕ್ಕೆ ಸೂಕ್ತ ಚಿಕಿತ್ಸೆ ದೊರೆಯುತ್ತದೆ ಎಂದರು. ಮೌನೇಶ್ ಹಡಪದ್, ಜಿ.ಟಿ.ಹೋಳಿ, ಎಂ.ಕೆ.ಕುಲಕರ್ಣಿ, ಮಂಜುಳಾ ಹೂಗಾರ್. ಸುಧಾ, ರೇಷ್ಮಾ ಲಮಾಣಿ ಹಾಗೂ ಇತರರಿದ್ದರು.

ಅಂತಾರಾಷ್ಟ್ರೀಯ ಅರಣ್ಯ ದಿನಾಚರಣೆ

ಗದಗ: ನಗರದ ಕೆಎಲ್‌ಇ ಸಂಸ್ಥೆಯ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಅರಣ್ಯ ದಿನಾಚರಣೆ ಅಂಗವಾಗಿ ಮೃಗಾಲಯ ಹಾಗೂ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಅರಣ್ಯ ದಿನಾಚರಣೆ ಅಂಗವಾಗಿ ವಿಶೇಷ ಅತಿಥಿ ಉಪನ್ಯಾಸ ಹಾಗೂ ಪ್ರಶ್ನೋತ್ತರ ಸ್ಪರ್ಧೆಯನ್ನು ಆಯೋಜಿಸಲಾಯಿತು.

ಮೃಗಾಲಯದ ಶಿಕ್ಷಣಾಧಿಕಾರಿ ಹಾಗೂ ಜೀವಶಾಸ್ತ್ರಜ್ಞ ವಿನೋದ ಕುಲಕರ್ಣಿ ಮಾತನಾಡಿ, ಅರಣ್ಯಗಳ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪರಿಸರ ಸಮತೋಲನ ಕಾಪಾಡಲು ಪ್ರತಿಯೊಬ್ಬರೂ ತಮ್ಮ ಹೊಣೆಗಾರಿಕೆಯನ್ನು ಅರಿಯಬೇಕು ಎಂದರು.

ಪ್ರಾಚಾರ್ಯ ಪ್ರೊ.ಪಿ.ಜಿ.ಪಾಟೀಲ ಮಾತನಾಡಿದರು. ವಿಭಾಗದ ಮುಖ್ಯಸ್ಥೆ ಭಾಗ್ಯ ಸವಡಿ ಅವರು ಸ್ವಾಗತಿಸಿದರು. ಜ್ಯೋತಿ ಯಾದವ್ ನಿರೂಪಿಸಿದರು. ಅಂಜಲಿ ದೇಶಮುಖ್ ವಂದಿಸಿದರು. ಡಾ.ರಮೇಶ ಜಿ.ಕೆ., ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಜನರ ಉಪಯೋಗಕ್ಕೆ ಬಾರದ ಜಲಗಾರ

ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ಪಟ್ಟಣದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಉದ್ದೇಶದಿಂದ ನೆಲಮಟ್ಟದ ಜಲಗಾರವನ್ನು ಪುರಸಭೆ ವತಿಯಿಂದ ನಿರ್ಮಿಸಿದ್ದರೂ ಅವು ಜನರಿಗೆ ಉಪಯೋಗವಿಲ್ಲದೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಲಕ್ಷ್ಮೇಶ್ವರದಲ್ಲಿ ಸೋಮೇಶ್ವರ ನೂಲಿನ ಗಿರಣಿ ಹತ್ತಿರ 16ನೇ ವಾರ್ಡ್‌ನಲ್ಲಿ ಮುಖ್ಯಮಂತ್ರಿ ನಗರೋತ್ಥಾನ ಹಂತ 3ರ ಯೋಜನೆಯಲ್ಲಿ 5 ಲಕ್ಷ ಲೀಟರ್ ನೀರಿನ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಗಾರ, ಅಂದಾಜು 10 ಲಕ್ಷಕ್ಕಿಂತಲೂ ಹೆಚ್ಚು ಹಣ ಖರ್ಚು ಮಾಡಿ ನಿರ್ಮಾಣವಾಗಿದೆ. 22ನೇ ವಾರ್ಡ್‌ನಲ್ಲಿ ಅಬ್ದುಲಕಲಾಂ ನಗರದಲ್ಲಿ ಜಲಸಂಗ್ರಹಗಾರ 2013-14ಸಾಲಿನ ಪುರಸಭೆಯ 13ನೇ ಹಣಕಾಸಿನಲ್ಲಿ 19.66ಲಕ್ಷ ವೆಚ್ಚದಲ್ಲಿ ನಿರ್ಮಿಸಿದ 5 ಲಕ್ಷ ಲೀಟರ್ ನೀರಿನ ಸಾಮರ್ಥ್ಯದ ನೆಲಮಟ್ಟದ ಜಲ ಸಂಗ್ರಹಗಾರ , ಮಂಜಲಾಪುರದಲ್ಲಿ 2013-14ರಲ್ಲಿ 13ನೇ ಹಣಕಾಸ ಸಾಮಾನ್ಯ ಅನುದಾನದಲ್ಲಿ ಲಕ್ಷಾಂತರ ಹಣ ಖರ್ಚು ಮಾಡಿ 5ಲಕ್ಷ ಲೀಟರ ನೀರಿನ ಸಾಮರ್ಥ್ಯದ ನೆಲಮಟ್ಟದ ಜಲ ಸಂಗ್ರಹಗಾರ ಕಟ್ಟಿದರು. ಒಟ್ಟು 3 ನೆಲಮಟ್ಟದ ಜಲಸಂಗ್ರಹ ಅಂದಾಜು 40 ಲಕ್ಷಕ್ಕಿಂತಲೂ ಹೆಚ್ಚು ಹಣ ಖರ್ಚು ಮಾಡಿ ಒಟ್ಟು 15 ಲಕ್ಷ ಲೀಟರ್ ನೀರಿನ ಸಾಮರ್ಥ್ಯ ಇದ್ದರೂ ಇದುವರೆಗೂ ಸಾರ್ವಜನಿಕರ ಉಪಯೋಗಕ್ಕೆ ಬರುತ್ತಿಲ್ಲ.ಪಟ್ಟಣದಲ್ಲಿ ನೀರಿನ ಸಮಸ್ಯೆ ಬಹಳವಿದ್ದು, ಮೇವುಂಡಿ ಜಾಕವೆಲ್ ನಿಂದ ನೀರನ್ನು ಶೇಖರಣೆ ಮಾಡಿ ಕಲೆಕ್ಷನ್ ಕೊಟ್ಟು ಜಲಸಂಗ್ರಹಗಾರಗಳಿಗೆ ನೀರು ಬಿಟ್ಟರೆ ಅನೇಕ ವಾರ್ಡಗಳ ಜನರಿಗೆ ಮನೆ ಬಾಗಿಲಿಗೆ ನೀರು ಬರುತ್ತದೆ. ನೀರನ್ನು ಪೂರೈಸಬೇಕಾದ ನೆಲಮಟ್ಟದ ಜಲಸಂಗ್ರಹಗಾರಗಳಲ್ಲಿ ಸುತ್ತಲೂ ಮುಳ್ಳು ಕಂಟಿಗಳು ಬೆಳೆದು ನಿಂತಿದ್ದು ಮುಳ್ಳು ಕಂಟೆಯಲ್ಲಿ ಮುಚ್ಚಿಹೋಗಿವೆ ಸುತ್ತಲೂ ಅವ್ಯವಸ್ಥೆ ಆಗರವಾಗಿವೆ.

> ಪೈಪ್‌ಲೈನ್ ವಾಲ್ ಪವರ್ ಪಂಪ್ ಅಳವಡಿಸಿ ನೀರು ಸರಬರಾಜು ಮಾಡಲು ಗುತ್ತಿಗೆ ದಾರರಿಗೆ ಟೆಂಡರ್ ನೀಡಿದ್ದು, ಅನುದಾನ ಲಭ್ಯತೆವಿಲ್ಲದ ಕಾರಣ ಕಾಮಗಾರಿ ಪ್ರಾರಂಭಿಸಿಲ್ಲ. ಏಪ್ರಿಲ್ ಮೊದಲ ವಾರದಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು
>
> ■ ವೀರೇಂದ್ರಸಿಂಗ್ ಕಾಟೇವಾಲೆ, ಪುರಸಭೆ ಸಹಾಯಕ ಅಭಿಯಂತರ



ಸರಬರಾಜಿಗೆ ಟೆಂಡರ್



ಪುರಸಭೆ ಎಂಜಿನಿಯರ್ ವಿಭಾಗದ ಮಾಹಿತಿ ಪ್ರಕಾರ 16ನೇ ವಾರ್ಡಿನ ಜೆ ಎಲ್‌ಎಸ್‌ಆರ್ ಟ್ಯಾಂಕ್‌ಗೆ ಪೈಪ್ ಲೈನ್ ಅಳವಡಿಸಿ, 15ಎಚ್ ಪಿ ಮೋನೋಬ್ಲಾಕ್ ಮೋಟಾರ್, 100 ಕೆವ್ಹಿ ಟ್ರಾನ್ಸ್‌ಫಾರ್ಮರ್ ಹಾಗೂ ವಿದ್ಯುತ್ ಕಂಬಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಅಳವಡಿಸಿ ನೀರು ಸರಬರಾಜು ಮಾಡಲು 22ನೇ ವಾರ್ಡ್‌ನ ಉದ್ಯಾನವನದಲ್ಲಿ ನಿರ್ಮಿಸಿದ ಜೆಎಲ್‌ಎಸ್‌ಆರ್ ಟ್ಯಾಂಕಗೆ ಪೈಪ್‌ಲೈನ್‌ಅಳವಡಿಸಿ ಹಾಗೂ 100ಎಚ್ ಪಿ ಮೋಟಾರ್ ಅಳವಡಿಸಿ ನೀರು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆ ಎಂಬ ಮಾಹಿತಿ ನೀಡಿದ್ದಾರೆ.

ಪರಿಶಿಷ್ಟ ಜಾತಿಯ ಒಳಮೀಸಲಾತಿ ರದ್ದು ಪಡಿಸಲು ಆಗ್ರಹಿಸಿ ಮನವಿ

ಲಕ್ಷ್ಮೇಶ್ವರ: ಪರಿಶಿಷ್ಟ ಜಾತಿಯ ಒಳಮೀಸಲಾತಿ ರದ್ದು ಪಡಿಸಲು ಆಗ್ರಹಿಸಿ ಲಕ್ಷ್ಮೇಶ್ವರ ತಾಲೂಕಿನ ತಾಂಡಾದ ಯುವಕರು ಗ್ರೇಡ್ 2 ತಹಶೀಲ್ದಾರ್ ಮಂಜುನಾಥ ಅಮಾಸಿ ಅವರಿಗೆ ಮನವಿ ಸಲ್ಲಿಸಿದರು.

ಯುವ ಮುಖಂಡ ತುಕ್ಕಪ್ಪ ಪೂಜಾರ, ಸಂತೋಷ ರಾಠೋಡ ಮಾತನಾಡಿ, ಒಳಮೀಸಲಾತಿಯಿಂದ ಸಣ್ಣ ಸಮುದಾಯದ ಜನತೆಗೆ ಅನ್ಯಾಯವಾಗಲಿದೆ. ಸರ್ಕಾರ ಕೂಡಲೇ ಈ ಒಳಮೀಸಲಾತಿ ರದ್ದು ಮಾಡಿ ಜನರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಲಂಬಾಣಿ ಬಂಜಾರ ಸಮಾಜದ ಜನರು ದುಡಿಯಲು ದೂರದ ಗೋವಾ, ಮುಂಬೈ, ಬೆಂಗಳೂರುಗಳಿಗೆ ಇಂದಿಗೂ ವಲಸೆ ಹೋಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವರ ಏಳ್ಗೆಗೆ ಮಾರಕವಾದ ಈ ಒಳಮೀಸಲಾತಿ ರದ್ದು ಮಾಡಬೇಕು. ಬಂಜಾರಾ ಸಮುದಾಯ ಸೇರಿದಂತೆ ಭಜಂತ್ರಿ, ಭೋವಿ, ಕೊಂಚಿ, ಕೊರವರು ಸೇರಿ ಹಲವು ಸಣ್ಣ ಸಮಾಜದ ಜನರಿಗೆ ಅನ್ಯಾಯವಾಗಲಿದೆ ಎಂದರು.

ನಂತರ ಮಾತನಾಡಿದ ಯುವ ಮುಖಂಡ ಪರಮೇಶ ಲಮಾಣಿ, ಗಣತಿಯಲ್ಲಿ ಸಂಗ್ರಹಿಸಿದ ಪ್ರಾಯೋಗಿಕ ಮಾಹಿತಿ ತಾರತಮ್ಯವಾಗಿದೆ. 02-08-2025ರ ವರದಿ ಒಂದು ವ್ಯಕ್ತಿಯಾ ಆಯೋಗದಿಂದ ನೀಡಲ್ಪಟ್ಟಿದ್ದು ನಮ್ಮ ಸಮುದಾಯದ ವಿರುದ್ಧ ಪೂರ್ವಾನುಗ್ರಹ ಹೊಂದಿದೆ. ಆಯೋಗ ನೀಡಿದ ಸಾಮಾಜಿಕ, ಶೈಕ್ಷಣಿಕ ಮತ್ತು ಉದ್ಯೋಗ ಸ್ಥಿತಿ ವಿವರಗಳಿಗೆ ಸಿ ಗುಂಪಿನ 63 ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮರ್ಪಕ ಪ್ರತಿನಿಧಿತ್ವ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ 63 ಜಾತಿಗಳಿಗೆ ಹೆಚ್ಚು ಮೀಸಲಾಗಿ ಅಗತ್ಯವಿದೆ.

ಸಚಿವ ಸಂಪುಟವು ವರದಿಯನ್ನು ತಿದ್ದುಪಡಿ ಮಾಡಿ ಎ, ಬಿ, ಸಿ, ಉಪವರ್ಗೀಕರಣ ಮಾಡಿರುವುದು ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ರೋಸ್ಟರ್ ವ್ಯವಸ್ಥೆ ಮತ್ತು ಎ ಬಿ ಸಿ ಎಂದು ಜಾತಿ ಪ್ರಮಾಣ ಪತ್ರ ನೀಡುವ ಅಧಿಸೂಚನೆಗಳಿಗೆ ಕಾನೂನು ಆಧಾರವಿಲ್ಲ ಮತ್ತು ಇದು ಇತರ ಜಾತಿಗಳನ್ನು ಹೊರತುಪಡಿಸಿವಂತಾಗಿದೆ. ಗುಂಪಿನಲ್ಲಿ 1+4=5 ರೀತಿ ಆಂತರಿಕ ಮೀಸಲಾತಿ ನೀಡುವುದು ಸುಪ್ರೀಂ ಕೋರ್ಟ ತೀರ್ಪಿಗೆ ವಿರುದ್ಧವಾಗಿದೆ. ಸಚಿವ ಸಂಪುಟದ ತೀರ್ಮಾನವನ್ನು ಪ್ರಶ್ನಿಸಿ ಸಲ್ಲಿಸಿದ ಪ್ರಕರಣಗಳು ಕರ್ನಾಟಕ ಹೈಕೋರ್ಟಿನಲ್ಲಿ ವಿಚಾರಣೆಯಲ್ಲಿದೆ ಎಂದರು.

ಸಂದರ್ಭದಲ್ಲಿ ಗಿರೀಶ ಲಮಾಣಿ, ಕೀರಣ ಲಮಾಣಿ, ಗಣೇಶ ಲಮಾಣಿ, ಕೃಷ್ಣ ಲಮಾಣಿ, ಉಮೇಶ ಲಮಾಣಿ, ತುಳಚಪ್ಪ ಲಮಾಣಿ, ಸಂತೋಷ ಲಮಾಣಿ, ಚನ್ನಪ್ಪ ಲಮಾಣಿ, ಯಂಕಪ್ಪ ಲಮಾಣಿ, ದೇವೇಂದ್ರಪ್ಪ ಲಮಾಣಿ ಮತ್ತಿತರರಿದ್ದರು.



ಕಿರುಸುದ್ದಿ

14 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧ

• **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಒಟ್ಟು 16 ಅಭ್ಯರ್ಥಿಗಳಿಂದ 26 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಮಂಗಳವಾರ ನಡೆದ ನಾಮಪತ್ರ ಪರಿಶೀಲನೆಯಲ್ಲಿ 14 ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿದ್ದು, ಇಬ್ಬರು ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತಗೊಂಡಿವೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಿಂದ ಉಮೇಶ ಮೇಟಿ, ಭಾರತೀಯ ಜನತಾ ಪಾರ್ಟಿಯ ವೀರಭದ್ರಯ್ಯ ಚರಂತಿಮಠ, ಉತ್ತಮ ಪ್ರಜಾಕೀಯ ಪಾರ್ಟಿಯ ಅಂತೋಷ ಸವ್ವಾಸೆ, ಜನತಾ ಚಳುವಳಿ ಭಾರತ ಪಕ್ಷದ ತೇಜೋರಾಮ ಶೆಟ್ಟಿ ದೇವಾಂಗ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ನಾಗರಾಜ ಕಲಕುಟಗರ, ಬ್ಲೂ ಇಂಡಿಯಾ ಪಾರ್ಟಿಯ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರದಿಂದ ಅಬ್ದುಲ್ ರಜಾಕ ಬಾಳಿಕಾಯಿ, ಅಯ್ಯುಬಖಾನ ಲಾಲಸಾಬ ಬಾಗೇವಾಡಿ, ಆನಂದ ಜಕಾತಿ, ಗೋವಿಂದಪ್ಪ ಬಳ್ಳಾರಿ, ಪ್ರಶಾಂತ ಶರಣಪ್ಪ ರಾವ, ಯಂಕಪ್ಪ ಬಾಪಣ್ಣ ಕಮತಗಿ, ರವಿ ಶಿವಪ್ಪ ಪಡಸಲಗಿ ಅವರು ಸಲ್ಲಿಸಿದ ನಾಮಪತ್ರಗಳು ಕ್ರಮಬದ್ಧವಾಗಿವೆ. ಪಕ್ಷೇತರದಿಂದ ಪರಶುರಾಮ ನೀಲನಾಯಕ, ಬಾಬುಷಾ ರೊಳ್ಳಿ ಅವರು ಸಲ್ಲಿಸಿದ ನಾಮಪತ್ರಗಳು ತಿರಸ್ಕೃತಗೊಂಡಿವೆ. ನಾಮಪತ್ರ ಹಿಂಪಡೆಯಲು ಮಾರ್ಚ್ 26 ಕೊನೆಯ ದಿನವಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ರಕ್ತ ಸಂಗ್ರಹಣೆಗಾಗಿ ವಾಹನ ಲೋಕಾರ್ಪಣೆ ಸಮಾರಂಭ ಇಂದು

• **ಹುಬ್ಬಳ್ಳಿ:** ನಗರದ ರಾಷ್ಟ್ರೋತ್ಥಾನ ರಕ್ತ ಕೇಂದ್ರಕ್ಕೆ ಅಡೋಬೆ ಟೆಕ್ನಾಲಜೀಸ್ ಅವರು ಸಿಎಸ್‌ಆರ್ ನಿಧಿಯಡಿ ರಕ್ತ ಸಂಗ್ರಹಣೆಗಾಗಿ ಸುಸಜ್ಜಿತ ವಾಹನದ ಲೋಕಾರ್ಪಣೆ ಸಮಾರಂಭ ಮಾ.25ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸಿದ್ಧಾರೂಢ ಸ್ವಾಮಿ ಮಠದ ಆವರಣದಲ್ಲಿ ನಡೆಯಲಿದೆ. ಸಾನ್ನಿಧ್ಯ ಕುಂದಗೋಳದ ಅಭಿನವ ಬಸವಣ್ಣಜ್ಜನವರ, ಸಿದ್ಧಾರೂಢ ಮಠ ಟ್ರಸ್ಟ್ ಕಮಿಟಿ ಚೇರಮನ್ ಚನ್ನವೀರ ಮುಂಗರವಾಡಿ, ಆರ್‌ಎಸ್‌ಎಸ್‌ನ ಕರ್ನಾಟಕ ಉತ್ತರ ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ, ಸಹಕಾರ್ಯವಾಹ ಕಿರಣ ಗುಡ್ಡದಕೇರಿ, ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಕಾರ್ಯದರ್ಶಿ ರಾಘವೇಂದ್ರ ಅಂಬೇಕರ, ಸಮಾಜ ಸೇವಕ ವೀರೇಂದ್ರ ಛೇಡಾ ಭಾಗವಹಿಸುವರು ಎಂದು ಕೇಂದ್ರದ ಮುಖ್ಯಸ್ಥ ದತ್ತಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಇ ಸ್ವತ್ತು ನೀಡಲು ಲಂಚದ ಬೇಡಿಕೆ: ಗ್ರಾಪಂ ಪಿಡಿಓ ಲೋಕಾ ಬಲೆಗೆ

• **ಬಳ್ಳಾರಿ:** ಜಮೀನುವೊಂದರಲ್ಲಿ ನಿವೇಶನ ಮಾಡಲು ಇ ಸ್ವತ್ತು ನೀಡಲು 50 ಸಾವಿರ ಲಂಚ ಪಡೆಯುವಾಗ ತಾಲೂಕಿನ ಸಿಡಿಗಿನಮೊಳ ಗ್ರಾಪಂ ಪಿಡಿಓ ಮುಶ್ರತ ಬಾನು ಹಾಗೂ ಬಿಲ್ ಕಲೆಕ್ಟರ್ ಅವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಮೀನಳ್ಳಿ ಗ್ರಾಮದ ರವಿಕುಮಾರ್ ಡಿ.ಎನ್ನುವವರು ತಮ್ಮ ಜಮೀನಿನಲ್ಲಿ ನಿವೇಶನಗಳನ್ನು ಮಾಡಲು ಮುಂದಾಗಿದ್ದು, ತಮ್ಮ ಜಮೀನಿನ ಇ ಸ್ವತ್ತು ಪ್ರಮಾಣ ಪತ್ರ ನೀಡುವಂತೆ ಗ್ರಾಮ ಪಂಚಾಯಿತಿ ಪಿಡಿಓ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಪಿಡಿಓ ಅಧಿಕಾರಿಗಳು 50 ಸಾವಿರ ಲಂಚದ ಹಣ ಬೇಡಿಕೆ ಇಟ್ಟಿದ್ದಾರೆ. ಇದಕ್ಕೆ ಒಪ್ಪಿಕೊಂಡ ರವಿಕುಮಾರ್ ಅವರು, ಲೋಕಾಯುಕ್ತ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಆದರೆ, ಪಿಡಿಓ ಅವರು, ಹಣವನ್ನು ಬಿಲ್ ಕಲೆಕ್ಟರ್ ಓಬಳೇಶ್ ಅವರ ಬಳಿ ತಲುಪಿಸಿ ಎಂದಿದ್ದಾರೆ. ಅದರಂತೆ ಲಂಚದ ಹಣ ನೀಡುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಹಣ ಸಮೇತ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ. ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿಯಲ್ಲಿ ಧಾರಾಕಾರ ಮಳೆ | ನೆಲಕ್ಕುರುಳಿದ ಶೆಡ್‌ಗಳು

ಮಳೆಗೆ ಜನಜೀವನ ಅಸ್ತವ್ಯಸ್ತ

• **ಹುಬ್ಬಳ್ಳಿ:** ನಗರ ಸೇರಿದಂತೆ ತಾಲೂಕಿನ ಗ್ರಾಮೀಣ ಭಾಗದಲ್ಲಿ ಮಂಗಳವಾರ ಧಾರಾಕಾರ ಮಳೆ ಸುರಿದಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಸಂಜೆ 5.30ರ ವೇಳೆ ಗುಡುಗು ಸಹಿತ ಆರಂಭವಾದ ಮಳೆ ರಾತ್ರಿಯಲ್ಲ ಸುರಿಯಿತು. ನಗರ ಪ್ರದೇಶದಲ್ಲಿ ಸ್ವಲ್ಪ ಹೊತ್ತು ಜೋರಾಗಿ ಮಳೆ ಸುರಿದು, ಬಳಿಕ ಜಿಟಿಜಿಟಿ ಮಳೆಯಾಯಿತು. ಗ್ರಾಮೀಣ ಭಾಗದಲ್ಲಿ ರಭಸದಿಂದ ಮಳೆಯಾಗಿದೆ. ಮಳೆ ಜೋರಾಗಿ ಸುರಿದ ಹಿನ್ನೆಲೆ ನಗರದ ಕೆಲವು ತಗ್ಗು ಪ್ರದೇಶಗಳಲ್ಲಿ ನೀರು ನಿಂತಿತ್ತು. ಮಾರುಕಟ್ಟೆಗೆ ಬಂದ ಗ್ರಾಹಕರು ನೆನೆಯುತ್ತ ವ್ಯಾಪಾರ ನಡೆಸಿದರು.

ಬಿಆರ್‌ಟಿಎಸ್ ಕಾರಿಡಾರ್ ಸೇರಿದಂತೆ ಹೊಸೂರು ವೃತ್ತ, ದೇವಾಂಗಪೇಟೆ ರಸ್ತೆ, ಗೋಪನಕೊಪ್ಪ ರಸ್ತೆ, ಯಲ್ಲಾಪುರ ರಸ್ತೆ, ಬಂಕಾಪುರ ಚೌಕ, ಅಶೋಕ ನಗರ ಮುಖ್ಯರಸ್ತೆಯಲ್ಲಿ ನೀರು ನಿಂತಿತ್ತು. ಕೆಲವೆಡೆ ಆಗಾಗ ವಿದ್ಯುತ್ ವ್ಯತ್ಯಯವಾಗುತ್ತಿತ್ತು. ಕ್ಷಣಾರ್ಧದಲ್ಲಿ ರಸ್ತೆ ಹಾಗೂ ಒಳಚರಂಡಿಗಳು ಜಲಾವೃತವಾದವು. ಕೆಲವು ವಾರ್ಡ್‌ಗಳಲ್ಲಿ ಒಳಚರಂಡಿ ತುಂಬಿ ಹರಿದಿರುವ ಕುರಿತು ಮಹಾನಗರ ಕಂಟ್ರೋಲ್ ರೂಂಗೆ ದೂರುಗಳು ಬಂದಿವೆ.

ತಾಲೂಕಿನ ಬ್ಯಾಹಟ್ಟಿ ಗ್ರಾಮದಲ್ಲಿ ಸಂಜೆ ಬಿರುಗಾಳಿ ಸಮೇತ ಧಾರಾಕಾರವಾಗಿ ಮಳೆ ಸುರಿದಿದ್ದರಿಂದ 10ಕ್ಕೂ ಹೆಚ್ಚು ಶೆಡ್‌ನ ಮನೆಗಳು ನೆಲಕ್ಕುರುಳಿವೆ. ಅನೇಕ ಮನೆಗಳಿಗೆ ನೀರು ಸೇರಿ ಜನರು ತೊಂದರೆ ಅನುಭವಿಸಿದರು. ಗ್ರಾಮಸ್ಥರು ದೇವಸ್ಥಾನ ಹಾಗೂ ಶಾಲೆಗಳಿಗೆ ವಾಸಿಸುವಂತಾಗಿತು. ಜೋರಾದ ಗಾಳಿಗೆ ವಿದ್ಯುತ್ ಟಿಸಿಯೊಂದು ಕೆಳಗೆ ಬಿದ್ದಿದೆ. ಇದರಿಂದ ಗ್ರಾಮಸ್ಥರಲ್ಲಿ ಕೆಲಹೊತ್ತು ಆತಂಕ ಸೃಷ್ಟಿಯಾಗಿತ್ತು. ಗ್ರಾಮೀಣ ಭಾಗದಲ್ಲಿ ಸುಮಾರು ಹೊತ್ತು ವಿದ್ಯುತ್ ವ್ಯತ್ಯಯ ಉಂಟಾಗಿತ್ತು.



ಸಿಡಿಲಿನ ಹೊಡೆತಕ್ಕೆ ಹೊತ್ತುರಿದ ತೆಂಗಿನ ಮರ

ಕಲಬುರಗಿ: ನಗರ ಸೇರಿದಂತೆ ಜಿಲ್ಲೆಯಲ್ಲಿ ತಡರಾತ್ರಿ, ಹಲವೆಡೆ ಗುಡುಗು-ಸಿಡಿಲಿನ ಅರ್ಭಟ ಕಂಡುಬಂದಿದ್ದು, ಜನರಲ್ಲಿ ಆತಂಕದ ವಾತಾವರಣ ಉಂಟಾಗಿ, ಕಲಬುರಗಿ ತಾಲೂಕಿನ ಮೇಳಕುಂದ ಗ್ರಾಮದಲ್ಲಿ ಸಿಡಿಲು ಬಡಿದ ಪರಿಣಾಮ ಬಸವಂತರಾಯ್ ರಾಮಣ್ಣ ಗೌಡರ ಮನೆಯಲ್ಲಿದ್ದ ತೆಂಗಿನ ಮರ ಹೊತ್ತಿ ಉರಿದ ಘಟನೆ ನಡೆದಿದೆ.
ಸಿಡಿಲಿನ ಹೊಡೆತದಿಂದ ಮರಕ್ಕೆ ಬೆಂಕಿ ತಗುಲಿ, ಕೆಲಕಾಲ ದಟ್ಟ ಹೊಗೆ ಹಾಗೂ ಜ್ವಾಲೆಗಳು ಕಾಣಿಸಿಕೊಂಡವು. ತೆಂಗಿನ ಮರ ಹೊತ್ತಿ ಉರಿಯುತ್ತಿರುವುದರಿಂದ ಸ್ಥಳೀಯರಲ್ಲಿ ಭೀತಿ ಉಂಟಾಗಿ, ಕೆಲ ಸಮಯ ಆತಂಕದ ವಾತಾವರಣ ನಿರ್ಮಾಣವಾಯಿತು. ಬಳಿಕ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

ಹಂಸಭಾವಿಯಲ್ಲಿ ಆಲಿಕಲ್ಲು ಮಳೆ

ಹಾವೇರಿ: ಜಿಲ್ಲೆಯ ಹಂಸಭಾವಿ ಗ್ರಾಮದಲ್ಲಿ ಮಂಗಳವಾರ ಸಂಜೆ ಆಕಸ್ಮಿಕವಾಗಿ ಗುಡುಗು-ಸಿಡ್ಲುಗಳೊಂದಿಗೆ ಭಾರೀ ಗಾಳಿ ಮತ್ತು ಮಳೆಯು ಸುರಿದಿದೆ. ಈ ಅಸಾಮಾನ್ಯ ಹವಾಮಾನ ಬದಲಾವಣೆಯಿಂದ ಸ್ಥಳೀಯ ಜನಜೀವನದಲ್ಲಿ ತಾತ್ಕಾಲಿಕ ಅಸ್ತವ್ಯಸ್ತತೆ ಉಂಟಾಯಿತು. ಮಧ್ಯಾಹ್ನ ಆಕಾಶದಲ್ಲಿ ಮೋಡಗಳು ಕವಿದಿದ್ದು, ಸಂಜೆ ವೇಳೆಗೆ ಗುಡುಗು-ಮಿಂಚುಗಳ ನಡುವೆ ಮಳೆ ಆರಂಭವಾಯಿತು. ತೀವ್ರ ಗಾಳಿಯ ಪರಿಣಾಮವಾಗಿ ಕೆಲವೆಡೆ ಮರಗಳು ಉರುಳಿದ ಘಟನೆಗಳು ವರದಿಯಾಗಿವೆ. ಕೆಲವು ಕಡೆ ವಿದ್ಯುತ್ ವ್ಯತ್ಯಯವೂ ಉಂಟಾಗಿದೆ.

ಬೆಳಗಾವಿಯಲ್ಲಿ ವರುಣನ ಆರ್ಭಟ

• **ಬೆಳಗಾವಿ:** ಬಿಸಿಲಿನ ಝಳಕ್ಕೆ ಹೈರಾಣಯಾದ ಜನತೆಗೆ ಮಳೆರಾಯ ತಂಪೆರೆದಿದ್ದಾನೆ. ಮಂಗಳವಾರ ಸಂಜೆ 4ಗಂಟೆ ಸುಮಾರಿಗೆ ಭಾರೀ ಗಾಳಿ, ಗುಡುಗು, ಸಿಡಿಲಿನಿಂದ ಆರಂಭವಾದ ಮಳೆಯಿಂದ ವಾಹನ ಸಂಚಾರ, ಜನರ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡು ಕೆಲ ಗಂಟೆಗಳ ಕಾಲ ಜನ ಮಳೆಯಿಂದ ಜನತೆ ಪರದಾಡಿದರು.

ರಮಜಾನ್ ಮನ್ನಾ ದಿನ ಆಲಿಕಲ್ಲು ಸಹಿತ ಭಾರೀ ಮಳೆಗೆ ಅಪಾರ ಪ್ರಮಾಣದಲ್ಲಿ ಸಣ್ಣ ಅಂಗಡಿಕಾರ ಅಂಗಡಿಗಳು ನೆಲಸಮಗೊಂಡು ಅಪಾರ ಪ್ರಮಾಣದಲ್ಲಿ ಬೆಳಗಾವಿ ನಗರದಲ್ಲಿ ಹಾನಿಯಾಗಿತ್ತು. ಮಂಗಳವಾರ ಸುರಿದ ಮಳೆಗೆ ಕೆಲವೊಂದು ಕಡೆ ಹಾನಿ ಸಣ್ಣಪುಟ್ಟ ವ್ಯಾಪಾರಸ್ಥರಿಗೆ ತೊಂದರೆಯಾಗಿದೆ.

ಸಿಡಿಲು ಬಡಿದು ರೈತ ಸಾವು



• **ಕಲಬುರಗಿ:** ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಂಗಳವಾರ ಬಿರುಗಾಳಿ ಹಾಗೂ ಗುಡುಗು ಸಹಿತ ಭಾರೀ ಮಳೆಯಾಗಿದ್ದು, ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಶಾದಿಪುರ ತಾಂಡಾದಲ್ಲಿ ದುರ್ಘಟನೆ ಸಂಭವಿಸಿದೆ. ಜಮೀನಿನಲ್ಲಿ ಕಬ್ಬು ನಾಟಿ ಮಾಡುತ್ತಿದ್ದ ವೇಳೆ ಸಿಡಿಲು ಬಡಿದು ಮಹೇಶ ಚೌವ್ಹಾಣ್ (24) ಎಂಬ ಯುವ ರೈತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಘಟನಾ ಸ್ಥಳಕ್ಕೆ ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಕುಂಚಾವರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಜಿಲ್ಲೆಯ ಹಲವೆಡೆ ಆಲಿಕಲ್ಲು ಸಹಿತ ಮಳೆ

• **ಹಾವೇರಿ:** ಗುಡುಗು ಸಹಿತ ಭಾರೀ ಗಾಳಿಯೊಂದಿಗೆ ಜಿಲ್ಲೆಯ ಹಲವೆಡೆ ಮಂಗಳವಾರ ಸಂಜೆ ಆಲಿಕಲ್ಲು ಸಹಿತ ಮಳೆಯಾಗಿದೆ.

ದಿನವಿಡಿ ಬೆಳಗ್ಗೆಯಿಂದ ಸಂಜೆವರೆಗೂ ಬಿಲಿಸಿನ ವಾತಾವರಣದಿಂದ ಕೂಡಿತ್ತು. ಸಂಜೆ ಏಕಾಏಕಿ ಭಾರೀ ಗಾಳಿಯೊಂದಿಗೆ ಅಲ್ಲಲ್ಲಿ ಮಳೆಯಾಗಿದೆ. ಜಿಲ್ಲೆಯ ಬ್ಯಾಡಗಿ ಪಟ್ಟಣದಲ್ಲಿ ಮಳೆಯಾಗಿದ್ದು ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ರೈತರು ಹಾಗೂ ವ್ಯಾಪಾರಸ್ಥರು ಸಮಸ್ಯೆ ಎದುರಿಸುವಂತಾಯಿತು. ಏಕಾಏಕಿ ಗಾಳಿಯೊಂದಿಗೆ ಮಳೆಯಾಗಿದ್ದರಿಂದ ಮೆಣಸಿನಕಾಯಿ ರಕ್ಷಿಸಲು ರೈತರು, ವ್ಯಾಪಾರಸ್ಥರು ತಾಡಪತ್ರೆ ಹೊಚ್ಚಲು ಪರದಾಡುವಂತಾಯಿತು. ತಾಲೂಕಿನ ಮೋಟೆಬೆನ್ನೂರ ಭಾಗದಲ್ಲಿ ಸಹ ಭಾರೀ ಗಾಳಿಯೊಂದಿಗೆ ಕೆಲಕಾಲ ಆಲಿಕಲ್ಲು ಮಳೆಯಾಗಿದೆ. ಇನ್ನೂ ಹಿರೇಕೆರೂರು ತಾಲೂಕಿನ ಹಂಸಭಾವಿಯಲ್ಲಿ ಆಲಿಕಲ್ಲು ಮಳೆಯಾಗಿದೆ. ಹಾವೇರಿ ನಗರದಲ್ಲಿ ಸಂಜೆ ಏಕಾಏಕಿ ಭಾರಿ ಗಾಳಿ, ಗುಡುಗು ಸಹಿತ ಕೆಲ ಮಳೆ ಹನಿಗಳು ಸುರಿದಿವೆ. ಆದರೆ, ಭಾರೀ ಗಾಳಿ ಬಿಸಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿದ್ದು ನಗರದಲ್ಲಿ ಕೆಲ ಗಂಟೆಗಳ ಕಾಲ ವಿದ್ಯುತ್ ವ್ಯತ್ಯಯ ಉಂಟಾಯಿತು.

ತರಕಾರಿ ರಕ್ಷಣೆಗೆ ಪರದಾಟ

ಹಾನಗಲ್ಲ ತಾಲೂಕಿನಾದ್ಯಂತ ಒಂದು ಗಂಟೆಗೂ ಹೆಚ್ಚು ಕಾಲ ಗಾಳಿ, ಆಲಿಕಲ್ಲು ಸಹಿತ ಮಳೆಯಾಗಿದೆ. ಹಾವೇರಿ ತಾಲೂಕಿನ ಕರ್ಜಗಿಯಲ್ಲೂ ಬಿರುಗಾಳಿ ಸಮೇತ ಧಾರಾಕಾರ ಮಳೆಗೆ ಸಂತೆಯಲ್ಲಿದ್ದ ತರಕಾರಿಗಳು ಕೊಚ್ಚಿ ಹೋಗಿವೆ. ಬದನೆಕಾಯಿ, ಟೊಮ್ಯಾಟೊ, ಆಲೂಗಡ್ಡೆ ಸೇರಿದಂತೆ ಹಲವು ತರಕಾರಿ ನೀರಿನಲ್ಲಿ ಜಲಾವೃತಗೊಂಡು ಸಂತೆಗೆ ಬಂದ ಜನರು ಮನೆಗೆ ಹೋಗಲು ಒದ್ದಾಡಿದರೆ ತರಕಾರಿ ರಕ್ಷಣೆ ಮಾಡಿಕೊಳ್ಳಲು ವ್ಯಾಪಾರಸ್ಥರು ಪರದಾಡುವಂತಾಗಿದೆ.

ಜಿಲ್ಲೆಯ ರಾಣೇಬೆನ್ನೂರ, ಶಿಗ್ಗಾವಿ, ಹಾನಗಲ್ಲ, ಸವಣೂರು, ರಟ್ಟೀಹಳ್ಳಿ ಭಾಗದ ಹಲವಡೆ ಮಳೆಯಾಗಿದೆ. ಅಕಾಲಿಕ ಮಳೆಯಿಂದ ಗ್ರಾಮೀಣ ಭಾಗದಲ್ಲಿ ಮೆಕ್ಕೆಜೋಳ, ರಾಗಿ, ಭತ್ತ, ಕುಸುಬಿ ಸೇರಿದಂತೆ ವಿವಿಧ ಬೆಳೆಗಳ ಒಕ್ಕಲುತನದಲ್ಲಿ ತೊಡಗಿದ್ದ ರೈತರು ಸಮಸ್ಯೆ ಎದುರಿಸುವಂತಾಯಿತು.



ಬ್ಯಾಡಗಿಯಲ್ಲಿ ಭಾರೀ ಮಳೆ

ಬ್ಯಾಡಗಿ: ಹಾವೇರಿ ಜಿಲ್ಲೆಯ ಬ್ಯಾಡಗಿ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಮಂಗಳವಾರ ಸಂಜೆ ಸುಮಾರು ಒಂದು ಗಂಟೆಗಳ ಕಾಲ ಆಲಿಕಲ್ಲು ಸಹಿತ ಮಳೆ ಬಿದ್ದಿದೆ.ಪಟ್ಟಣದಲ್ಲಿ ನಿತ್ಯವೂ ಸುಮಾರು 30 ಡಿಗ್ರಿ ಸೆಲ್ಸಿಯಸ್ ಆಸು ಪಾಸಿನಲ್ಲಿ ಉಷ್ಣಾಂಶ ದಾಖಲಾಗುತ್ತಿದೆ. ಬಿಸಿಲಿನ ಹೊಡೆತಕ್ಕೆ ತತ್ತರಿಸಿದ ಜನರಿಗೆ ಅಕಾಲಿಕ ಆಲಿಕಲ್ಲು ಮಳೆ ತಂಪೆರೆಯಿತು. ಆಲಿಕಲ್ಲು ಮಳೆಯಿಂದಾಗಿ ರಸ್ತೆ ಹಾಗೂ ಚರಂಡಿಗಳೆಲ್ಲ ನೀರು ತುಂಬಿ ಹರಿದವು. ಕೆಲ ಹೊತ್ತು ಸುರಿದ ಆಲಿಕಲ್ಲು ಮಳೆಯಿಂದ ತಂಪಾದ ವಾತವರಣ ಜನರು ಕೂಲ್ ಕೂಲ್ ಆಗಿದ್ದಾರೆ.

ಜಿಲ್ಲೆಯಲ್ಲಿ ಸಿಲಿಂಡರ್, ಇಂಧನ ಕೊರತೆಯಿಲ್ಲ



» ವದಂತಿ ಸುದ್ದಿ ಹರಡಿದರೆ ಕಾನೂನು ಕ್ರಮ: ಡಿಸಿ

• **ಬೆಳಗಾವಿ:** ಗೃಹಬಳಕೆ ಸಿಲಿಂಡರ್ ಹಾಗೂ ಇಂಧನದ ಯಾವುದೇ ಕೊರತೆಯಿಲ್ಲ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಟ್ಟು ಆತಂಕಕ್ಕೆ ಒಳಗಾಗಬಾರದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮನವಿ ಮಾಡಿಕೊಂಡರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಳಗಾವಿ ಜಿಲ್ಲೆ ಹಾಗೂ ನಗರದಲ್ಲಿ ಯಾವುದೇ ರೀತಿಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಕೊರತೆ ಇಲ್ಲ. ಬಂಕ್‌ಗಳಲ್ಲಿ ಸ್ಟಾಕ್ ಖಾಲಿಯಾದರೆ ನಗರದಲ್ಲಿ ಕೇವಲ ಐದು ಗಂಟೆಗಳಲ್ಲಿ ಸ್ಟಾಕ್ ಲಭ್ಯವಾಗಲಿದೆ. ಇಂಧನ ಕೊರತೆ ವದಂತಿಗೆ ಕಿವಿಗೊಡಬಾರದು. ಇಂಧನ ಪೂರೈಕೆ ಕಂಪನಿ ಹಾಗೂ ಬಂಕ್ ಮಾಲೀಕರ ಜತೆ ಈಗಾಗಲೇ ಚರ್ಚೆ ಮಾಡಲಾಗಿದ್ದು, ಇಂಧನ ಕೊರತೆ ಎಲ್ಲಿಯೂ ಕಂಡು ಬಂದಿರುವುದಿಲ್ಲ ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.

ಜನರು ಆತಂಕಕ್ಕೆ ಒಳಗಾಗಿ ಇಂಧನ ಸಂಗ್ರಹಕ್ಕೆ ಮುಂದಾಗಿರುವುದರಿಂದ ಈ ರೀತಿಯ ಗೊಂದಲ ಉಂಟಾಗಿದೆ. ಬಂಕ್‌ಗಳಲ್ಲಿ ಬಾಟಲ್ ಅಥವಾ ಕ್ಯಾನ್‌ಗಳಲ್ಲಿ ಪೆಟ್ರೋಲ್ ಅಥವಾ ಡೀಸೆಲ್ ಮಾರಾಟ ಮಾಡುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿಯನ್ನು ಹರಡಿದರೆ ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ ಗುಲಾಬ್ ರಾವ್ ಭೋರಸೆ ಮಾತನಾಡಿ, ಯಾವುದೇ ಪೆಟ್ರೋಲ್ ಬಂಕ್‌ಗಳಲ್ಲಿ ಬಾಟಲ್ ಅಥವಾ ಕ್ಯಾನ್‌ಗಳಲ್ಲಿ ಇಂಧನ ಮಾರಾಟಕ್ಕೆ ಅವಕಾಶ ನೀಡುವುದಿಲ್ಲ. ಅಕ್ರಮವಾಗಿ ಇಂಧನ ಸಂಗ್ರಹ ಮತ್ತು ಮಾರಾಟ ತಡೆಯಲು ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡದೇ ಶಾಂತ ರೀತಿಯಿಂದ ಸಹಕರಿಸಬೇಕು. ಏನೇ ಅಕ್ರಮ ಅಥವಾ ಗಲಾಟೆ ಕಂಡು ಬಂದರೆ 112 ಸಂಖ್ಯೆಗೆ ಕರೆ ಮಾಡಿ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಈ ವೇಳೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಅಜಯ್ ಪೈ ಇದ್ದರು.

ಬೆಳಗಾವಿಯಲ್ಲಿ ಪೆಟ್ರೋಲ್, ಡೀಸೆಲ್‌ಗೆ ಮುಗಿಬಿದ್ದ ಜನ

• **ಬೆಳಗಾವಿ:** ನಗರ ಹಾಗೂ ಜಿಲ್ಲೆಯಾದ್ಯಂತ ಪೆಟ್ರೋಲ್ ಅಭಾವ ಸೃಷ್ಟಿಯಾಗಲಿದೆ ಎಂಬ ಒಂದೇ ಒಂದು ಸುಳ್ಳು ಸುದ್ದಿ ಈಗ ಸಾರ್ವಜನಿಕರ ನಿದ್ದೆಗೆಡಿಸಿದೆ.

ಸೋಮವಾರ ರಾತ್ರಿಯಿಂದಲೇ ಪೆಟ್ರೋಲ್‌ಬಂಕ್‌ಗಳ ಮುಂದೆ ವಾಹನಗಳ ಸಾಲು ಕಿಲೋಮೀಟರ್ ಗಟ್ಟಲೆ ನಿಂತಿದ್ದು, ಜನರ ಸಂಖ್ಯೆ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ. ವದಂತಿ ನಂಬಿ ಜನ ಆತಂಕಕ್ಕೆ ಒಳಗಾಗಿರುವುದು ಕಂಡುಬಂದಿದೆ.



ಬೆಳಗಾವಿ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹಲವೆಡೆ ಪೆಟ್ರೋಲ್ ಪಂಪ್‌ಗಳು ಬಂದ್ ಆಗಿದ್ದು, ಕೆಲವೇ ಕೆಲವು ಕಡೆ ಮಾತ್ರ ಇಂಧನ ಪೂರೈಕೆಯಾಗುತ್ತಿದೆ. ಇದರಿಂದಾಗಿ ತೆರೆದಿರುವ ಬಂಕ್‌ಗಳ ಮುಂದೆ ಸಾರ್ವಜನಿಕರು ಇಂಧನಕ್ಕಾಗಿ 2-3 ಗಂಟೆಗಳಿಂದ ಸರತಿ ಸಾಲಿನಲ್ಲಿ ನಿಲ್ಲುವಂತಾಗಿದೆ. ಇಂಧನ ಖಾಲಿಯಾಗುವ ಭೀತಿಯಲ್ಲಿ ಜನ ಮುಗಿಬೀಳುತ್ತಿದ್ದು, ವಾಹನಗಳ ದಟ್ಟಣೆ ನಿಯಂತ್ರಿಸಲು ಪೊಲೀಸರು ಸ್ಥಳಕ್ಕೆ ಧಾವಿಸಿ ಹರಸಾಹಸಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಸೋಷಿಯಲ್ ಮೀಡಿಯಾದಲ್ಲಿ ಹರಿದಾಡಿದ ಒಂದು ಸಂದೇಶ ಇಷ್ಟೆಲ್ಲಾ ಗೊಂದಲಕ್ಕೆ ಕಾರಣವಾಗಿದೆ. ಪೆಟ್ರೋಲ್ ಸಿಗುವುದಿಲ್ಲ ಎಂಬ ಭಯದಿಂದ ಜನರು ಕೇವಲ ವಾಹನಗಳಿಗೆ ಮಾತ್ರವಲ್ಲದೆ, ಬಾಟಲಿ ಮತ್ತು ಬ್ಯಾರಲ್‌ಗಳಲ್ಲಿ ಅಪಾರ ಪ್ರಮಾಣದ ಇಂಧನ ತುಂಬಿಸಿಕೊಳ್ಳಲು ಮುಂದಾಗಿದ್ದಾರೆ. ನಗರದಲ್ಲಿ ಪೆಟ್ರೋಲ್ ಕೊರತೆಯಿಲ್ಲ, ಎಲ್ಲರಿಗೂ ಇಂಧನ ಸಿಗಲಿದೆ ಎಂದು ಎಷ್ಟು ಹೇಳಿದರೂ ಜನರು ಕೇಳುತ್ತಿಲ್ಲ ಎಂದು ಪೆಟ್ರೋಲ್ ಬಂಕ್ ಸಿಬ್ಬಂದಿಗಳು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಜನದಟ್ಟಣೆ ಹೆಚ್ಚಾದಂತೆ ಬಂಕ್‌ಗಳ ಬಳಿ ಸಣ್ಣಪುಟ್ಟ ಮಾತಿನ ಚಕಮಕಿಗಳೂ ವರದಿಯಾಗುತ್ತಿವೆ.

ಜನರು ಭಯ ಪಡುವ ಅವಶ್ಯಕತೆಯಿಲ್ಲ. ದೇಶದಲ್ಲಿ ಮತ್ತು ಬೆಳಗಾವಿಯಲ್ಲಿ ಯಾವುದೇ ಪೆಟ್ರೋಲ್ ಕೊರತೆಯಿಲ್ಲ. ಜನರು ಊಹಾಪೋಹಗಳನ್ನು ನಂಬಿ ಆತಂಕಕ್ಕಿಡಾಗಬಾರದು. ಪ್ರತಿನಿತ್ಯದಂತೆ ಸಾಮಾನ್ಯವಾಗಿ ಪೆಟ್ರೋಲ್ ಭರಿಸಿಕೊಂಡು ನಿರ್ಭಯವಾಗಿರಿ. ಕಂಪನಿಯ ಅಧಿಕಾರಿಗಳು ಕೂಡ ಯಾವುದೇ ವ್ಯತ್ಯಯವಿಲ್ಲ ಎಂದು ತಿಳಿಸಿದ್ದಾರೆಂದು ಪೆಟ್ರೋಲ್ ಬಂಕ್ ಮಾಲೀಕರು ತಿಳಿಸಿದ್ದಾರೆ.

ಕೆಐಎಡಿಬಿ ಬಳ್ಳಾರಿ ಕಚೇರಿಯಲ್ಲಿ ಅಧಿಕಾರಿಗಳಿಂದ ನಕಲಿ ಸಹಿ

16.17 ಕೋಟಿ ರೂ. ದುರ್ಬಳಕೆ: ಪ್ರಕರಣ ದಾಖಲು

• **ಬಳ್ಳಾರಿ:** ನಗರದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಲಯ ಕಚೇರಿಯಲ್ಲಿ ಗುತ್ತಿಗೆ ನೌಕರರು, ಇತರೇ ನೌಕರಿ ಹಾಗೂ ಬ್ಯಾಂಕ್ ಅಧಿಕಾರಿಗಳು ಸೇರಿಕೊಂಡು ನಕಲಿ ಸಹಿ ಬಳಸಿ ಮಂಡಳಿ ಖಾತೆಯಿಂದ 16,17,98,916 ಕೋಟಿ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ವಿಚಾರಣೆ ಮುಂದುವರಿದಿದೆ ಎಂದು ಎಸ್ಪಿ ಡಾ.ಸುಮನ್ ಡಿ.ಪೆನ್ನಕರ್ ತಿಳಿಸಿದ್ದಾರೆ.

ಕೆಐಎಡಿಬಿ ಬಳ್ಳಾರಿ ವಲಯ ಕಚೇರಿಯಲ್ಲಿ ಕಳೆದ ಮಾ.19ರಂದು 16.17 ಕೋಟಿ ರೂ.ಗಳನ್ನ ಕಚೇರಿಯ ಸಿಬ್ಬಂದಿಗಳು, ಗುತ್ತಿಗೆ ನೌಕರರು ಹಾಗೂ ಬ್ಯಾಂಕ್ ಸಿಬ್ಬಂದಿಗಳು ಸೇರಿ ನಕಲಿ ಸಹಿ ಬಳಸಿ ಮಂಡಳಿ ಖಾತೆಯಿಂದ ಇತರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಲಾಗಿದೆ. ಈ ಕುರಿತು ವಿಚಾರಣೆ ಮುಂದುವರಿದಿದೆ. ಈ ವಂಚನೆ ಕುರಿತು ಆಂತರಿಕ ಲೆಕ್ಕ ಪರಿಶೋಧನೆಯ ವೇಳೆ ಬೆಳಕಿಗೆ ಬಂದಿದೆ.

ಪ್ರಕರಣದ ವಿಚಾರಣೆ ಪ್ರಾಥಮಿಕ ಹಂತದಲ್ಲಿದ್ದು, ಆರೋಪಿಗಳ ಪತ್ತೆ ಕಾರ್ಯ ನಡೆದಿದೆ. ಈ ವಂಚನೆ ಪ್ರಕರಣ 15 ಕೋಟಿ ರೂ.ಗೂ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಪೊಲೀಸ್ ಇಲಾಖೆಯ ಪ್ರಧಾನ ಕಚೇರಿಯ ಆದೇಶದನ್ವಯ ಸಿಐಡಿ ತನಿಖೆಗೆ ವರ್ಗಾವಣೆ ಮಾಡುವ ಪ್ರಕ್ರಿಯೆ ನಡೆದಿದೆ ಎಂದು ತಿಳಿಸಿದ್ದಾರೆ.

ಸಂಭ್ರಮದ ವೀರಭದ್ರೇಶ್ವರ ರಥೋತ್ಸವ



• **ಮುಂಡರಗಿ:** ತಾಲೂಕಿನ ತುಂಗಭದ್ರ ನದಿ ತೀರದ ವೀರಭದ್ರೇಶ್ವರ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಹರಹರ ಶ್ರೀ ವೀರಭದ್ರೇಶ್ವರ ಮಹಾರಾಜಕಿ ಜೈ ಎಂಬ ಘೋಷಣೆಯೊಂದಿಗೆ ಜರುಗಿತು. ಕಲಕೇರಿ ವೀರುಪಾಪುರ ಮುದು ಕೇಶ್ವರ ಶಿವಾಚಾರ್ಯ ಸ್ವಾಮೀಜಿ, ಡಾ.ಸುಜ್ಞಾನಂದ ಶಿವಾಚಾರ್ಯ ಸ್ವಾಮೀಜಿ, ಅಭಿನವ ಸಿದ್ದು ಪೀರ ಶಿವಾಚಾರ್ಯ ಸ್ವಾಮೀಜಿ, ಸೋಗಿ ಸಾನ್ನಿಧ್ಯದಲ್ಲಿ ಜರುಗಿತು. ಕೊಪ್ಪಳ, ಬಳ್ಳಾರಿ ಹಡಗಲಿ, ಹುಬ್ಬಳ್ಳಿ, ಧಾರವಾಡ, ಹಾವೇರಿ, ರಾಯಚೂರು ಸೇರಿದಂತೆ ನಾಡಿನ ವಿವಿಧ ಮೂಲೆಗಳಿಂದ ವೀರಭದ್ರೇಶ್ವರ ಪಾಲ್ಗೊಂಡಿದ್ದರು. ಭಕ್ತರು ತೇರಿಗೆ ಉತ್ತತ್ತಿ ಬಾಳೆ ಹಣ್ಣು ಎಸೆದು ತಮ್ಮ ಭಕ್ತಿ ಮೆರೆದರು. ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷ ಕರಬಸಪ್ಪ ಹಂಚಿನಾಳ, ಉಪಾಧ್ಯಕ್ಷ ಶೇಖರಪ್ಪ ಬಾಲೆ ಹೊಸೂರ, ಕೋಟ್ರೇಡ್ ಬಳ್ಳೊಳ್ಳಿ, ಸುಭಾಷ ಬಾಗೇವಾಡಿ, ಕಾಶಮ್ಮ ಬೆಂತೂ ರಮಠ, ಬಸವರಾಜಪ್ಪ ಉಮನಾಬಾದಿ, ಮುತ್ತಯ್ಯ ಹಿರೇಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಾಜಿ ಶಾಸಕ ಪುತ್ರನ ಹತ್ಯೆ ಶಂಕೆ

» ಕಾರಿನಲ್ಲಿ ಸುಟ್ಟು ಹೋದ ದೇಹ
» ಪೊಲೀಸ್ ಇಲಾಖೆ ತನಿಖೆ ಚುರುಕು

• **ಧಾರವಾಡ:** ಬೆಳಗಾವಿ ಜಿಲ್ಲೆ ಬೈಲಹೊಂಗಲ ಕ್ಷೇತ್ರದ ಮಾಜಿ ಶಾಸಕ ಬಾಬುರಾವ್ ಬೋಳಶೆಟ್ಟಿ ಅವರ ಪುತ್ರ ರಾಜು ಬೋಳಶೆಟ್ಟಿ (53) ಸಂಶಯಾಸ್ಪದ ರೀತಿ ತಮ್ಮ ಕಾರಿನಲ್ಲೇ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಪತ್ತೆಯಾಗಿರುವ ಘಟನೆ ಮಂಗಳವಾರ ನಡೆದಿದೆ.

ತಾಲೂಕಿನ ರಾಮಾಪುರ ಸಮೀಪದ ರೈಲ್ವೆ ಹಳಿ ಪಕ್ಕದ ಅರಣ್ಯ ಹಾಗೂ ನಿರ್ಜನ ಪ್ರದೇಶದಲ್ಲಿ ಶವ ಪತ್ತೆಯಾಗಿದೆ. ಮಧ್ಯಾಹ್ನ 2.30ರ ಸುಮಾರಿಗೆ ಕಾರೊಂದು ಹೊತ್ತಿ ಉರಿಯುವುದು ಗಮನಿಸಿದ ಸ್ಥಳೀಯರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಪರಿಶೀಲಿಸಿದಾಗ, ಕಾರಿನಲ್ಲಿ ಇರುವ ಮೃತದೇಹ ಸಂಪೂರ್ಣ ಸುಟ್ಟು ಕರಕಲಾಗಿದ್ದು ಕಂಡುಬಂದಿದೆ. ಮೃತ ವ್ಯಕ್ತಿ ಬೈಲಹೊಂಗಲದ ಉಡಕೇರಿ ಗ್ರಾಮದ ನಿವಾಸಿ ರಾಜು ಬೋಳಶೆಟ್ಟಿ ಎಂದು ಗುರುತಿಸಿದೆ.

ಮೃತ ವ್ಯಕ್ತಿ ಮಾಜಿ ಶಾಸಕ ಬಾಬುರಾವ್ ಬೋಳಶೆಟ್ಟಿ ಪುತ್ರ. ಅವರ ವ್ಯಾಗನಾರ್ ಕಾರಿನಲ್ಲಿ ಸಂಪೂರ್ಣ ಸುಟ್ಟು ಹೋಗಿದ್ದರು. ಸೋಮವಾರ ಮನೆಯಿಂದ ಹೋದ ರಾಜು ವಾಪಸ್ ಬರಲಿಲ್ಲ ಎಂದು ಕುಟುಂಬಸ್ಥರು ಕಣ್ಣೀರು ಹಾಕುವ ದೃಶ್ಯಗಳು ಗೋಚರಿಸಿದವು.

ದುಷ್ಕರ್ಮಿಗಳು ರಾಜು ಅವರನ್ನು ಅಪಹರಿಸಿ ತಂದು ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಹತ್ಯೆಯ ನಂತರ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಶವವನ್ನು ಕಾರಿನಲ್ಲಿಯೇ ಇರಿಸಿ ಕಿಡಿಗೇಡಿಗಳು ಬೆಂಕಿ ಹಚ್ಚಿ ಪರಾರಿಯಾಗಿರುವ ಸಾಧ್ಯತೆ ದಟ್ಟವಾಗಿದೆ.



> **ರಾಮಾಪುರದ ಕಾರಿನ ದುರಂತ ಪ್ರಕರಣದಲ್ಲಿ ಮೃತ ವ್ಯಕ್ತಿ ರಾಜು ಬೋಳಶೆಟ್ಟಿ ಎಂದು ಶಂಕಿಸಿದೆ. ಈ ಕುರಿತು ಡಿಎನ್‌ಎ ಪರೀಕ್ಷೆ ಮಾಡಲಾಗುತ್ತಿದೆ. ಜೊತೆಗೆ ಕೊಲೆಯ ಮಾಡಿರಬಹುದಾದ ಸಾಧ್ಯತೆಗಳಿದ್ದು, ಆರೋಪಿಗಳ ಹುಡುಕಾಟ ಸಹ ನಡೆದಿದೆ.**
> ■ ಗುಂಜನ್ ಆರ್ಯ, ಜಿಲ್ಲಾ ಪೊಲೀಸ್ ಅಧೀಕ್ಷಕ

ವಿಷಯ ತಿಳಿದು ಪೊಲೀಸ್ ಅಧೀಕ್ಷಕ ಗಂಜನ್ ಆರ್ಯ ಮತ್ತು ಗ್ರಾಮೀಣ ಠಾಣೆ ಸಿಪಿಐ ಶಿವಾನಂದ ಕಮತಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಘಟನಾ ಸ್ಥಳಕ್ಕೆ ವಿಧಿ ವಿಜ್ಞಾನ ತಂಡ, ಶ್ವಾನದಳ ಸಾಕ್ಷಿ ಸಂಗ್ರಹಿಸಿವೆ. ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗದ ಪ್ರದೇಶಗಳಲ್ಲಿ ಹೆಚ್‌ಟಿ ಮತ್ತು ಎಲ್‌ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಮಾ.25ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಸುಂಕೇರಿ ವಿವಿಧ ಪ್ರದೇಶಗಳಲ್ಲಿ ಹಾಗೂ ಅಮದಳ್ಳಿ ಫೀಡರಿನ ತೋಡೂರು ಕಾಲೋನಿ ಪ್ರದೇಶಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ರದ್ದು

ಕಾರವಾರ: ವೈದ್ಯಕೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ 10★10 ಅಡಿ ಜಾಗದಲ್ಲಿ 2 ಟೀ ಸ್ಟಾಲ್ ನಡೆಸಲು ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಈ ಟೀ ಸ್ಟಾಲ್‌ಗಳ ಕುರಿತು ಹಲವಾರು ಆಕ್ಷೇಪಣೆಗಳು ವ್ಯಕ್ತವಾಗಿರುವುದರಿಂದ ಸದರಿ ಅರ್ಜಿಯನ್ನು ರದ್ದುಪಡಿಸಲಾಗಿದ್ದು ಅರ್ಜಿ ಸಲ್ಲಿಸಿದವರು ತಮ್ಮ ಅರ್ಜಿಯೊಂದಿಗೆ ಡಿ.ಡಿ.ಯನ್ನು ಹಿಂಪಡೆಯುವಂತೆ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಕಿತ್ಸೆ ಫಲಿಸದೆ ಮಹಿಳೆ ಸಾವು

ಬನವಾಸಿ: ಕೊಲೆಗೆ ಯತ್ನಿಸಿ ಹಲ್ಲೆಗೆ ಒಳಗಾಗಿದ್ದ ಮಹಿಳೆ ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ರಾತ್ರಿ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾಳೆ. ಸಮೀಪದ ಯಡಗೊಪ್ಪ ಗ್ರಾಮದ ಹನುಮವ್ವ ಶಿವಶಂಕರ್ ಕುರುಬರ (55) ಕೊಲೆಯಾದ ದುರ್ದೈವಿಯಾಗಿದ್ದಾಳೆ. ಇತ್ತೀಚೆಗೆ ಯಡಗೊಪ್ಪ ಗ್ರಾಮದ ಹನುಮವ್ವ ಶಿವಶಂಕರ್ ಕುರುಬರ ಎಂಬ ಮಹಿಳೆ ಕಾಣೆಯಾಗಿದ್ದು, ಬಳಿಕ ನರೂರು ಗ್ರಾಮದ ಪ್ರಕಾಶ ಗೌಡ ಎಂಬುವವರ ಜಮೀನಿನಲ್ಲಿರುವ ಹಲಸಿನ ಮರದ ಕೆಳಗೆ ಗಂಭೀರವಾಗಿ ಗಾಯಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಳು. ಗಾಯಾಳುವನ್ನು ವಿಚಾರಿಸಿದಾಗ, ಅಲ್ಪಸ್ವಲ್ಪ ಮಾತನಾಡುತ್ತ ನರೂರು ಗ್ರಾಮದ ಕೃಷ್ಣಮೂರ್ತಿ ಆಚಾರಿ ಹೊಡೆದು ಕೊಲೆಗೆ ಯತ್ನಿಸಿ ಗಾಯಗೊಳಿಸಿದ್ದಾನೆ ಎಂದು ತಿಳಿಸಿದ್ದಾಳೆ. ತಕ್ಷಣ ಆಕೆಯನ್ನು ನಗರದ ಪಂಡಿತ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ, ನಂತರ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಯ ಆಸ್ಪತ್ರೆಗೆ ರವಾನಿಸಲಾಗಿದೆ. ಕೊಲೆ ಮಾಡುವ ಉದ್ದೇಶದಿಂದ ಬಲವಾದ ಆಯುಧದಿಂದ ಹಲ್ಲೆ ನಡೆಸಲಾಗಿದೆ ಎಂದು ಯಡಗೊಪ್ಪದ ಸಂಜೀವ ಶಿವಶಂಕರ್ ಕುರುಬರ ಅವರು ಬನವಾಸಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಪರಾರಿಯಾಗಿದ್ದ ಆರೋಪಿ ಸಮೀಪದ ನರೂರು ಗ್ರಾಮದ ಕೃಷ್ಣಮೂರ್ತಿ ಹಿರಿಯಣ್ಣ ಆಚಾರಿ ಎಂಬಾತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ಸಿದ್ದಾಪುರ: ತಾಲೂಕಿನ ಇಟಗಿಯ ಕಲಾ ಸಂಘಟನೆ ಕಲಾಭಾಸ್ಕರ ಭಾನುವಾರ ಕತ್ರಗಾಲಿನ ವಿದ್ಯಾಗಿರಿಯ ರಮಾನಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಹಾಬಲೇಶ್ವರ ಭಟ್ಟ ರಚಿಸಿದ ಪೌರಾಣಿಕ ಯಕ್ಷಗಾನ ಪ್ರಸಂಗ ಮಧು-ಕುಂಭೀನಸಿಯ ಪ್ರದರ್ಶನ ನಡೆಯಿತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61199	68098
ಬಿಳಿಗೋಟು	28200	40799
ಕೆಂಪುಗೋಟು	29211	37218
ಬೆಟ್ಟೆ	40799	50611
ರಾಶಿ	50509	53898
ಚಾಲಿ	44899	48599
ಬಿ.ಕಾಳುಮೆಣಸು	77705	82599

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	62395	65699
ರಾಶಿ	49719	58690
ಬೆಟ್ಟೆ	38972	51315
ಕೆಂಪುಗೋಟು	16000	39799
ಬಿಳಿಗೋಟು	15612	42311
ಚಾಲಿ	39009	49301
ಕೋಕಾ	12909	34599
ಕಾಳುಮೆಣಸು	58399	68099



ದಾಂಡೇಲಿ: ನಗರದ ಹಿಂದೂ ಸಮಾಜೋತ್ಸವ ಸಮಿತಿಯ ಆಶ್ರಯದಲ್ಲಿ ದಾಂಡೇಲಿ ನಗರದ ಹಳೆ ನಗರಸಭೆಯ ಮೈದಾನದಲ್ಲಿ ಬೃಹತ್ ಹಿಂದೂ ಸಮಾವೇಶ ಮಾ. 25 ರಂದು ನಡೆಯಲಿದ್ದು, ಈಗಾಗಲೇ ಭರದ ಸಿದ್ಧತೆ ನಡೆಯುತ್ತಿದೆ.

ಇಂದು ಬೃಹತ್ ಹಿಂದು ಸಮಾವೇಶ: ಭರದ ಸಿದ್ಧತೆ

ದಾಂಡೇಲಿ: ನಗರದ ಹಿಂದು ಸಮಾಜೋತ್ಸವ ಸಮಿತಿಯ ಆಶ್ರಯದಲ್ಲಿ ದಾಂಡೇಲಿ ನಗರದ ಹಳೆ ನಗರಸಭೆಯ ಮೈದಾನದಲ್ಲಿ ಬೃಹತ್ ಹಿಂದೂ ಸಮಾವೇಶ ಮಾ. 25 ರಂದು ನಡೆಯಲಿದ್ದು, ಈಗಾಗಲೇ ಭರದ ಸಿದ್ಧತೆ ನಡೆಯುತ್ತಿದೆ.

ಕಳೆದ 15 ದಿನಗಳಿಂದ ಮನೆ ಮನೆಗೆ ತೆರಳಿ ಹಿಂದು ಸಮಾಜೋತ್ಸವದ ಕರಪತ್ರಗಳನ್ನು ವಿತರಿಸಲಾಗಿದೆ. ಕಾರ್ಯಕ್ರಮದ ಕುರಿತಂತೆ ಪೂರ್ವಭಾವಿಯಾಗಿ ಅಲ್ಲಲ್ಲಿ ಬೈಕ್ ರ‍್ಯಾಲಿಗಳನ್ನು ಹಮ್ಮಿಕೊಳ್ಳಲಾಗಿದೆ. ನಗರದ ಪ್ರಮುಖ ರಸ್ತೆಗಳಲ್ಲಿ ಬ್ಯಾನರ್, ಬಂಟಿಂಗ್ಸ್‌ಗಳು ಹಾಗೂ ಕೇಸರಿ ಪತಾಕೆಗಳು ರಾರಾಜಿಸುತ್ತಿದೆ.

ಅಂದು ಸಂಜೆ 4 ಗಂಟೆಗೆ ಸರಿಯಾಗಿ ಹಳೆ ನಗರಸಭೆಯ ಮೈದಾನದಿಂದ ಭವ್ಯ ಶೋಭಾಯಾತ್ರೆ ಆರಂಭಗೊಂಡು, ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕೊನೆಯಲ್ಲಿ ಹಳೆ ನಗರಸಭೆ ಮೈದಾನದಲ್ಲಿ ಸಂಪನ್ನಗೊಳ್ಳಲಿದೆ. ನಂತರ ಬೃಹತ್ ಹಿಂದೂ ಸಮಾವೇಶ ನಡೆಯಲಿದ್ದು, ಈ ಸಮಾವೇಶದಲ್ಲಿ ಚಿಂತಕ, ವಾಗ್ಮಿ ಹಾಗೂ ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ ಪ್ರಮುಖರಾದ ಶ್ರೀಕಾಂತ ಶೆಟ್ಟಿ ಕಾರ್ಕಳ ಅವರಿಂದ ದಿಕ್ಸೂಚಿ ಭಾಷಣ ನಡೆಯಲಿದೆ. ಹಿಂದೂ ಸಮಾವೇಶ ಕಾರ್ಯಕ್ರಮದ ಕುರಿತಂತೆ ಹಳೆ ನಗರಸಭೆಯ ಮೈದಾನದಲ್ಲಿ ಭರದ ಸಿದ್ಧತೆಗಳು ನಡೆದಿದೆ. ಹಿಂದೂ ಸಮಾಜೋತ್ಸವ ಸಮಿತಿಯ ಪದಾಧಿಕಾರಿಗಳು, ಸದಸ್ಯರು, ಹಿಂದೂಪರ ಸಂಘಟನೆಯ ಪದಾಧಿಕಾರಿಗಳು, ಸದಸ್ಯರು ಕಾರ್ಯಕ್ರಮದ ಯಶಸ್ಸಿಗಾಗಿ ಶ್ರಮಿಸುತ್ತಿದ್ದಾರೆ.



ಕುಮಟಾ: ಸತ್ಯಸಾಯಿ ಬಾಬಾರವರ ಜನ್ಮಶತಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಸತ್ಯಸಾಯಿ ಪ್ರೇಮಪ್ರವಾಹಿನಿ ರಥಯಾತ್ರೆಗೆ ಕುಮಟಾ ತಾಲೂಕಿನ ಛತ್ರಕೂರ್ವೆ ಗ್ರಾಮದಲ್ಲಿ ಸಂತೆಗದ್ದೆಯಿಂದ ಆರಂಭವಾದ ರಥಯಾತ್ರೆ, ನಾಗೂರು ಕ್ರಾಸ್ ಮೂಲಕ ಭಕ್ತರ ಘೋಷಣೆಗಳ ನಡುವೆ ಭವ್ಯವಾಗಿ ಸಾಗಿತು. ನಾಗೂರು ಕ್ರಾಸ್‌ನಲ್ಲಿ ಪೂರ್ಣಕುಂಭ, ಹೂಮಾಲೆ ಹಾಗೂ ಮಂಗಳವಾದ್ಯಗಳೊಂದಿಗೆ ಭಕ್ತಿಪೂರ್ವಕ ಸ್ವಾಗತ ಕೋರಲಾಯಿತು.

ನೀರಿನ ಯೋಜನೆ ವಿಳಂಬ | ಶಾಸಕ ಆರ್.ವಿ.ದೇಶಪಾಂಡೆಗೆ ಸವಾಲ್

ಬಹಿರಂಗ ಚರ್ಚೆಗೆ ಬನ್ನಿ: ಜೀವೋಜಿ

ಹಳಿಯಾಳ: ಕಾಳಿ ನದಿಯಿಂದ ಹಳೆಯ ತಾಲೂಕಿನ ಕೆರೆ ತುಂಬಿಸುವ ಯೋಜನೆಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಭಾಗದ ಶಾಸಕ ಆರ್. ವಿ .ದೇಶಪಾಂಡೆ ಅವರು ನನ್ನೊಂದಿಗೆ ಬಹಿರಂಗ ಚರ್ಚೆಗೆ ಬರಲಿ ಎಂದು ಕಬ್ಬು ಬೆಳೆಗಾರರ ಹಿತಸಂರಕ್ಷಣಾ ಸಮಿತಿ ಅಧ್ಯಕ್ಷ ನಾಗೇಂದ್ರ ಜಿವೋಜಿ ಸವಾಲು ಹಾಕಿದ್ದಾರೆ.

ಪಟ್ಟಣದ ಮರಾಠಾ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,ದಮ್ಮಿದ್ದರೆ ಈ ಯೋಜನೆ ಬಗ್ಗೆ ಬಹಿರಂಗ ಚರ್ಚೆಗೆ ಬನ್ನಿ. ನೀವು ಎಷ್ಟು ಜನ ತಗೊಂಡ್ ಬರ್ತಿರೋ ಬನ್ನಿ ,ಅದಕ್ಕಿಂತ 100 ಜನ ಹೆಚ್ಚಿಗೆ ನಾನು ತಗೊಂಡ್ ಬರ್ತೀನಿ. ಯಾರು ಇದಕ್ಕೆ ಅಡ್ಡಿಪಡಿಸುತ್ತಿದ್ದಾರೆ, ಯಾರು ಇದಕ್ಕೆ ವಿಳಂಬ ಮಾಡಿ ಮತ್ತೊಂದು ಚುನಾವಣೆಗೆ ಇದರ ಲಾಭ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡುತ್ತಿ ದ್ದಾರೆ ಅಂತ ಜನ ತೀರ್ಮಾನ ಮಾಡಲಿ ಎಂದರು.

ಈ ಯೋಜನೆಯ ವಿಳಂಬವನ್ನು ಖಂಡಿಸಿ ಮಾರ್ಚ್ 16 ರಂದು ನಡೆದ ಹಳಿಯಾಳ ಬಂದ್ ಪ್ರತಿಭಟನೆಗೆ ಹಳಿಯಾಳದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಎಲ್ಲ ವ್ಯಾಪಾರಿಗಳು, ಹೊಟೇಲ್ ಮತ್ತು ಬಾರ್ ಮಾಲೀಕರು, ಬೇಕರಿಗಳು, ಎಲ್ಲ ಗ್ಯಾರೇಜ್‌ಗಳು ಹೀಗೆ ಎಲ್ಲ ವರ್ಗದ ಜನ ಸಹಕಾರ ನೀಡಿ ಸ್ವಯಂ ಪ್ರೇರಣೆಯಿಂದ ಹಳಿಯಾಳ ಬಂದ್ ನಲ್ಲಿ ಭಾಗವಹಿಸಿದ್ದಾರೆ. ಎಲ್ಲ ಜನಕ್ಕೆ ಕಬ್ಬು ಬೆಳೆಗಾರರ ಸಂಘದಿಂದ ಧನ್ಯವಾದಗಳು. ಇಂತಹ ಒಂದು ಜನಪರ ಹೋರಾಟವನ್ನು ಈ ಭಾಗದ ಶಾಸಕರು ಟೀಕಿಸುತ್ತಿರುವುದು ದುರದೃಷ್ಟಕರ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಈ ಯೋಜನೆಗೆ 29.6.2017 ರಂದು ಆದೇಶವಾಗಿದೆ ಮತ್ತು 6.12.2018 ವರ್ಕ್ ಆರ್ಡರ್ ಆಗಿದೆ.. 5.8.2019 ಕ್ಕೆ ಈ ಕಾಮಗಾರಿ ಮುಗಿಯಬೇಕಾಗಿತ್ತು. ಆದರೆ 2026 ಬಂದರೂ ಕಾಮಗಾರಿ ಮುಗಿದಿಲ್ಲ. ಇನ್ನೂ ನಿಗದಿತ ಅವಧಿಯಲ್ಲಿ ನೀರು ಪೂರೈಸಲಾಗುವುದು ಎಂದು ಹೇಳುತ್ತಿರುವುದಕ್ಕೆ ಶಾಸಕರಿಗೆ ನಾಚಿಕೆ ಆಗೋದಿಲ್ಲವೇ? ಎಂಟು ವರ್ಷ ವಿಳಂಬವಾಗಿದೆ. ಅದೇ ಅಳ್ನಾವರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆ 24.4. 2019 ಕ್ಕೆ ಟೆಂಡರ್ ಆಗಿ, 6.4.2022ಕ್ಕೆ ಮುಗಿದಿದೆ ಇದರ ಬಗ್ಗೆ ಶಾಸಕರು ಏನ್ ಹೇಳುತ್ತಾರೆ ಎಂದು ಜೀವೋಜಿ ಪ್ರಶ್ನೆ ಮಾಡಿದರು.

ನಮಗೆ ಉಪದೇಶ ಬೇಡ : ಒಂದು ಕೆರೆ ನಿರ್ಮಾಣ ಮಾಡದ, ಒಂದು ಏತ ನೀರಾವರಿ ಯೋಜನೆ ಮಾಡದ, ಒಂದೇ ಒಂದು ಕೆರೆಗೆ ಎಲ್ಲಿಯೂ ಒಂದು ಕಾಲುವೆ ನಿರ್ಮಾಣ ಮಾಡದ ನೀವು ನಮಗೆ ಅಭಿವೃದ್ಧಿ ಪಾಠ ಮಾಡುವ ಅವಶ್ಯಕತೆ ಇಲ್ಲ.

ನೀವು ಕೇವಲ ಚುನಾವಣೆ ಸಲುವಾಗಿ ಅಭಿವೃದ್ಧಿ ಮಾಡುವವರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಪಾಳೆಗಾರಿಕೆ ಸಂಸ್ಕೃತಿಯಿಂದ ಈ ಕ್ಷೇತ್ರದ ಹಿಂದುಳಿದವರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ, ಅಲ್ಪಸಂಖ್ಯಾತರಿಗೆ ಮಾಡುತ್ತಿರುವ ಮೋಸ ಎಲ್ಲರಿಗೂ ತಿಳಿದಿದೆ ಎಂದರು.ನಿಮ್ಮ ಆಡಳಿತಾವಧಿಯಲ್ಲಿ ಒಂದಾದರೂ ಕಾರ್ಯಗಳು ನಿಗದಿತ ಸಮಯದಲ್ಲಿ ಅನುಷ್ಠಾನಗೊಂಡಿವೆಯೋ ಎನ್ನುವುದನ್ನು ನಿಮ್ಮ ಎದೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿ ಹೇಳಿ. ಈ ಕ್ಷೇತ್ರವನ್ನು 45 ವರ್ಷ ಆಳಿದ ನೀವು ಜನರಿಗೆ ಹೇಳಿಕೊಳ್ಳುವಂತಹ ಯಾವುದಾದರೂ ಒಂದು ಕೆಲಸ ಇದೆಯೇ? ಸುಮಾರು 35 ವರ್ಷಗಳ ಕಾಲ ಈ ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ನಿಮ್ಮ ಸಾಧನೆ ಏನು? ಎಂದವರು ಪ್ರಶ್ನೆ ಮಾಡಿದರು.

ಅಕ್ಕಿ ಅಕ್ರಮ ಸಾಗಾಟ: ಓರ್ವನ ಬಂಧನ

ಅಂಕೋಲಾ: ಅಕ್ರಮ ಪಡಿತರ ಅಕ್ಕಿ ಸಾಗಿಸುತ್ತಿದ್ದ ಲಾರಿಯೊಂದನ್ನು ತಾಲೂಕಿನ ತಳಗದ್ದೆ ಕ್ರಾಸ್ ಬಳಿ ಅಂಕೋಲಾ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದು ಓರ್ವನನ್ನು ಬಂಧಿಸಿರುವುದಾಗಿ ತಿಳಿದು ಬಂದಿದೆ. ಮೇಲುಗಡೆ ಭತ್ತದ ಚೀಲಗಳನ್ನು ಹಾಕಿ ಕೆಳಭಾಗದಲ್ಲಿ ಅಪಾರ ಪ್ರಮಾಣದಲ್ಲಿ ಪಡಿತರ ಅನ್ನಭಾಗ್ಯ ಅಕ್ಕಿಯನ್ನು ಮೂಟೆಗಳಲ್ಲಿ ತುಂಬಿ ಸಾಗಿಸಲಾಗುತ್ತಿತ್ತು ಎಂದು ತಿಳಿದು ಬಂದಿದೆ. ಕೆ.ಎ22 ಎಎ7127 ನೋಂದಣಿ ಸಂಖ್ಯೆಯ ಲಾರಿಯಲ್ಲಿ ತಾಲೂಕಿನ ವಂದಿಗೆಯ ರಾಷ್ಟ್ರೀಯ ಹೆದ್ದಾರಿ ಪಕ್ಕದ ವ್ಯಕ್ತಿಯೋರ್ವರ ಗೋಡೌನ್‌ನಲ್ಲಿ ಸಂಗ್ರಹಿಸಿಟ್ಟ ಪಡಿತರ ಅಕ್ಕಿ ಚೀಲಗಳನ್ನು ಸಾಗಿಸುತ್ತಿದ್ದ ಸಂದರ್ಭದಲ್ಲಿ ದಾಳಿ ನಡೆಸಲಾಗಿದೆ.



ಸ್ಥಳಕ್ಕೆ ಕಾರವಾರ ಡಿ.ವೈ.ಎಸ್.ಪಿ ಗಿರೀಶ ಭೇಟಿ ನೀಡಿ ಮಾಹಿತಿ ಪಡೆದಿದ್ದು, ಉಪ ತಹಶೀಲ್ದಾರ್ ಗಿರೀಶ ಜಾಂಬಾವಳಿಕರ್ ಕಂದಾಯ ಇಲಾಖೆಯ ಸಿಬ್ಬಂದಿ, ಪೊಲೀಸ್ ಉಪ ನಿರೀಕ್ಷಕ ಗುರುನಾಥ ಹಾದಿಮನಿ ಸಿಬ್ಬಂದಿ ಉಪಸ್ಥಿತರಿದ್ದರು. ಲಾರಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಕ್ಕಿ ಚೀಲಗಳ ಸಾಗಾಟ ನಡೆಯುತಿತ್ತು ಎಂದು ತಿಳಿದು ಬಂದಿದ್ದು ಆರೋಪಿತರ ಕುರಿತ ಮಾಹಿತಿ, ಸಾಗಿಸುತ್ತಿದ್ದ ಅಕ್ಕಿ ಪ್ರಮಾಣ ಮತ್ತು ಮೌಲ್ಯ ಮತ್ತಿತರ ವಿವರಗಳು ಲಭ್ಯವಾಗಬೇಕಿದೆ.

ಮಳೆ: ವಾಹನ ಸವಾರರ ಪರದಾಟ

ಮುಂಡಗೋಡ: ಸೋಮವಾರ ಸಂಜೆ ಸುರಿದ ಧಾರಾಕಾರ ಮಳೆಯಿಂದ ಪಟ್ಟಣದಿಂದ ಹುಬ್ಬಳ್ಳಿಗೆ ಹೋಗುವ ಮುಖ್ಯ ರಸ್ತೆಯ ಮಗ್ಗುಲಲ್ಲಿ ಪಿಡಬ್ಲ್ಯುಡಿಯವರು ಮಾಡಿದ ತಾತ್ಕಾಲಿಕ ರಸ್ತೆ ಕೆಸರಿನಿಂದ ಕೂಡಿ ಹುಬ್ಬಳ್ಳಿ ಮತ್ತು ಶಿರಸಿಗೆ ಹೋಗುವ ವಾಹನಗಳು ಮತ್ತು ಬೈಕ್‌ಗಳು ಸಿಲುಕಿಕೊಂಡು ಹೋಗಲು ಸಾಧ್ಯವಾಗದೇ ಪರ್ಯಾಯ ರಸ್ತೆಗಳಲ್ಲಿ ಸಂಚರಿಸುವ ಸ್ಥಿತಿ ಬಂದೊದಗಿದ್ದು ಸವಾರರು ಮತ್ತು ಚಾಲಕರು ಇಲಾಖೆಯವರಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ಹುಬ್ಬಳ್ಳಿ ಮುಖ್ಯ ರಸ್ತೆಯಲ್ಲಿರುವ ಶುಂಠಿ ಫ್ಯಾಕ್ಟರಿ ಬಳಿ ಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ವಾಹನಗಳ ಓಡಾಟಕ್ಕೆ ಪಿಡಬ್ಲ್ಯುಡಿಯವರು ರಸ್ತೆಯ ಪಕ್ಕದಲ್ಲಿ ತಾತ್ಕಾಲಿಕ ಮಣ್ಣಿನ ರಸ್ತೆಯನ್ನು ಮಾಡಿದ್ದಾರೆ. ಪಿಡಬ್ಲ್ಯುಡಿಯವರ ನಿಷ್ಕಾಳಜಿಗೆ ವಾಹನಗಳ ಚಾಲಕರು ಮತ್ತು ಬೈಕ್ ಸವಾರರು ಆಕ್ರೋಶ ವ್ಯಕ್ತಪಡಿಸಿದರು.

ಹುಬ್ಬಳ್ಳಿ ಮುಖ್ಯ ರಸ್ತೆಯಲ್ಲಿ ಮಾಡಿರುವ ತಾತ್ಕಾಲಿಕ ರಸ್ತೆಯಲ್ಲಿ ಕೆಸರು ತುಂಬಿಕೊಂಡು ಬೈಕ್ ಕೂಡ ಓಡಾಡದ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಸುತ್ತು ಹಾಕಿ ನ್ಯಾಸರ್ಗಿ ಮಾರ್ಗದಲ್ಲಿ ಓಡಾಡಬೇಕಾಗಿದೆ. ಸಂಬಂಧಪಟ್ಟ ಇಲಾಖೆಯವರು ಮಣ್ಣಿನ ರಸ್ತೆ ಮೇಲೆ ಕಡಿ ಹಾಕಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಪಟ್ಟಣದ ನಿವಾಸಿ ಪರಶುರಾಮ ವಡ್ಡರ ಹೇಳಿದರು.

ಪೂರ್ವಭಾವಿ ಸಭೆ: ಅಧಿಕಾರಿಗಳು ಗೈರು

ಸಿದ್ದಾಪುರ: ಇಲ್ಲಿನ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ಅವರ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯನ್ನು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷರಾದ ತಹಶೀಲ್ದಾರ್ ಅವರ ನೇತೃತ್ವದಲ್ಲಿ ಕರೆಯಲಾಗಿತ್ತು. ಈ ಸಭೆಗೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಗೈರು ಹಾಜರಾಗಿರುವುದನ್ನು ಖಂಡಿಸಿ ದಲಿತ ಮುಖಂಡರು ಒಕ್ಕೊರಲಿನಿಂದ ಬಹಿಷ್ಕರಿಸಿ ಹೊರ ನಡೆದ ಘಟನೆ ಮಂಗಳವಾರ ನಡೆದಿದೆ.

ಬಳಿಕ ಮಾತನಾಡಿದ ಡಾ.ಅಂಬೇಡ್ಕರ್ ಶಕ್ತಿ ಸಂಘದ ಅಧ್ಯಕ್ಷ ನಂದನ್ ಬೋರ್ಕರ್, ಈ ಹಿಂದೆ ನಡೆದ ದಲಿತರ ಕುಂದುಕೊರತೆ ಸಭೆಗಳಲ್ಲೂ ಇದೇ ರೀತಿ ಅಧಿಕಾರಿಗಳು ಗೈರು ಹಾಜರಾಗಿದ್ದರು. ಕೇವಲ ಕೆಳಹಂತದ ಸಿಬ್ಬಂದಿಗಳಿಂದ ಸಭೆ ನಡೆಸುವುದು ಎಷ್ಟು ಸಮಂಜಸ ? ಅಧಿಕಾರಿಗಳಿಲ್ಲದ ಸಭೆಯಲ್ಲಿ ನಾವು ತೆಗೆದುಕೊಳ್ಳುವ ನಿರ್ಧಾರಗಳಿಗೆ ಯಾರು ಹೊಣೆ? ಎಂದು ಪ್ರಶ್ನಿಸಿದ ಅವರು ಸಭೆಗೆ ಅಧಿಕಾರಿಗಳು ಹಾಜರಾಗುವವರೆಗೆ ನಾವು ಯಾವುದೇ ಪೂರ್ವಭಾವಿ ಸಭೆಗಳಲ್ಲಿ ಭಾಗವಹಿಸುವುದಿಲ್ಲ. ಸಭೆಗೆ ಹಾಜರಾಗಬೇಕಿದ್ದ ವಿವಿಧ ಇಲಾಖೆಯ ಮುಖ್ಯಸ್ಥರು ಬರುವ ಬದಲಾಗಿ, ತಮ್ಮ ಪರವಾಗಿ ಹೊರಗುತ್ತಿಗೆ ನೌಕರರನ್ನು ಅಥವಾ ಕೆಳಹಂತದ ಸಿಬ್ಬಂದಿ ಕಳುಹಿಸಿಕೊಟ್ಟಿದ್ದಾರೆ. ಅಂಬೇಡ್ಕರ್ ಜಯಂತಿ ಆಚರಣೆಯಂತಹ ಪ್ರಮುಖ ಸಭೆಗಳಿಗೆ ಅಧಿಕಾರಿಗಳು ತೋರುತ್ತಿರುವ ಇಂತಹ ನಿರ್ಲಕ್ಷ್ಯದ ಧೋರಣೆ ಸರಿಯಲ್ಲ ಎಂದು ಕಿಡಿಕಾರಿದರು.

ಡಿಎಸ್‌ಎಸ್ ಮುಖಂಡ ಎಚ್.ಕೆ.ಶಿವಾನಂದ ಮಾತನಾಡಿ, ಪ್ರತಿ ವರ್ಷವೂ ಇಂತಹ ಘಟನೆಗಳು ಮರುಕಳಿಸುತ್ತಿದ್ದು, ರಾಷ್ಟ್ರನಾಯಕರ ಜಯಂತಿಯನ್ನು ಕೇವಲ ಹೆಸರಿಗಷ್ಟೇ ಮಾಡುವ ಸಂಪ್ರದಾಯ ನಿಲ್ಲಬೇಕು. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಎಚ್.ಎನ್.ಕಿರಣ ಕುಮಾರ ಮಾತನಾಡಿ, ದಲಿತರೆಂದರೆ ಅಧಿಕಾರಿಗಳಿಗೆ ನಿಷ್ಕಾಳಜಿ. ಅಂಬೇಡ್ಕರ್ ಅವರ ಜಯಂತಿಗೆ ಸಂಬಂಧಿಸಿದ ಎಲ್ಲಾ ಸಭೆಯಲ್ಲೂ ಅಧಿಕಾರಿಗಳು ಗೈರು ಹಾಜರಿ ಕಾಣುತ್ತಿದ್ದು, ತಹಶೀಲ್ದಾರ್ ಅವರು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ಚಂದ್ರು ಕಾನಡೆ, ಪುಟ್ಟಪ್ಪ ವಾಲ್ಮೀಕಿ, ವಿನಾಯಕ್ ಅಗ್ಗೇರಿ, ಕಮಲಾಕರ್ ಜೋಗಳೇಕರ್, ಅಣ್ಣಪ್ಪ ಶಾನಬಾಳೆಗದ್ದೆ, ಮಾರುತಿ ಬೋರ್ಕರ್, ದ್ಯಾವ ಚಲವಾದಿ, ಲಕ್ಷ್ಮಣ ಬೋರಕರ, ರಮೇಶ ಬೇಡರ್, ಇನ್ನಿತರರು ಉಪಸ್ಥಿತರಿದ್ದರು.



ಬೆಂಕಿ ಅವಘಡ: ಅಗತ್ಯ ಕ್ರಮ ಕೈಗೊಳ್ಳಿ

ದಾಂಡೇಲಿ: ಕೇರವಾಡದಲ್ಲಿರುವ ಶ್ರೇಯಸ್ ಕಾರ್ಖಾನೆಯ ಆವರಣದಲ್ಲಿ ಹಾಕಿಡಲಾಗಿದ್ದ ಪ್ಲಾಸ್ಟಿಕ್ ಹಾಗೂ ನಿರುಪಯುಕ್ತ ತ್ಯಾಜ್ಯ ವಸ್ತುಗಳ ರಾಶಿಗೆ ಬೆಂಕಿ ಬಿದ್ದ ಹಿನ್ನಲೆಯಲ್ಲಿ ಕಾರ್ಖಾನೆಯ ಆವರಣ ಸೇರಿದಂತೆ ಸ್ಥಳೀಯ ಸುತ್ತಮುತ್ತಲು ದಟ್ಟ ಹೊಗೆ ಹರಡಿಕೊಂಡು, ಸ್ಥಳೀಯ ಜನತೆಯು ಆತಂಕಕ್ಕೊಳಗಾಗಿದ್ದು, ಈ ಬಗ್ಗೆ ಕೂಡಲೇ ಅಗತ್ಯ ಕ್ರಮ ಕೈಗೊಂಡು, ಇಲ್ಲಿರುವ ತ್ಯಾಜ್ಯ ವಸ್ತುಗಳನ್ನು ಬೇರೆಡೆಗೆ ಸ್ಥಳಾಂತರಿಸಬೇಕೆಂದು ಆಗ್ರಹ ವ್ಯಕ್ತವಾಗಿದೆ.

ಕಾರ್ಖಾನೆಯ ಆವರಣದಲ್ಲಿ ರಾಶಿ ಹಾಕಲಾಗಿದ್ದ ಪ್ಲಾಸ್ಟಿಕ್ ಹಾಗೂ ನಿರುಪಯುಕ್ತ ತ್ಯಾಜ್ಯ ವಸ್ತುಗಳ ರಾಶಿಗೆ ಈ ತಿಂಗಳಲ್ಲಿ ಎರಡನೇ ಬಾರಿ ಮತ್ತೆ ಮೊನ್ನೆ ಭಾನುವಾರ ಬೆಂಕಿ ಕಾಣಿಸಿಕೊಂಡು, ಹಳಿಯಾಳ ಮತ್ತು ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯ ಅಗ್ನಿಶಾಮಕ ದಳ ಸ್ಥಳಕ್ಕೆ ಬಂದು ಬೆಂಕಿ ನಂದಿಸುವ ಕಾರ್ಯ ಮಾಡಿದೆ.

ಆಲೂರು ಗ್ರಾಪಂ ನಿಕಟ ಪೂರ್ವ ಸದಸ್ಯರು ಸುಭಾಷ ಭೂವಿವಡ್ಡರ ಮಾತನಾಡಿ, ಇದು ಸ್ಥಳೀಯ ಜನತೆಯ ಜೀವದ ಜೊತೆ ಚೆಲ್ಲಾಟವಾಡುವ ಕೃತ್ಯವಾಗಿದೆ. ಜಿಲ್ಲಾ ಮಾಲಿನ್ಯ ನಿಯಂತ್ರಣ ಅಧಿಕಾರಿಯವರ ಗಮನಕ್ಕೂ ತಂದರು ಈವರೆಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ವಿಪರ್ಯಾಸ. ದಟ್ಟವಾದ ಹೊಗೆಯಿಂದ ನಮಗೆಲ್ಲರಿಗೂ ತೊಂದರೆಯಾಗಿದ್ದು, ಸ್ಥಳೀಯ ಜನತೆಯಲ್ಲಿ ಆರೋಗ್ಯದ ಭಯ ಕಾಡುತ್ತಿದೆ. ಈ ಕೂಡಲೇ ಇಲ್ಲಿರುವ ಪ್ಲಾಸ್ಟಿಕ್ ಹಾಗೂ ನಿರುಪಯುಕ್ತ ತ್ಯಾಜ್ಯ ವಸ್ತುಗಳನ್ನು ಸ್ಥಳಾಂತರಿಸಬೇಕು ಮತ್ತು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಇಲ್ಲದಿದ್ದಲ್ಲಿ ಗ್ರಾಮಸ್ಥರ ಜೊತೆ ಸೇರಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.



> **ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಭಾನುವಾರವಾಗಿದ್ದರಿಂದ ಭದ್ರತಾ ಸಿಬ್ಬಂದಿ ಒಬ್ಬನೇ ಇದ್ದ ಹಿನ್ನಲೆಯಲ್ಲಿ ತಕ್ಷಣಕ್ಕೆ ಬೆಂಕಿ ನಂದಿಸಲು ಸಾಧ್ಯವಾಗಿರಲಿಲ್ಲ. ಅಗ್ನಿಶಾಮಕ ದಳ ದೌಡಾಯಿಸಿ ಬೆಂಕಿ ನಂದಿಸಿದೆ. ನಮ್ಮ ಸಿಬ್ಬಂದಿಗಳಿಂದ ನೀರು ಹಾಯಿಸುವ ಕೆಲಸವನ್ನು ಮಾಡಲಾಗುತ್ತಿದೆ.**
> ■ ಟಿ.ಎಸ್ ಸೊರಗಾವಿ,ಕಾರ್ಖಾನೆಯ ಪ್ರಮುಖ

ಅಧ್ಯಯನ ಸಮಿತಿ ವರದಿಗೆ ಸರ್ಕಾರ ಒಪ್ಪಿಗೆ: ನಾಯಕ

ಯಲ್ಲಾಪುರ: ಉತ್ತರ ಕನ್ನಡ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಅಧ್ಯಯನ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿಕೊಂಡಿದ್ದು, ಮುಂದಿನ ಮೂರು ವರ್ಷಗಳಲ್ಲಿ ಹಂತ ಹಂತವಾಗಿ ಸಂಪೂರ್ಣ ವರದಿ ಅನುಷ್ಠಾನಗೊಳ್ಳಲಿದೆ ಎಂದು ಸಮಿತಿ ಜಿಲ್ಲಾಧ್ಯಕ್ಷ ಅಧ್ಯಕ್ಷ ಬೀರಣ್ಣ ನಾಯಕ ಮೊಗಟಾ ತಿಳಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರವಾಸೋದ್ಯಮ ಸಚಿವರು ವರದಿ ಅನುಷ್ಠಾನದ ಕುರಿತು ಭರವಸೆ ನೀಡಿದ್ದಾರೆ. ಇದು ವೈಜ್ಞಾನಿಕವಾಗಿ ಸಿದ್ಧಪಡಿಸಿದ ವರದಿಯಾಗಿದೆ. ಅನುಷ್ಠಾನಗೊಂಡಾಗ ಜಿಲ್ಲೆಯ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಯ ದಿಕ್ಕು ಬದಲಾಗಲಿದೆ. ಕಲೆ, ಸಂಸ್ಕೃತಿ, ಸಂಪ್ರದಾಯ, ಜನಾಂಗ, ನಿಸರ್ಗ, ಮೂಲ ನಿವಾಸಿಗಳನ್ನೊಳಗೊಂಡ ಈ ವರದಿ ಪರಿಸರ ಪೂರಕ ವರದಿಯಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿ ಸರ್ಕ್ಯೂಟ್, ಚೆನ್ನಬಸವೇಶ್ವರ ಸರ್ಕ್ಯೂಟ್, ಗಿರಿಗಿರ ಪಾರ್ಥ ಸರ್ಕ್ಯೂಟ್, ಜೇನುಕಲ್ಲು ಗುಡ್ಡ ಸರ್ಕ್ಯೂಟ್, ಮೆಣಸಿನ ರಾಣಿ ಸರ್ಕ್ಯೂಟ್, ಸಾತೊಡ್ಡಿ ಸರ್ಕ್ಯೂಟ್, ಉಂಚಳ್ಳಿ ಜಲಪಾತ ಸರ್ಕ್ಯೂಟ್, ಯಾಣ ಸರ್ಕ್ಯೂಟ್, ಬುದ್ದಿಸ್ಟ್ ಸರ್ಕ್ಯೂಟ್, ಸತ್ಯಾಗ್ರಹ ಸರ್ಕ್ಯೂಟ್, ಕಾಳಿ ಕಣಿವೆ ಸರ್ಕ್ಯೂಟ್, ಕನ್ನಡಾಂಬೆ ಭುವನೇಶ್ವರಿ ಸರ್ಕ್ಯೂಟ್, ಸೂಫಿ ಹೀಗೆ ಹದಿನೈದು ಸರ್ಕ್ಯೂಟ್‌ಗಳನ್ನು ಮಾಡಲಾಗಿದ್ದು, ಜಿಲ್ಲೆಯ ಯಾವ ಪ್ರವಾಸಿ ತಾಣವೂ ತಪ್ಪದಂತೆ ನೋಡಿಕೊಳ್ಳಲಾಗಿದೆ. ಇನ್ನು ಎಲ್ಲೂ ಪ್ರಕಟವಾಗದ ಹಲವು ಪ್ರವಾಸಿತಾಣಗಳ ಫೋಟೋಗಳನ್ನು ವರದಿಯಲ್ಲಿ ಬಳಸಲಾಗಿದೆ. ವರದಿಯಲ್ಲಿ ಅನುಷ್ಠಾನದ ಸಾಧ್ಯತೆ, ಅಲ್ಪಾವಧಿ ಯೋಜನೆಗಳು, ಮಧ್ಯಮಾವಧಿ ಯೋಜನೆಗಳು ಹಾಗೂ ದೀರ್ಘಾವಧಿ ಯೋಜನೆಗಳು ಎಂದು ವಿಂಗಡಿಸಲಾಗಿದ್ದು, ಅವುಗಳನ್ನು ಜಿಲ್ಲೆಯಲ್ಲಿ ಎಲ್ಲಿ ಅನುಷ್ಠಾನಗೊಳಿಸಬಹುದು ಎಂದು ಹೇಳಲಾಗಿದೆ. 200 ಕೋಟಿ ರೂ. ವೆಚ್ಚದಲ್ಲಿ ವರದಿ ಸಂಪೂರ್ಣ ಅನುಷ್ಠಾನವಾದರೆ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಮೆರುಗು ಬರಲಿದೆ ಎಂದು ತಿಳಿಸಿದ್ದಾರೆ.

ಯುಗಾದಿ ವಿದ್ಯಾರ್ಥಿ ಕವಿಗೋಷ್ಠಿ ಉದ್ಘಾಟನೆ

ಕಾವ್ಯ ಬದುಕಿನ ಅಭಿವ್ಯಕ್ತಿ: ಜೆ.ಪ್ರೇಮಾನಂದ

ಅಂಕೋಲಾ: ಕವಿತೆಗಳು ನಮ್ಮ ಅಭಿವ್ಯಕ್ತಿಯನ್ನು ಸಾತ್ವಿಕ ರೂಪದಲ್ಲಿ ನೀಡುವ ಅಪೂರ್ವ ಅವಕಾಶವಾಗಿದ್ದು ವಿದ್ಯಾರ್ಥಿಗಳು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಾಹಿತಿ, ಕವಿ ಜೆ. ಪ್ರೇಮಾನಂದ ಹೇಳಿದರು.

ಅವರು ಮಂಗಳವಾರ ಜಿ.ಸಿ. ಕಾಲೇಜು ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಅಂಕೋಲಾ ಘಟಕ , ಅಂಕೋಲಾ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಜಿ.ಸಿ. ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಯುಗಾದಿ ವಿದ್ಯಾರ್ಥಿ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ನಾವು ಒಂದಲ್ಲ ಒಂದು ರೀತಿಯಲ್ಲಿ ನಿಸರ್ಗಕ್ಕೆ ಆಪ್ತರಾದವರು. ನಿಸರ್ಗ ನಮಗೆ ಕಹಿ ಮತ್ತು ಸಿಹಿಯನ್ನು ಸಮನಾಗಿ ಸ್ವೀಕರಿಸುವ ಸಂದೇಶ ನೀಡಿದೆ. ನಮ್ಮಲ್ಲಿರುವ ಕಹಿ, ಸಿಹಿಯ ಭಾವನೆಯನ್ನು ಸಾತ್ವಿಕ ರೂಪದಲ್ಲಿ ಹಿಡಿದಿಡುವ ಕಾರ್ಯ ಕವಿತೆಗಳಿಂದ ಮಾತ್ರ ಸಾಧ್ಯ.ಕವಿತೆಗಳಲ್ಲಿ ಹೆಚ್ಚಿನವು ನೋವಿನ ಅಭಿವ್ಯಕ್ತಿಯಾಗಿವೆ. ವಿದ್ಯಾರ್ಥಿ ಜೀವನದಲ್ಲಿ ಕವಿತೆಗಳು ಬದುಕು ರೂಪಿಸಿಕೊಳ್ಳಲು ಹೆಚ್ಚು ಸ್ಫೂರ್ತಿ ನೀಡುವಂತವು. ಹೀಗಾಗಿ ಕವಿತೆಗಳ ರಚನೆ ಮತ್ತು ಓದಿನಲ್ಲಿ ತೊಡಗಿಕೊಳ್ಳಿ ಎಂದು ಅವರು ಕಿವಿಮಾತು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಕಸಾಪ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ, ನೆಲಮೂಲದ ಸಾಹಿತ್ಯಕ್ಕೆ ಹೆಚ್ಚಿನ ಆಯಸ್ಸು. ಅದು ನಮ್ಮ ಅನುಭವದಿಂದ ಬರುವಂತದ್ದು. ಹೀಗಾಗಿ ವಿದ್ಯಾರ್ಥಿದೆಸೆಯಲ್ಲಿಯೇ ಮಕ್ಕಳು ಕವಿ, ಸಾಹಿತಿಗಳ ರಚನೆಯನ್ನು ಓದುವ ಆಸಕ್ತಿ ಬೆಳೆಸಿಕೊಳ್ಳಬೇಕು. ಈ ಮೂಲಕ ಸ್ವಂತ ರಚನೆಗೆ ತೊಡಗಿಕೊಳ್ಳಬೇಕು. ಕಸಾಪ ಇಂತಹ ಅವಕಾಶವನ್ನು ಒದಗಿಸುತ್ತಲೇ ಬರುತ್ತಿದೆ ಎಂದರು.

ಮುಖ್ಯ ಅತಿಥಿಯಾಗಿದ್ದ ಅಂಕೋಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಇರುವ ಸಾಹಿತ್ಯಾಸಕ್ತಿ ಮತ್ತು ಸಾಹಿತ್ಯ ರಚನೆಯ ಸಾಮರ್ಥ್ಯಕ್ಕೆ ವೇದಿಕೆ ಒದಗಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.ಮುಖ್ಯ ಅತಿಥಿಯಾಗಿದ್ದ ವಿಶ್ರಾಂತ ಪ್ರಾಧ್ಯಾಪಕ ಜಿ.ಬಿ.ನಾಯಕ, ಬಹುಮಾನ ವಿತರಕರಾಗಿದ್ದ ಪ್ರಾಚಾರ್ಯ ಡಾ. ಎಸ್.ವಿ. ವಸ್ತ್ರದ್ ಮಾತನಾಡಿದರು. ಕೀರ್ತಿ -ಸ್ನೇಹಾ ಸ್ವಾಗತ ಗೀತೆ ಹಾಡಿದರು. ಕಸಾಪ ಕಾರ್ಯದರ್ಶಿ ಜಿ.ಆರ್.ತಾಂಡೇಲ್ ಸ್ವಾಗತಿಸಿದರು. ಪರ್ತಕರ್ತ ವಿಠ್ಠಲದಾಸ ಕಾಮತ್ ಪ್ರಾಸ್ತಾವಿಕ ಮಾತನಾಡಿದರು. ಸಾಹಿತಿ ಮಹಾಂತೇಶ ರೇವಡಿ ಕವಿಗೋಷ್ಠಿ ನಡೆಸಿಕೊಟ್ಟರು. ಪತ್ರಕರ್ತರ ಸಂಘದ ಕಾರ್ಯದರ್ಶಿ ಸುಭಾಸ ಕಾರೇಬೈಲ್ ನಿರ್ವಹಿಸಿದರು. ಉಪನ್ಯಾಸಕಿ ಸುಲಕ್ಷಾ ನಾಯ್ಕ ವಂದಿಸಿದರು. ಪತ್ರಕರ್ತರಾದ ಕೆ.ರಮೇಶ, ನಾಗರಾಜ ಮಂಜುಗುಣಿ,ಅರುಣ ಶೆಟ್ಟಿ, ಮೋಹನ ದುರ್ಗೇಕರ್, ದಿನಕರ ನಾಯ್ಕ, ನಿತೇಶ ಕೇಣಿ, ಪ್ರಾಚಾರ್ಯ ಫಾಲ್ಗುಣ ಗೌಡ, ಉಪನ್ಯಾಸಕರಾದ ಡಾ. ಪುಷ್ಪಾ ನಾಯ್ಕ, ಆರ್.ಪಿ ಭಟ್, ಡಾ. ಆರ್. ಅಶ್ವಿನ್ , ಕಸಾಪದ ಗಣಪತಿ ಗಾಂವಕರ್ ಮಹಾದೇವ ಆಗೇರ್ ನೆನಪಿನ ಕಾಣಿಕೆ ನೀಡಿದರು.

ಕವಿಗೋಷ್ಠಿಯಲ್ಲಿ 11 ಯುವ ಕವಿಗಳು ಪಾಲ್ಗೊಂಡಿದ್ದರು.

ಬಾಂಧವ್ಯ ಬೆಸೆಯಲು ಭಜನಾ ಸಪ್ತಾಹ ಸಹಕಾರಿ: ಹನುಮಂತ ಗೌಡ

ಅಂಕೋಲಾ: ತಾಲೂಕಿನ ಬೆಳಂಬಾರ ಮತ್ತು ಹೊನ್ನೆಬೈಲ್ ವ್ಯಾಪ್ತಿಯ ಹಂದಗೋಡದಲ್ಲಿ ಯುವಕ ಮಂಡಲದ ಆಶ್ರಯದಲ್ಲಿ 68 ನೇ ವರ್ಷದ ಭಜನಾ ಸಪ್ತಾಹ ಧಾರ್ಮಿಕ, ಕ್ರೀಡಾ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ನಡೆಯಿತು.

ಬಹುಮಾನ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಜಿಲ್ಲಾ ಹಾಲಕ್ಕಿ ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತ ಗೌಡ ಮಾತನಾಡಿ, ಹಳ್ಳಿ ಹಳ್ಳಿಗಳಲ್ಲಿ ನಡೆಯುವ ಭಜನಾ ಸಪ್ತಾಹ, ದೇವರ ಜಾತ್ರಾ ಕಾರ್ಯಕ್ರಮಗಳು ಜನರ ನಡುವೆ ಬಾಂಧವ್ಯ ಬೆಸೆಯಲು ಸಹಕಾರಿಯಾಗುತ್ತವೆ ಎಂದರು.

ಹಂದಗೋಡದಲ್ಲಿ 68 ವರ್ಷಗಳಿಂದ ನಿರಂತರವಾಗಿ ಭಜನಾ ಸಪ್ತಾಹ ಮುಂದುವರಿದು ಬಂದಿರುವುದು ಇಲ್ಲಿನ ಜನರ ಒಗ್ಗಟ್ಟು, ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಗ್ರಾಮೀಣ ಕ್ರೀಡೆಗಳ ಸ್ಪರ್ಧೆ ಆಯೋಜಿಸಿರುವುದು ಸಂತೋಷದ ಸಂಗತಿ ಎಂದ ಅವರು ಹಾಲಕ್ಕಿ ಒಕ್ಕಲಿಗರ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸ್ಪಂದಿಸಿರುವ ಶಾಸಕ ಸತೀಶ ಸೈಲ್ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.ಬಾಹ್ಯಾಕಾಶ ಸಂಸ್ಥೆ ಇಸ್ರೋದಲ್ಲಿ ಸಹಾಯಕಿಯಾಗಿ ಸೇವೆ ಸಲ್ಲಿಸುತ್ತಿರುವ ಸ್ಥಳೀಯ ಪ್ರತಿಭೆ ಕೋಕಿಲಾ ಗೌಡ ಮಾತನಾಡಿ, ಹಾಲಕ್ಕಿ ಸಮಾಜದಲ್ಲಿ ಬಹುತೇಕ ಜನರು ತೀರ ಬಡವರಿದ್ದು, ತಂದೆ ತಾಯಿ ಕೂಲಿ ಮಾಡಿಯಾದರೂ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ ಮಕ್ಕಳು ಸಹ ಶಿಕ್ಷಣವನ್ನು ಸವಾಲಾಗಿ ಸ್ವೀಕರಿಸಿ ಸಾಧನೆ ಮಾಡುವ ಮೂಲಕ ತಂದೆ ತಾಯಿಯ ಋಣ ತೀರಿಸಬೇಕಿದೆ ಎಂದರು.



ಹೊನ್ನೆಬೈಲ್ ಗ್ರಾಪಂಯ ಮಾಜಿ ಅಧ್ಯಕ್ಷ ಮಾದೇವ ಗೌಡ ಮಾತನಾಡಿ, ಹನುಮಂತ ಗೌಡ ಅವರ ಮನೆತನದವರು ಹಲವಾರು ವರ್ಷಗಳಿಂದ ಭಜನಾ ಸಪ್ತಾಹ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದು, ಬೇರೆ ಊರುಗಳಲ್ಲಿ ಉದ್ಯೋಗ ನಿಮಿತ್ತ ನೆಲೆಸಿರುವ ಸ್ಥಳೀಯರು ಊರಿಗೆ ಬಂದು ಕುಟುಂಬದವರ ಜೊತೆ ಬೆರೆಯಲು ಭಜನಾ ಸಪ್ತಾಹ ಕಾರ್ಯಕ್ರಮ ದಾರಿ ಮಾಡಿಕೊಟ್ಟಿದೆ ಎಂದರು.ಕಾರ್ಯಕ್ರಮದಲ್ಲಿ ಇಸ್ರೋ ಸಹಾಯಕಿ ಕೋಕಿಲಾ ಗೌಡ ಮತ್ತು ನಾಟಕ ಕೃತಿಕಾರ ಶ್ರೀಧರ ಗೌಡ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು ಹಾಗೂ ಭಜನಾ ಸಪ್ತಾಹದ ಪ್ರಯುಕ್ತ ಆಯೋಜಿಸಿದ್ದ ಗ್ರಾಮೀಣ ಆಟೋಟ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಯುವಕ ಮಂಡಲದ ಅಧ್ಯಕ್ಷ ವಿಶ್ವನಾಥ ಗಣಪತಿ ಗೌಡ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಮಾದೇವ ಬಿ ಗೌಡ ಕಾರ್ಯಕ್ರಮ ನಿರ್ವಹಿಸಿದರು, ನಾಗೇಂದ್ರ ಗೌಡ ಸಹಕರಿಸಿದರು.ಸ್ಥಳೀಯ ಹವ್ಯಾಸಿ ಕಲಾವಿದರ ಕೂಡುವಿಕೆಯಲ್ಲಿ ಶ್ರೀಧರ ಗೌಡ ವಿರಚಿತ ದಿಕ್ಕು ತಪ್ಪಿದ ತಮ್ಮನಿಗೆ ಪುನರ್ಜನ್ಮ ಕೊಟ್ಟ ಅಕ್ಕ ಎಂಬ ಸಾಮಾಜಿಕ ನಾಟಕ ಪ್ರದರ್ಶನ ನಡೆಯಿತು.

ಕಿರುಸುದ್ದಿ

ಭಕ್ತರ ಭಕ್ತಿಯೇ ಶ್ರೀ ಮಠದ ಶಕ್ತಿ: ಶ್ರೀಗಳು



ಗುತ್ತಲ: ಸಮೀಪದ ನೆಗಳೂರ ಗ್ರಾಮದ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಜಾತ್ರಾಮಹೋತ್ಸಕ್ಕೆ ಸಂಭ್ರಮದ ತೆರೆ ಕಂಡಿತು. ಗ್ರಾಮದ ಗ್ರಾಮದೇವತಾ ದೇವಸ್ಥಾನ ದಿಂದ ಬೀರಲಿಂಗೇಶ್ವರ ದೇವಸ್ಥಾನದವರಗೆ ಕಡುಬಿನ ಕಾಳಗ ನೆರವೇರಿಸಿದರು. ನಂತರ ಸಮಾರೋಪ ಸಮಾರಂಭ ಜರುಗಿಸಲಾಯಿತು. ಸಮಾರಂಭದಲ್ಲಿ ಶ್ರೀ ಮಠದ ಪೂಜ್ಯ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಭಕ್ತರ ಭಕ್ತಿಯೇ ಶ್ರೀ ಮಠದ ಶಕ್ತಿಯಾಗಿ ನೆಗಳೂರಿನಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ಕಾರ್ಯಕ್ರಮ ವಾಗಿದ್ದು ಇದಕೆಲ್ಲ ಗುರುಶಾಂತ ಶಿವಯೋಗಿಳ ಕೃಪಾಶೀರ್ವಾದ ಮತ್ತು ಭಕ್ತರ ಸಹಕಾರವೇ ಕಾರಣವಾಗಿದೆ, ಈ ಸಮಾರಂಭದ ಯಶಸ್ಸಿಗೆ ಕಾರಣರಾಗಿರುವ ಸರ್ವರಿಗೂ ಒಳಿತಾಗಿ ಇಷ್ಟಾರ್ಥಗಳು ಸಿದ್ದಿಸಲಿ ಎಂದು ಹರಸಿದರು.


ಕಾರ್ಯಕ್ರಮದಲ್ಲಿ ಕಪೀಲಾಧಾರದ ವೀರುಪಾಕ್ಷಲಿಂಗ ಶಿವಾಚಾರ್ಯ ಸ್ವಾಮೀಜಿ, ಕುಂದರಗಿ ಹಿರೇಮಠದ ವೀರ ಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು, ಕಾರ್ಯಕ್ರಮದಲ್ಲಿ ಹುಡುಗಿಯ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ಶಹಾಪುರ ನಿಜಗುಣದೇವರು, ಶ್ರೀಮಠದ ಜಾತ್ರಾಮಹೋತ್ಸವ ಸೇವಾ ಸಮಿತಿ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ನೆಗಳೂರ, ಗುತ್ತಲ, ಹೊಸರಿತ್ತಿ, ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಸದ್ಭಕ್ತರು ಭಾಗವಹಿಸಿದ್ದರು. ಗುರುಶಾಂತ ಹಿರೇಮಠ ಕಾರ್ಯಕ್ರಮ ನಿರ್ವಹಿಸಿದರು.

ಪದಾಧಿಕಾರಿಗಳ ಆಯ್ಕೆ

ರಾಣೇಬೆನ್ನೂರ: ನಗರದ ಹಳೇ ಪಿ.ಬಿ.ರಸ್ತೆಯ ಟ್ಯಾಗೋರ್ ಶಿಕ್ಷಣ ಸಂಸ್ಥೆಯ ನೂತನ ಪದಾಧಿಕಾರಿಗಳ ಆಯ್ಕೆ ಜರುಗಿತು. ಡಾ.ಬಸವರಾಜ ಕೇಲಗಾರ (ಅಧ್ಯಕ್ಷ), ವೀರೇಶ ಮೋಟಗಿ (ಕಾರ್ಯದರ್ಶಿ), ಕಾರ್ಯಕಾರಿ ಸದಸ್ಯರಾಗಿ ಡಾ.ಬಿ.ಎಸ್.ಕರ್ಜಗಿ, ವಿ.ಪಿ.ಲಿಂಗನಗೌಡರ, ಡಾ. ಅನಂತರಡ್ಡಿ, ಪೂರ್ಣಚಂದ್ರ ಗುಪ್ತಾ, ಈರಣ್ಣ ಶೆಟ್ಟರ ಹಾಗೂ ಸದಸ್ಯರಾಗಿ ಸುಧೀರ ಕುರವತ್ತಿ, ವಿ.ಪಿ. ಪೋಲಿಸಗೌಡರ, ಉಮೇಶ ಹೊನ್ನಾಳಿ, ಡಾ. ಲಕ್ಷ್ಮಣ ಚಳಗೇರಿ, ಸುರೇಂದ್ರ ಗುಪ್ತಾ, ಎನ್.ಬಿ. ಚನ್ನಗೌಡ್ರ, ಜಗದೀಶ ಕಲ್ಯಾಣಿ, ಸಿ.ಆರ್. ಅಸುಂಡಿ, ಜಿ.ಎಸ್. ರಾಮಚಂದ್ರ ಮತ್ತು ಸಮಿತಿ ಸದಸ್ಯರುಗಳನ್ನಾಗಿ ಕ್ಯಾಪ್ಟನ್. ಬಿ.ಜಿ. ಹಿರೇಮಠ, ಎಮ್.ಆರ್.ಪಾಟೀಲ್, ಎಫ್.ಬಿ. ಹೊನ್ನಾಳಿ ಇವರುಗಳನ್ನು ಆಯ್ಕೆ ಮಾಡಲಾಯಿತು.





ಉಪಾಧ್ಯಕ್ಷರಾಗಿ ಕುಬೇರಪ್ಪ ಆಯ್ಕೆ

ರಾಣೇಬೆನ್ನೂರ: ನವದೆಹಲಿಯಲ್ಲಿ ನಡೆದ 78ನೇ ವರ್ಷದ ಭಾರತೀಯ ಆದಿಮ ಜಾತಿ ಸೇವಕ ಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಮತ್ತು ಪರಿಷತ್ ಸಭೆಯಲ್ಲಿ ನಡೆದ ರಾಷ್ಟ್ರೀಯ ಪದಾಧಿಕಾರಿಗಳ ಚುನಾವಣೆಯಲ್ಲಿ ಡಾ.ಆರ್. ಎಂ. ಕುಬೇರಪ್ಪನವರು ರಾಷ್ಟ್ರೀಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.ಬಿಎಜೆಎಸ್ ಎಸ್ ಸಂಸ್ಥೆಯು ರಾಷ್ಟ್ರಮಟ್ಟದ ಸಂಸ್ಥೆಯಾಗಿದ್ದು, ದೇಶದ 28 ರಾಜ್ಯಗಳಲ್ಲಿ ಸಂಘ ಸಂಸ್ಥೆಗಳನ್ನು ನಡೆಸುತ್ತಿದ್ದು, ದೇಶದ ಅತೀ ದೊಡ್ಡ ಸರ್ಕಾರೇತರ ಸೇವಾ ಸಂಸ್ಥೆಯೆಂದು ಪರಿಗಣಿಸಲಾಗಿದೆ. ಮಧ್ಯ ಪ್ರದೇಶದ ನಿವೃತ್ತ ನ್ಯಾಯಾಧೀಶರನ್ನು ರಾಷ್ಟ್ರೀಯ ಅಧ್ಯಕ್ಷರಾಗಿ ಹಾಗೂ ಕರ್ನಾಟಕದ ಡಾ.ಆರ್.ಎಂ. ಕುಬೇರಪ್ಪನವರನ್ನು ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.ರಾಷ್ಟ್ರೀಯ ಉಪಾಧ್ಯಕ್ಷರಾಗಿ ಆಯ್ಕೆಯಾದ ಡಾ ಆರ್.ಎಂ. ಕುಬೇರಪ್ಪನವರನ್ನು ಕರ್ನಾಟಕ ವಿಧಾನ ಸಭೆಯ ಉಪಸಭಾಪತಿ. ರುದ್ರಪ್ಪ ಲಮಾಣಿ, ಆಡಳಿತ ಮಂಡಳಿಯ ಸದಸ್ಯರು ಹಾಗೂ ಬಿಎಜೆಎಸ್ ಎಸ್ ಸಂಸ್ಥೆಯ ಶಾಲಾ-ಕಾಲೇಜುಗಳ ಮುಖ್ಯಸ್ಥರುಗಳು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.



ರಾಣೆಬೆನ್ನೂರ: ನವದೆಹಲಿಯಲ್ಲಿ ನಡೆದ 78ನೇ ವರ್ಷದ ಭಾರತೀಯ ಆದಿಮ ಜಾತಿ ಸೇವಕ ಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಮತ್ತು ಪರಿಷತ್ ಸಭೆಯಲ್ಲಿ ನಡೆದ, ರಾಷ್ಟ್ರೀಯ ಪದಾಧಿಕಾರಿಗಳ ಚುನಾವಣೆಯಲ್ಲಿ ಡಾ.ಆರ್.ಎಂ. ಕುಬೇರಪ್ಪ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಅಗತ್ಯ

ಹಾನಗಲ್ಲ: ವಿದ್ಯಾರ್ಥಿಗಳು ತದೇಕ ಚಿತ್ತದೊಂದಿಗೆ ತಮ್ಮ ಇಷ್ಟದ ಗುರಿ ತಲುಪಲು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಕಾಣುವುದು ತೀರ ಅಗತ್ಯವಾಗಿದ್ದು, ದೂರದ ಊರುಗಳಿಗೆ ತೆರಳಿ ಹಣ ವ್ಯಯಿಸಿ ಸಿಇಟಿ, ನೀಟ್ ಬರೆಯಬೇಕಾದ ವಿದ್ಯಾರ್ಥಿಗಳಿಗೆ ಹಾನಗಲ್ಲಿನಲ್ಲಿಯೇ ಸುವ್ಯವಸ್ಥೆ ಮಾಡಿರುವುದು ಅತ್ಯಂತ ಶ್ಲಾಘನೀಯವಾದುದು ಎಂದು ಬೆಂಗಳೂರಿನ ಆರ್ .ವಿ.ವಿಶ್ವವಿದ್ಯಾಲಯದ ಪದವಿ ಪೂರ್ವ ಶಿಕ್ಷಣ ವಿಭಾಗದ ಪ್ರಾಧ್ಯಾಪಕ ಪ್ರೊ.ವೈ.ದರ್ಶನ್ ಹೇಳಿದರು.ಇಲ್ಲಿನ ಗುರುಭವನದಲ್ಲಿರುವ ಪರಿವರ್ತನ ಕಲಿಕಾ ಕೇಂದ್ರದಲ್ಲಿ ಹ್ಯುಮ್ಯಾನಿಟಿ ಫೌಂಡೇಶನ್ ಆಯೋಜಿಸಿದ್ದ ಉಚಿತ ಒಂದು ತಿಂಗಳ ಸಿಇಟಿ ಹಾಗೂ ನೀಟ್ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಶಿಸ್ತು, ಇಚ್ಛಾಶಕ್ತಿ, ಸಮಯದ ಸದುಪಯೋಗ, ವಿಳಂಬವಿಲ್ಲದ ಪರಿಶ್ರಮ ಅತ್ಯಂತ ಮುಖ್ಯವಾದವುಗಳು. ಅಧ್ಯಯನ ಒಂದು ಆಸಕ್ತಿಯ ವಿಷಯವಾಗಬೇಕು. ಅದು ನಮ್ಮ ಬದುಕಿಗೆ ಬೇಕಾಗುವ ಸಿದ್ಧತೆ ಎಂಬ ಅರಿವು ಕೂಡ ಬೇಕು. ಹೋದ ಕಾಲ ಮತ್ತೆ ಸಿಗದು. ಇರುವ ಕಾಲವನ್ನು ಸರಿಯಾಗಿ ದುಡಿಸಿಕೊಳ್ಳುವ ಸಂಕಲ್ಪ ನಿಮ್ಮದಾಗಿರಲಿ ಎಂದು ಸಲಹೆ ಮಾಡಿದರು. ಪರಿವರ್ತನ ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಪ್ರೊ.ಮಾರುತಿ ಶಿಡ್ಲಾಪೂರ ಮಾತನಾಡಿ, ಹಾನಗಲ್ಲಿನಲ್ಲಿಯೇ ಕಳೆದ 3 ವರ್ಷಗಳಿಂದ ತರಬೇತಿಗೆ ವ್ಯವಸ್ಥೆ ಕಲ್ಪಿಸಿದ್ದಾರೆ. ಇದರ ಪ್ರಯೋಜನ ಪಡೆಯುವುದು ವಿದ್ಯಾರ್ಥಿಗಳ ಕರ್ತವ್ಯ. ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷ 200 ಕ್ಕೂ ಅಧಿಕ ವಿದ್ಯಾರ್ಥಿಗಳು ತರಬೇತಿಯಲ್ಲಿ ಪಾಲ್ಗೊಂಡಿದ್ದಾರೆ ಎಂದರು. ಬೆಂಗಳೂರಿನ ಆರ್.ವಿ.ವಿಶ್ವವಿದ್ಯಾಲಯದ ಪದವಿ ಪೂರ್ವ ಶಿಕ್ಷಣ ವಿಭಾಗದ ಪ್ರಾಧ್ಯಾಪಕ ಪ್ರೊ.ಎ.ಸಂಗಮೇಶ, ಗಿರೀಶ ಅಂಬಿಗೇರ ಇದ್ದರು.



ಹಾನಗಲ್ಲ: ಇಲ್ಲಿನ ಗುರುಭವನದಲ್ಲಿರುವ ಪರಿವರ್ತನ ಕಲಿಕಾ ಕೇಂದ್ರದಲ್ಲಿ ಹ್ಯುಮ್ಯಾನಿಟಿ ಫೌಂಡೇಶನ್ ಆಯೋಜಿಸಿದ್ದ ಉಚಿತ ಒಂದು ತಿಂಗಳ ಸಿಇಟಿ ಹಾಗೂ ನೀಟ್ ತರಬೇತಿ ಶಿಬಿರವನ್ನು ಉದ್ಘಾಟಿಸಿ ಬೆಂಗಳೂರಿನ ಆರ್.ವಿ.ವಿಶ್ವವಿದ್ಯಾಲಯದ ಪದವಿ ಪೂರ್ವ ಶಿಕ್ಷಣ ವಿಭಾಗದ ಪ್ರಾಧ್ಯಾಪಕ ಪ್ರೊ.ವೈ.ದರ್ಶನ್ ಉದ್ಘಾಟಿಸಿದರು.

ಮಾದರಿಯಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಹಾವೇರಿ: ರಾಜ್ಯದ 413 ಕಾಲೇಜುಗಳ ಪೈಕಿ ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾದರಿ ಕಾಲೇಜ್ ಎಂದು ಆಯ್ಕೆಯಾಗಿದ್ದು, ಈ ಹಿನ್ನೆಲೆಯಲ್ಲಿ ಧಾರವಾಡದಿಂದ ಮಾ.25ರಂದು ಕಾಲೇಜು ವೀಕ್ಷಕರ ವಿಶೇಷತಂಡ ಆಗಮಿಸಲಿದೆ. ಇದು ಮಾದರಿ ಕಾಲೇಜು ಎಂದು ಅನುಮೋದನೆಗೊಂಡಲ್ಲಿ ಕಾಲೇಜಿಗೆ ಹೆಚ್ಚಿನ ಅನುದಾನ ಲಭ್ಯವಾಗಲಿದೆ ಎಂದು ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಫರ್ಜಾನ್ ಪಠಾಣ ತಿಳಿಸಿದರು.

ತಾಲೂಕಿನ ಗಾಂಧಿಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರವು 2017ರಲ್ಲಿ ನ್ಯಾಕ್ ಬಿ ಗ್ರೇಡ್ ಪಡೆದು, 2018-23ರ ಐದು ವರ್ಷದ ನ್ಯಾಕ್‌ನ ಎರಡನೇ ಅವಧಿಯಲ್ಲಿ ಬಿಪ್ಲಸ್ ಗ್ರೇಡ್ ಪಡೆದು ನೋಡಲ್ ಕಾಲೇಜಾಗಿದೆ. ನಗರ ಸೇರಿ ತಾಲೂಕಿನ ವಿವಿಧ ಗ್ರಾಮೀಣ ಭಾಗದಿಂದ 3ಸಾವಿರಕ್ಕೂ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿತ್ತು. ಇದೀಗ ಮಾದರಿ ಕಾಲೇಜೆಂಬ ಖ್ಯಾತಿಗೆ ಮುಂದಾಗಿದ್ದು, ಕಾಲೇಜಿನ ಮೂಲ ಸೌಕರ್ಯಗಳ ವೀಕ್ಷಣೆ ನಂತರ ಒಂದು ವೇಳೆ ಮಾದರಿ ಕಾಲೇಜು ಘೋಷಣೆಯಾದಲ್ಲಿ ಸರ್ಕಾರದಿಂದ ಹೆಚ್ಚಿನ ಅನುದಾನ ಸಿಗಲಿದೆ ಎಂದರು. ಹಲವು ವಿಭಾಗ : ಕಾಲೇಜಿನಲ್ಲಿ ಬಿ.ಎ., ಬಿಕಾಂ, ಬಿಎಸ್ಸಿ, ಎಂ.ಎ. ಅರ್ಥಶಾಸ್ತ್ರ ವಿಭಾಗಗಳಿದ್ದು, ಸಾವಿರಾರು ಮಕ್ಕಳು ಅಧ್ಯಯನಮಾಡುತ್ತಿದ್ದಾರೆ.6.11 ಎಕರೆವಿಶಾಲವಾದ ಭೂಮಿಯಲ್ಲಿ ತರಗತಿ ಕೊಠಡಿಗಳು, ಸಭಾಂಗಣ, ಕಂಪ್ಯೂಟರ್ ಲ್ಯಾಬ್, ಗ್ರಂಥಾಲಯ, ಶೌಚಾಲಯ ಹೀಗೆ ಅನೇಕ ಸೌಲಭ್ಯಗಳಿವೆ. 2023-24ನೇ ಸಾಲಿನಿಂದ ಹಾವೇರಿ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾಲೇಜು ಸಂಯೋಜನೆಗೊಂಡಿದೆ ಎಂದರು.



ಸಿಬ್ಬಂದಿ ಕೊರತೆ

ಸದ್ಯ 17 ಖಾಯಂ ಸಿಬ್ಬಂದಿ, 3 ಖಾಯಂ ಬೋಧಕೇತರ ಸಿಬ್ಬಂದಿ, 53 ಅತಿಥಿ ಉಪನ್ಯಾಸಕರು, 4 ಹೊರ ಗುತ್ತಿಗೆ, 4ಸಿಡಿಸಿ ಸಿಬ್ಬಂದಿ ವರ್ಗವಿದ್ದು, ಆದಾಗ್ಯೂ ಸಿಬ್ಬಂದಿ ಕೊರತೆ ಇದೆ. ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಕುಸಿಯುತ್ತಿದೆ, ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಅಗತ್ಯವಿದೆ. ಕಾಲೇಜಿಗೆ ಕಾಂಪೌಂಡ್ ಗೋಡೆ ಮತ್ತು ಗೇಟ್ ಅಗತ್ಯವಿದೆ. ಜಿಮ್‌ಗೆ ಅಗತ್ಯ ಸಲಕರಣೆಗಳಿದ್ದು, ಕೊಠಡಿಯೇ ಇಲ್ಲವಾಗಿದೆ. ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಬೇಕೆಂದು ಪ್ರಾಚಾರ್ಯೆ ಫರ್ಜಾನಾ ಪಠಾಣ ಹೇಳಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಮಾಲತೇಶ ನಾಗಲಾಪುರ ಮಾತನಾಡಿ, ಬಿ.ಎ., ಬಿಕಾಂ, ಬಿಎಸ್ಸಿಯಿಂದ ವಿದ್ಯಾರ್ಥಿಗಳಲ್ಲಿ ಉದ್ಯೋಗಾಧಾರಿತ ಕೌಶಲ್ಯಗಳು ಬೆಳೆಯುತ್ತಿಲ್ಲ. ಹಾಗಾಗಿ ಕೈಗಾರಿಕೆ ವಲಯದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಲು ಉತ್ತೇಜನ ನೀಡುವ ನಿಟ್ಟಿನಲ್ಲಿ ಬಿಕಾಂನಲ್ಲಿ ಬಿಕಾಂ ರಿಟೇಲ್ ಆಪರೇಷನ್ ಕೋರ್ಸ್‌ನ್ನು ಹೊಸದಾಗಿ ಪರಿಚಯಿಸಲಾಗುತ್ತಿದೆ. ಎರಡು ವರ್ಷ ಕಲಿಸಿ, ಒಂದು ವರ್ಷ ಪ್ರತಿಷ್ಠಿತ ಕಂಪೆನಿಗಳಲ್ಲಿ ಅಪ್ರೆಂಟಿಸ್ ಆಗಿ ಕೆಲಸದಲ್ಲಿ ತೊಡಗಿಸಿ ಪ್ರೋತ್ಸಾಹಧನ ನೀಡಲಾಗುತ್ತಿದೆ. ಬಡ ವಿದ್ಯಾರ್ಥಿಗಳು ಉದ್ಯೋಗ ಪಡೆಯಲು ಸಹಕಾರಿಯಾಗಲಿದೆ ಎಂದರು.

ಐಕ್ಯುಎಸಿ ಸಂಯೋಜಕ ಡಾ.ಜೆ.ಸಿ. ಇಂಡಿಮಠ, ಡಾ.ಚಂದ್ರಪ್ರಭಾ ಪಟಗಾರ, ಕೃಷ್ಣಾ ಚವರೆಡ್ಡಿ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಉಪನ್ಯಾಸಕ ರವಿ ಸಿ.ಎಚ್. ಸೇರಿದಂತೆ ಹಲವರು ಇದ್ದರು.

ವಿವಿಧ ಕಾಮಗಾರಿಗಳಿಗೆ ಶಾಸಕ ಮಾನೆ ಭೂಮಿಪೂಜೆ

ಹಾನಗಲ್ಲ: ನಾಡಿನ ಏಳು ಕೋಟಿ ಕನ್ನಡಿಗರ ನಿರೀಕ್ಷೆಗಳನ್ನು ರಾಜ್ಯ ಸರ್ಕಾರ ಅರಿತಿದ್ದು, ಅವರ ಕನಸು ನನಸು ಮಾಡುವ ನಿಟ್ಟಿನಲ್ಲಿ ಬದ್ಧತೆಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು.

ತಾಲೂಕಿನ ಚನ್ನಾಪುರ ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ಸಿಸಿರಸ್ತೆ, ಚರಂಡಿ, ಸಿಡಿ ನಿರ್ಮಾಣ, ರಸ್ತೆ ಅಭಿವೃದ್ಧಿ, ದೇವಸ್ಥಾನಗಳ ಜೀರ್ಣೋದ್ಧಾರ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿಮಾತನಾಡಿ,ಸಾರ್ವತ್ರಿಕಮೂಲ ಆದಾಯ ಪರಿಕಲ್ಪನೆಗಳಾದ ಗ್ಯಾರಂಟಿ ಯೋಜನೆಗಳ ಮೂಲಕ ಜನರಿಗೆ ಆರ್ಥಿಕ ಸುಭದ್ರತೆ ಮತ್ತು ಸಾಮಾಜಿಕ ಸುಸ್ಥಿರತೆ ಒದಗಿಸುವುದಕ್ಕೆ ಆದ್ಯತೆ ನೀಡಲಾಗಿದೆ. ಹಾನಗಲ್ಲ ತಾಲೂಕುವೊಂದರಲ್ಲಿಯೇ 65 ಸಾವಿರಕ್ಕೂ ಹೆಚ್ಚು ಕುಟುಂಬಗಳು ಗ್ಯಾರಂಟಿ ಯೋಜನೆಗಳಿಂದ ವಾರ್ಷಿಕ 250 ಕೋಟಿ ರೂ.ಗಿಂತ ಹೆಚ್ಚು ಆರ್ಥಿಕ ಅನುಕೂಲತೆ ಪಡೆದಿವೆ ಎಂದು ವಿವರಿಸಿದ ಅವರು ಕಲ್ಯಾಣ ಯೋಜನೆಗಳ ಜೊತೆಗೆ ಮೂಲಸೌಕರ್ಯಗಳ ಅಭಿವೃದ್ಧಿಗೂ ಒತ್ತು ನೀಡಲಾಗಿದ್ದು 50 ಕೋಟಿ ರೂ. ವೆಚ್ಚದಲ್ಲಿ ತಾಲೂಕಿನಾದ್ಯಂತ ಪ್ರತಿಯೊಂದು ಗ್ರಾಮಗಳಲ್ಲಿಯೂ ಸಹ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಜೂನ್ ಹೊತ್ತಿಗೆ ಮತ್ತಷ್ಟು ಅನುದಾನ ಸಿಗುವ ನಿರೀಕ್ಷೆ ಇದೆ ಎಂದರು.

ಪ್ರಮುಖರಾದ ಕೋಟೇಶಪ್ಪ ಖಂಡೋಜಿ, ಭರಮಗೌಡ ನಂದಿಹಳ್ಳಿ, ಮಹ್ಮದ್‌ಹನೀಪ್‌ಸಾಬ ನರೇಗಲ್, ಗೌಸ್‌ಮೋದೀನಸಾಬ ಉಪ್ಪುಣಸಿ, ಇಸ್ಮೈಲ್‌ಸಾಬ ಹಲಸೂರ, ನಿಂಗಪ್ಪ ನಂದಿಹಳ್ಳಿ, ಇಮಾಮಹುಸೇನ ಹಲಸೂರ, ಮಹ್ಮದರಫೀಕ್ ಉಪ್ಪುಣಸಿ, ಶ್ರೀಕಾಂತ ಬಾಡದ, ನೌಶಾದ ಹುಬ್ಬಳ್ಳಿ, ಮೆಹಬೂಬ್ ಹುಬ್ಬಳ್ಳಿ, ಶರೀಫ್ ಸಾಬ ಹಲಸೂರ, ಮಾರುತಿ ನಂದಿಹಳ್ಳಿ, ಮುತ್ತಯ್ಯ ಸವಣೂರ, ಅಶೋಕ ಮೋರೆ, ಕರಬಸಯ್ಯ ಸವಣೂರ, ಗದಿಗೆಪ್ಪ ಸವಣೂರ, ಚಂದ್ರಕಾಂತ ಬಾಡದ, ಹಜರತ್‌ಅಲಿ ನರೇಗಲ್, ಖಾದರಸಾಬ ಕಾಡಶೆಟ್ಟಿಹಳ್ಳಿ, ಖಲಂದರಸಾಬ ನರೇಗಲ್, ಮುಸ್ತಾಕಅಹ್ಮದ್ ನರೇಗಲ್ ಸೇರಿದಂತೆ ಇನ್ನೂ ಹಲವರು ಇದ್ದರು.



ಸ್ವಸ್ಥ ಸಮಾಜಕ್ಕೆ ಶ್ರಮಿಸಿದ್ದ ದೇವರ ದಾಸಿಮಯ್ಯ

ರಾಣೇಬೆನ್ನೂರ: ನೇಕಾರ ಸಂತ ಆದ್ಯ ವಚನಕಾರ ದೇವರ ದಾಸಿಮಯ್ಯ ಬಸವಾದಿ ಶರಣರಗಿಂತ ಪೂರ್ವದಲ್ಲಿಯೇ ಕಾಯಕ ನಿಷ್ಠೆ ಮತ್ತು ವಚನಗಳನ್ನು ಹೇಳುವ ಮೂಲಕ ಸಮಾಜದ ಅಂಕು ಡೊಂಕು ತಿದ್ದಿದ ಮೊದಲಿಗರಾಗಿದ್ದಾರೆ ಎಂದು ತಹಶೀಲ್ದಾರ್ ಆರ್.ಎಚ್.ಭಾಗವಾನ್ ಹೇಳಿದರು.

ನಗರದ ಮಿನಿ ವಿಧಾನಸೌಧ ಆವರಣದ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಆದಿಕವಿ ನೇಕಾರಸಂತದೇವರ ದಾಸಿಮಯ್ಯ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಪೀಳಿಗೆಗೆ ಮೂಲ ಪುರುಷರ ಬಗ್ಗೆ ತಿಳಿಸುವ ಕಾರ್ಯವಾಗಬೇಕು.

ನೇಕಾರ ಸಮಾಜ ದೊಡ್ಡ ಸಂಖ್ಯೆಯಲ್ಲಿ ಇದ್ದರೂ ಸಮಾಜ ಸಂಘಟನೆಯಾಗಿಲ್ಲ, ಇದಕ್ಕಾಗಿ ಸರ್ಕಾರ ಸಮಾಜದ ಮಹಾತ್ಮರ ಜಯಂತಿ ಆಚರಣೆ ಮೂಲಕ ಸಮಾಜವನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದೆ. ನೇಕಾರ ಕಾಯಕ ಬಹಳ ಶ್ರೇಷ್ಠವಾಗಿದ್ದು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಬೆಳೆಯಲು ಒಗ್ಗಟ್ಟು ಮುಖ್ಯವಾಗಿದೆ ಎಂದರು.

ಪ್ರಾ.ಡಾ.ಮೃತ್ಯುಂಜಯ ಹಿರೇಮಠ ಮಾತನಾಡಿ, ದೇವರ ದಾಸಿಮಯ್ಯ ಶಿವತತ್ವ ಮೂಲಕ ಸಮಾಜದ ಅಂಕುಡೊಂಕು ತಿದ್ದುವ ಕೆಲಸ ಮಾಡಿದರು. ದಾಸಿಮಯ್ಯ ವಚನಗಳ ಒಂದೊಂದು ಪದವಿ ಇದ್ದಂತೆ. ಅವರ ವಚನಗಳ ವಿಶ್ವ ವ್ಯಾಪ್ತಿ ಹೊಂದಿದೆ. ಇಂತಹ ಮಹನೀಯರ ವಚನಗಳನ್ನು ನಮ್ಮ ಮಕ್ಕಳಿಗೆ ತಿಳಿಸಿಕೊಂಡಬೇಕು ಎಂದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಡಾ.ಬಸವರಾಜ ಕೇಲಗಾರ ಮಾತನಾಡಿದರು. ನೇಕಾರ ಒಕ್ಕೂಟದ ಅಧ್ಯಕ್ಷ ಹನುಮಂತಪ್ಪ ಮುಕ್ತೇನಹಳ್ಳಿ, ರಾಜ್ಯ ಸಂಘಟನಾ ಕಾರ್ಯದರ್ಶಿ ರಮೇಶ ಗುತ್ತಲ, ದೇವರ ದಾಸಿಮಯ್ಯ ಉತ್ಸವ ಸಮಿತಿ ಅಧ್ಯಕ್ಷ ಬಸವರಾಜ ಲಕ್ಷ್ಮೇಶ್ವರ, ಕಾರ್ಯದರ್ಶಿ ಮಂಜುನಾಥ ಹೊಸಪೇಟೆ, ಸಂಕಪ್ಪ ಮಾರನಾಳ, ಮಾರುತಿ ಗರಡಿಮನಿ, ಗಿರೀಶ ಗುಳೇದಗುಡ್ಡ, ರೈತ ಮುಖಂಡ ಹನುಮಂತಪ್ಪ ಕಬ್ಬಾರ, ಲಕ್ಷ್ಮಣ ಸಾಲಿ, ಅಶೋಕ ದುರ್ಗಶೀಮಿ, ಪ್ರೀತಂ ಬಚ್ಚೆ, ಕರಬಸಪ್ಪ ನೀಲಗುಂದ, ಗುಡದಯ್ಯ ನೀಲಗುಂದ, ಪ್ರಕಾಶ ಅಗಡಿ, ಮನೋಹರ ಲಕ್ಷ್ಮೇಶ್ವರ, ಪರುಶುರಾಮ ಅಗಡಿ ಸೇರಿದಂತೆ ಅಧಿಕಾರಿಗಳು ಮತ್ತಿತರು ಇದ್ದರು.



ಗ್ರಾಮೀಣ ಭಾಗಕ್ಕೆ ಸಮರ್ಪಕ ಬಸ್ ಕಲ್ಪಿಸಲು ಮನವಿ

ಹಾವೇರಿ: ತಾಲೂಕಿನಹಲವಾರು ಹಳ್ಳಿಗಳಿಗೆ ಸರಿಯಾದ ಬಸ್ ವ್ಯವಸ್ಥೆ ಇಲ್ಲದೇ ಮಹಿಳೆಯರಿಗೆ, ವಯೋವೃದ್ಧರು, ಮಕ್ಕಳು ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಾರಿಗೆ ಇಲಾಖೆಯ ಜಿಲ್ಲಾ ಅಧಿಕಾರಿಗೆ ಒತ್ತಾಯಿಸಿ ಮಹಿಳೆಯರು ಮನವಿ ಸಲ್ಲಿಸಿದರು.



ನಗರದ ಕೆಎಸ್‌ಆರ್ ಟಿಸಿ ಜಿಲ್ಲಾ ನಿಯಂತ್ರಣ ಅಧಿಕಾರಿಗಳ ಕಚೇರಿಗೆ ತೆರಳಿದ ವರದಾಹಳ್ಳಿ, ನಾಗನೂರ, ಬೂದಗಟ್ಟಿ, ಮಾಚಾಪೂರ, ತಿಮ್ಮೆನಹಳ್ಳಿ, ಹೊಸಕಿತ್ತೂರ, ಅಕ್ಕೂರು ಸೇರಿದಂತೆ ಹತ್ತಾರು ಗ್ರಾಮಗಳ ಮಹಿಳೆಯರು ಗ್ರಾಮೀಣ ಭಾಗಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಹಾಗೂ ವೇಳೆಗೆ ಸರಿಯಾಗಿ ಬಸ್ ಓಡಿಸುವಂತೆ ಅಧಿಕಾರಿಗಳಿಗೆ ಆಗ್ರಹಿಸಿದರು.

ವಿವಿಧ ಗ್ರಾಮಗಳಿಂದ ಹಾವೇರಿ ನಗರಕ್ಕೆ ಬರಲು ದಿನನಿತ್ಯ ಬಸ್ ಇರದ ಕಾರಣಕ್ಕೆ 3- 5 ಕಿಲೋ ಮೀಟರ್ ನಡೆಯುವಂತಾಗಿದೆ. ಕಾರಣ ಸಂಭಂಧಿಸಿದ ಗ್ರಾಮೀಣ ಭಾಗಕ್ಕೆ ಖಾಯಂ ನಿರಂತರ ಬಸ್ ಸೌಲಭ್ಯ ಕಲ್ಪಿಸಲು ಒತ್ತಾಯಿಸಿದರು. ಮನವಿ ಸ್ವೀಕರಿಸಿದ ಅಧಿಕಾರಿಗಳು ಸೂಕ್ತ ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ಬಚ್ ಇಂಡಿಯಾ ಟ್ರಸ್ಟ್ ವ್ಯವಸ್ಥಾಪಕ ರುದ್ರೇಶ್, ಎಸ್‌ಎಫ್‌ಐ ಜಿಲ್ಲಾ ಉಪಾಧ್ಯಕ್ಷ ಅರುಣ ನಾಗಾವತ್, ದರ್ಶನ, ಅರ್ಚನಾ ದೇವತಿ, ರೇಣುಕಾ ಕಹಾರ, ದೀಪಾ ಚಾಡರ, ಲಕ್ಷ್ಮೀ ಆನಿಶೆಟ್ಟರ, ಮಮತಾ ಓಂಕಾರಣ್ಣನವರ, ಚೆನ್ನವ್ವ ಆನಿಶೆಟ್ಟರ್, ರತ್ನಾ ಬಿಷ್ಟಕ್ಕನವರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾಮಗಾರಿಗೆ ಭೂಮಿಪೂಜೆ

ಹಾನಗಲ್ಲ : ಸ್ಥಳೀಯ ಪುರಸಭೆ ವ್ಯಾಪ್ತಿಯ ದರ್ಗಾ ಪ್ರದೇಶದ ಮುಸ್ಲಿಂ ಸಮುದಾಯದ ಕಬರಸ್ಥಾನದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

2025-26 ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ 5 ಲಕ್ಷ ರೂ. ವೆಚ್ಚದಲ್ಲಿ ಕಬರಸ್ಥಾನ ಶೆಡ್ ನಿರ್ಮಾಣ, 2 ಲಕ್ಷ ರೂ. ವೆಚ್ಚದಲ್ಲಿ ಹೈಮಾಸ್ಟ್ ದೀಪ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಮಾನೆ, ಸಮುದಾಯದ ಬೇಡಿಕೆಯಂತೆ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳು ಕಬರಸ್ಥಾನದ ಸ್ವಚ್ಛತೆ ಹಾಗೂ ಸೌಲಭ್ಯಗಳನ್ನು ಹೆಚ್ಚಿಸುವಲ್ಲಿ ಮಹತ್ವದ್ದಾಗಿವೆ. ಕಬರಸ್ಥಾನವು ಕೇವಲ ಅಂತಿಮ ವಿಧಿ ವಿಧಾನಗಳ ಸ್ಥಳವಲ್ಲ, ಅದು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಪ್ರತಿಬಿಂಬವಾಗಿದೆ. ಇಲ್ಲಿ ಅಗತ್ಯ ಮೂಲಸೌಲಭ್ಯಗಳನ್ನು ಕಲ್ಪಿಸುವುದು ನಮ್ಮ ಕರ್ತವ್ಯವಾಗಿದೆ. ಸಮುದಾಯದ ಬೇಡಿಕೆಗಳನ್ನು ಹಣಕಾಸಿನ ಲಭ್ಯತೆ ಆಧರಿಸಿ ಹಂತ, ಹಂತವಾಗಿ ಈಡೇರಿಸುವುದಾಗಿ ಭರವಸೆ ನೀಡಿದರು. ಪುರಸಭೆ ಮಾಜಿ ಅಧ್ಯಕ್ಷ ಖುರ್ಷಿದ್ ಅಹ್ಮದ್ ಹುಲ್ಲತ್ತಿ, ಮುಖಂಡರಾದ ಗುಲಾಬಸಾಬ ಬಡಗಿ, ಬಾಬಾಜಾನ ಕೊಂಡವಾಡಿ, ನಿಯಾಜ್ ಸರ್ವಿಕೇರಿ, ಮುಕ್ತಾರ ಗೌಂಡಿ, ಫಾರೂಕ್ ಅಕ್ಕಿವಳ್ಳಿ, ಸಿಕಂದರ್ ವಾಲಿಕಾರ, ಜಾಫರ ಬಾಳೂರ, ಶಿವು ಭದ್ರಾವತಿ, ಅಶೋಕ ಹಲಸೂರ, ಗೌಸ್ ತೊಂಡೂರ, ಅಬ್ದುಲ್‌ಖಾದರ ಗಣಜೂರ, ರಿಹಾನ್ ಸರ್ವಿಕೇರಿ ಸೇರಿದಂತೆ ಇನ್ನೂ ಹಲವರು ಇದ್ದರು.



ವಿಶ್ವ ಸಾಹಿತ್ಯಕ್ಕೆ ದಾಸಿಮಯ್ಯರ ಕೊಡುಗೆ ಅಪಾರ



ಬ್ಯಾಡಗಿ: ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತು ಕಾಣಾ ರಾಮನಾಥ ಎಂಬ ಜೇಡರ ದಾಸಿಮಯ್ಯರ ವಚನದಂತೆ ಮಾನವನು ಅರಿಷಡ್ವರ್ಗಗಳ ಆಸೆಗೆ ಒಳಗಾದರೆ ಹೀನ ಸ್ಥಿತಿಗೆ ತಲುಪುತ್ತಾನೆ ಎಂದು ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಹೇಳಿದರು.

ಅವರು ಮಂಗಳವಾರ ತಾಲೂಕು ಕಚೇರಿ ಸಭಾಂಗಣದಲ್ಲಿ, ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇದರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ದೇವರ ದಾಸಿಮಯ್ಯ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಸಲ್ಲಿಸಿಮಾತನಾಡಿದರು. ದೇವರ ದಾಸಿಮಯ್ಯ ಪ್ರಥಮ ವಚನಕಾರರಾಗಿದ್ದು, ವಿಶ್ವ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ ಅಪಾರವಾದದ್ದು, ಡಂಭಾಚಾರದ ಭಕ್ತಿಯನ್ನು ಬಿಟ್ಟು, ಅರಿಷಡ್ವರ್ಗಗಳ ಆಸೆಗಳನ್ನು ತ್ಯಜಿಸಿ, ಸತ್ಯ ದಾರಿಯಲ್ಲಿ ನಡೆಯುವುದು ಮುಖ್ಯವಾಗಿದೆ. ಅಂಧಕಾರದಿಂದ ಅಜ್ಞಾನದ ಕಡೆಗೆ ಅಂದಿನ ಶತಮಾನದಲ್ಲಿಯೇ ಹೋರಾಡಿದ ಹಿರಿಮೆ ದೇವರ ದಾಸಿಮಯ್ಯರದ್ದಾಗಿದೆ ಎಂದರು.

ಶಿರಸ್ತೆದಾರರಾದ ನಾಗರತ್ನ ಕಾಳೆ. ಕಿರಣ್ ಹಿರೇಮಠ, ದಾನಪ್ಪ ಹಾಗೂ ತಾಲೂಕು ಕಚೇರಿಯ ಸಿಬ್ಬಂದಿ ಉಪಸ್ಥಿತರಿದ್ದರು.

ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿ: ಪಶುಪತಿ ಶ್ರೀ

ಹಾವೇರಿ: ಭಕ್ತರ ಕಷ್ಟಗಳನ್ನು ದೂರ ಮಾಡುವ ಶಕ್ತಿ ಗುರು ಪರಂಪರೆಗೆ ಮಾತ್ರವೇ ಇದೆ. ಗುರುವಿನ ಮಾರ್ಗದರ್ಶನದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಬೇಕು ಎಂದು ದಿಂಡದಹಳ್ಳಿ ಪಶುಪತಿ ಶಿವಾಚಾರ್ಯ ಶ್ರೀಗಳು ಹೇಳಿದರು.



ತಾಲೂಕಿನ ಹನುಮನಹಳ್ಳಿ ಗ್ರಾಮದ ಹಾಲಸ್ವಾಮಿ ಮಠದಲ್ಲಿ ಮುಳ್ಳುಗದ್ದುಗೆ ಜಾತ್ರಾ ಮಹೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಹಾಗೂ ಧರ್ಮಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ನಮ್ಮ ರಾಜ್ಯ, ದೇಶಗಳಲ್ಲಿ ಮಠಾಧೀಶರು, ಮಹಾತ್ಮರ ಜೀವನಾನುಷ್ಠಾನ, ಚೈತನ್ಯದ ತಪೋಶಕ್ತಿ ಬಹಳ ಪ್ರಾಮುಖ್ಯತೆ ಪಡೆದಿದೆ. ಸದಾಕಾಲ ಸದ್ಭಕ್ತರ ಒಳಿತಿಗಾಗಿ ಮಠ ಮಾನ್ಯಗಳು ಶ್ರಮಿಸುತ್ತಿವೆ. ಪ್ರಸ್ತುತ ದಿನಗಳಲ್ಲಿ ಗುರು ಪರಂಪರೆ ಬಹಳಷ್ಟು ಗಟ್ಟಿಯಾಗುವ ಅವಶ್ಯಕತೆ ಇದೆ. ಹರ ಮುನಿದರೂ ಗುರು ಕಾಯುವನು, ಗುರು ಮುನಿದರೆ ಯಾರು ಕಾಪಾಡಲ್ಲ, ಗುರುವಿನ ವಾಕ್ಯಗಳನ್ನು ಪ್ರತಿಯೊಬ್ಬರೂಪಾಲನೆಮಾಡಬೇಕು, ಆಗ ಮಾತ್ರ ಜೀವನದಲ್ಲಿ ಯಶಸ್ಸು ಸಾಧ್ಯ ಎಂದರು.

ಹೊಸದಾಗಿ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವ ನವ ವಧು ವರರು ತಮ್ಮ ಬದುಕಿನುದ್ದಕ್ಕೂ ಪರಸ್ಪರ, ಪ್ರೀತಿ, ವಿಶ್ವಾಸ, ನಂಬಿಕೆಯನ್ನಿಟ್ಟು ಬದುಕಿನ ಕ್ಷಣಗಳನ್ನು ಅನುಭವಿಸಬೇಕು. ಗಂಡ ಹೆಂಡತಿ ಅನ್ಯೋನ್ಯವಾಗಿ ಜೀವನ ನಡೆಸಬೇಕು. ಹೊಸದಾಗಿ ಮನೆಗೆ ಬಂದಾಗ ಸೊಸೆಯನ್ನು ಅತ್ತೆ ಮಗಳಂತೆ ಕಾಣಬೇಕು, ಸೊಸೆಯು ಕೂಡ ತನ್ನ ಅತ್ತೆಯನ್ನು ತಾಯಿಯಂತೆ ಕಾಣಬೇಕು. ಅಂದಾಗ ಮಾತ್ರ ಅತ್ತೆ ಸೊಸೆ ಬಾಂಧವ್ಯದ ಬೆಸುಗೆ ಸಹಬಾಳ್ವೆಯಿಂದ ಕೂಡಿರುತ್ತದೆ ಎಂದರು.

ಅಗಡಿ ಅಕ್ಕಿಮಠದ ಗುರುಲಿಂಗ ಶ್ರೀಗಳು ಮಾತನಾಡಿ, ಧರ್ಮಸಭೆಯಲ್ಲಿ ಪಾಲ್ಗೊಂಡಿರುವ ತಾಯಂದಿರು ತಮ್ಮ ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಕೊಡಬೇಕು. ಒಳ್ಳೆಯ ಸಂಸ್ಕಾರ, ಸಂಸ್ಕೃತಿ, ಧರ್ಮ, ಆಚಾರ ವಿಚಾರಗಳ ಬಗ್ಗೆ ತಿಳಿ ಹೇಳಬೇಕು. ಭವಿಷ್ಯದ ಸಮಾಜದಲ್ಲಿ ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ಬೆಳೆಸಬೇಕು. ಸಮಾಜ ನನಗೇನು ಕೊಟ್ಟಿದೆ ಎನ್ನುವುದಕ್ಕಿಂತ, ಸಮಾಜಕ್ಕೆ ನಾನೇನು ಕೊಡುಗೆ ನೀಡಿದೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಮಕ್ಕಳ ಬದುಕಿಗೆ ಪೋಷಕರೇ ಶಿಲ್ಪಿಗಳು. ಆ ಶಿಲ್ಪಿಗಳು ಹೇಗೆ ಮಕ್ಕಳನ್ನು ಬೆಳೆಸುತ್ತಾರೆ ಎಂಬುದರ ಮೇಲೆ ಮಕ್ಕಳ ಭವಿಷ್ಯ ನಿರ್ಧಾರ ಆಗುತ್ತದೆ. ಈ ನಿಟ್ಟಿನಲ್ಲಿ ಧರ್ಮ ಸಂಸ್ಕೃತಿ ಪರಂಪರೆಯಡಿ ಮಕ್ಕಳನ್ನು ಬೆಳೆಸಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ಮಠದ ಹಾಲಸಿದ್ಧರಾಮ ಶ್ರೀಗಳು, ಗಂಜಿಗಟ್ಟಿ ಚರಮೂರ್ತೇಶ್ವರ ಮಠದ ಶಿವಲಿಂಗೇಶ್ವರ ಶ್ರೀಗಳು, ಯುವ ಮುಖಂಡ ದರ್ಶನಕುಮಾರ ಲಮಾಣಿ ಮಾತನಾಡಿದರು. ಕುರುವತ್ತಿಯ ಸಿದ್ದನಂದೀಶ್ವರ ಶಿವಾಚಾರ್ಯ ಶ್ರೀಗಳು, ಶ್ರೀ ಮಠದ ಹಾಲಮುದುಕೇಶ್ವರ ಶ್ರೀಗಳು, ಅಭಿನವ ಹಾಲಸ್ವಾಮೀಜಿ, ಸಣ್ಣ ಹಾಲ ಸ್ವಾಮೀಜಿ, ಅಭಿಷೇಕ ಹಾಲಸ್ವಾಮೀಜಿ, ಓಂಕಾರ ಹಾಲಸ್ವಾಮೀಜಿ ಸೇರಿದಂತೆಹಲವರು ಉಪಸ್ಥಿತರಿದ್ದರು. ವೀರೇಶ ಕಮ್ಮಾರ ನಿರ್ವಹಿಸಿದರು.

ಭಗತ್ ಸಿಂಗ್, ರಾಜಗುರು, ಸುಖದೇವ್ ಸ್ಮರಣೆ



ಹಾವೇರಿ: ಸ್ವಾತಂತ್ರ್ಯ ಹೋರಾಟದ ಧ್ರುವತಾರೆ ಕ್ರಾಂತಿ ಕಿಡಿಗಳಾದ ಭಗತ್ ಸಿಂಗ್, ರಾಜಗುರು, ಸುಖದೇವ್ ಮಾರ್ಚ್-23 ರಂದು ಹುತಾತ್ಮರಾದವರು. ಇವರು ಬಿದ್ದ ಮರಗಳಲ್ಲ ಬಿತ್ತಿದ ಬೀಜಗಳು ಎಂದು ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಬಸವರಾಜ ಹೇಳಿದರು.ನಗರದ ಎಸ್‌ಎಫ್‌ಐ ಕಚೇರಿ ಎದುರು ಎಸ್‌ಎಫ್‌ಐ ಹಾಗೂ ಬಾಲ ಸಂಘಂ ಆಯೋಜಿಸಿದ್ದ ಭಗತ್ ಸಿಂಗ್, ರಾಜಗುರು, ಸುಖದೇವ್ ಹುತಾತ್ಮ ಸ್ಮರಣೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಗೌರವ ಸಲ್ಲಿಸಿ ಮಾತನಾಡಿ, ಭಗತ್ ಸಿಂಗ್ ಕಂಡ ಕನಸಿನ ಭಾರತ ಇನ್ನೂ ನಿರ್ಮಾಣವಾಗಿಲ್ಲ, ಶೋಷಿತರ ಪರವಾದ ಭಗತ್ ಸಿಂಗ್ ನಿಲುವನ್ನು ಅವರ ಅಧ್ಯಯನವನ್ನು ಇಂದಿನ ಯುವಪೀಳಿಗೆ ಅನುಸರಿಸಬೇಕಿದೆ ಎಂದರು. ಸಾಮ್ರಾಜ್ಯಶಾಹಿಗಳನ್ನು ದೇಶವನ್ನು ಬಿಟ್ಟು ಓಡಿಸಬೇಕು ಎಂದು ಹೇಳುತ್ತಿದ್ದ ಅವರು ಅಸ್ಪ್ರಶ್ಯತೆಯ ಬಗ್ಗೆ ತನ್ನ 16ನೇ ವಯಸ್ಸಿನಲ್ಲೇ ಲೇಖನವನ್ನು ಬರೆದಿದ್ದರು. ಗೆಳೆಯರೊಂದಿಗೆ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ನಗುನಗುತ್ತಲೆ ಪ್ರಾಣತೆತ್ತ ತ್ಯಾಗಿಗಳು ಎಂದು ಸ್ಮರಿಸಿದರು.ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರಾದ ದುರುಗೇಶ್, ಹಾಸ್ಟೆಲ್ ವಿದ್ಯಾರ್ಥಿಗಳ ರಾಜ್ಯ ಸಂಚಾಲಕ ಅರುಣ್ ನಾಗವತ್, ಮುಖಂಡರಾದ ಸಂಗೀತ ಮೋಟಲ್ಲಿ, ಸಂಜಾನ ಬಾಲ ಸಂಘಂನ ಧನುಷ್ ದೊಡ್ಡಮನಿ, ಮಣಿಕಂಠ ಪಾಟೀಲ್, ತೇಜಸ್ ಎನ್ ಡಿ, ಖಲಂದರ್ ಮುಗದೂರ, ಮಲ್ಲಿಕ್ ಎಮ್, ಸಂದೀಪ್ ವಾಲಿಕಾರ, ಸೋಹಿದ್ ಬಲಿ ಆಗಡಿ, ಗಣೇಶ, ಆಯಾನ, ಹಮಜಾ ಖಲಾ, ತಾಹೀರ್, ಮೈನುದ್ದೀನ್ ಇಲಿಬುಡ್ಡಿ ಸೇರಿದಂತೆ ಮತ್ತಿತರರಿದ್ದರು.

ಕಿರುಸುದ್ಧಿ

ಇಂದು ಭೀಮೋತ್ಸವ

ಬೆಳಗಾವಿ: ನಗರದ ಸ್ಟಾರ್ ಅವೆನ್ಯೂ ಹಾಲ್‌ನಲ್ಲಿ ಮಾ.25ರಂದು ಭೀಮೋತ್ಸವ ಆಯೋಜಿಸಲಾಗಿದೆ. ಈ ಭೀಮೋತ್ಸವ ಕಾರ್ಯಕ್ರಮವನ್ನು ಸಚಿವ ಸತೀಶ್ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಗಮಿಸಲಿದ್ದಾರೆ ಎಂದು ದಲಿತ ಸಂರಕ್ಷ ಸಮಿತಿಯ ಮಹಿಳಾ ಯುವ ಘಟಕ ಅಧ್ಯಕ್ಷೆ ಶೋಭಾ ಕೃಷ್ಣ ಪ್ರಕಾಶ ಅವರು ತಿಳಿಸಿದ್ದಾರೆ. ಭೀಮೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರ 10 ಶಾಲಾ ಮಕ್ಕಳಿಗೆ ಸನ್ಮಾನ ಮಾಡುವುದರ ಜೊತೆಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕ್ರಾಂತಿಗೀತೆಗಳ ಮುಖಾಂತರ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ದಲಿತ ಸಂಘಟನೆಗಳ ಮುಖಂಡರುಗಳು ಸಾವಿರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಖಾನಾಪುರದಲ್ಲಿ ಆಲಿಕಲ್ಲು ಮಳೆ

ಖಾನಾಪುರ: ಪಟ್ಟಣ ಸೇರಿದಂತೆ ತಾಲೂಕಿನ ಹಲವೆಡೆ ಮಂಗಳವಾರ ಸಂಜೆ ಕೆಲಕಾಲ ಆಲಿಕಲ್ಲು ಮಳೆ ಸುರಿಯಿತು. ಗುಡುಗು-ಮಿಂಚುಗಳ ಸದ್ದಿನೊಂದಿಗೆ ಆರ್ಭಟಿಸಿದ ಮಳೆ ಬೇಸಿಗೆಯ ಝಳದಿಂದ ಬಸವಳಿದಿದ್ದ ಇಳೆಗೆ ತಂಪು ತಂದಿತು. ಆಗಸದಿಂದ ಬಂದು ತಮ್ಮ ಮನೆಗಳ ಮುಂದೆ ಬಿದ್ದ ಆಲಿಕಲ್ಲುಗಳನ್ನು ಸಂಗ್ರಹಿಸಿದ ಚಿಣ್ಣರು ಅವುಗಳ ಜೊತೆ ಆಡಿ ಸಂಭ್ರಮಿಸಿದರು.

ಜಿಲ್ಲಾಮಟ್ಟದ ಕಾವ್ಯ ಕಮ್ಮಟ

ಮೂಡಲಗಿ: ಕನ್ನಡ ಸಾಹಿತ್ಯ ಪರಿಷತ್ ,ತಾಲೂಕು ಘಟಕ ಮೂಡಲಗಿ ವತಿಯಿಂದ ಎ.5ರಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಚೈತನ್ಯ ವಸತಿ ಶಾಲೆಯಲ್ಲಿ 49 ನೇ ಬೆಳದಿಂಗಳ ಚಿಂತನ ಮಂಥನದ ಕಾರ್ಯಕ್ರಮದ ಅಂಗವಾಗಿ ಬೆಳಗಾವಿ ಜಿಲ್ಲಾ ಮಟ್ಟದ '' ಕಾವ್ಯ ಕಮ್ಮಟ '' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತ ಶಿಬಿರಾರ್ಥಿಗಳು ಏಪ್ರಿಲ್ 3 ರ ಒಳಗಾಗಿ, ತಮ್ಮ ಹೆಸರುಗಳನ್ನು ಇ ದೂರವಾಣಿ ನಂಬರಗಳಿಗೆ 9844355882, 9972235320, 9902132815 ಸಂಪರ್ಕಿಸಿ ನೋಂದಾಯಿಸಿಕೊಳ್ಳಬೇಕೆಂದು ಅಧ್ಯಕ್ಷ ಡಾ.ಸಂಜಯ ಆ ಶಿಂದಿಹಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂದುಕೊರತೆ ಸಭೆ

ಕಾಗವಾಡ: ತಾಲೂಕು ಮಟ್ಟದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಕುಂದು ಕೊರತೆ ಸಭೆ ಮಾ.27 ರಂದು ಬೆಳಿಗ್ಗೆ 11 ಗಂಟೆಗೆ ಕಾಗವಾಡ ಪಟ್ಟಣ ಬಸವನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಸಭೆ ಜರುಗಲಿದ್ದು,ಈ ಸಭೆಗೆ ಎಲ್ಲರೂ ಭಾಗಿಯಾಗಬೇಕೆಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಈರಣ್ಣ ಬಣಜಗಿ ಆಯ್ಕೆ






ಚನ್ನಮ್ಮನ ಕಿತ್ತೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲ್ಲೂಕು ಘಟಕದ ಮುಂದಿನ ಮೂರು ವರ್ಷಗಳ ಅವಧಿಗಾಗಿ ಸೋಮವಾರ ನಡೆದ ಚುನಾವಣೆಯಲ್ಲಿ ಈರಣ್ಣ ಬಣಜಗಿ ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾದರು, ಉಪಾಧ್ಯಕ್ಷರಾಗಿ ಇದೇ ಮೊದಲ ಬಾರಿ ಶಿವಾನಂದ ವಿಭೂತಿಮಠ ಚುನಾಯಿತರಾದರು. ಶೇಖರ ಕಲ್ಲೂರ ಪ್ರಧಾನ ಕಾರ್ಯದರ್ಶಿ, ಸೋಮಶೇಖರ ಕುಪ್ಪಸಗೌಡರ ಖಜಾಂಚಿಯಾಗಿ ಸರ್ವಾನುಮತದಿಂದ ಚುನಾಯಿತರಾದರು. ಚುನಾವಣಾಧಿಕಾರಿ ಜಿ. ಕೆ. ಪೂಜಾರ ಈ ಅವಿರೋಧ ಆಯ್ಕೆಗಳನ್ನು ಘೋಷಣೆ ಮಾಡಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಪುಂಡಲೀಕ ಬಾಳೋಜಿ, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀಶೈಲ್ ಮಠದ ವೀಕ್ಷಕರಾಗಿ ಆಗಮಿಸಿದ್ದರು, ಜಿಲ್ಲಾ ಪ್ರತಿನಿಧಿಗಳಾದ ಉಳವಯ್ಯ ಹಿರೇಮಠ, ರುದ್ರೇಶ ಸಂಪಗಾಂವಿ, ತಾಲೂಕು ಘಟಕದ ಪದಾಧಿಕಾರಿಗಳಾದ ಶಿವಾನಂದ ತಾರಿಹಾಳ, ಮಹಾರುದ್ರ ಮಹಾಲ್ಮನಿ, ಸದಸ್ಯ ಅದೃಶ್ಯ ಬಣಜಗಿ ಇದ್ದರು. ಇದೇ ಸಂದರ್ಭದಲ್ಲಿ ಖಾನಾಪುರ ತಾಲೂಕು ಘಟಕದ ಚುನಾವಣೆಯೂ ನಡೆಯಿತು. ಅಧ್ಯಕ್ಷರಾಗಿ ಪ್ರಸನ್ನ ಕುಲಕರ್ಣಿ, ಭರತ ಪಾಟೀಲ ಉಪಾಧ್ಯಕ್ಷ, ಕಿಶೋರ ಮಿಠಾರಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಕಾಸೀಂ ಹಟ್ಟಿಹೊಳಿ ಇದ್ದರು.



ನೇಸರಗಿ: ಮತ್ತಿಕೊಪ್ಪದ ಐಸಿಎಆರ್-ಕೆಎಲ್‌ಇ ಕೃಷಿ ವಿಜ್ಞಾನಕೇಂದ್ರದಲ್ಲಿ ವಿಶ್ವ ಜಲ ದಿನ ಆಚರಣೆ ಮಾಡಲಾಯಿತು. ಕೇಂದ್ರದ ವಿಜ್ಞಾನಿ ಎಸ್. ಎಮ್. ವಾರದ, ಡಾ. ಎಸ್. ಎಸ್. ಹಿರೇಮಠ, ಜಿ. ಬಿ. ವಿಶ್ವನಾಥ, ಪ್ರವೀಣ ಯಡಹಳ್ಳಿ ಹಾಗೂ ಡಾ. ಗುರುರಾಜಕೌಜಲಗಿ,ಸಿಬ್ಬಂದಿಗಳಾದವಿನೋದಕೋಟಿ, ಶಂಕರಗೌಡ ಪಾಟೀಲಹಾಗೂ ಮಂಜುನಾಥ ಪಿ. ಐ. ಉಪಸ್ಥಿತರಿದ್ದರು.

ಪೆಟ್ರೋಲ್, ಡೀಸೆಲ್ ಕೊರತೆಯಿಲ್ಲ

ಬೆಳಗಾವಿ: ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ಸುದ್ದಿಗಳ ಪರಿಣಾಮವಾಗಿ ಪೆಟ್ರೋಲ್ ಬಂಕ್‌ಗಳ ಮುಂದೆ ಜನರು ಪೆಟ್ರೋಲ್ ಪಡೆಯಲು ಮುಗಿಬಿದ್ದು ಆತಂಕದ ವಾತಾವರಣ ನಿರ್ಮಾಣವಾಗಿದೆ.



ಭಾರತಕ್ಕೆ ಅಗತ್ಯವಿರುವ ಕಚ್ಚಾ ತೈಲ, ಅನಿಲ ಮತ್ತು ರಸಗೊಬ್ಬರಗಳು ಯುದ್ಧದ ಸವಾಲುಗಳ ನಡುವೆಯೂ, ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನಮ್ಮ ಸರ್ಕಾರ ನಿರಂತರ ಶ್ರಮಿಸುತ್ತಿದೆ ಸಾರ್ವಜನಿಕರು ಭಯ ಪಡುವ ಅಗತ್ಯವಿಲ್ಲ ಎಂದು ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರು ತಿಳಿಸಿದ್ದಾರೆ.

ಇತ್ತೀಚೆಗೆ ಪೆಟ್ರೋಲ್ ಕೊರತೆ ಉಂಟಾಗಲಿದೆ ಎಂಬ ವದಂತಿ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದಂತೆ, ನಾಗರಿಕರು ಆತಂಕಗೊಂಡು ಬಂಕ್ಗಳತ್ತ ದೌಡಾಯಿಸುತ್ತಿದ್ದಾರೆ. ಇದರಿಂದ ಅನಾವಶ್ಯಕ ಗೊಂದಲ ಮತ್ತು ಜನಸಂದಣಿ ಉಂಟಾಗಿದೆ.

ಸಂಬಂಧಿತ ಅಧಿಕಾರಿಗಳು ಹಾಗೂ ಪೆಟ್ರೋಲ್ ವಿತರಕರು ಇಂತಹ ಯಾವುದೇ ಕೊರತೆ ಇಲ್ಲವೆಂದು ಸ್ಪಷ್ಟಪಡಿಸಿದ್ದು, ಜನರು ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ಮಹಾನಗರ ಪಾಲಿಕೆಯ ವ್ಯಾಪ್ತಿಯ ಬಸವನ ಕುಡಚಿಯಲ್ಲಿ ಶ್ರೀ ಬಸವಣ್ಣ ಕಲ್ಮೇಶ್ವರ ದೇವರ ಜಾತ್ರಾ ಮಹೋತ್ಸವ ಅತ್ಯಂತ ಸಡಗರದಿಂದ ಜರುಗಿತು. ಜಾತ್ರೆಯ ಪ್ರಮುಖ ಆಕರ್ಷಣೆಯಾದ 'ಕಿಚ್ಚು ಹಾಯುವ' ಕಾರ್ಯಕ್ರಮದಲ್ಲಿ ರೈತರು ಮತ್ತು ಭಕ್ತರು ತಮ್ಮ ಭಕ್ತಿಯ ಪರಕಾಷ್ಠೆ ಮೆರೆದರು.

21 ಎಫ್‌ಪಿಒಗಳಿಗೆ ರೂ.1.80 ಕೋಟಿ ಅನುದಾನ: ಕಡಾಡಿ

ಮೂಡಲಗಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬೆಳಗಾವಿ ಜಿಲ್ಲೆಯ ರೈತರನ್ನು ಆರ್ಥಿಕವಾಗಿ ಸದೃಢಗೊಳಿಸಲು ಬದ್ಧವಾಗಿದ್ದು, 10,000 ಎಫ್‌ಪಿಒಗಳ ರಚನೆ ಮತ್ತು ಉತ್ತೇಜನ ಯೋಜನೆಯಡಿ ಜಿಲ್ಲೆಯಲ್ಲಿ 21 ರೈತ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಮತ್ತು ಜಿಲ್ಲೆಯ 17 ಎಫ್‌ಪಿಒಗಳಿಗೆ ಒಟ್ಟು 1.80 ಕೋಟಿ ರೂ. ಈಕ್ವಿಟಿ ಗ್ರಾಂಟ್ ನೀಡಲಾಗಿದೆ. ಅಲ್ಲದೆ, 4 ಅರ್ಹ ಎಫ್‌ಪಿಒಗಳಿಗೆ 34.48 ಲಕ್ಷ ರೂ. ಸಾಲದ ಸೌಲಭ್ಯವನ್ನು ಮಂಜೂರು ಮಾಡಲಾಗಿದೆ ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ರಾಮನಾಥ್ ಠಾಕೂರ್ ಅವರು ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ತಿಳಿಸಿದ್ದಾರೆ.



ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಎಫ್‌ಪಿಒ ಗಳ ರಚನೆ ಮತ್ತು ಕಾರ್ಯವೈಖರಿ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಈ ಸಂಸ್ಥೆಗಳು ಪ್ರಸ್ತುತ ಧಾನ್ಯಗಳು, ಬೇಳೆಕಾಳುಗಳು, ಎಣ್ಣೆಕಾಳುಗಳು, ಕಬ್ಬು ಮತ್ತು ತೋಟಗಾರಿಕಾ ಬೆಳೆಗಳ ಸಂಗ್ರಹಣೆ ಹಾಗೂ ಪ್ರಾಥಮಿಕ ಸಂಸ್ಕರಣಾ ಚಟುವಟಿಕೆಗಳಲ್ಲಿ ಹಾಗೂ ಮಾರಾಟದಲ್ಲಿ ತೊಡಗಿಸಿಕೊಂಡಿವೆ. ರೈತರು ತಮ್ಮ ಬೆಳೆಗಳಿಗೆ ತಾವೇ ಬೆಲೆ ನಿಗದಿಪಡಿಸಲು ಅನುಕೂಲವಾಗುವಂತೆ ಆನ್‌ಲೈನ್ ಮೂಲಕ ದೇಶಾದ್ಯಂತ ವ್ಯಾಪಾರ ಮಾಡಲು 10 ಎಫ್‌ಪಿಒಗಳನ್ನು ಇ-ನಾಮ್ (ರಾಷ್ಟ್ರೀಯ ಕೃಷಿ ಮಾರುಕಟ್ಟೆ) ವೇದಿಕೆಗೆ ಜೋಡಿಸಲಾಗಿದೆ. ಈ ಎಫ್‌ಪಿಒ ಗಳಿಗೆ ಆನ್‌ಲೈನ್ ವ್ಯಾಪಾರದ ಬಗ್ಗೆ ವಿಶೇಷ ತರಬೇತಿ ನೀಡಲಾಗಿದೆ.

ಕೃಷಿ ಚಟುವಟಿಕೆಗಳಲ್ಲಿ ಯಾಂತ್ರೀಕರಣವನ್ನು ಹೆಚ್ಚಿಸುವುದು ಮತ್ತು ಸಣ್ಣ ಹಾಗೂ ಅತಿಸಣ್ಣ ರೈತರಿಗೆ ದುಬಾರಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯಲು ಅನುಕೂಲವಾಗುವಂತೆ ಎಫ್‌ಪಿಒಗಳ ಮೂಲಕ ಕಸ್ಟಮ್ ಹೈರಿಂಗ್ ಸೆಂಟರ್ ಸ್ಥಾಪಿಸಲು ಸರ್ಕಾರ ಉತ್ತೇಜನ ನೀಡುತ್ತಿದೆ ಮತ್ತು ಕೃಷಿಮೂಲಸೌಕರ್ಯ ನಿಧಿ ಅಡಿಯಲ್ಲಿ ಸಂಸ್ಕರಣಾ ಘಟಕಗಳು ಮತ್ತು ಚಟುವಟಿಕೆ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಸಬ್ಸಿಡಿ ಮತ್ತು ಬಡ್ಡಿರಿಯಾಯಿತಿ ಸಾಲದ ನೆರವು ನೀಡುತ್ತಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ರೈತರ ಆದಾಯ ದುಪ್ಪಟ್ಟಿಗೆ ನೆರವು

ಬೆಳಗಾವಿ ಜಿಲ್ಲೆಯ ರೈತ ಸಮುದಾಯವು ಕೇವಲ ಸಾಂಪ್ರದಾಯಿಕ ಕೃಷಿಗೆ ಸೀಮಿತವಾಗದೆ, ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು ಎನ್ನುವುದು ಕೇಂದ್ರ ಸರ್ಕಾರದ ಮೂಲ ಉದ್ದೇಶವಾಗಿದೆ. ರೈತ ಉತ್ಪಾದಕ ಸಂಸ್ಥೆಗಳ ಮೂಲಕ ರೈತರು ಒಗ್ಗೂಡಿ ಬೆಳೆ ಬೆಳೆಯುವುದರಿಂದ ಮತ್ತು ಮಾರುಕಟ್ಟೆಯಲ್ಲಿ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ವ್ಯಾಪಾರ ಮಾಡುವುದರಿಂದ ರೈತರ ಆದಾಯವನ್ನು ದುಪ್ಪಟ್ಟುಗೊಳಿಸಲು ಸಾಧ್ಯವಿದೆ. ಜಿಲ್ಲೆಯ ಪ್ರತಿಯೊಬ್ಬ ರೈತರು ಈ ಯೋಜನೆಗಳ ಲಾಭ ಪಡೆದು ಆರ್ಥಿಕ ಪ್ರಗತಿ ಸಾಧಿಸಬೇಕೆಂದು ಸಚಿವರು ಮಾಹಿತಿ ನೀಡಿದ್ದಾರೆಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿಗೆ ಒತ್ತಾಯ

ಸವದತ್ತಿ: ಶ್ರೀರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಹಾಗೂ ಅಲ್ಲಿನ ಸಿಬ್ಬಂದಿಗಳ ಹಿತರಕ್ಷಣೆಯ ಕುರಿತು ವಿಧಾನಸಭೆಯಲ್ಲಿ ಸರ್ಕಾರದ ಗಮನ ಸೆಳೆದು ಸವಿಸ್ತಾರವಾಗಿ ಶಾಸಕ ವಿಶ್ವಾಸ ವೈದ್ಯ ಚರ್ಚಿಸಿದರು.

ಮುಜರಾಯಿ ಇಲಾಖೆಯ ವ್ಯಾಪ್ತಿಯ ದೇವಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ಮರಣ ಹೊಂದಿದಲ್ಲಿ, ಅವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡುವ ಪ್ರಕ್ರಿಯೆ ಸ್ಥಗಿತಗೊಂಡಿರುವ ಬಗ್ಗೆ ಸಚಿವರ ಸ್ಪಷ್ಟನೆ ಕೋರಿದರು.



ಬೆಂಗಳೂರಿನಲ್ಲಿ ನಡೆಯುತ್ತಿರುವ ವಿಧಾನಸಭಾ ಬಜೆಟ್ ಅಧಿವೇಶನದಲ್ಲಿ ಯಲ್ಲಮ್ಮ ಕ್ಷೇತ್ರದ ಪರವಾಗಿ ಧಾರ್ಮಿಕ ದತ್ತಿ ಇಲಾಖೆಯ (ಮುಜರಾಯಿ) ಸಿಬ್ಬಂದಿ ಕುಟುಂಬದ ಹಿತದೃಷ್ಟಿಯಿಂದ ಹಾಗೂ ವಿಶೇಷವಾಗಿ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ನೇಮಕಾತಿ ಬಗ್ಗೆ ಸಾರಿಗೆ ಹಾಗೂ ಮುಜರಾಯಿ ಸಚಿವರಿಗೆ ಶಾಸಕ ವಿಶ್ವಾಸ ವೈದ್ಯ ರವರು ಪ್ರಮುಖ ಪ್ರಶ್ನೆಗಳನ್ನು ಮಂಡಿಸಿ, ಚರ್ಚಿಸಿದರು

ಇಲಾಖೆಯ ಕಾಯ್ದೆಯ ಅಡಿಯಲ್ಲಿ ಇಂತಹ ನೇಮಕಾತಿಗೆ ಇರುವ ಅವಕಾಶಗಳ ಬಗ್ಗೆ ಚರ್ಚಿಸಿ, ಸಿಬ್ಬಂದಿಗಳ ಕುಟುಂಬಕ್ಕೆ ಶೀಘ್ರವಾಗಿ ನ್ಯಾಯ ಒದಗಿಸುವಂತೆ ಒತ್ತಾಯಿಸಲಾಯಿತು. ದೇವಸ್ಥಾನಗಳ ಸೇವೆಯಲ್ಲಿರುವ ಸಿಬ್ಬಂದಿಗಳ ಮತ್ತು ಅವರ ಕುಟುಂಬದ ಹಿತರಕ್ಷಣೆ ನಮ್ಮ ಆದ್ಯತೆಯಾಗಿದೆ. ಈ ಕುರಿತು ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ಸಿಗುವ ಭರವಸೆ ಇದೆ ಎಂದು ತಿಳಿಸಿದರು.

ಅದ್ದೂರಿ ಜಾತ್ರಾ ಮಹೋತ್ಸವ, ಪಲ್ಲಕ್ಕಿ ಉತ್ಸವ



ಕಕಮರಿ: ಗ್ರಾಮದ ಶ್ರೀ ವೀರಭದ್ರೇಶ್ವರ ಮತ್ತು ಕಾಳಮ್ಮಾದೇವಿ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿತು. ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ಕಾರ್ಯಕ್ರಮದಲ್ಲಿ ಪ್ರಶಾಂತ ವಾಲಿ, ಗಿರಮಲ್ಲ ಬಾಳಿಕಾಯಿ, ಬೀಮಪ್ಪ ಸಿಂದೂರ, ಅಪ್ಪಾಸಾಬ ಬಡಿಗೇರ, ಅಶೋಕ ಬಡಿಗೇರ, ಮೌನೇಶ್ವರ ಬಡಿಗೇರ, ಈರಪ್ಪ ಬಡಿಗೇರ, ಅಶೋಕ ಕಂಬಾರ, ಮೌನೇಶ್ವರ ಪತ್ತಾರ, ರಮೇಶ ಅಡಹಳ್ಳಿ, ಶಿವರುದ್ರ ವಾಲಿ, ಮರವಂತರರು ಭಾಗವಹಿಸಿದ್ದರು.

ಸೌಮ್ಯಶ್ರೀಗೆ ಪಿಎಚ್‌ಡಿ ಪದವಿ



ಬೆಳಗಾವಿ: ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಸೌಮ್ಯಶ್ರೀ ಪೂಜಾರ ಅವರು ಭೂಗೋಳಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ ಜಿಯೋಗ್ರಾಫಿಕಲ್ ಪರ್ಸ್ಪೆಕ್ಟಿವ್ ಆಫ್ ಇಂಟಿಗ್ರೇಟೆಡ್ ರೂರಲ್ ಏರಿಯಾ ಡೆವಲಪಮೆಂಟ್ ಇನ್ ಬೆಳಗಾವಿ ಡಿಸ್ಟ್ರಿಕ್ಸ್ ಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಇವರು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಇಟಗಿ ಗ್ರಾಮದ ನಿವಾಸಿಯಾಗಿದ್ದಾರೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಂಜುನಾಥ ಎನ್. ಕೆ. ಅವರು ಮಾರ್ಗದರ್ಶನ ಮಾಡಿದರು.

ಇಂಧನ ಅಭಾವ: ಸಾರ್ವಜನಿಕರ ಆಕ್ರೋಶ



ಸವದತ್ತಿ: ನಗರದಲ್ಲಿ ಮಂಗಳವಾರ ಮಧ್ಯಾಹ್ನ ವೇಳೆಗೆ ಪೆಟ್ರೋಲ್ ಕೊರತೆ ಎದುರಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಪೆಟ್ರೋಲ್ ಬಂಕ್‌ಗಳ ಎದುರು ವಾಹನಗಳ ಸಾಲು ಕಿಲೋಮೀಟರ್‌ಗಳವರೆಗೆ ಹಬ್ಬಿದ್ದು, ತೊಂದರೆ ಅನುಭವಿಸುವಂತಾಯಿತು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಪೆಟ್ರೋಲ್, ಡೀಸೆಲ್ ಅಭಾವ ಇಲ್ಲವೆಂದು ಬಂಕ್ ಮಾಲೀಕರು ತಿಳಿಸಿದರು ಜನ ಮುಗಿಬೀಳುತ್ತಿದ್ದಾರೆ. ಪೆಟ್ರೋಲ್ ಕೃತಕ ಅಭಾವ ಸೃಷ್ಟಿಸುತ್ತಿರುವವರ ವಿರುದ್ಧ ತನಿಖೆ ನಡೆಸಬೇಕು.ತುರ್ತು ಸೇವೆಗಳಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದರು.

ಮಕ್ಕಳಿಗೆ ಮೊಬೈಲ್ ಬದಲಿಗೆ ಸಂಸ್ಕಾರ ಕೊಡಿ: ಭಜಂತ್ರಿ

ಯಮಕನಮರಡಿ: ಆಧುನಿಕ ಯುಗದಲ್ಲಿ ಮಠ ಮಾನ್ಯಗಳು ಶಾಲಾ ಮಕ್ಕಳಿಗೆ ಸಂಸ್ಕಾರ ನಿಡುವುದರ ಜೊತೆಗೆ ಶಿಕ್ಷಣ ವೃದ್ಧಿಗಾಗಿ ಶಿಷ್ಯವೇತನ ನಿಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ರವಿ ಭಜಂತ್ರಿ ಹೇಳಿದರು.

ಯಮಕನಮರಡಿ ಹತ್ತರಗಿ ಹರಿಮಂದಿರದಲ್ಲಿ ಆಯೋಜಿಸಲಾಗಿದ್ದ ಪ. ಪೂ ಏಕನಾಥ ದಾದಾ ಮಹಾರಾಜರ 23 ನೇ ವರ್ಷದ ಪುಣ್ಯಸ್ಮರಣೋತ್ಸವಸಮಾರಂಭದಲ್ಲಿ ಮಾತನಾಡಿದ ಅವರು,



ಡಾ. ಆನಂದ ಮಹಾರಾಜರು ಬಡ ಮಕ್ಕಳ ಉಜ್ವಲ ಭವಿಷ್ಯವನ್ನು ರೂಪಿಸಲು ಸುಮಾರು 22 ವರ್ಷಗಳ ಕಾಲ ಬಡ ವಿದ್ಯಾರ್ಥಿಗೆ ಶಿಷ್ಯವೇತನ ನೀಡುವ ಕಾರ್ಯ ನಾಡಿನ ಉದ್ದಕ್ಕೂ ಮೆಚ್ಚುವಂತದಾಗಿದೆ ಎಂದು ಹೇಳಿದರು.

ಸ್ಥಳೀಯ ಸರ್ಕಾರಿ ಪ ಪೂ ಮಹಾವಿದ್ಯಾಲಯದ ಬಿ.ಬಿ. ಕೊಡ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿಗಳಿಂದ ಭಗವದ್ಗೀತಾ ಪಾರಾಯಣ ಮಾಡಲಾಯಿತು.

ರಾಜ್ಯ ಮಟ್ಟದ ಕ್ರೀಡಾ ವಿಭಾಗದಲ್ಲಿ ಆಯ್ಕೆಯಾದ ವಿದ್ಯಾರ್ಥಿನಿಯನ್ನು ಸನ್ಮಾನಿಸಲಾಯಿತು. ಸಾನ್ನಿಧ್ಯವನ್ನು ಶ್ರೀ ಮಠದ ಪೀಠಾಧ್ಯಕ್ಷರಾದ ಡಾ. ಆನಂದ ಮಹಾರಾಜ ಗೋಸಾವಿ ಅವರು ಆಶೀರ್ವಚನ ನೀಡಿದರು.

ಸಿಆರ್‌ಸಿ ಸದಾನಂದ ಭಿಮಗೋಳ, ಕನ್ನಡ ರಕ್ಷಣಾ ಜಿಲ್ಲಾ ಉಪಾಧ್ಯಕ್ಷ ರಾಜು ನಾಶಿಪುಡಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ರಾಮಚಂದ್ರ ಕುಲಕರ್ಣಿ ವಹಿಸಿ ಮಾತನಾಡಿದರು. ಉಪನ್ಯಾಸಕ ಎಸ್. ಆರ್. ತಬರಿ ನಿರೂಪಿಸಿ ವಂದಿಸಿದರು.

ಡಾ.ಸಮೀಕ್ಷಾ ರೆಡ್ಡಿಯವರಿಗೆ ಶ್ರದ್ಧಾಂಜಲಿ



ಗೋಕಾಕ: ಶಿವಮೊಗ್ಗದ ಮೃಗಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಸಮೀಕ್ಷಾ ರೆಡ್ಡಿ ನೀರಾನೆಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ನೀರಾನೆ ದಾಳಿಯಿಂದ ಮೃತಪಟ್ಟ ಹಿನ್ನಲೆ ಗೋಕಾಕ ಹಾಗೂ ಮೂಡಲಗಿ ತಾಲೂಕಿನ ಪಶು ವೈದ್ಯಕೀಯ ಇಲಾಖೆಯಿಂದ ನಗರದ ಪಶು ಆಸ್ಪತ್ರೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮುಖ್ಯ ಪಶು ವೈದ್ಯಾಧಿಕಾರಿ ಡಾ.ಮೋಹನ ಕಮತ ಅವರು ಡಾ.ಸಮೀಕ್ಷಾ ರೆಡ್ಡಿ ಸಾವಿನ ಬಗ್ಗೆ ಉನ್ನತ ತನಿಖೆಯಾಗಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಗೋಕಾಕ ಹಾಗು ಮೂಡಲಗಿ ತಾಲೂಕಿನ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

ಬಸವೇಶ್ವರ ಜಾತ್ರೆ: ಗಮನ ಸೆಳೆದ ಕುದುರೆ ಓಟ ಸ್ಪರ್ಧೆ

ನೇರಲಿ: ಗ್ರಾಮದಲ್ಲಿ ಪ್ರತಿ ವರ್ಷ ಯುಗಾದಿಯಿಂದ ಪ್ರಾರಂಭ ವಾಗುವ ಐದು ದಿನಗಳ ಕಾಲ ನಡೆಯುವ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮದಲ್ಲಿ ಕುದುರೆ ಓಟ (ಶರತು) ಸ್ಪರ್ಧೆ ಮಂಗಳವಾರ ಅದ್ದೂರಿಯಾಗಿ ಹಾಗೂ ಸಂಭ್ರಮದಿಂದ ನಡೆಯಿತು. ಈ ಸ್ಪರ್ಧೆಯಲ್ಲಿ ಸುತ್ತಮುತ್ತಲಿನ ಹಲವು ಗ್ರಾಮಗಳಿಂದ ಮತ್ತು ಹತ್ತಿರದ ಮಹಾರಾಷ್ಟ್ರ ಗಳಿಂದ ಕುದುರೆ ಮಾಲೀಕರು ಭಾಗವಹಿಸಿದ್ದರು.

ಬೆಳಿಗ್ಗೆಯಿಂದಲೇ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ನೂರಾರು ಜನರು ಸೇರಿ ಕುದುರೆ ಓಟವನ್ನು ಕಣ್ತುಂಬಿಕೊಂಡರು. ವಿವಿಧ ಜಾತಿಯ ಕುದುರೆಗಳು ತಮ್ಮ ವೇಗ ಹಾಗೂ ಚಾತುರ್ಯವನ್ನು ಪ್ರದರ್ಶಿಸಿದವು. ಸ್ಪರ್ಧೆಯಲ್ಲಿ ಭಾಗವಹಿಸಿದ ಕುದುರೆಗಳು ರೋಚಕ ಪೈಪೋಟಿ ನೀಡಿದ್ದು, ಪ್ರೇಕ್ಷಕರಲ್ಲಿ ಉತ್ಸಾಹ ಹೆಚ್ಚಿಸಿತು.



ಕಾರ್ಯಕ್ರಮದಲ್ಲಿ ಗ್ರಾಮ ಹಿರಿಯರು, ಸಂಘಟಕರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಈ ರೀತಿಯ ಕ್ರೀಡಾ ಕಾರ್ಯಕ್ರಮಗಳು ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸುವುದರೊಂದಿಗೆ ಯುವಜನರಲ್ಲಿ ಉತ್ಸಾಹ ಹೆಚ್ಚಿಸುತ್ತವೆ ಎಂದು ಗಣ್ಯರು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಜಾತ್ರಾ ಕಮಿಟಿ,ವಿವಿಧ ಸ್ಪರ್ಧೆ ಗಳ ಕಮಿಟಿ, ರಸಮಂಜರಿ ಕಾರ್ಯಕ್ರಮಗಳ ಕಮಿಟಿ ಸೇರಿದಂತೆ ನೇರಲಿ ಗ್ರಾಮಸ್ಥರು ಭಕ್ತಾದಿಗಳು ಉಪಸ್ಥಿತರಿದ್ದರು.

ಬಹುಮಾನ ವಿತರಣೆ

ಸ್ಪರ್ಧೆಯ ಅಂತ್ಯದಲ್ಲಿ ವಿಜೇತರಾಗಿ ಹೊರಹೊಮ್ಮಿದ ಜೋಡು ಕುದುರೆ ಓಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಾಳೇಶ ಮೋಲಮಟ್ಟಿ ಸಿಂಗಲ್ ಕುದುರೆ ಗಾಡಿ ಸ್ಪರ್ಧೆ ಯಲ್ಲಿ ಪ್ರಥಮ ಬಹುಮಾನ ಬಾಬಾ ಗದ್ದೇಶವಾಲೆ, ಕುದುರೆ ಮೇಲೆ ಸವಾರಿ ಸ್ಪರ್ಧೆಯಲ್ಲಿ ಬೀರಸಿದ್ದೇಶ್ವರ ಕುರಣಿ ಇವರಿಗೆ ನಗದು ಬಹುಮಾನ ಹಾಗೂ ಟ್ರೋಫಿಗಳನ್ನು ವಿತರಿಸಲಾಯಿತು.

ಕಾನೂನು ಮಾಹಿತಿ ಪಡೆದು ಅನುಸರಿಸಿ

ಯರಗಟ್ಟಿ: ವಿದ್ಯಾರ್ಥಿ ದೆಸೆಯಿಂದಲೇ ಸಮಾಜದಲ್ಲಿ ಶಾಂತಿ ನೆಲೆಸಲು ಅಗತ್ಯವಾದ ಕಾನೂನುಗಳ ಮಾಹಿತಿಯನ್ನು ಪಡೆದು ಸ್ವತಃ ಅನುಸರಿಸುವ ಮೂಲಕ ಇತರರಿಗೆ ಮಾದರಿಯಾಗಿ ಕಾನೂನು ವ್ಯವಸ್ಥೆ ಕಾಪಾಡುವಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದು ಎಂದು ರಾಮದುರ್ಗ ಪೊಲೀಸ್ ಠಾಣೆಯ ಮಹಿಳಾ ಪೊಲೀಸ್ ಮುಖ್ಯಪೇದೆ ಎಲ್.ಎಂ. ಕುರಬೇಟ ಹೇಳಿದರು.

ಪಟ್ಟಣದ ಶ್ರೀ ಸಿಎಂ ಮಾಮನಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೊಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಹಯೋಗದಲ್ಲಿ ರೂಪಿಸಿರುವ ಅಕ್ಕ ಪಡೆಯ ಕಾರ್ಯ ಯೋಜನೆಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಸಮಾಜದಲ್ಲಿ ಅಪರಾಧಗಳ ಸಂಖ್ಯೆ ಕಡಿಮೆ ಮಾಡುವಲ್ಲಿ ವಿದ್ಯಾರ್ಥಿಗಳು ಜವಾಬ್ದಾರಿಯುತ ವರ್ತನೆಯನ್ನು ನಿರ್ವಹಿಸಬೇಕಾದ ಅಗತ್ಯ ಇದೆ ಎಂದು ಪ್ರತಿಪಾದಿಸಿದರು.



> ಸಮಾಜದಲ್ಲಿ ಮೌಲ್ಯಗಳು ಮರೆಯಾಗುತ್ತಿರುವುದರಿಂದ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸದೊಂದಿಗೆ ಮೌಲ್ಯದ ಜೀವನವನ್ನು ಅಳವಡಿಸಿಕೊಳ್ಳಬೇಕು.
> ■ ಎಸ್.ವಿ. ಹೊಸೂರ, ಸವದತ್ತಿ ಪೊಲೀಸ್ ಠಾಣೆಯ ಮಹಿಳಾ ಮುಖ್ಯಪೇದೆ

ಕಾಲೇಜಿನ ಪ್ರಾಂಶುಪಾಲರಾದ ಆರ್.ಎಸ್. ಮರಿಗೌಡರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುರುಗೋಡ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ನಿರೀಕ್ಷಕರಾದ ವಿಜಯಾ ಸ್ವಾಮಿ, ಡಾ. ಸುನಂದಾ ಮಾದರ, ವಿಜಯಲಕ್ಷ್ಮಿ ಬದ್ದಿ, ಸಿದ್ದಲಿಂಗಪ್ಪ ಗಾಳಿ, ಶಂಕರ ಲಗಳಿ, ಡಾ. ರಾಜಶೇಖರ ಬಿರಾದಾರ ಸೇರಿದಂತೆ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ರಾಧಿಕಾ ಶಿದ್ದನ್ನವರ ನಿರೂಪಿಸಿದರು, ಡಾ. ಸುನೀತಾ ಸೊಪ್ಪಡ್ಲ ವಂದಿಸಿದರು.

ಕುರಣೆವಾಡಿ ಜಾತ್ರೆ ಸಂಪನ್ನ

ಯಮಕನಮರಡಿ: ಸಮೀಪದ ಕುರಣೆವಾಡಿ ಗ್ರಾಮದ 5 ದೇವಸ್ಥಾನಗಳ ಜಾತ್ರೆಯು 5 ದಿನಗಳ ವರೆಗೆ ವಿಜೃಂಭಣೆಯಿಂದ ನಡೆಯಿತು. ಯಮಕನಮರಡಿ ಶೂನ್ಯ ಸಂಪಾದನಾ ಹುಣಸಿಕೊಳ್ಳ ಮಠದ ಉತ್ತರಾಧಿಕಾರಿಗಳಾದ ಸಿದ್ದಬಸವ ದೇವರು ಸಾನ್ನಿಧ್ಯ ವಹಿಸಿದ್ದರು.

ಮಾಜಿ ಸಂಸದ ರಮೇಶ ಕತ್ತಿ ಮಾತನಾಡಿ, ಮಕ್ಕಳಿಗೆ ಸಂಸ್ಕಾರ ನೀಡಿ, ಅವರ ಕೈಯಲ್ಲಿ ಮೊಬೈಲ್‌ನ್ನು ಕೊಡಬೇಡಿ ಅವರಿಗೆ ಲಿಂಗದಿಕ್ಷೆ ಕೊಡಿಸಿ ಲಿಂಗಪೂಜೆ ಮಾಡುವುದನ್ನು ಕಲಿಸಿಕೊಡಿ ಎಂದರು.

ಈ ಸಂದರ್ಭದಲ್ಲಿ ರೈತ ಸಂಘದ ಗೌರವಾಧ್ಯಕ್ಷರಾದ ಶಶಿಕಾಂತ ಗುರೂಜಿ, ತಾಲೂಕಾ ರೈತ ಸಂಘದ ಅಧ್ಯಕ್ಷ ಸಂಜು ಹಾವನ್ನವರ, ಕೆಐಬಿ ನಿರ್ದೇಶಕ ಪ್ರವೀಣ ನಿಲಜಗಿ, ಬಿಜೆಪಿ ಮುಖಂಡ ಮಾರುತಿ ಅಷ್ಟಗಿ ನಿರ್ವಾಣಿ, ಜೋಶಿ ಆನಂದ ಖೋತ ಮಹಾದೇವ ಬಡಿಗೇರ ಇದ್ದರು.

5 ದಿನಗಳ ಕಾಲ ಮಹಾಪ್ರಸಾದ ಮನರಂಜನೆ ಭಜನಾ ಕಾರ್ಯಕ್ರಮಗಳು ಹಾಗೂ ದಾನಿಗಳಿಗೆ ಸನ್ಮಾನ ಸಮಾರಂಭ ಯಶಸ್ವಿಯಾಗಿ ಜರುಗಿದವು.



ಶರಣ ಸಂಸ್ಕೃತಿ ಉತ್ಸವ-2026ಕ್ಕೆ ಚಾಲನೆ

ತೆಲಸಂಗ: ಪ್ರವಚನವೆಂದರೆ ಕೇವಲ ಕಿವಿಗೆ ಇಂಪಾದ ಮಾತಲ್ಲ, ಅದು ನಮ್ಮ ಜೀವನದ ಕಹಿಯನ್ನು ಹೋಗಲಾಡಿಸಿ ಸವಿಯನ್ನು ತುಂಬುವ ಸಂಸ್ಕಾರದ ಗಂಗಾ ಸ್ನಾನ ಎಂದು ಹಿರೇಮಠದ ವೀರೇಶ್ವರ ದೇವರು ಹೇಳಿದರು.

ಗ್ರಾಮದ ಶ್ರೀ ಸಿದ್ದರಾಮೇಶ್ವರ ಮಠದ ಆವರಣದಲ್ಲಿ ವಿಶ್ವಗುರು ಬಸವಣ್ಣನವರ ತತ್ವದಡಿ ಹಮ್ಮಿಕೊಂಡಿರುವ ಶರಣ ಸಂಸ್ಕೃತಿ ಉತ್ಸವ-2026 ನಿಮಿತ್ತ ಹುಬ್ಬಳ್ಳಿ ಶ್ರೀ ಸಿದ್ಧಾರೂಢರ ಜೀವನ ದರ್ಶನ ಪ್ರವಚನ ಕಾರ್ಯಕ್ರಮಕ್ಕೆ ಸೋಮವಾರ ಸಂಜೆ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿ, ಇಂದಿನಿಂದ ಏಪ್ರಿಲ್ 2 ರವರೆಗೆ ಪ್ರತಿದಿನ ಸಂಜೆ 6.30 ಕ್ಕೆ ಈ ಪ್ರವಚನ ಮಾಲೆ ನಡೆಯಲಿದ್ದು, ಶರಣ ಸಂಸ್ಕೃತಿಯು ಅದು ಮನುಕುಲದ ಬದುಕಿನ ದಾರಿ. ಶ್ರೀ ಸಿದ್ಧಾರೂಢರ ಜೀವನ ಚರಿತ್ರೆಯು ನಮಗೆ ಅಧ್ಯಾತ್ಮ ಮತ್ತು ಸಮಾನತೆಯ ಪಾಠಗಳನ್ನು ಕಲಿಸುತ್ತದೆ ಎಂದು ತಿಳಿಸಿದರು.



ವಿರಕ್ತ ಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ಜ್ಞಾನಕ್ಕಿಂತ ಪವಿತ್ರವಾದದ್ದು ಈ ಲೋಕದಲ್ಲಿ ಬೇರೊಂದಿಲ್ಲ. ಮನುಷ್ಯನಿಗೆ ಅನ್ನದ ಹಸಿವಿಗಿಂತ ಅರಿವಿನ ಹಸಿವು ಹೆಚ್ಚಿರಬೇಕು. ಹೊಟ್ಟೆಗೆ ಹಾಕುವ ಅನ್ನ ದೇಹವನ್ನು ಉಳಿಸಿದರೆ, ಕಿವಿಗೆ ಬೀಳುವ ಜ್ಞಾನವು ಆತ್ಮವನ್ನು ಬೆಳಗುತ್ತದೆ ಎಂದರು.

ಕುಂಬಾರ ಗುರುಪೀಠದ ಬಸವಗುಂಡಯ್ಯಾ ಸ್ವಾಮೀಜಿ ಮಾತನಾಡಿ, ಮನೆಯೇ ಮೊದಲ ಪಾಠಶಾಲೆ ಎಂಬಂತೆ, ಇಲ್ಲಿ ಪಡೆಯುವ ಸಂಸ್ಕಾರ ನಿಮ್ಮ ಮನೆ ಮನಗಳಲ್ಲಿ ಅರಳಬೇಕು. ಈ ಪ್ರವಚನ ಕಾರ್ಯಕ್ರಮವು ನಮ್ಮಲ್ಲಿರುವ ಅಹಂಕಾರವನ್ನು ಕಳೆದು, ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ. ತಂದೆ-ತಾಯಿಗಳ ಸೇವೆ, ಗುರು ಹಿರಿಯರ ಗೌರವ ಮತ್ತು ಸಮಾಜದ ಏಳಿಗೆಯೇ ನಿಜವಾದ ಭಕ್ತಿ ಎಂದರು.

ಕಿರುಸುದ್ದಿ

ಮಾ.27ರಂದು ಪುಸ್ತಕ ಬಿಡುಗಡೆ

◆**ಅಥಣಿ:** ಸಾಹಿತ್ಯ ಸಾಂಸ್ಕೃತಿಕ ಸಂಘ, ಅಥಣಿ, ಕ್ರಿಯೇಟಿವ ಪುಸ್ತಕ ಮನೆ ಕಾರ್ಕಳ, ಪ್ರಾರ್ಥನಾ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯ ಅಥಣಿ ಇವರ ಸಹಯೋಗದಲ್ಲಿ ಪಟ್ಟಣದ ಹಿರಿಯ ಸಾಹಿತಿ, ಕಾದಂಬರಿಕಾರ ಡಾ.ಬಾಳಾಸಾಹೇಬ ಲೋಕಾಪುರ ಅವರು ರಚಿಸಿದ ಎರಡು ಕಾದಂಬರಿ ಪುಸ್ತಕಗಳ ಬಿಡುಗಡೆ ಸಮಾರಂಭವನ್ನು ಮಾ.27ರಂದು ಸಂಜೆ 4ಗಂಟೆಗೆ ಇಲ್ಲಿನ ಪ್ರಾರ್ಥನಾ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಸಾಂಸ್ಕೃತಿಕ ಚಿಂತಕ ಅರವಿಂದರಾವ ದೇಶಪಾಂಡೆ ಪುಸ್ತಕಗಳನ್ನ ಲೋಕಾರ್ಪಣೆ ಮಾಡಲಿದ್ದಾರೆ. ವಿಶೇಷ ಆಮಂತ್ರಿತರಾಗಿ ಹಂಪಿ ವಿಶ್ವವಿದ್ಯಾಲಯದ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ವೆಂಕಟಗಿರಿ ದಳವಾಯಿ ದೇಹಿ ಎಂಬ ಕಾದಂಬರಿ ಪುಸ್ತಕವನ್ನು ಪರಿಚಯಿಸಲಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವೀರೇಶ ಬಡಿಗೇರ ಕೃಷ್ಣೆ ಹರಿದಳು ಎಂಬ ಕಾದಂಬರಿ ಪುಸ್ತಕವನ್ನು ಪರಿಚಯಿಸಲಿದ್ದಾರೆ. ಅತಿಥಿಗಳಾಗಿ ಕ್ರಿಯೇಟಿವ್ ಪುಸ್ತಕ ಮನೆಯ ಸಂಸ್ಥಾಪಕ ಅಶ್ವತ್ ಎಸ್ ಎಲ್, ಕ್ರಿಯೇಟಿವ್ ಪಿಯು ಕಾಲೇಜಿನ ಉಪನ್ಯಾಸಕ ರಾಘವೇಂದ್ರ ಬಿ ರಾವ್ ಆಗಮಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ನಿಸರ್ಗ ಎಜುಕೇಶನ್ ಅಕಾಡೆಮಿಯ ಕಾರ್ಯಾಧ್ಯಕ್ಷ ಪ್ರೊ. ಎಸ್ ಬಿ ಗೌಡರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಾಹಿತ್ಯ ಸಾಟಸ್ಕೃತಿಕ ಸಂಘದ ಅಧ್ಯಕ್ಷ ನೀಲೇಶ ಝುರೆ ಪ್ರಕಟಣೆ ತಿಳಿಸಿದ್ದಾರೆ.

ಪೆಟ್ರೋಲ್ ಖರೀದಿಗೆ ಮುಗಿಬಿದ್ದ ಜನ

◆**ಚನ್ನಮ್ಮನ ಕಿತ್ತೂರು:** ಪೆಟ್ರೋಲ್, ಡಿಸೇಲ್ ಸಿಗುವುದಿಲ್ಲ ಎಂಬ ವದಂತಿ ನಂಬಿದಿ ಜನರು ಪಂಪಗಳಿಗೆ ಮುಗಿದು ಬಿದ್ದರು.ಇರಾನ್, ಇಸ್ರೇಲ್ ಮತ್ತು ಅಮೇರಿಕಾ ದೇಶಗಳ ನಡುವೆ ಯುದ್ಧ ನಡೆದಿದ್ದರ ಹಿನ್ನಲೆಯಲ್ಲಿ ಡಿಸೇಲ್, ಪೆಟ್ರೋಲ್‌ನ ಕೊರತೆಯಾಗಬಹುದೆಂಬ ಅನುಮಾನದೊಂದಿಗೆ ಸಾರ್ವಜನಿಕರು ಹಪ ಹಪಿಸಿ ಎಲ್ಲ ಜನರು ತಮ್ಮ ವಾಹನಗಳನ್ನು ಮತ್ತು ಪ್ಲಾಸ್ಟಿಕ್ ಡಬ್ಬಿಗಳ ಮೂಲಕ ಪಂಪ್‌ಗಳಲ್ಲಿ ಸರದಿ ಸಾಲಿನಲ್ಲಿ ನಿಂತು ಇಂಧನವನ್ನು ತುಂಬಿಸಿಕೊಳ್ಳುತ್ತಿದ್ದಾರೆ. ಎಲ್ಲ ಪಂಪಗಳಲ್ಲಿ ನೋಡಿದರೂ ಅಲ್ಲಿ ಜನಜಂಗುಳಿಯೇ ಕಾಣುತಿತ್ತು. ಸದ್ಯ ಎಲ್ಲ ಪಂಗಳಲ್ಲಿಯೂ ಇಂಧನದ ಕೊರತೆ ಇಲ್ಲ ಸ್ಟಾಕ್ ಇದೆ. ಆದರೆ ಸಾಮಾನ್ಯವಾಗಿ ಖಾಲಿಯಾಗುವ ರೀತಿಯೇ ಖಾಲಿಯಾಗುತ್ತದೆ ಮತ್ತೆ ಬರುತ್ತಿದೆ ಅದಕ್ಕೆ ಏನು ತೊಂದರೆಯಿಲ್ಲ ಎನ್ನುತ್ತಿದ್ದಾರೆ ಪಂಪಗಳ ಮಾಲಿಕರು ಆದರೆ, ಸ್ಟಾಕ್ ಮಾಡಿಕೊಳ್ಳಲು ಗ್ರಾಹಕರು ಹೆಚ್ಚಿಗೆ ಖರೀದಿಸುತ್ತಿದ್ದಾರೆ ಎನ್ನುತ್ತಿದ್ದಾರೆ.

ಶಿಕ್ಷಣವೇ ಅಲೆಮಾರಿಗಳ ಸಂಜೀವಿನಿ

◆**ಬೆಳಗಾವಿ :** ಆಸ್ತಿ ಮತ್ತು ಅಡ್ರೆಸ್ಸು ಇಲ್ಲದ ಅಲೆಮಾರಿಗಳಿಗೆ ಶಿಕ್ಷಣವೊಂದೇ ಸಂಜೀವಿನಿ. ಅಪಾರ ಕಲಾಸಂಪತ್ತಿರುವ ಅಲೆಮಾರಿಗಳು ನಿಜವಾದ ಅಂಬೇಡ್ಕರ್ ವಾರಸುದಾರರು ಎಂದು ಬಂಡಾಯ ಸಾಹಿತಿ ಯಲ್ಲಪ್ಪ ಹಿಮ್ಮಡಿ ಹೇಳಿದರು. ತಾಲೂಕಿನ ಬೆನ್ನಾಳಿ ಗ್ರಾಮದಲ್ಲಿ ಅಲೆಮಾರಿ ಚೆನ್ನದಾಸರ ಸಮುದಾಯವು 'ನೌಕರರ ಚಿತ್ತ ಅಲೆಮಾರಿ ಸಮುದಾಯದತ್ತ' ಅಭಿಯಾನದಲ್ಲಿ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ ಉದ್ಯೋಗ ಮಾರ್ಗದರ್ಶನ ಮತ್ತು ಸಮಾಲೋಚನಾ ಕಾರ್ಯಕ್ರಮ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಶ್ರೀಮಂತರಿಗೆ, ಭೂಮಾಲೀಕರಿಗೆ ಒಂದೇ ವೃತ್ತಿಯಾದರೆ ಅಪಾರ ಕೌಶಲ್ಯ ಇರುವ ಅಲೆಮಾರಿಗಳಿಗೆ ನೂರಾರು ವೃತ್ತಿಗಳಿವೆ. ಆದರೆ ಅವರಿಗೆ ಶಿಕ್ಷಣದ ವಂಚನೆಯಿಂದ ಅವಕಾಶಗಳು ಕೈ ತಪ್ಪುತ್ತಿವೆ. ಅದಕ್ಕಾಗಿ ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣ ಅಲೆಮಾರಿಗಳ ಮೊದಲ ಆದ್ಯತೆಯಾಗಬೇಕು ಎಂದು ಕರೆ ನೀಡಿದರು.ಇದೇ ವೇಳೆ ನೌಕರರ ಒಕ್ಕೂಟದ ಉಪಾಧ್ಯಕ್ಷರಾದ ಲಕ್ಷ್ಮಣ ಅಕ್ಕೆನ್ನವರ, ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಮಾರುತಿ ಅಕ್ಕೆನ್ನರ್ವ, ಶಿವಾನಂದ ಹುಲ್ಲೆನ್ನವರ, ಮಹೇಂದ್ರ ಗಾಣಿಗೇರ, ತಮ್ಮಾಣಿ ಗಾಣಿಗೇರ ವಿವಿಧ ವಿಷಯಗಳ ಕುರಿತು ಮಾತನಾಡಿದರು.ಈ ವೇಳೆ ಉಪಾಧ್ಯಕ್ಷರಾದ ನಾಗೇಶ ಕಾಮಶೆಟ್ಟಿ, ಕಾನೂನು ಸಲಹೆಗಾರರಾದ ಲಕ್ಷ್ಮಣ ಅಕ್ಕಣ್ಣವರ, ವಸಂತ ಅಕ್ಕೆನ್ನವರ, ಸದಸ್ಯರಾದ ಸದಾಶಿವ ಜಾಗನೂರ, ಮುತ್ತಪ್ಪ ಗಾಣಿಗೇರ, ಸಂತೋಷ ಅಕ್ಕೆನ್ನವರ, ಬಸವರಾಜ ಹುಲ್ಲೆನ್ನವರ, ಸತ್ಯಪ್ಪ ಗೊಳಸಂಗಿ, ತಮ್ಮಾಣಿ ತುಳಸಿಗೇರಿ, ಪರಶು ಮುರೆನ್ನವರ ಉಪಸ್ಥಿತರಿದ್ದರು.

ಅಪರಿಚಿತ ವ್ಯಕ್ತಿ ಸಾವು

◆**ಬೆಳಗಾವಿ :** ನಗರದ ಹಳೆ ಪಿ.ಬಿ ರೋಡ ಜಿಜಾಮಾತಾ ಸರ್ಕಲ ಹತ್ತಿರ ಇರುವ ಕಾರ್ಪೋರೇಷನ್ ಕಾಂಪ್ಲೇಕ್ಸ್ ಅಂಗಡಿಯ ಕಟ್ಟೆಯ ಮೇಲೆ ಮಾರ್ಚ 9 ರಂದು ರಾತ್ರಿ 11.30 ಗಂಟೆಗೆ ಅಪರಿಚಿತ ವ್ಯಕ್ತಿಯೋರ್ವ ಮೃತಪಟ್ಟಿದ್ದು, ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಹೆಚ್ಚಿನ ಮಾಹಿತಿಗಾಗಿ ಮಾರ್ಕೆಟ್ ಪೊಲೀಸ ಠಾಣೆ, ಕಂಟ್ರೋಲ ರೂಮ್ ಸಂಪರ್ಕಿಸಬಹುದು ಎಂದು ಮಾರ್ಕೆಟ್ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ತಾಲೂಕಿನ ಬೆನ್ನಾಳಿ ಗ್ರಾಮದಲ್ಲಿ ಅಲೆಮಾರಿ ಚೆನ್ನದಾಸರ ಸಮುದಾಯವು 'ನೌಕರರ ಚಿತ್ತ ಅಲೆಮಾರಿ ಸಮುದಾಯದತ್ತ' ಅಭಿಯಾನದಲ್ಲಿ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ ಉದ್ಯೋಗ ಮಾರ್ಗದರ್ಶನ ಮತ್ತು ಸಮಾಲೋಚನಾ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

◆**ಕುಡಚಿ:** ಮತಕ್ಷೇತ್ರದ ಶಿರಗೂರ ಗ್ರಾಮದಲ್ಲಿ ಕುಡಚಿ, ಶಿರಗೂರ, ಹಾಲಶಿರಗೂರ, ಚಿಂಚಲಿ ರಸ್ತೆ ಸಂಪರ್ಕ ಕಲ್ಪಿಸುವ ರೂಪಾಯಿ 2.85 ಕೋಟಿ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸುವ ಮೂಲಕ ಶಾಸಕ ಮಹೇಂದ್ರ ತಮ್ಮಣ್ಣವರ ಚಾಲನೆ ನೀಡಿದರು. ಲೋಕೋಪಯೋಗಿ ಇಲಾಖೆಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ 4059ರಡಿ ಮಂಜೂರಾದ 2.85ಕೋಟಿ ಮೊತ್ತದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಚಾಲನೆ ನೀಡಿದರು.ನಂತರ ಕಾರ್ಯಕರ್ತರೊಂದಿಗೆ ಮಾತನಾಡುತ್ತ ಗ್ರಾಮೀಣ ರಸ್ತೆ ಸುಧಾರಣೆ ಅದಲ್ಲಿ ರೈತರು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತಲುಪಿಸುವ ಮೂಲಕ ಗ್ರಾಮೀಣ ಭಾಗದ ರೈತರ ಅಭಿವೃದ್ಧಿ ದೃಷ್ಟಿಯಿಂದ ಗ್ರಾಮೀಣ ರಸ್ತೆಗಳಿಗೆ ಪ್ರಾಮುಖ್ಯತೆ ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಶಿರಗೂರ ಪಿಡಿಓ ಸೌಜನ್ಯ ಪ್ರಭಾಕರ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಪ್ರದೀಪ್ ಹಾಲ್ಲುಣಿ, ಗುತ್ತಿಗೆದಾರ ಸದಾಶಿವ ದಳವಾಯಿ, ಗಿರಿಗೌಡ ಪಾಟೀಲ, ಬಾಹುಬಲಿ ಬ್ಯಾಡಗಿ, ಮಾರುತಿ ಕಾಂಬಳೆ, ವರ್ಧಮಾನ ಶಿರಹಟ್ಟಿ, ಮಹಾದೇವ ಮಗದುಮ್ಮ, ಈಶ್ವರ ಮೋರ್ಡಿ ರುಡಿ, ಕಲ್ಮೇಶ ಕಾಂಬಳೆ, ಲಕ್ಷ್ಮಣ ಬಾವಿ, ಸಂಜು ಚೌಗಲಾ, ನೀಲಪ್ಪ ಕಾಂಬಳೆ, ಇಸಾಕ್ ತಾಂಬೋಳಿ, ಬಾಬಾಸಾಹೇಬ್ ಮುಲ್ಲಾ, ಸುಭಾಷ ದಳವಾಯಿ, ಯಲ್ಲಪ್ಪ ಹುಲ್ಲೇನವರ, ಈಶ್ವರ ಕುಂಬಾರ, ಶಂಕರ ದಳವಾಯಿ, ಹಾಲಸಿದ್ದೇಶ್ವರ ದೇವಸ್ಥಾನದ ಅರ್ಚಕ ಗೂಳಪ್ಪ ಪೂಜಾರಿ, ಶಂಕರ ದಳವಾಯಿ, ಸಚಿನ್ ಹಳಕಲ್ಲ, ಸಹಾಯಕ ಅಭಿಯಂತರಾದ ಕಾಂಬಳೆ, ಹಾಲಪ್ಪ ಸವದತ್ತಿ ಇತರರು ಉಪಸ್ಥಿತರಿದ್ದರು.



ಕುಡಚಿ: ಮತಕ್ಷೇತ್ರದ ಶಿರಗೂರ ಗ್ರಾಮದಲ್ಲಿ ಕುಡಚಿ, ಶಿರಗೂರ, ಹಾಲಶಿರಗೂರ, ಚಿಂಚಲಿ ರಸ್ತೆ ಸಂಪರ್ಕ ಕಲ್ಪಿಸುವ ರೂಪಾಯಿ 2.85 ಕೋಟಿ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸುವ ಮೂಲಕ ಶಾಸಕ ಮಹೇಂದ್ರ ತಮ್ಮಣ್ಣವರ ಚಾಲನೆ ನೀಡಿದರು.

ಬೆಳಗಾವಿಯಲ್ಲಿ ಬೆಲೆಕ್ಸ್ ಉದ್ಘಾಟನೆ | ಗಣ್ಯರ ಅಭಿಮತ

ಉದ್ಯಮ- ಉದ್ಯಮಿ ಬಲವರ್ಧನೆಯಾಗಲಿ

◆**ಬೆಳಗಾವಿ:** ಬೆಳಗಾವಿಯಯಲ್ಲಿ ಉದ್ಯಮಗಳು ಬೆಳೆಯಬೇಕು. ಉದ್ಯಮಿಗಳು ಬೆಳವಣಿಗೆ ಹೊಂದಬೇಕಾದರೆ ಇಲ್ಲಿರುವ ಸಮಸ್ಯೆಗಳು ನಿವಾರಣೆಯಾಗಬೇಕು. ಅದಕ್ಕೆ ಉದ್ಯಮಿಗಳು ಒಂದಾಗಿ ಗಟ್ಟಿ ಧ್ವನಿ ಎತ್ತಬೇಕು ಎನ್ನುವ ಒಕ್ಕೊರಲ ಅಭಿಪ್ರಾಯ, ಮಂಗಳವಾರ ಆರಂಭವಾದ ಕೈಗಾರಿಕೆ ಮತ್ತು ವಾಣಿಜ್ಯ ಪ್ರದರ್ಶನದ ಉದ್ಘಾಟನೆ ಸಮಾರಂಭದ ವೇಳೆ ವ್ಯಕ್ತವಾಯಿತು.

ಬೆಳಗಾವಿ ವಾಣಿಜ್ಯೋದ್ಯಮ ಸಂಘದ ವತಿಯಿಂದ ಫೌಂಡ್ರಿಕ್ಲಸ್ಟರ್ ಆವರಣದಲ್ಲಿ 3 ದಿನಗಳ ಕೈಗಾರಿಕೆ ಮತ್ತು ವಾಣಿಜ್ಯ ಪ್ರದರ್ಶನ ಬೆಲೆಕ್ಸ್ ಆಯೋಜಿಸಲಾಗಿದ್ದು, ಉದ್ಘಾಟನೆ ಸಮಾರಂಭ ಇಲ್ಲಿಯ ಉದ್ಯಮಗಳ ಬೆಳವಣಿಗೆಗೆ ಹಿನ್ನಡೆಯಾಗಿರುವ ಅಂಶಗಳ ಕುರಿತು ಗಮನ ಸೆಳೆಯುವಂತೆ ಮಾಡಿತು.

ಆರಂಭದಲ್ಲಿ ಶಾಸಕ ಅಭಯ ಪಾಟೀಲ ಮಾತನಾಡಿ, ಬೆಳಗಾವಿ ಬೆಳೆಯುತ್ತಿದೆ. ಆದರೆ, ಸರ್ಕಾರದ ಅಸಹಕಾರದಿಂದ ಕೈಗಾರಿಕೆಗಳು ಬೆಳೆಯುತ್ತಿಲ್ಲ, ಬಿಯಾಂಡ್ ಬೆಂಗಳೂರು ಹುಬ್ಬಳ್ಳಿಯವರೆಗೆ ನಿಲ್ಲುತ್ತಿದೆ. ಉದ್ಯಮಿಗಳು ಶಕ್ತಿ ತೋರಿಸುವವರೆಗೆ, ನೀವು ಒಟ್ಟಾಗುವವರೆಗೆ ಯಾವುದೇ ಸರ್ಕಾರವಿರಲಿ ಕಣ್ಣೆತ್ತಿ ನೋಡುವುದಿಲ್ಲ ಎಂದು ಹೇಳಿದರು.

ಬೆಳಗಾವಿಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಮತ್ತು ಕೈಗಾರಿಕೆಗಳಿಗೆ ಪೂರಕವಾಗಿ ಮೂಲಭೂತ ಸೌಲಭ್ಯಗಳ ಸೃಷ್ಟಿಗೆ ತಾವು ಹೊಂದಿರುವ ಕನಸುಗಳನ್ನು ಬಿಚ್ಚಿಟ್ಟರು.

ಉದ್ಯಮಿ, ಅಶೋಕ ಐರನ್ ಚೇರಮನ್ ಜಯಂತ ಹುಂಬರವಾಡಿ ಮಾತನಾಡಿ, ಹುಬ್ಬಳ್ಳಿ-ಧಾರವಾಡ -ಬೆಳಗಾವಿ ಕ್ಲಸ್ಟರ್ ಆಗಿ ಬೆಳೆಸಲು ಯೋಜನೆ ಹೊದಿದೆ. ಆದರೆ ಇಲ್ಲಿನ ಉದ್ಯಮಿಗಳು ದೊಡ್ಡ ದ್ವನಿ ಎತ್ತುತ್ತಿಲ್ಲ ಎಂದರು.



> ನಾನು ಸದಾ ನಿಮ್ಮ ಜೊತೆ ಇರುತ್ತೇನೆ. ಉದ್ಯಮ ಭಾಗದಿಂದಾಗಿ ಬೆಳಗಾವಿಗೆ ಶಕ್ತಿ ಬಂದಿದೆ. ಬೆಳಗಾವಿಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಪ್ರಯತ್ನ ಆರಂಭವಾಗಿದೆ. ಎಲ್ಲದಕ್ಕೂ ಎಲ್ಲರ ಸಹಕಾರ ಅಗತ್ಯ. ನೀವೆಲ್ಲ ಒಂದಾದರೆ ಉದ್ಮಗಳನ್ನು, ಉದ್ಯಮಿಗಳನ್ನು ಬೆಳೆಸಬಹುದು.
>
> ■ ಅಭಯ ಪಾಟೀಲ, ಶಾಸಕ

ಮಹಾರಾಷ್ಟ್ರ ಜೈನ್ ಅಲ್ಪಸಂಖ್ಯಾತರ ಹಣಕಾಸು ಅಭಿವೃದ್ಧಿ ನಿಗಮದ ಚೇರಮನ್ ಲಲಿತ್ ಗಾಂಧಿ ಮಾತನಾಡಿ, ಮಹಾರಾಷ್ಟ್ರ ದಲ್ಲಿ 26 ಹೊಸ ಇಂಡಸ್ಟ್ರಿಯಲ್ ಎಸ್ಟೇಟ್ ಆರಂಭಿಸಲಾಗುತ್ತಿದೆ. ಅಲ್ಲಿನ ಇಂಡಸ್ಟ್ರಿಯಲ್ ಪಾಲಿಸಿ ತಕ್ಕ ಮಟ್ಟಿಗೆ ಉತ್ತಮವಾಗಿದೆ. ಆದರೆ ಚೀನಾಕ್ಕೆ ಹೋಲಿಸಿದರೆ ನಮಗೆ ಯಾವ ಸೌಲಭ್ಯವೂ ಇಲ್ಲ, ಚೀನಾದಲ್ಲಿ 15 ದಿನಗಳಲ್ಲಿ ಎಲ್ಲವೂ ಸಿಗುತ್ತದೆ. ನಮ್ಮಲ್ಲಿ ಒಂದು ಅನುಮತಿ ಪಡೆಯಲು 2-3 ವರ್ಷ ಬೇಕಾಗುತ್ತಿದೆ. ಇಂತಹ ಅಸಹಕಾರ ಪರಿಸ್ಥಿತಿಯಲ್ಲಿ ನಾವು ಉದ್ಯಮ ಬೆಳೆಸುತ್ತಿದ್ದೇವೆ. ನಮ್ಮಲ್ಲಿ ಪ್ರತಿಭಾವಂತರಿದ್ದಾರೆ, ಅವಕಾಶಗಳಿವೆ. ಆದರೆ ಸರಕಾರಗಳ ಸ ಕಾರಾತ್ಮಕ ಸ್ಪಂದನೆ ಇಲ್ಲ ಎಂದು ಅವರು ಹೇಳಿದರು.

ಗೋವಾ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷೆ ಪ್ರತಿಮಾ ದೋಂಡ್ ಮಾತನಾಡಿದರು.

ಸ್ಥಳೀಯ ಕೈಗಾರಿಕೆಗಳ ಸಾಮರ್ಥ್ಯವನ್ನು ಪ್ರದರ್ಶಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಉದ್ಯಮಿಗಳು, ಪಾಲುದಾರರು ಉತ್ಸಾಹದಿಂದ ಭಾಗವಹಿಸಿದ್ದರು.

ಕಾರ್ಯಕ್ರಮವು ಬೆಳಗಾವಿಯ ಕೈಗಾರಿಕಾ ವಲಯಕ್ಕೆ ಹೊಸ ಉತ್ತೇಜನ ನೀಡಿದ ಮಹತ್ವದ ಘಟ್ಟವಾಗಿ ಪರಿಣಮಿಸಿತು. 85ಕ್ಕೂ ಹೆಚ್ಚು ಪ್ರದರ್ಶನ ಮಳಿಗೆಗಳನ್ನು ಹಾಕಲಾಗಿದೆ. ಬುಧವಾರ ಮತ್ತು ಗುರುವಾರವೂ ಪ್ರದರ್ಶನ ಮುಂದುವರಿಯಲಿದ್ದು, ಉಚಿತ ಪ್ರವೇಶವಿದೆ. ಜೊತೆಗೆ ವಿವಿಧ ಗೋಷ್ಠಿಗಳನ್ನು ಆಯೋಜಿಸಲಾಗಿದೆ.

ಕ್ಷಯರೋಗ ತಡೆಗೆ ಜಾಗೃತಿ ಅವಶ್ಯ

◆**ಸವದತ್ತಿ:** ಕ್ಷಯರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ದೂರವಿರಿಸಿ, ಕ್ಷಯ ರೋಗದ ಲಕ್ಷಣಗಳು ಕಂಡ ಕೂಡಲೇ ತಡ ಮಾಡದೇ ತಪಾಸಣೆ ಮಾಡಿಸಿ ಚಿಕಿತ್ಸೆಯನ್ನು ಪಡೆದುಕೊಂಡಲ್ಲಿ ಕ್ಷಯರೋಗವನ್ನು ಸಂಪೂರ್ಣವಾಗಿವಾಸಿ ಮಾಡಬಹುದೆಂದು ಡಾ.ಮೌನೇಶ್ವರ ಅರ್ಕಸಾಲಿ ಹೇಳಿದರು.

ರಾಷ್ಟ್ರೀಯ ಕ್ಷಯರೋಗ ನಿರ್ಮೂಲನ ಕಾರ್ಯಕ್ರಮ, ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸವದತ್ತಿ ಹಾಗೂ ವಿವೇಕಾನಂದ ವಿಜ್ಞಾನ ಪದವಿ ಪೂರ್ವ ವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ವಿದ್ಯಾಲಯದ ಸಭಾಭವನದಲ್ಲಿ ಹಮ್ಮಿಕೊಳ್ಳಲಾದ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಅಭಿಯಾನದಲ್ಲಿ ಯುವ ಜನಾಂಗವು ಸಕ್ರಿಯವಾಗಿ ಪಾಲ್ಗೊಂಡು ಕ್ಷಯಮುಕ್ತ ಭಾರತ ದ ನಿರ್ಮಾಣದ ಆಶಯದಲ್ಲಿರುವ ಸರಕಾರದ ಮಹತ್ತರ ಯೋಜನೆಯಲ್ಲಿ ಕೈಜೋಡಿಸಬೇಕೆಂದರು.

ಹಿರಿಯ ಕ್ಷಯರೋಗ ಚಿಕಿತ್ಸಾ ಮೇಲ್ವಿಚಾರಕರಾದ ಸಿದ್ದೇಶ್ವರ ಡೋಣಿ ಮಾತನಾಡಿ, ಎರಡು ವಾರಕ್ಕಿಂತ ಮೇಲ್ಪಟ್ಟ ಕೆಮ್ಮು, ಸಂಜೆ ವೇಳೆ ಜ್ವರ ಬರುವುದು,ಹಸಿವಾಗದದೇ ಇರುವುದು, ತೂಕ ಕಡಿಮೆಯಾಗುವುದು, ಸುಸ್ತಾಗುವುದು ಹಾಗೂ ರಾತ್ರಿ ಬೆವರುವುದು ಇವು ಕ್ಷಯ ರೋಗದ ಪ್ರಾರಂಭಿಕ ಲಕ್ಷಣಗಳಾಗಿದ್ದು ಈ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣವೇ ಸಮೀಪದ ಸರಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿ ರೋಗ ತಪಾಸಣೆ ಮಾಡಿಸಿಕೊಳ್ಳಬೇಕು ಎಂದರು.

ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ರಾಜೇಂದ್ರ ಚಟ್ನಿಸ ಪ್ರಾಸ್ತವಿಕವಾಗಿ ಮಾತನಾಡಿದರು.

ರಾಜಶೇಖರ ತುರಾದಿ, ವಿಠ್ಠಲ ಮಾಳೇದ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮುರಗೇಶ ಕರಜಗಿಮಠ, ಮಂಜುನಾಥ ಹಟ್ಟಿ, ಉಪಸ್ಥಿತರಿದ್ದರು. ವಿಜಯಲಕ್ಷ್ಮಿ ಹಳ್ಳಿಕೇರಿ ಕಾರ್ಯಕ್ರಮ ರೂಪಿಸಿ ಸ್ವಾಗತಿಸಿದರು ಹಾಗೂ ಪುಷ್ಪಾ ನರೋಟಿ ವಂದಿಸಿದರು.



ಅಧ್ಯಕ್ಷರಾಗಿ ಲಕ್ಷ್ಮವ್ವ ಸುರೇಶ ಅಡಿಶೇರಿ ಆಯ್ಕೆ

◆**ಕಾಗವಾಡ:** ಪಟ್ಟಣ ಪಂಚಾಯತಿ ಮೂರನೇಯ ಅವಧಿಗೆ ಐನಾಪೂರ ಪಟ್ಟಣ ಪಂಚಾಯತಿ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಲಕ್ಷ್ಮವ್ವ ಸುರೇಶ ಅಡಿಶೇರಿ ಹಾಗು ಉಪಾಧ್ಯಕ್ಷರಾಗಿ ಜಯಶ್ರೀ ವಿಜಯ ಹರಳೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ .

ಮಂಗಳವಾರ ತಾಲೂಕಿನ ಐನಾಪುರ ಪಟ್ಟಣ ಪಂಚಾಯತಿ ಸಭಾಭವನದಲ್ಲಿ ಅಧ್ಯಕ್ಷಉಪಾಧ್ಯಕ್ಷ ಚುನಾವಣೆ ಆಯ್ಕೆಯ ಪ್ರಕ್ರಿಯೆ ನೆರವೇರಿತು.

ಈ ಹಿಂದೆ ಅಧ್ಯಕ್ಷ ಸ್ಥಾನದಲ್ಲಿದ್ದ ಕಸ್ತೂರಿ ಮಡಿವಾಳ ,ಹಾಗು ಉಪಾಧ್ಯಕ್ಷ ರತ್ನವ್ವ ಮಾದರ ಅವರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅಧ್ಯಕ್ಷ ಉಪಾಧ್ಯಕ್ಷ ತೆರವಾಗಿದ್ದ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ ಇಬ್ಬರು ಪಪಂ ಮಹಿಳಾ ಸದಸ್ಯರಾದ ಲಕ್ಷ್ಮವ್ವ ಸುರೇಶ ಅಡಿಶೇರಿ, ಜಯಶ್ರೀ ವಿಜಯ ಹರಳೆ ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅಧ್ಯಕ್ಷ ,ಉಪಾಧ್ಯಕ್ಷ

ಸ್ಥಾನಕ್ಕೆ ಅವಿರೋದ ಆಯ್ಕೆಯನ್ನು ಚುನಾವಣಾ ಅಧಿಕಾರಿ ತಹಶೀಲ್ದಾರ್ ರವಿಂದ್ರ ಹಾದಿಮನಿ ಘೋಷಿಸಿದ್ದರು.19 ಸದಸ್ಯರನ್ನು ಹೊಂದಿರುವ ಪಟ್ಟಣ ಪಂಚಾಯತಿಯಲ್ಲಿ ಕಾಂಗ್ರೆಸ್ ಪಕ್ಷದ 12 ಸದಸ್ಯರು ಸಭೆಯಲ್ಲಿ ಹಾಜರಾಗಿ ಬೆಂಬಲ ಸೂಚಿಸಿದರು. ಪಪಂ ಸದಸ್ಯ ಕಾಂಗ್ರೆಸ ಮುಖಂಡ ಪ್ರವೀಣಗಾಣಿಗೇರ ಮಾತನಾಡಿದರು.

ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಮಹಾಂತೇಶ ಕವಲಾಪುರೆ ,ಮಹಾಂತೇಶ ಬಾದವಾಡಗಿ,ಗ್ರಾಮಲೆಕ್ಕಾಧಿಕಾರಿ ಪ್ರಕಾಶ ಪುಠಾಣೆ, ಚುನಾವಣೆಯ ಕಾರ್ಯ ನಿರ್ವಹಿಸಿದರು.ಕಾಗವಾಡ ಪೊಲೀಸ್ ಠಾಣೆಯ ಸಿಬ್ಬಂದಿ ಬಂದೋಬಸ್ತನಲ್ಲಿ ಚುನಾವಣೆ ನೆರವೇರಿತು.

ಈ ಸಂದರ್ಭದಲ್ಲಿ ಪಪಂ ಮುಖ್ಯಾಧಿಕಾರಿ ಮಹಾಂತೇಶ ಕವಲಾಪುರೆ,ಪಪಂ ಸದಸ್ಯ ಪ್ರವೀಣ ಗಾಣಿಗೇರ,ಅರುಣ ಗಾಣಿಗೇರ, ಪಪಂ ಮಾಜಿ ಅಧ್ಯಕ್ಷ ಕಸ್ತೂರಿ ಮಡಿವಾಳ ಸರೋಜಿನಿ ಗಾಣಿಗೇರ,ರತ್ನವ್ವ ಮಾದರ, ಸಂಜಯ ಬಿರಡಿ, , ಕುಮಾರ ಜಯಕರ, ರಾಜು ಹರಳೆ, ಧರೆಪ್ಪ ಹರಳೆ , ದಾದಾ ಚೇಂತೆನವರ, ಸಂಜು ಕುಸನಾಳೆ,ನವೀನ ಗಾಣಿಗೇರ, ಗುರುರಾಜ ಮಡಿವಾಳ ,ಕುಮಾರ ಜಯಕರ,ಸುರೇಶ ಅಡಿಶೇರಿ, ಪ್ರಕಾಶ ಚೆನಗಿ,ಸಿದ್ದು ಅಡಿಶೇರಿ,ಶಾಬು ಅಡಿಶೇರಿ,ಪ್ರಕಾಶ ಗಾಣಿಗೇರ, ಸೇರಿದಂತೆ ಇತರರು ಇದ್ದರು.



ಪೆಟ್ರೋಲ್‌ಗೆ ಮುಗಿಬಿದ್ದ ಜನತೆ

◆**ಬೈಲಹೊಂಗಲ:** ಪೆಟ್ರೋಲ್ ಕೊರತೆ ಉಂಟಾಗಲಿದೆ ಎಂಬ ಗಾಳಿ ಸುದ್ದಿಗೆ ಬೆಚ್ಚಿಬಿದ್ದ ಜನರು ಬೆಳಗ್ಗೆಯೇ ಪೆಟ್ರೋಲ್ ಬಂಕ್ಗಳತ್ತ ಮುಗಿಬಿದ್ದ ಪರಿಣಾಮ, ಪಟ್ಟಣದ ಬಹುತೇಕ ಬಂಕ್ಗಳು ಮುಂಜಾನೆ ಹೌಸ್ಪುಲ್' ಆಗಿ ಕಾಣಿಸಿಕೊಂಡವು.

ಬುಧವಾರ ಬೆಳಗ್ಗೆಯೇ ವಾಹನ ಸವಾರರು ಬಂಕ್‌ಗಳತ್ತ ದೌಡಾಯಿಸಿದ ಪರಿಣಾಮ, ಹಲವು ಕಡೆಗಳಲ್ಲಿ ಉದ್ದನೆಯ ವಾಹನಗಳ ಸಾಲುಗಳು ನಿರ್ಮಾಣವಾದವು. ಪೆಟ್ರೋಲ್ ಮುಗಿಯುತ್ತದೆ ಎಂಬ ಭೀತಿಯಿಂದ ಜನರು ತುರ್ತಾಗಿ ಇಂಧನ ತುಂಬಿಸಿಕೊಳ್ಳಲು ಹರಸಾಹಸಪಟ್ಟ ದೃಶ್ಯಗಳು ಕಂಡುಬಂದವು.

ವಾಸ್ತವದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಸರಬರಾಜಿನಲ್ಲಿ ಯಾವುದೇ ಕೊರತೆ ಇಲ್ಲದಿದ್ದರೂ, ಗಾಳಿ ಸುದ್ದಿಯನ್ನು ನಂಬಿದ ಜನರು ಅಗತ್ಯಕ್ಕಿಂತ ಹೆಚ್ಚು ಇಂಧನ ಸಂಗ್ರಹಿಸಲು ಮುಂದಾದರು. ಕೆಲವರು ಡಬ್ಬಗಳಲ್ಲಿ ಪೆಟ್ರೋಲ್ ತುಂಬಿಸಿಕೊಳ್ಳಲು ಯತ್ನಿಸಿದರೆ, ಇನ್ನೂ ಕೆಲವರು ಸಾಲಿನಲ್ಲಿ ನಿಂತು ದೀರ್ಘಕಾಲ ಕಾಯಬೇಕಾದ ಪರಿಸ್ಥಿತಿ ಎದುರಾಯಿತು.ಇದಕ್ಕೆ ಸ್ಪಷ್ಟನೆ ನೀಡಿರುವ ಅಧಿಕಾರಿಗಳು, ಇಂಧನ ಸರಬರಾಜು ಸಮರ್ಪಕವಾಗಿದೆ. ಯಾವುದೇ ಕೊರತೆ ಇಲ್ಲ. ಸಾರ್ವಜನಿಕರು ಗಾಳಿ ಸುದ್ದಿಗಳಿಗೆ ಕಿವಿಗೊಡದೇ ಶಾಂತವಾಗಿರಬೇಕು ಎಂದು ಮನವಿ ಮಾಡಿದ್ದಾರೆ.ಒಟ್ಟಿನಲ್ಲಿ, ಗಾಳಿ ಸುದ್ದಿಯೊಂದು ಪಟ್ಟಣದಾದ್ಯಂತ ಆತಂಕ ಸೃಷ್ಟಿಸಿ, ಬೆಳಗ್ಗೆಯೇ ಪೆಟ್ರೋಲ್ ಬಂಕ್‌ಗಳನ್ನು ಹೌಸ್ಪುಲ್' ಆಗಿ ಮಾಡಿಸಿದ ಅಪರೂಪದ ಘಟನೆಗೆ ಕಾರಣವಾಯಿತು.



ಜಗಜೀವನ್ ರಾಂ, ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಪೂರ್ವಭಾವಿ ಸಭೆ

◆**ಹುಕ್ಕೇರಿ:** ಹಸಿರು ಕ್ರಾಂತಿ ಹರಿಕಾರ, ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಈ ಇಬ್ಬರು ಮಹೋದಯರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಸಮಾಜದ ಮುಖಂಡರ ಸಹಕಾರಿ ಅವಶ್ಯವಾಗಿದೆ ಎಂದು ತಹಶೀಲ್ದಾರ ಬಲರಾಮ ಕಟ್ಟಿಮನಿ ಹೇಳಿದರು.

ಅವರು ಮಂಗಳವಾರದಂದು ಸ್ಥಳೀಯ ತಾಲೂಕಾ ಪಂಚಾಯತ ಭವನದ ಸಭಾಂಗಣದಲ್ಲಿ ಡಾ.ಬಾಬು ಜಗಜೀವನ್ ರಾಂ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಮೇ 5ರಂದು ಭಾರತದ



ಮಾಜಿ ಉಪ ಪ್ರಧಾನಮಂತ್ರಿ ಹಾಗೂ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಂ ಅವರ 119ನೇ ಜಯಂತ್ಯುತ್ಸವ ಮತ್ತು ಏ.14 ರಂದು ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತೋತ್ಸವ ಕಾರ್ಯಕ್ರಮಗಳನ್ನು ತಾಲೂಕಾ ಆಡಳಿತ ಸಹಯೋಗದೊಂದಿಗೆ ಅದ್ದೂರಿಯಾಗಿ ಆಚರಿಸಲಾಗುವುದು. ಇದಕ್ಕೆ ಬೇಕಾದ ಸಕಲ-ಸಿದ್ಧತೆ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಮಾಜ ಕಲ್ಯಾಣ ಅಧಿಕಾರಿ ಜಿ.ಟಿ. ಪಾವಟೆ ಮಾತನಾಡಿದರು.ಸಭೆಯಲ್ಲಿ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಟಿ.ಆರ್. ಮಲ್ಲಾಡದ,ಮುಖ್ಯಾಧಿಕಾರಿ ಈಶ್ವರ ಸಿದ್ನಾಳ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶ್ಯಾನೂರ ತಹಸೀಲ್ದಾರ,ಮುಖಂಡರಾದ ಉದಯ ಹುಕ್ಕೇರಿ, ರಮೇಶ ಹುಂಜಿ,ಕೆಂಪಣ್ಣಾ ಶಿರಹಟ್ಟಿ, ಬಾವುಸಾಬ ಪಾಂಡ್ರೆ, ಪ್ರಕಾಶಮೈಲಾಖೆ, ಶ್ರೀಕಾಂತ ತಳವಾರ, ಎ.ಜಿ. ಮೆಲಗೇರಿ,ಕಾಡೇಶ ಹೊಸಮನಿ, ಶಿವಾನಂದ ಸಮಕ್ಕನವರ ಮುತ್ತಿತರರಿದ್ದರು.

ಈಶ್ವರ ಹೋಟಿ ಅಧ್ಯಕ್ಷರಾಗಿ ಅವಿರೋಧ ಆಯ್ಕೆ

◆**ಬೈಲಹೊಂಗಲ:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಸೋಮವಾರ ಇಲ್ಲಿನ ನಿರೀಕ್ಷಣಾ ಮಂದಿರದಲ್ಲಿ ಶಾಂತಿಯುತವಾಗಿ ಹಾಗೂ ಅವಿರೋಧವಾಗಿ ಜರುಗಿತು.

ಸಂಘದ ನೂತನ ಅಧ್ಯಕ್ಷರಾಗಿ ಹಿರಿಯ ಪತ್ರಕರ್ತ ಈಶ್ವರ ಹೋಟಿ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಬಸವರಾಜ ಕಲಾದಗಿ ಹಾಗೂ ಕುಮಾರ ರೇಶ್ಮಿ, ಪ್ರಧಾನ ಕಾರ್ಯದರ್ಶಿಯಾಗಿ ಯುನೂಸ್ ಬಡೇಘರ, ಕಾರ್ಯದರ್ಶಿಗಳಾಗಿ ಶರೀಫ ನದಾಫ ಮತ್ತು ಮುತ್ತುರಾಜ ಮತ್ತಿಕೊಪ್ಪ ಹಾಗೂ ಖಜಾಂಚಿಯಾಗಿ ಉದಯ ಕೊಳೇಕರ ಅವರು ಆಯ್ಕೆಯಾಗಿದ್ದಾರೆ.

ಇದೇವೇಳೆಸಂಘದನಿರ್ದೇಶಕರಾಗಿ ವಿರುಪಾಕ್ಷ ವಾಲಿ, ಚಂದ್ರಯ್ಯ ಯರಗಟ್ಟಿಮಠ, ಮಹಾಂತೇಶ ರಾಜಗೋಳಿ, ಮಂಜುನಾಥ ಜ್ಯೋತಿ ಹಾಗೂ ಈಶ್ವರ ಶಿಲ್ಲೇದಾರ ಅವರನ್ನು ಸರ್ವಾನುಮತದಿಂದ



» ಬೈಲಹೊಂಗಲ ಪತ್ರಕರ್ತರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ

ಆಚರಿಸಲಾಯಿತು.

ಚುನಾವಣಾ ಪ್ರಕ್ರಿಯೆಗೆ ನೇತೃತ್ವ ವಹಿಸಿದ್ದ ಸಂಘದ ರಾಜ್ಯ ಕಾರ್ಯದರ್ಶಿ ಪುಂಡಲೀಕ ಬಾಳೋಜಿ ಮಾತನಾಡಿ, ಪತ್ರಕರ್ತರ ಕಲ್ಯಾಣಕ್ಕಾಗಿ ಸಂಘವು ಸಾಮಾಜಿಕ ಭದ್ರತೆ, ಆರೋಗ್ಯ ಸೌಲಭ್ಯಗಳು ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಸಂಘಟನಾ ಶಕ್ತಿಯನ್ನು ವೃದ್ಧಿಸುವ ಮೂಲಕ ಈ ಸೌಲಭ್ಯಗಳನ್ನು ಎಲ್ಲಾ ಪತ್ರಕರ್ತರಿಗೆ ತಲುಪಿಸಲಾಗುವುದು ಎಂದರು. ಸಂಘದ ಹೆಸರನ್ನು ದುರುಪಯೋಗಪಡಿಸಿಕೊಂಡು ಬ್ಲಾಕ್ಮೇಲ್ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ನೂತನ ಅಧ್ಯಕ್ಷ ಈಶ್ವರ ಹೋಟಿ ಮಾತನಾಡಿ, ತಾಲೂಕಿನ ಎಲ್ಲಾ ಪತ್ರಕರ್ತರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿಸಂಘವನ್ನುಮಾದರಿಯಾಗಿ ರೂಪಿಸುವುದು ನನ್ನ ಮೊದಲ ಗುರಿ. ಪತ್ರಕರ್ತರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ, ವಿಮೆ ಹಾಗೂ ತುರ್ತು ನೆರವು ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಶ್ರಮಿಸುತ್ತೇನೆ, ಎಂದು ಭರವಸೆ ನೀಡಿದರು.

ಆರೋಗ್ಯ ತಪಾಸಣೆ: ಜಾಗೃತಿ

◆**ಬೆಳಗಾವಿ:** ಶಹಾಪುರ ಉಪನಗರದ ಶ್ರೀಂಗಾರಿ ಕಾಲೋನಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಯಶಸ್ವಿಯಾಗಿ ಜರುಗಿತು. ರಕ್ತದಾನ ಮಾಡಿದ ಪ್ರತಿಯೊಬ್ಬರಿಗೂ ಹೆಲ್ಮೆಟ್ ವಿತರಿಸುವ ಮೂಲಕ ಆಯೋಜಕರು ಸಾಮಾಜಿಕ ಜಾಗೃತಿ ಮೂಡಿಸಿದರು.

ಶಹಾಪುರದ ಖಾಸ್ಬಾಗ್ನ ಶಿವತೇಜ ಅಪಾರ್ಟ್ ಮೆಂಟ್‌ನಲ್ಲಿ ನಡೆದ ಈ ಶಿಬಿರದಲ್ಲಿ ನೂರಾರು ಸಾರ್ವಜನಿಕರು ಪಾಲ್ಗೊಂಡು ಉಚಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಡಾ. ಶುಭಂ ದಳವಿ ಮತ್ತು ಡಾ. ಶಿಲ್ಪಾ ಪೂಜಾರಿ ಅವರ ಮಾರ್ಗದರ್ಶನದಲ್ಲಿ ಮಧುಮೇಹ, ರಕ್ತದೊತ್ತಡ, ಕೀಲು ನೋವು ಹಾಗೂ ಎಲುಬಿನ ತೊಂದರೆಗಳಿಗೆ ಸಂಬಂಧಿಸಿದಂತೆ ತಪಾಸಣೆ ನಡೆಸಿ ಉಚಿತ ಸಲಹೆ ನೀಡಲಾಯಿತು. ಶಿಬಿರದ ಪ್ರಮುಖ ಆಕರ್ಷಣೆಯಾಗಿದ್ದ ರಕ್ತದಾನ ವಿಭಾಗದಲ್ಲಿ 50ಕ್ಕೂ ಹೆಚ್ಚು ರಕ್ತದಾನಿಗಳು ಉತ್ಸಾಹದಿಂದ ರಕ್ತದಾನ ಮಾಡಿದರು. ರಕ್ತದಾನ ಮಾಡಿದ ಪ್ರತಿಯೊಬ್ಬರಿಗೂ ಸುರಕ್ಷತೆಯ ದೃಷ್ಟಿಯಿಂದ ಹೆಲ್ಮೆಟ್ ಅನ್ನು ಉಡುಗೊರೆಯಾಗಿ ನೀಡಿದ್ದು ವಿಶೇಷವಾಗಿತ್ತು.

ಶ್ರೀಂಗಾರಿ ಕಾಲನಿ, ಟೀಚರ್ಸ್ ಕಾಲನಿ, ಬಾಡಿವಾಲೆ ಕಾಲನಿ ಹಾಗೂ ಕುಂತಿ ನಗರ ಸೇರಿದಂತೆ ಸುತ್ತಮುತ್ತಲಿನ 400ಕ್ಕೂ ಹೆಚ್ಚು ನಿವಾಸಿಗಳು ಈ ಶಿಬಿರದ ಸದುಪಯೋಗಪಡೆದುಕೊಂಡರು. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ದಿನೇಶ್ ಪಾಟೀಲ್, ಪ್ರಕಾಶ್ ಪಾಟೀಲ್, ಆಕಾಶ್ ದಲಭಜನ್, ಮಾಧವ ಮುಕ್ರುಂಬಿ, ಮಂಥನ್ ತಾರಿಹಾಳಕರ್, ರಾಜ್ ಕದಂ, ಸೋಹಮ್ ಹಿರೇಬೆಳಗಲಿ ಹಾಗೂ ಲಾಲು ಬಾಡಿವಾಲೆ ಸೇರಿದಂತೆ ಅನೇಕ ಕಾರ್ಯಕರ್ತರು ಶ್ರಮಿಸಿದರು.

ಕುಡಿಯುವ ನೀರಿನ ಸಮಸ್ಯೆಯಾಗದಿರಲಿ

◆**ಖಾನಾಪುರ:** ಮುಂಬರುವ ಏಪ್ರಿಲ್-ಮೇ ತಿಂಗಳಲ್ಲಿ ತಾಲೂಕಿನ ಹಲವು ಗ್ರಾಮಗಳಲ್ಲಿ ಜಾತ್ರೆಗಳು ಮತ್ತು ಉತ್ಸವಗಳನ್ನು ಆಚರಿಸಲು ಸಿದ್ಧತೆ ನಡೆದಿದೆ. ಈ ಅವಧಿಯಲ್ಲಿ ಗ್ರಾಮೀಣ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಈಗಿನಿಂದಲೇ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ವಿಠ್ಠಲ ಹಲಗೇಕರ ಸೂಚಿಸಿದರು.

ಪಟ್ಟಣದ ತಾಲೂಕು ಪಂಚಾಯತಿ ಸಭಾಭವನದಲ್ಲಿ ಮಂಗಳವಾರ ಜರುಗಿದ ತಾಲೂಕು ಮಟ್ಟದ ಕುಡಿಯುವ ನೀರು ಸರಬರಾಜು ಕುರಿತ ಮುಂಜಾಗ್ರತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

''ಈಗಷ್ಟೇ ಬೇಸಿಗೆ ಪ್ರಾರಂಭವಾಗಿದ್ದು, ಮಳೆಗಾಲಕ್ಕೆ ಇನ್ನೂ ಎರಡೂವರೆ-ಮೂರು ತಿಂಗಳು ಬಾಕಿ ಇದೆ. ಅಲ್ಲಿಯವರೆಗೂ ತಾಲೂಕಿನ ಎಲ್ಲ ಗ್ರಾಮಗಳಲ್ಲಿ ನೀರು ಸರಬರಾಜು ಮಾಡಲು ಈಗಿನಿಂದಲೇ ಸಿದ್ಧತೆ ಮಾಡಿಟ್ಟುಕೊಳ್ಳಬೇಕು.ಜನರು ನೀರಿಗಾಗಿ ಪರಿತಪಿಸಿದಾಗ ಉದ್ಭವಿಸುವ ಸಮಸ್ಯೆಗೆ ಪರಿಹಾರ ಹುಡುಕದೇ ಮುಂಚಿತವಾಗಿ ನೀರಿನ ಸಮಸ್ಯೆ ಉಂಟಾಗಬಹುದಾದ ಸ್ಥಳಗಳ ಪಟ್ಟಿಯನ್ನು ಸಿದ್ಧಪಡಿಸಬೇಕು. ಕೇವಲ ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರ ಹುಡಕಲು ಹೋಗದೇ ಶಾಶ್ವತ ಪರಿಹಾರಕ್ಕೆ ಒತ್ತು ನೀಡಬೇಕು. ದುರಸ್ತಿ ಇರುವ ಬೋರವೆಲ್‌ಗಳನ್ನು ದುರಸ್ಥಿಗೊಳಿಸುವುದು, ಊರಿಗೆ ಸಮೀಪದ ಬೋರವೆಲ್‌ಗಳನ್ನು ಕುಡಿಯುವ ನೀರಿಗಾಗಿ ಬಾಡಿಗೆ ಪಡೆದುಕೊಳ್ಳುವುದು, ತೆರೆದ ಬಾವಿಗಳನ್ನು ಸ್ವಚ್ಚಗೊಳಿಸುವುದು ಸೇರಿದಂತೆ ನಿಯಮಿತ ನೀರು ಸರಬರಾಜು ಆಗುವಂತೆ ಗಮನಹರಿಸಬೇಕು ಮತ್ತು ಗ್ರಾಮೀಣ ಭಾಗದ ಎಲ್ಲ ನೀರಿನ ಮೂಲಗಳ ಶುಚಿತ್ವಕ್ಕೆ ಆದ್ಯತೆ ನೀಡಬೇಕು'' ಎಂದು ಸಭೆಯಲ್ಲಿ ಉಪಸ್ಥಿತರಿದ್ದ ತಾಲೂಕಿನ ಎಲ್ಲ ಗ್ರಾಪಂಗಳ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ತಾಪಂ ಇಓ ರಮೇಶ ಮೇತ್ರಿ, ಪಿ.ಆರ್.ಇ.ಡಿ ಎಇಇ ರಾಜೇಂದ್ರ ಜಾಧವ್, ಲೋಕೋಪಯೋಗಿ ಇಲಾಖೆಯ ಎಇಇ ಸಂಜಯ ಗಸ್ತಿ, ಸಹಾಯಕ ನಿರ್ದೇಶಕ ವಿಜಯ ಕೋತಿನ, ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಮನೋಹರ ದಾಢ್ಮಿ ಸೇರಿದಂತೆ ಪಿಡಿಓಗಳು, ತಾಪಂ ಸಿಬ್ಬಂದಿ ಉಪಸ್ಥಿತರಿದ್ದರು.



» ಶಾಸಕ ವಿಠ್ಠಲ ಹಲಗೇಕರ ಸೂಚನೆ

ಕಿರುಸುದ್ದಿ

ಚುನಾವಣಾ ಅಕ್ರಮ ತಡೆಗೆ ಸಿ-ವಿಜಿಲ್ ಆ್ಯಪ್

ಬಾಗಲಕೋಟೆ: ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಚುನಾವಣಾ ಆಯೋಗವು ಸಿ-ವಿಜಿಲ್ ಎಂಬ(ಆ್ಯಪ್) ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸಾರ್ವಜನಿಕರು ಯಾವುದೇ ರೀತಿಯ ಚುನಾವಣಾ ಅಕ್ರಮಗಳ ವಿಡಿಯೋ ಚಿತ್ರೀಕರಣ ಮತ್ತು ಛಾಯಾಚಿತ್ರಗಳನ್ನು ಆ್ಯಪ್ ಮೂಲಕ ಆಯೋಗದ ಗಮನಕ್ಕೆ ತರಬಹುದಾಗಿದೆ. ಚುನಾವಣಾ ಸಂದರ್ಭದಲ್ಲಿ ಓಟಿಗಾಗಿ ಅಕ್ರಮ ನಡೆಸುವವರ ವಿರುದ್ಧ ಸಿವಿಜಿಲ್ ಆ್ಯಪ್‌ನಲ್ಲಿ ಫೋಟೋ ಮತ್ತು ವಿಡಿಯೋ ಅಪಲೋಡ್ ಮಾಡಿ ದೂರು ನೀಡಬಹುದಾಗಿದ್ದು, ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಈ ಆ್ಯಪ್ ಹೆಚ್ಚು ಅನುಕೂಲವಾಗಲಿದೆ.

ಸಾರ್ವಜನಿಕರು ತಮ್ಮ ಸ್ಮಾರ್ಟ್ ಫೋನ್‌ನ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಸರ್ಚ ಮಾಡಿದಲ್ಲಿ ಈ ಆ್ಯಪ್ ಲಭ್ಯವಾಗಲಿದೆ. ಈ ಆಪ್ ಇನ್‌ಸ್ಟಾಲ್ ಮಾಡಿ, ತಮ್ಮ ಹೆಸರು, ಮೊಬೈಲ್ ಸಂಖ್ಯೆ, ಇಮೇಲ್ ಹಾಗೂ ಮತಕ್ಷೇತ್ರದ ಹೆಸರು ನಮೂದಿಸಿದರೆ ಸಾಕು ಆ್ಯಪ್‌ನಲ್ಲಿ ಯಾವುದೇ ರೀತಿಯ ಚುನಾವಣಾ ಸಂದರ್ಭದಲ್ಲಿ ನಡೆಯುವ ಅಕ್ರಮಗಳದ್ದಲ್ಲಿ ವಿಡಿಯೋ ಮತ್ತು ಛಾಯಾಚಿತ್ರವನ್ನು ಅಪಲೋಡ್ ಮಾಡಬಹುದಾಗಿದೆ. ಈ ಪ್ರಕ್ರಿಯೆಯ ಸಂಪೂರ್ಣ ಉಚಿತವಾಗಿರುತ್ತದೆ. ದಾಖಲಾದ ದೂರುಗಳಿಗೆ ತಕ್ಷಣ ಕ್ರಮ ಕೈಗೊಳ್ಳಲಿದ್ದು, 100 ನಿಮಿಷದಲ್ಲಿಯೇ ಅಧಿಕಾರಿಗಳಿಂದ ಉತ್ತರ ಸಹ ಸಿಗಲಿದೆ. ಚುನಾವಣಾ ಅಕ್ರಮಗಳ ತಡೆಗೆ ಸಾರ್ವಜನಿಕರ ಬಳಕೆಗೆ ಈ ಆ್ಯಪ್ ಹೆಚ್ಚಿನ ಅನುಕೂಲವಾಗಲಿದ್ದು, ಯಾವುದೇ ರೀತಿಯ ಹಣ, ಮದ್ಯ, ಉಡುಗೊರೆಗೆ ಸಂಬಂಧಪಟ್ಟಂತೆ ಅಕ್ರಮ ಚಟುವಟಿಕೆಗಳು ನಡೆದಲ್ಲಿ ತಕ್ಷಣ ದೂರು ಸಲ್ಲಿಸಬಹುದಾಗಿದೆ. ದೂರು ಸಲ್ಲಿಸುವವರ ಹೆಸರನ್ನು ಗೌಪ್ಯವಾಗಿ ಸಹ ಇಡಲಾಗುತ್ತದೆ. ಸಿವಿಜಿಲ್ ಮೂಲಕ ದೂರು ಸ್ವೀಕರಿಸಲು ಚುನಾವಣಾ ಘೋಷಣೆಯಾದ ಮಾರ್ಚ 15 ರಿಂದಲೇ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಘಟಪ್ರಭಾ ನದಿಗೆ ನೀರು ಬಿಡಲು ಆಗ್ರಹ

ಬೀಳಗಿ: ಘಟಪ್ರಭಾ ನದಿ ಬತ್ತಿ ಬರಿದಾಗಿದ್ದು, ಭೂಮಿಯುದ್ದಕ್ಕೂ ಬೆಳೆಗಳು ಒಣಗಲಾರಂಭಿಸಿವೆ. ಮೇಯಲು ಹೋದ ಮೂಕಪ್ರಾಣಿಗಳು ನೀರಿಗಾಗಿ ಪರದಾಡುತ್ತಿರುವುದರಿಂದ ಹಿಡಕಲ್ ಜಲಾಶಯದಿಂದ ನದಿಗೆ ನೀರು ಹರಿಸಬೇಕೆಂದು ಚಿಮ್ಮಡ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ಕಬ್ಬು ಬೆಳೆಗಾರ ಸಂಘದ ಪ್ರಧಾನ ಕಾರ್ಯದರ್ಶಿ ಶಿವು ಕೆರಕಲಮಟ್ಟಿ ಆಗ್ರಹಿಸಿದ್ದಾರೆ. ಘಟಪ್ರಭಾ ನದಿಗೆ ನೀರು ಬಿಡದಿದ್ದರೆ ನದಿ ಪಾತ್ರದ ಕಾತರಕಿ, ಲಿಂಗಾಪೂರ (ಎಸ್.ಕೆ), ಕೊಪ್ಪ (ಎಸ್.ಕೆ.), ಚಿಕ್ಕಾಲಗುಂಡಿ, ಹೆರೇಲಗುಂಡಿ, ಅಂಕಲಗಿ, ಶಾರದಾಳ, ಬದಾಮಿ, ಛಂತನೂರ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳಲಿದೆ. ಅಲ್ಲದೇ ಜಮೀನುಗಳಲ್ಲಿರುವ ಬೆಳೆಗಳು ಕಮರಿ ಹೋಗಲಿವೆ. ಆದ್ದರಿಂದ ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಕೂಡಲೇ ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಗೆ ನೀರು ಹರಿಸಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಮನವಿ ಸಲ್ಲಿಕೆ ನಾಳೆ

ಕಲಾದಗಿ: ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಕಲ್ಪಿಸಿರುವ ಅನುಚ್ಛೇದ-16ರಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸಿ ಕೊಟ್ಟಿದ್ದು, 101 ಪರಿಶಿಷ್ಟ ಜಾತಿಗಳಲ್ಲಿ ಜನಸಂಖ್ಯೆಗನುಗುಣವಾಗಿ ಒಳ ಮೀಸಲಾತಿ ಸಮರ್ಪಕ ಜಾರಿ ಹಾಗೂ ಏಪಿಡಿ ಸಾಲಪ್ಪ ವರದಿಯ ಅನುಷ್ಠಾನಕ್ಕೆ ಆಗ್ರಹಿಸಿ ಮಾ.26ರಂದು ಗುರುವಾರ ಬೆಂಗಳೂರಿನ ಫ್ರೀಡಂಪಾರ್ಕನಲ್ಲಿ ಬಹಿರಂಗ ಮನವಿ ಸಲ್ಲಿಸಲಾಗುವುದು ಎಂದು ಪ್ರೊ.ಕೃಷ್ಣಪ್ಪ ಸ್ಥಾಪಿತ ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಫಕೀರಪ್ಪ ಮಾದರ ತಿಳಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯ ಶಿಫಾರಸ್ಸಿನಂತೆ ಪರಿಶಿಷ್ಟ ಜಾತಿ, ವರ್ಗ ಮೀಸಲಾತಿ ಕಾಯ್ದೆಯನ್ನು ಶೇ.24ರಂತೆ ಕೇಂದ್ರ ಸರ್ಕಾರ ಕೂಡಲೇ ಜಾರಿ ಮಾಡುವಂತೆ ಕ್ರಮವಹಿಸಿ ಸುತ್ತೋಲೆ ಹೊರಡಿಸಬೇಕು. ರಾಜ್ಯ ಸರ್ಕಾರ ಹಾಲಿ ನಿರ್ಣಯಿಸಿರುವ 56,432 ಸಾವಿರ ಹುದ್ದೆಗಳ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿಗೆ ನಿಗಧಿ ಪಡಿಸಿರುವ ಶೇ.15ರ ಮೀಸಲಾತಿಯಲ್ಲಿ ಮಾ.27ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಕಲ್ಪಿಸಿ 101ಜಾತಿಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲು ವಿಶೇಷ ಆದೇಶ ಕೊಡಬೇಕು. ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಪ್ರಕಾರ ಜಿಲ್ಲಾಮಟ್ಟದ ಅಧಿಕಾರಿಗಳು ಕಾಯ್ದೆಯನ್ನು ಉಲ್ಲಂಘಿಸಿ ತೀರ್ಪುಗಳನ್ನು ನೀಡುತ್ತಿದ್ದು ಅಂತಹ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ರಾಜ್ಯ ಸರ್ಕಾರಕ್ಕೆ ಬಹಿರಂಗ ಮನವಿ ಸಲ್ಲಿಸಲಾಗುತ್ತಿದ್ದು ರಾಜ್ಯ ಸಮಿತಿ ಸಂಚಾಲಕ ಹೆಣ್ಣೂರು ಶ್ರೀನಿವಾಸ ಸೇರಿದಂತೆ ಇತರರು ಪಾಲ್ಗೊಳ್ಳುವರು ಎಂದು ತಿಳಿಸಿದ್ದಾರೆ.



ಬಾಗಲಕೋಟೆ: ಇತ್ತೀಚೆಗೆ ಶಿವಮೊಗ್ಗದ ಹುಲಿ ಸಿಂಹ ಸಫಾರಿಯಲ್ಲಿ ತರಬೇತಿ ಪಡೆಯುತ್ತಿದ್ದ ಪಶು ವೈದ್ಯಾಧಿಕಾರಿ ಡಾಕ್ಟರ ಸಮೀಕ್ಷಾ ರೆಡ್ಡಿ ನೀರಾನೆ ದಾಳಿಯಿಂದ ಮೃತಪಟ್ಟಿದ್ದು, ಸಮೀಕ್ಷಾ ಅವರಿಗೆ ಬಾಗಲಕೋಟೆ ಪಶು ವೈದ್ಯಕೀಯ ಸಂಘದಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪಶು ಸಂಗೋಪನೆ ಇಲಾಖೆಯ ಉಪನಿರ್ದೇಶಕ ಡಾ.ಶಿವಕುಮಾರ ಹೊಳೆಪ್ಪಗೋಳ, ಮುಖ್ಯ ಪಶು ವೈದ್ಯಾಧಿಕಾರಿ ಡಾ.ಆರ್.ಎಸ್.ಪದರಾ, ಡಾ.ಗೋವಿಂದ ರಾಠೋಡ, ಡಾ. ಮಾಂತೇಶ ಹೊಸಮನಿ, ಡಾ.ಬಸವಣ್ಣವರ ಸೇರಿದಂತೆ ಜಿಲ್ಲೆಯ ಇತರ ಪಶು ವೈದ್ಯಾಧಿಕಾರಿಗಳು ಇದ್ದರು.

ಪ್ರಾಚೀನ ಸ್ಮಾರಕಗಳು ಐತಿಹಾಸಿಕ ಪ್ರತೀಕ

ಜಮಖಂಡಿ: ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಇತಿಹಾಸ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಪ್ರಾಚೀನ ಸ್ಮಾರಕಗಳು ಮತ್ತು ರಕ್ಷಣೆ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಹುನ್ನೂರಿನ ಪ್ರಥಮ ದರ್ಜೆ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಎನ್.ವಿ.ಅಸ್ಕಿ ಉಪನ್ಯಾಸ ನೀಡಿ, ಪ್ರಾಚೀನ ಸ್ಮಾರಕಗಳು ನಮ್ಮ ದೇಶದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯ ಪ್ರತೀಕಗಳಾಗಿವೆ ಎಂದು ಹೇಳಿದರು.ಮಹಾರಾಷ್ಟ್ರದ ಅಜಂತಾ, ಎಲ್ಲೋರಾ ಗುಹೆಗಳು ವಿಶ್ವ ಪ್ರಸಿದ್ಧ ಸ್ಮಾರಕಗಳಾಗಿದ್ದು, ಎಲ್ಲೋರದಲ್ಲಿ ಒಟ್ಟು 34 ಗುಹೆಗಳಿದ್ದು, ಬೌದ್ಧ, ಜೈನ ಮತ್ತು ಹಿಂದು ಧರ್ಮಗಳಸಂಯೋಜನೆತೋರಿಸುತ್ತವೆ. ಅದೇರೀತಿಬೌದ್ಧಧರ್ಮದಪ್ರಸಾರದಲ್ಲಿಸರ್ನಾಥ, ರಾಜ್ಗಿರ್ ಹಾಗೂ ನಳಂದಾ ಪ್ರಮುಖ ಕೇಂದ್ರಗಳಾಗಿದ್ದು, ಬೌದ್ಧ ಭಿಕ್ಷುಗಳು ದೇಶದಾದ್ಯಂತ ಜ್ಞಾನ ಹರಡಿದರೆಂದು ಹೇಳಿದರು.ಭಾರತದ ವಿವಿಧ ಭಾಗಗಳ ಸಾಂಸ್ಕೃತಿಕ ವೈವಿಧ್ಯತೆ, ಪಂಚ ನದಿಗಳ ಬೀಡಾಗಿದ್ದರಿಂದ ಪಂಜಾಬ ಎಂದು ಕರೆಯಲ್ಪಡುತ್ತದೆ. ಮುಂಬೈನ ತಾಜ್ ಹೊಟೇಲ್ ಕೂಡ ಐತಿಹಾಸಿಕ ವಾಸ್ತು ಶಿಲ್ಪದ ಒಂದು ಪ್ರಮುಖ ಉದಾಹರಣೆಯಾಗಿವೆ. ಗುಪ್ತರ ಕಾಲದಲ್ಲಿ ಉತ್ತರ ಭಾರತದಲ್ಲಿ ನಾಗರಶೈಲಿ ಅಭಿವೃದ್ಧಿಯಾಗಿದೆ. ದಕ್ಷಿಣ ಭಾರತದಲ್ಲಿ ದ್ರಾವಿಡ ಶೈಲಿ ಪಿರಾಮಿಡ್ ಆಕಾರದ ಗೋಪುರಗಳಿಂದ ಪ್ರಸಿದ್ಧಿಯಾಗಿದೆ. ಅವುಗಳ ರಕ್ಷಣೆಯು ಪ್ರತಿಯೊಬ್ಬರ ಕರ್ತವ್ಯ ಎಂದರು. ಪ್ರಾಂಶುಪಾಲೆ ಡಾ.ಸುನಂದಾ ಎಸ್. ಶಿರೂರ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಜಮಖಂಡಿ: ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಇತಿಹಾಸ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಪ್ರಾಚೀನ ಸ್ಮಾರಕಗಳು ಮತ್ತು ರಕ್ಷಣೆ ವಿಷಯದ ಮೇಲೆ ವಿಶೇಷ ಉಪನ್ಯಾಸ ನಡೆಯಿತು. ಜಯಶ್ರೀ ಕಡಪಟ್ಟಿ, ಡಾ.ಸಚಿನ್ ಕೊಕಟನೂರ, ಆರ್.ಎಸ್. ಜಾಧವ, ಸಂಜೀವಕುಮಾರ್ ಆರ್., ಡಾ.ಎ.ಎಸ್.ಪೂಜಾರಿ, ಡಾ.ಬಿ.ಎಂ.ಕೊರಬು, ಡಾ.ಬಿ.ಎನ್.ಜಾಧವ, ಡಾ.ಎ.ವೈ.ಕಾಂಬಳೆ, ಎಸ್.ಎನ್.ದೇಸ್ರೋಟ, ಡಾ.ಎ.ಐ.ಮಯುರ ಇದ್ದರು.

ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಅಧಿಕಾರಿಗಳಿಗೆ ಸಿಇಒ ಕುರೇರ ಸೂಚನೆ

ಕುಡಿಯುವ ನೀರಿನ ಸಮಸ್ಯೆಗೆ ಕ್ರಮ ವಹಿಸಿ

ಬಾಗಲಕೋಟೆ: ಪ್ರಖರ ಬೇಸಿಗೆಯ ಕಾಲ ಪ್ರಾರಂಭವಾಗಿದ್ದು, ಮುಂದಿನ ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವ ಮೂಲಕ ಎಲ್ಲಾ ಸಿದ್ಧತೆಯನ್ನು ಮಾಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಸೂಚಿಸಿದರು.

ಜಿಲ್ಲಾ ಪಂಚಾಯತಿ ಸಭಾಭವನದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳೊಂದಿಗೆ ಕುಡಿಯುವ ನೀರು ಸರಬರಾಜು ಕುರಿತು ವಿಡಿಯೋ ಸಂವಾದ ಸಭೆನಡೆಸಿ ಮಾತನಾಡಿದ ಅವರು, ಯಾವ ಯಾವ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇದೆ ಎಂದು ತಿಳಿದುಕೊಂಡು ಪರಿಹಾರ ಕಂಡುಕೊಳ್ಳಬೇಕು. ಸಾರ್ವಜನಿಕರಿಂದ ದೂರುಗಳು ಬರದಂತೆ ನೋಡಿಕೊಳ್ಳಬೇಕು ಒಂದು ವೇಳೆ ದೂರು ಬಂದರು ಕೂಡಾ 24 ಗಂಟೆಯೊಳಗೆ ಸಮಸ್ಯೆ ಬಗೆ ಹರಿಸುವ ಕೆಲಸವಾಗಬೇಕು ಎಂದರು.

ಪಂಚಾಯತಿ ಬೋರವೆಲ್ ಬಳಕೆಗೆ ಯೋಗ್ಯವಲ್ಲ



ಎಂದು ಕಂಡು ಬಂದಲ್ಲಿ ಖಾಸಗಿ ಬೋರವೆಲ್ ಗಳನ್ನು ಗುರುತಿಸಿಕೊಂಡು ಅವುಗಳ ಮಾಲಿಕರೊಂದಿಗೆ ಕರಾರು ಪತ್ರ ಮಾಡಿಕೊಂಡು ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ಖಾಸಗಿ ಬೋರವೆಲ್ ಸಿಗದಿದ್ದ ಪಕ್ಷದಲ್ಲಿ ಟ್ಯಾಂಕರ್‌ಗಳನ್ನು ಬಳಸಿ ನೀರು ಪೂರೈಸುವ ಕೆಲಸ ಮಾಡಬೇಕು. ಓವರ್ ಹೆಡ್ ಟ್ಯಾಕ್ ಗಳು ದುರಸ್ತಿ ವ್ಯವಸ್ಥೆಯಲ್ಲಿದ್ದರೆ ದುರಸ್ತಿ ಮಾಡಿಸಿಕೊಡಲಾಗುವುದು. ಹೊಸ ಬೋರವೆಲ್‌ಗಳಿಗೆ ಅವಕಾಶವಿರುವದಿಲ್ಲ, ಕೇವಲ ಬೇಸಿಗೆ ಸಮಸ್ಯೆಗಾಗಿ ಹೊಸ ಕೊಳವೆ ಬಾವಿ ಕೊರೆಯಿಸುವ ಕಾರ್ಯ ಸೂಕ್ತವಲ್ಲ ಎಂದರು.

ಗ್ರಾಮಗಳಲ್ಲಿರುವ ಶುದ್ದ ಕುಡಿಯುವ ನೀರಿನ ಘಟಕಗಳು ಸುಸ್ಥಿಯಲ್ಲಿದ್ದು, ಜನಬಳಕೆಗೆ ಸದಾಕಾಲ ದೊರೆಯುವಂತೆ ಅಗತ್ಯ ಕ್ರಮವಹಿಸಿ, ಗ್ರಾಮಗಳಲ್ಲಿನ ಎಲ್ಲ ಜಲಮೂಲಗಳ ಸುತ್ತಲಿನ ಪ್ರದೇಶದಲ್ಲಿ ಇರಬಹುದಾದ ತ್ಯಾಜ್ಯ ಹಾಗೂ ಚರಂಡಿ ನೀರನ್ನು ಸರಿಯಾಗಿ ವಿಲೇವಾರಿ ಮಾಡಿ ಕುಡಿಯುವ ನೀರು ಕಲುಷಿತಗೊಳ್ಳದಂತೆ ತಡೆಗಟ್ಟಬೇಕು, ಬಹುಗ್ರಾಮ ನೀರು ಸರಬರಾಜು ಮಾಡುವ ಓವರ್ ಹೆಡ್ ಟ್ಯಾಂಕ್ ಗಳನ್ನು ಕಾಲ ಕಾಲಕ್ಕೆ ಸ್ವಚ್ಛಗೊಳಿಸಿ, ಯಾವುದೇ ರೀತಿಯ ರೋಗಾಣು ಬ್ಯಾಕ್ಟೀರಿಯಾ ಅಥವಾ ಫಂಗಸ್ ಸೇರದಂತೆ ಬೆಳೆಯದಂತೆ ನಿಯಮಿತವಾಗಿ ಎಲ್ಲ ಬಗೆಯ ಜಲಸಂಗ್ರಹಾರಗಳನ್ನು ಸ್ವಚ್ಛಗೊಳಿಸಿ, ವೈಜ್ಞಾನಿಕ ರೀತಿಯಲ್ಲಿ ಕ್ಲೋರಿನೇಷನ್ ಮಾಡಿ ಸ್ವಚ್ಛಗೊಳಿಸತಕ್ಕದ್ದು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿ ಆಕಾಶ ಸೇರಿದಂತೆ ಇತರರು ಇದ್ದರು.

ಅಭಿವೃದ್ಧಿಗೆ ಮತ್ತೊಮ್ಮೆ ಗೆಲ್ಲಿಸಿ: ಚರಂತಿಮಠ

ಬಾಗಲಕೋಟೆ: ಬಿಜೆಪಿಯಿಂದ ಮಾತ್ರ ಅಭಿವೃದ್ಧಿ ಸಾಧ್ಯವಿದೆ ಎಂದು ಕ್ಷೇತ್ರದ ಜನರು ತೀರ್ಮಾಣ ಮಾಡಿದ್ದು ಬಾಗಲಕೋಟೆ ಮತಕ್ಷೇತ್ರದ ಎಲ್ಲ ಜನರ ಭರವಸೆ ವಿಶ್ವಾಸದಿಂದ ಬಿಜೆಪಿ ಗೆಲ್ಲುವುದು ನಿಶ್ಚಿತ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹೇಳಿದರು. ನಗರದ ಆರಾಧ್ಯ ದೈವ ಮೋಟಗಿ ಬಸವೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಚಾರ ಆರಂಭಿಸಿದ ವೀರಣ್ಣ ಚರಂತಿಮಠವರು ಮನೆ ಮನೆಗೆ ತೆರಳಿ ಕಮಲದ ಗುರುತಿಗೆ ಮತ ನೀಡುವ ಮೂಲಕ ಬಿಜೆಪಿಯನ್ನು ಗೆಲ್ಲಿಸಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು.

ನಾಮಪತ್ರ ವೇಳೆಸಾವಿರಾರುಸಂಖ್ಯೆಯಲ್ಲಿ ಜನ ಬಂದು ನಮ್ಮನ್ನು ಬೆಂಬಲಿಸಿದ್ದಾರೆ. ಕ್ಷೇತ್ರದಲ್ಲಿ ಬಿಜೆಪಿ ಪರವಾಗಿ ಉತ್ತಮ ವಾತಾವರಣ ಇದೆ. ಕಾರ್ಯಕರ್ತರಲ್ಲಿಯೂ ಕೂಡ ಉತ್ಸಾಹ ಇಮ್ಮಡಿಯಾಗಿದೆ. ಬಾಗಲಕೋಟೆ ಅಭಿವೃದ್ಧಿಗಾಗಿ ಬಿಜೆಪಿ ಮುಖ್ಯವಾಗಿದೆ ಹೀಗಾಗಿ ಜನ ನಮ್ಮನ್ನು ಗೆಲ್ಲಿಸುತ್ತಾರೆ ಎಂದರು.

ರಾಜ್ಯದಲ್ಲಿ ಮತ್ತು ಬಾಗಲಕೋಟೆ ಮತಕ್ಷೇತ್ರದಲ್ಲಿಯೂ ಕೂಡ ಅಭಿವೃದ್ಧಿ ಶೂನ್ಯವಾಗಿದೆ. ರಾಜ್ಯ ಸರ್ಕಾರದ ಆಡಳಿತಕ್ಕೆ ಕೂಡ ಜನ ಬೇಸತ್ತಿದ್ದು ಬಿಜೆಪಿಯನ್ನು ಬೆಂಬಲಿಸಲು ಜನ ಹೆಚ್ಚು ಆಸಕ್ತಿ ಹೊಂದಿದ್ದಾರೆ ಎಂದರು. ಡಾ.ದೇವರಾಜ ಪಾಟೀಲ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶ ಅಭಿವೃದ್ಧಿಹೊಂದಿದ ದೇಶವಾಗಿ ಬೆಳೆಯುತ್ತಿದೆ. ಡಾ.ವೀರಣ್ಣ ಚರಂತಿಮಠ ಅವರ ಶಾಸಕರಾಗಿದ್ದ ಅವಧಿಯಲ್ಲಿ ಅತಿ ಹೆಚ್ಚು ಅಭಿವೃದ್ಧಿ ಕಂಡಿದೆ. ಅವರ ಸೇವೆ ಬಾಗಲಕೋಟೆಗೆ ಮುಖ್ಯವಾಗಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ರಾಜು ರೇವಣಕರ್, ಕುಮಾರ ಯಳ್ಳಿಗುತ್ತಿ, ಶಿವಾನಂದ ಟವಳಿ, ಯಲ್ಲಪ್ಪ ಬೆಂಡಿಗೇರಿ,ಕುಮಾರ ಯಳ್ಳಿಗುತ್ತಿ, ದುಂಡಪ್ಪ ಏಳಮ್ಮಿ, ಮುತ್ತು ಗರಸಂಗಿ, ಮಾನೇಶ ಅಂಬಿಗೇರ, ನಾಗರಾಜ ಕಟ್ಟಿಮನಿ, ಶಂಕರ ಸಗರ, ಪ್ರೇಮಾ ಅಂಬಿಗೇರ, ಶಶಿಕಲಾ ಮಜ್ಜಗಿ, ರೇಖಾ ಕಲಬುರಗಿ. ಸ್ಮಿತಾ ಪವಾರ, ಭಾಗ್ಯಶ್ರೀ ಹಂಡಿ ಶಾಂತಪ್ಪ ಬಾಡದ, ಶಂಕರ ಗಲಗ, ಶರಣಪ್ಪ ಕೆರೂರ, ಪರಶುರಾಮ ದಾವಣಗೇರಿ. ಸುರೇಶ ಮಜ್ಜಗಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.



ಅಧ್ಯಕ್ಷರಾಗಿ ಸಿದ್ಧಾರ್ಥ ಗೋಠೆ ಆಯ್ಕೆ

ಬಾಗಲಕೋಟೆ: ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ 2026-29 ನೇ ಸಾಲಿನ ಜಿಲ್ಲಾ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಹಾಯಕ ರಿಟರ್ನಿಂಗ್ ಅಧಿಕಾರಿಯಾದ ಸಂಜೀವಕುಮಾರ ಎಸ್.ಮಾನ್ವಿ ತಿಳಿಸಿದ್ದಾರೆ.

2026-29 ನೇ ಸಾಲಿನ ಅವಧಿಗಾಗಿ ಪಿಡಿಓ ಸಂಘದ ಜಿಲ್ಲಾಧ್ಯಕ್ಷರಾಗಿ ಸಿದ್ಧಾರ್ಥ ಗೋಠೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ ನಾಯ್ಕ, ಉಪಾಧ್ಯಕ್ಷರಾಗಿ ಲಕ್ಷ್ಮಣ ಶಾಂತಗೇರಿ, ಅರ್ಚನಾ ಕುಲಕರ್ಣಿ, ಖಜಾಂಚಿಯಾಗಿ ಖುಬಾಸಿಂಗ್ ಜಾಧವ, ರಾಜ್ಯ ಪರಿ?ತ್ ಸದಸ್ಯರಾಗಿ ಶಿವಾನಂದ



ನರಸನ್ನವರ, ಸಂಘಟನಾ ಕಾರ್ಯದರ್ಶಿಗಳಾಗಿ ಸದಾಶಿವ ಪರಸನ್ನವರ ರಂಜಿತಾ ಹತ್ತಿ, ಕ್ರೀಡಾ ಕಾರ್ಯದರ್ಶಿಯಾಗಿ ರಮೇಶ ಚನ್ನಾನಿ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ವಿಮಲಾ ಕಲ್ಮನಿ ಇವರೆಲ್ಲರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ತಿಳಿಸಿದ್ದಾರೆ.

ವಿಶ್ವಕರ್ಮ ಸಮಾಜದಿಂದ ಕಲೆ, ಸಂಸ್ಕೃತಿ ಉಳಿವು

ಬೀಳಗಿ: ವಿಶ್ವಕರ್ಮ ಸಮಾಜದವರು ಕಲೆ ಮತ್ತು ಸಂಸ್ಕೃತಿ ಉಳಿಸಿ ಬೆಳೆಸುವವರು. 1902ಕ್ಕೂ ಮುಂಚೆ ಸುಮಾರು 350 ಪ್ರಕಾರದ ವಿವಿಧ ಲೋಹದ ವಸ್ತುಗಳನ್ನು ಈ ಸಮಾಜದವರು ತಯಾರಿಸುತ್ತಿದ್ದರು. ಇವುಗಳನ್ನು ಖರೀದಿಸಲು ಯುರೋಪಿಯನ್ನರು ಭಾರತಕ್ಕೆ ಬರುತ್ತಿದ್ದರು ಎನ್ನುವುದು ಸಮಾಜದ ಹಿರಿಮೆಗೆ ಸಾಕ್ಷಿ ಎಂದು ಕೋಲ್ಹಾಪುರ ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಕಾಳಿಕಾ ಕಮಠೇಶ್ವರ ದೇವಸ್ಥಾನದ ದಶಮಾನೋತ್ಸವ ಹಾಗೂ ಯುಗಾದಿ ಸಂಭ್ರಮದ ಅಂಗವಾಗಿ ಆಯೋಜಿಸಿದ್ದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿ, ವಿಶ್ವಕರ್ಮ ಸಮಾಜವು ದೇಶದ ಅತ್ಯಂತ ಪ್ರಾಚೀನ ಕುಶಲಕರ್ಮಿಗಳ ಸಮುದಾಯದಲ್ಲೊಂದಾಗಿದೆ ಎಂದರು.

ಜಗತ್ತಿನ ಮೊಟ್ಟಮೊದಲ ನಗರ ಹಾಗೂ ಸುವರ್ಣ ನಗರಗಳನ್ನು ನಿರ್ಮಿಸಿದ ಕೀರ್ತಿ ಈ ಸಮಾಜದ ದೈವ ವಿಶ್ವಕರ್ಮನಿಗೆ ಸಲ್ಲುತ್ತದೆ. ಸಮಾಜದಲ್ಲಿ ಕರ್ಮ, ವೈಶ್ಯ ಹಾಗೂ ಭಿಕ್ಷಾ ವೃತ್ತಿಗಳು ಪ್ರಮುಖವಾಗಿವೆ. ಈ ಮೂರು ವೃತ್ತಿಗಳನ್ನು ಹೊರತುಪಡಿಸಿದರೆ ನಾಲ್ಕನೇ ವೃತ್ತಿಯೇ ಇಲ್ಲ ಎಂದು ಹೇಳಿದರು.

ಪದ್ಮಶ್ರೀ ಪುರಸ್ಕೃತರು, ವಿಕಲಚೇತನರ ವಿಭಾಗದ ಮಾಜಿ ರಾಜ್ಯ ಆಯುಕ್ತ ಡಾ. ಕೆ.ಎಸ್.ರಾಜಣ್ಣ ಸನ್ಮಾನ ಸ್ವೀಕರಿಸಿ ಮಾತನಾಡಿ, ಸಾಧನೆ ಮಾಡಲು ಅಂಗಾಂಗಗಳು ಮುಖ್ಯವಲ್ಲ, ದೃಢ ಸಂಕಲ್ಪ ಮತ್ತು ಸಾಧಿಸಲೇಬೇಕೆಂಬ ಛಲ ಮುಖ್ಯ. ದಿವ್ಯಾಂಗರಿಗೆ ರಾಜಕೀಯವಾಗಿ ಹೆಚ್ಚಿನ ಅವಕಾಶಗಳು ಸಿಗಬೇಕು. ದಿವ್ಯಾಂಗರ ಹಾಗೂ ಅಭಿವೃದ್ಧಿ ನಿಗಮಗಳಿಗೆ ದಿವ್ಯಾಂಗರನ್ನೇ ಮುಖ್ಯಸ್ಥರನ್ನಾಗಿ ನೇಮಿಸಬೇಕು. ವಿಶೇಷ ಚೇತನ ಮಕ್ಕಳನ್ನು ದೇವರಂತೆ ಕಂಡು, ಅವರಿಗೆ ಅನುಕಂಪದ ಬದಲು ಅವಕಾಶಗಳನ್ನು ನೀಡಬೇಕು ಎಂದು ಹೇಳಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಹಸ್ತಪ್ರತಿ ವಿಭಾಗದ ಮುಖ್ಯಸ್ಥ ಡಾ. ವೀರೇಶ ಬಡಿಗೇರ ಮಾತನಾಡಿದರು.

ತಾಲೂಕು ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ಅಧ್ಯಕ್ಷ ನಾಗರಾಜ ಟಂಕಸಾಲಿ ಅಧ್ಯಕ್ಷತೆ ವಹಿಸಿದ್ದರು. ಶಿರೋಳದ ಶಂಕರಾರೂಢ ಸ್ವಾಮೀಜಿ, ಶಹಾಪೂರದ ವಿಶ್ವಕರ್ಮ ಏಕದಂಡಗಿ ಮಠದ ಕಾಳಹಸ್ತೇಂದ್ರ ಸ್ವಾಮೀಜಿ, ಚಿಕ್ಕಾಲಗುಂಡಿಯ ಶಿವಶರಣಾನಂದ ಸ್ವಾಮಿಗಳು, ವಿಜಯಪೂರದ ಕೃಷಿಕ- ವರ್ತಕ ಈರಣ್ಣ ಪತ್ತಾರ, ಪ್ರಕಾಶ ಸೋನಾರ, ಭಾಗ್ಯಲಕ್ಷ್ಮಿ ರಾಜಣ್ಣ, ವಿನಯ ಟಂಕಸಾಲಿ, ಚಂದ್ರಕಾಂತ ಪತ್ತಾರ, ಅನಿಲ ಬಡಿಗೇರ, ದೇವೇಂದ್ರ ಬಡಿಗೇರ, ರಮೇಶ ಪತ್ತಾರ(ಬೆಳ್ಳುಬ್ಬಿ), ಶ್ರೀನಿವಾಸ ಟಂಕಸಾಲಿ ಉಪಸ್ಥಿತರಿರುವರು.



ಬದುಕಿನ ಅನುಭವಗಳೇ ಮಕ್ಕಳ ಸಾಹಿತ್ಯಕ್ಕೆ ಜೀವಾಳ: ಖಾಡೆ

ಮುಧೋಳ: ನೈಜ ಜೀವನದ ಸಾಹಸಮಯ ಅಂಶಗಳನ್ನು ಸಾಹಿತ್ಯದಲ್ಲಿ ಅಳವಡಿಸಿಕೊಂಡಾಗ ಮಾತ್ರ ಮಕ್ಕಳ ಮನಸ್ಸನ್ನು ಗೆಲ್ಲುವ ಶ್ರೇಷ್ಠ ಕಾದಂಬರಿಗಳನ್ನು ರಚಿಸಲು ಸಾಧ್ಯ ಎಂದು ಹಿರಿಯ ಸಾಹಿತಿ ಡಾ.ಪ್ರಕಾಶ ಖಾಡೆ ಹೇಳಿದರು.

ನಗರದ ಕಸಾಪ ಭವನದಲ್ಲಿ ಹಮ್ಮಿಕೊಂಡಿದ್ದ 'ಮೇಘಮೈತ್ರಿ ದ್ವಿತೀಯ ಯುವ ಸಾಹಿತ್ಯ ಸಮ್ಮೇಳನದ ಸಮಾರಂಭದಲ್ಲಿ ಸಾಹಿತಿ ಡಾ.ವೆಂಕಟೇಶ ಗುಡೆಪ್ಪನವರ ಅವರ 'ಶೋಧ' ಮಕ್ಕಳ ಸಾಹಸ ಕಾದಂಬರಿ ಹಾಗೂ ಹುಸೇನ ಪತ್ತೇಖಾನ ಅವರ 'ಹೆತ್ತವರು' ಕವನ ಸಂಕಲನ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು. ಇಂದಿನ ಕಾಲಘಟ್ಟದಲ್ಲಿ ಮಕ್ಕಳಿಗೆ ವೈಜ್ಞಾನಿಕ ಹಾಗೂ ಸಾಹಸ ಮನೋಭಾವ ಬೆಳೆಸುವ ಸಾಹಿತ್ಯದ ಅಗತ್ಯವಿದೆ. ಈ ನಿಟ್ಟಿನಲ್ಲಿ 'ಶೋಧ' ಕಾದಂಬರಿ ಅತ್ಯಂತ ಪ್ರಸ್ತುತವಾಗಿದೆ ಎಂದು ಅವರು ಶ್ಲಾಘಿಸಿದರು.

ಕೃತಿಯ ಕುರಿತು ಮಾತನಾಡಿದ ಅಂಕಣಕಾರ ಹಾಗೂ ನ್ಯಾಯವಾದಿ ಪ್ರಕಾಶ ವಸ್ತ್ರದ ಅವರು, ಸಾಹಿತ್ಯ ಎನ್ನುವುದು ಕೇವಲ ಕಲ್ಪನೆಯಲ್ಲ, ಅದು ಬದುಕಿನ ಅನುಭವಗಳ ಪ್ರತಿಬಿಂಬ. ಡಾ.ವೆಂಕಟೇಶ ಗುಡೆಪ್ಪನವರ ಅವರ ಬರಹಗಳು ಸಮಾಜದ ವಾಸ್ತವಕ್ಕೆ ಹತ್ತಿರವಾಗಿವೆ. ಮಕ್ಕಳ ಸಾಹಿತ್ಯದಲ್ಲಿ ಸಾಹಸ ಪ್ರವೃತ್ತಿಯನ್ನು



ಅಳವಡಿಸಿರುವುದು ಶ್ಲಾಘನೀಯ. ಇಂತಹ ಕೃತಿಗಳು ಯುವ ಪೀಳಿಗೆಯಲ್ಲಿ ಓದಿನ ಆಸಕ್ತಿಯನ್ನು ಹೆಚ್ಚಿಸುತ್ತವೆ ಎಂದು ತಿಳಿಸಿದರು.

ಆರಿಫ್ ರಾಜಾ, ರಶ್ಮಿ ಎಸ್, ಡಾ.ಶಿವಾನಂದ ಕುಬಸದ, ಬಿ.ರತ್ನಾಕರಶೆಟ್ಟಿ, ಡಾ. ವೆಂಕಟೇಶ ಗುಡೆಪ್ಪನವರ ಹಾಗೂ ಸಾಹಿತಿ ಸಿದ್ದಣ್ಣ ಬಾಡಗಿ ಅವರು ಸಾಹಿತ್ಯಿಕ ಮೌಲ್ಯಗಳ ಕುರಿತು ಮಾತನಾಡಿದರು. ಕಾನಿಪ ಸಂಘದ ಗೌರವ ಅಧ್ಯಕ್ಷ ಅಶೋಕ ಕುಲಕರ್ಣಿ, ಹಿರಿಯ ನಾಗರಿಕ ವೇದಿಕೆ ಅಧ್ಯಕ್ಷ ಕಲ್ಲಪ್ಪಣ್ಣ ಸಬರದ, ಸಾಹಿತಿಗಳಾದ ಭೀಮಣ್ಣ ಹುಣಸಿಕಟ್ಟಿ, ದ್ರಾಕ್ಷಾಯಣಿ, ಶ್ರೀಕಾಂತ ಮೇಗಾಡಿ, ವಿಜಯಲಕ್ಷ್ಮೀ ಕಗಲಗೊಂಬ, ರಮೇಶ ಅಣ್ಣಿಗೇರಿ, ರವಿ ಕೊಲ್ದಾರ, ಮಲ್ಲಿಕಾರ್ಜುನ ಅರಬಿ, ಅನಿತಾ ಪಾಟೀಲ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರಸ್ತುತ ಮಹತ್ವವಿದೆ: ರಾಯನಗೌಡರ

ಬಾದಾಮಿ: ಇಂದಿನ ಪೈಪೋಟಿ ಯುಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸಲಿದ್ದು, ಈ ನಿಟ್ಟಿನಲ್ಲಿ ಗುಣಮಟ್ಟದ ತರಬೇತಿ ಪಡೆದುಕೊಂಡು ಭವಿಷ್ಯವನ್ನು ವಿದ್ಯಾರ್ಥಿಗಳು ರೂಪಿಸಿಕೊಳ್ಳಬೇಕೆಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಸ್.ಬಿ.ರಾಯನಗೌಡರ ಹೇಳಿದರು.

ನಗರದ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ಸರಕಾರಿ ಪದವಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಬಿ.ಎ, ಬಿ.ಕಾಂ ಹಾಗೂ ಹಿರಿಯ ವಿದ್ಯಾರ್ಥಿಗಳಿಗೆ ಮೂರು ದಿನಗಳ ಕಾಲ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾನಿಪ ಸಂಘದ ಅಧ್ಯಕ್ಷ ಅಡವೇಂದ್ರ ಇನಾಮದಾರ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಜ್ಞಾನಾರ್ಜನೆ ಪಡೆದುಕೊಳ್ಳುವ ಮೂಲಕ ನಾಗರಿಕ ಸಮಾಜದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಬೇಕೆಂದರು.

ಹಿರಿಯ ಪತ್ರಕರ್ತ ಎಸ್.ಎಂ.ಹಿರೇಮಠ ಮಾತನಾಡಿ, ಈ ಉಚಿತ ತರಬೇತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳು ನೀಡುವ ಮಾಹಿತಿಯನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು. ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹನುಮಂತ ಅಪ್ಪನ್ನವರ ಮಾತನಾಡಿದರು. ನಂತರ ಬೆಂಗಳೂರಿನ ಆ್ಯಕ್ಟೀವ್ ಕೋಚಿಂಗ್ ಸೆಂಟರ್ ಮುಖ್ಯಸ್ಥ ಮಂಜುನಾಥ ಬಾಡಗಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.



ಇಂದು, ನಾಳೆ ಕಾರ್ಯಾಗಾರ

ಮಾ.25ರಂದು ಬುಧವಾರ ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿ ಶಂಕರ ಕುಂಬಾರ, ಮಾ.26ರಂದು ಗುರುವಾರ ಧಾರವಾಡದ ಸ್ಪರ್ಧಾ ಜೀನಿಯಸ್ ಮುಖ್ಯಸ್ಥ ಸಿದ್ದಣ್ಣ ದಳವಾಯಿ ಅವರಿಂದ ಸ್ಪರ್ಧಾ ತರಬೇತಿ ಕಾರ್ಯಾಗಾರ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಐಕ್ಯೂಎಸಿ ಸಂಯೋಜಕ ಡಾ.ಎಂ.ಎನ್.ಸಿದ್ಲಿಂಗಪ್ಪನವರ, ಗೋವರ್ಧನ ಪಿ.ಬಿ, ಕಾಂಚನಮಾಲಾ ಪಾಟೀಲ, ಚಂದ್ರಶೇಖರ ಹೆಗಡೆ, ಡಾ.ವಿ.ಬಿ.ಸಣ್ಣಸಕ್ಕರಗೌಡರ, ಡಾ.ಸೀಮಾ ಜಿ.ಕೆ, ಡಾ.ಬಾಬುರಾಯಣ್ಣ ಧನ್ನೂರ, ಸ್ಫೂರ್ತಿ ಸುತಗುಂಡಿ ಇದ್ದರು.

ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆ ಗಮನಿಸಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ನೇಮಕಗೊಂಡ ಮೈಕ್ರೋ ಅಬ್ಸರ್ವರಗಳಿಗೆ ಜಿಲ್ಲಾ ಪಂಚಾಯತಿ ನೂತನ ಸಭಾಭವನದಲ್ಲಿ ಮಂಗಳವಾರ ತರಬೇತಿ ಕಾರ್ಯಾಗಾರ ಜರುಗಿತು.

ಈ ವೇಳೆ ಮಾತನಾಡಿದ ಸಾಮಾನ್ಯ ವೀಕ್ಷಕ ಪಾರುಲ್ ಪಟವಾರಿ ಅವರು ಮೈಕ್ರೋ ಅಬ್ಸರ್ವರ್‌ಗಳ ಕರ್ತವ್ಯಗಳು ಹಾಗೂ ಜವಾಬ್ದಾರಿಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇವಿಎಂ ಹಾಗೂ ವಿವಿಪ್ಯಾಟ್ ಉಪಕರಣಗಳ ಕಾರ್ಯಾಚರಣೆ, ಮಾದರಿ ಮತದಾನ, ಮತದಾನದ ಆರಂಭ ಮತ್ತು ಅಂತ್ಯದ ಕ್ರಮಗಳ ಬಗ್ಗೆ ತಿಳಿಸಿಕೊಟ್ಟರು.

ಮತದಾನ ಪ್ರಾರಂಭದ ಮುಂಚೆಯೇ ನಿಯೋಜಿತ ಮತಗಟ್ಟೆಯಲ್ಲಿ ಹಾಜರಿದ್ದು, ಅಣಕು ಮತದಾನದ ಪ್ರಕ್ರಿಯೆಯನ್ನು ನಿಗಾವಹಿಸಬೇಕು. ಮತದಾನ ಆರಂಭದಿಂದ ಮುಕ್ತಾಯ ಆಗುವವರೆಗೆ ಹಾಜರಿದ್ದು, ಪ್ರತಿ ಹಂತದ ಮತದಾನದ ಪ್ರಕ್ರಿಯೆಯ ಮೇಲೆ ನಿಗಾವಹಿಸಿ, ಪ್ರತಿಹಂತದ ವಿವರಗಳನ್ನು ದಾಖಲಿಸಬೇಕು. ಮುಕ್ತ, ನ್ಯಾಯಸಮ್ಮತ ಸುಸೂತ್ರ ಚುನಾವಣೆಗಾಗಿ ಕಾರ್ಯನಿರ್ವಹಿಸಿ, ಚುನಾವಣಾ ಮಾರ್ಗಸೂಚಿಗಳನ್ನು ಪಾಲಿಸಬೇಕು. ಯಾವುದೇ ಸಮಸ್ಯೆಗಳು ಎದುರಾದರೂ ತಮ್ಮನ್ನು ಸೇರಿದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು



ಸಂಪರ್ಕಿಸಲು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಅವರು ಮಾತನಾಡಿ, ಮೈಕ್ರೋ ಅಬ್ಸರವರಗಳು ತಮಗೆ ವಹಿಸಿದ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಅದಕ್ಕಾಗಿ ತರಬೇತಿ ನೀಡಲಾಗುತ್ತಿದ್ದು, ಇದರ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ತರಬೇತಿದಾರರಾದ ಸಂಗಮೇಶ ಸಣತಂಗಿ ಮತದಾನ ದಿನದಂದು ಮತಗಟ್ಟೆಗಳಲ್ಲಿ ಅನುಸರಿಸಬೇಕಾದ ಪಾತ್ರದ ಜೊತೆಗೆ ಮತಗಟ್ಟೆಗಳಲ್ಲಿ ಯಾರು ಬರಬೇಕು. ಯಾರು ಬರಬಾರದು ಎಂಬುದರ ಬಗ್ಗೆ ವಿವರವಾಗಿ ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು. ಇದರ ಜೊತೆಗೆ ಸಾಮಾನ್ಯ ವೀಕ್ಷಕರಿಗೆ ಕಿವಿ, ಕಣ್ಣುಗಳಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಲೀಡ್ ಬ್ಯಾಂಕ್ ಮ್ಯಾನೇಜರ್ ರಾಜಕುಮಾರ ಹೂಗಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಳೆಹಾನಿ ಪ್ರದೇಶಕ್ಕೆ ಜೆಟಿಪಾ ಭೇಟಿ

ಕೆರೂರ: ಹೋಬಳಿಯ ನೀರಬೂದಿಹಾಳ, ಯಂಡಿಗೇರಿ, ಕರಡಿಗುಡ್ಡ ಎಸ್.ಎ ಗ್ರಾಮಗಳಲ್ಲಿ ಆಲಿಕಲ್ಲು ಮಳೆಯಿಂದ ಹಾನಿಯಾದ ರೈತರ ಜಮೀನುಗಳಿಗೆ ಸೋಮವಾರ ಶಾಸಕ ಜೆ.ಟಿ.ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು.

ಹಾನಿಯಾದ ಜಮೀನುಗಳನ್ನು ವೀಕ್ಷಿಸಿದ ಶಾಸಕರು ಸ್ಥಳಿದ್ದ ಅಧಿಕಾರಿಗಳಿಗೆ ಶೀಘ್ರವೇ ಹಾನಿಯಾದ ಜಮೀನುಗಳ ಸರ್ವೆ ಕಾರ್ಯ ಪ್ರಾರಂಭಿಸಬೇಕು ಎಂದು ಸೂಚಿಸಿದರು. ಸರ್ವೆ ಕಾರ್ಯ ಮುಗಿದ ಬಳಿಕ ಸರ್ಕಾರದಿಂದ ಪರಿಹಾರ ಒದಗಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.ಅಕಾಲಿಕ ಆಲಿಕಲ್ಲು ಮಳೆಗೆ ಹೊಲದ ದಡ್ಡಿಯಲ್ಲಿದ್ದ ಆಡು ಮತ್ತು ಕುರಿಗಳು ಮೃತಪಟ್ಟಿರುವುದಕ್ಕೆ ಬೇಸರ ವ್ಯಕ್ತ ಪಡಿಸಿದರು, ಕುರಿ ಮಾಲಿಕರಿಗೆ ಧೈರ್ಯ ಹೇಳಿ ಮೃತಪಟ್ಟ ಕುರಿಗಳ ವರದಿಯನ್ನು ಅಧಿಕಾರಿಗಳಿಂದ ಪಡೆದುಕೊಂಡು ಪರಿಹಾರಕ್ಕೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.ಗಿರೀಶ ನಾಡಗೌಡರ, ಪ್ರವೀಣ ಚಿಕ್ಕೂರ, ಅಶೋಕ ಕೊಪ್ಪದ, ವೆಂಕಟೇಶ ಜಂಬಗಿ, ಉಪ ತಹಶಿಲ್ದಾರ್ ವಿರೇಶ ಬಡಿಗೇರ, ಕೆರೂರ ವೃತ್ತ ನಿರೀಕ್ಷಕ ಆನಂದ ಭಾವಿಮಠ, ಸಹಾಯಕ ಕೃಷಿ ಅಧಿಕಾರಿ ಪರಶುರಾಮ ಗಣಿ ಹಾಗೂ ಗ್ರಾಮಸ್ಥರು ಇದ್ದರು.



ಭಾರತ ಮಾತೆ ವೈಭವಕ್ಕಾಗಿ ಸೇವೆ ಮಾಡೋಣ

ಕಲಾದಗಿ: ಯುವಕರು ಮಾದಕ ವಸ್ತುಗಳಿಗೆ ಬಲಿಯಾಗುತ್ತಿರುವುದು ಖೇದಕರ ಸಂಗತಿ. ನಮಗೆಲ್ಲ ಇರುವುದೊಂದೇ ಜೀವನ ಅದನ್ನು ಭಾರತ ಮಾತೆಯ ಪರಮ ವೈಭವಕ್ಕಾಗಿ ಸೇವೆ ಮಾಡಲು ಮೀಸಲಿಡೋಣ ಎಂದು ಬನಹಟ್ಟಿಯ ಸಾಮಾಜಿಕ ಕಾರ್ಯಕರ್ತ ಶಿವಾನಂದ ಗಾಯಕವಾಡ ಹೇಳಿದರು.

ಗ್ರಾಮದಶಿವಚಿದಂಬರಸಭಾಭವನದಲ್ಲಿನಡೆದಸನಾತನ ಉತ್ಸವಗಳ ಆಚರಣಾ ಸಮಿತಿಯವರು ಹಮ್ಮಿಕೊಂಡಿದ್ದ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರೀಯರಾಗಿ ತೊಡಗಿಸಿಕೊಂಡಿರುವ ಅನೇಕ ಸೇವಾಕರ್ತರಿಗೆ ಸತ್ಕಾರ ಸಮಾರಂಭ ಹಾಗೂ ಸಹ ಭೋಜನ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿದ ಅವರು, ಬ್ರಿಟಿಷರು ದೇಶ ಬಿಟ್ಟು ಹೋಗುವಾಗ ಪುಕ್ಕಟೆಯಾಗಿ ಸ್ವಾತಂತ್ರ ಕೊಡಲಿಲ್ಲ ಬದಲಾಗಿ ನಮ್ಮ ಅನೇಕ ದೇಶಭಕ್ತ ಸ್ವಾತಂತ್ರ ಹೋರಾಟಗಾರು ತಮ್ಮ ರಕ್ತರಂಜಿತ ಹೋರಾಟಗಳಿಂದ ಅವರನ್ನು ದೇಶದಿಂದ ಒದ್ದು ಹೊರಹಾಕಿದ್ದಾರೆ ಎಂದರು.

ಲೋಕಾಪುರದ ಶಾಂತಿ ಗ್ರ್ಯಾಂಡ ಹೋಟೆಲ್ ಮಾಲೀಕ ಗುಣಾಕರಶೇಖರ ಶೆಟ್ಟಿ ಮಾತನಾಡಿ, ಜೀವನದಲ್ಲಿ ಎಲ್ಲರಿಗೂ ಕಷ್ಟಗಳು ಇದ್ದೇ ಇರುತ್ತವೆ ಅವುಗಳನ್ನು ಮೀರಿ ಸಮಾಜದಲ್ಲಿ ಒಬ್ಬ ಉತ್ತಮ ವ್ಯಕ್ತಿಯಾಗಿ ಸಮಾಜಕ್ಕೆ ಎನನ್ನಾದರೂ ಮಾಡಬೇಕು ಎನ್ನುವ ಹಂಬಲ ಇರಬೇಕು ನಾವು ಮಾಡುವ ಸಾಮಾಜಿಕ ಕಾರ್ಯಗಳು, ನಿಸ್ವಾರ್ಥ ಸೇವೆಗಳು ಮತ್ತೊಬ್ಬರ ಜೀವನ ಮಟ್ಟ



ಸುಧಾರಿಸುವಂತಿರಬೇಕು ಎಂದು ಹೇಳಿದರು.

ಕುಂದರಗಿಸುರಗಿರಿಬೆಟ್ಟದಭುವನೇಶ್ವರಿದೇವಾಲಯದ ನೂತನ ಧರ್ಮಾಧಿಕಾರಿ ಕೃಷ್ಣಾನಂದ ಶಾಸ್ತ್ರಿಗಳು ಮಾತನಾಡಿದರು. ಶ್ರೀಶೈಲ ಪಾದಯಾತ್ರಿ ಸೇವಾಕರ್ತರಿಗೆ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಗೈದಿರುವ ರಾಜ್ಯ, ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಚಂದ್ರು ಅಡಿನ, ಸೈಕ್ಲಿಂಗನಲ್ಲಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಚಿನ್ನದ ಪದಕ ಪಡೆದು ಸೌದಿ ಅರೇಬಿಯಾದಲ್ಲೂ ಭಾಗವಹಿಸಿದ ಗಂಗಾ ದಂಡಿನ, ಸಂಗೀತ ಕ್ಷೇತ್ರದಲ್ಲಿ ಸಾಧನೆ ಗೈದಿರುವ ಕೃಷ್ಣಾ ವಾರದ ಸಹಿತ ಸಮಾಜದಲ್ಲಿ ಅನೇಕ ರೀತಿಯ ಸೇವೆ ಸಲ್ಲಿಸುತ್ತಿರುವ ಹತ್ತಾರು ಮಹನೀಯರಿಗೆ ಸನ್ಮಾನಿಸಲಾಯಿತು.

ಬಾಗಲಕೋಟೆಯ ರೆಡ್ಡಿ ಫಾರ್ಮಾ ಮಾಲೀಕ ಬಸವರಾಜ ರೆಡ್ಡಿ, ಜಮಖಂಡಿಯ ಬಸವರಾಜ ಮಠಪತಿ ಇದ್ದರು.

ಕಿರುಸುದ್ದಿ

ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಒತ್ತಾಯ

ದೇವರಹಿಪ್ಪರಗಿ: ತಾಲೂಕಿನ ಚಾಲವಾದ ಗ್ರಾಮದಲ್ಲಿ 110ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ವಿಧಾನ ಪರಿಷತ್ತಿನ ಬಜೆಟ್ ಅಧಿವೇಶನದಲ್ಲಿ ವಿಪ ಸದಸ್ಯ ಕೇಶವ ಪ್ರಸಾದ ಎಸ್. ಪ್ರಶ್ನೆ-1733ರಡಿ ಇಂಧನ ಇಲಾಖೆಯ ಸಚಿವ ಕೆ.ಜೆ.ಜಾರ್ಜ್ ಅವರಿಗೆ ದೇವರಹಿಪ್ಪರಗಿ ತಾಲೂಕಿನ ಚಾಲವಾದ ಗ್ರಾಮದಲ್ಲಿ 110ಕೆ.ವಿ ವಿದ್ಯುತ್ ಉಪಕ್ಕೇಂದ್ರ ನಿರ್ಮಿಸುವ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ದೊರಕಿದೆಯೇ ಹಾಗಿದ್ದಲ್ಲಿ ಯೋಜನೆಗೆ ಮಂಜೂರಾದ ಅಂದಾಜು ಮೊತ್ತ ಎಷ್ಟು? ಉಪ ಕೇಂದ್ರ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ. ಅವರಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಮತ್ತು ಎಷ್ಟು ಹಣ ವೆಚ್ಚವಾಗಿದೆ ಸಂಪೂರ್ಣ ಮಾಹಿತಿ ಒದಗಿಸುವುದು. ಗ್ರಾಮದಲ್ಲಿ ಉಪಕೇಂದ್ರ ನಿರ್ಮಾಣಕ್ಕೆ ಭೂಮಿ ಲಭ್ಯವಿದ್ದರೂ ಕಾಮಗಾರಿ ಆರಂಭಿಸಲು ವಿಳಂಬವಾಗುತ್ತಿರುವುದು ಹಾಗೂ ಚಾಲವಾದ ಗ್ರಾಮದ ಸುತ್ತುಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸಮಸ್ಯೆಯಿಂದಾಗಿ ರೈತರ ಪಂಪ್ ಸೆಟ್ ಗಳು ಸುಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. 110ಕೆ.ವಿ ಉಪ ಕೇಂದ್ರದ ಕಾಮಗಾರಿ ಯಾವಾಗ ಪ್ರಾರಂಭಿಸುವುದು, ಯಾವ ಕಾಲಮಿತಿಯೊಳಗೆ ಪೂರ್ಣ ಬಯಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುವುದು. ಈ ಕುರಿತು ಕೇಶವ ಪ್ರಸಾದ ಎಸ್ ಪ್ರಶ್ನಿಸಿದರು. ಇಂಧನ ಇಲಾಖೆಯ ಸಚಿವ ಕೆ.ಜೆ.ಜಾರ್ಜ್ ಉತ್ತರಿಸಿ, ಈ ಕುರಿತು ಚಾಲವಾದ ಗ್ರಾಮದಲ್ಲಿ 110ಕೆ.ವಿ ಉಪ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆಯು ಮಾ.7.2025ರಂದು ನಡೆದ 2ನೇ ಕವಿಪ್ರನಿನಿ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಉಪ ಕೇಂದ್ರ ಸ್ಥಾಪನೆ ಕಾಮಗಾರಿಗೆ ಅವಶ್ಯವಿರುವ 5 ಎಕರೆ ಸರ್ಕಾರಿ ಜಮೀನ ಬೇಡಿಕೆ ಮೊತ್ತ ರೂ.358965 ಇರಲಿ ಪಾವತಿಸಿ ಕವಿಪ್ರನಿನಿಗೆ ಡಿ.2, 2025ರಂದು ಹಸ್ತಾಂತರಗೊಂಡಿದ್ದು, ಅಂದಾಜು ಪಟ್ಟಿ ತಯಾರಿಸಲು ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. ವಿಸ್ತೃತ ಯೋಜನಾ ವರದಿ ಹಾಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಇಂಧನ ಇಲಾಖೆಯ ಸಚಿವ ಕೆ.ಜೆ.ಜಾರ್ಜ್ ಉಪ ಕೇಂದ್ರದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದರು.

ರಸ್ತೆ ಮೇಲೆ ಚರಂಡಿ ನೀರು: ಸಾರ್ವಜನಿಕರ ಆಕ್ರೋಶ

ಸಿಂದಗಿ: ಸೂಕ್ತವಾದ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ನಿರ್ಮಾಣ ಮಾಡದ ಕಾರಣ ಪ್ರಮುಖ ರಸ್ತೆಯಲ್ಲಿ ಒಳಚರಂಡಿ ನೀರು ಸಂಗ್ರಹವಾಗುತ್ತಿದ್ದು, ಇಲ್ಲಿನ ನಿವಾಸಿಗಳು ರೋಗದ ಭೀತಿಯಲ್ಲಿ ವಾಸಿಸುತ್ತಿದ್ದೇವೆ ಎಂದು ಸ್ಥಳೀಯ ನಿವಾಸಿ ದಲಿತ ಮುಖಂಡ ಮಲ್ಲೇಶಿ ಕೆರೂರ ಆಕ್ರೋಶ ವ್ಯಕ್ತಪಡಿಸಿದರು. ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಈಗಾಗಲೇ ನಗರಸಭೆಯ ಅಧಿಕಾರಿಗಳಿಗೆ ಹಲವು ಬಾರಿ ಇದರ ಕುರಿತಾಗಿ ತಿಳಿಸಿದರೂ ಕ್ಯಾರ ಎನ್ನುತ್ತಿಲ್ಲ. ಒಳಚರಂಡಿ ನೀರು ಕುಡಿಯುವ ನೀರಿನಲ್ಲಿ ಸೇರಿಕೊಳ್ಳುತ್ತಿರುವ ಕಾರಣ ಅದೇ ನೀರನ್ನು ನಾವು ಕುಡಿಯುವ ದುಸ್ಥಿತಿ ನಿರ್ಮಾಣವಾಗಿದೆ. ಇಲ್ಲಿನ ನಿವಾಸಿಗಳಿಗೆ ಇದರಿಂದ ಬಹಳಷ್ಟು ತೊಂದರೆ ಉಂಟಾಗುತ್ತಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನ ಹರಿಸಿ ನಮ್ಮ ಸಮಸ್ಯೆಗೆ ಸ್ಪಂದಿಸಬೇಕು. ಇಲ್ಲವಾದಲ್ಲಿ ನಗರಸಭೆ ಎದುರು ನಿವಾಸಿಗಳು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ನಾಮನಿರ್ದೇಶಕರಾಗಿ ಹೊಸಮನಿ ನೇಮಕ

ಬಸವನಬಾಗೇವಾಡಿ: ಸ್ಥಳೀಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಡಾ.ಎನ್.ಬಿ.ಹೊಸಮನಿ ಅವರನ್ನು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸಿಂಡಿಕೇಟ್ ಪ್ರಾಧಿಕಾರಕ್ಕೆ ನಾಮನಿರ್ದೇಶನ ಮಾಡಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವ ಸಂತೋಷ ಕಾಮಗೌಡ ರವರು ಮಾ.19ರಿಂದ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕಾತಿಯ ಅಧಿಸೂಚನೆ ಹೊರಡಿಸಿದ್ದಾರೆ.



ಡಾ.ನೀಲಪ್ಪ ಹೊಸಮನಿಯವರು ಈಗಾಗಲೇ ವಿದ್ಯಾಭಿಷೇಕ ಪರಿಷತ್ತಿನ ಸದಸ್ಯರಾಗಿ ಹಾಗೂ ಕರ್ನಾಟಕ ಸರಕಾರಿ ಪ್ರಾಧ್ಯಾಪಕ ಸಂಘದ ವಲಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿವಿಧ ಕಾಲೇಜಿನ ಎಲ್ಲಾ ಪ್ರಾಂಶುಪಾಲರು ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಬಾಲಕೃಷ್ಣ ಜೋಶಿ ನಿಧನ

ವಿಜಯಪುರ: ಭಾರತೀಯ ಜೀವ ವಿಮಾ ನಿಗಮದ ನಿವೃತ್ತ ನೌಕರ ಬಾಲಕೃಷ್ಣ ಭೀಮಭಟ್ ಜೋಶಿ (ಜುಮನಾಳಕರ) (79) ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಇದ್ದಾರೆ. ಇಲ್ಲಿಯ ದರಬಾರ ಗಲ್ಲಿ ನಿವಾಸಿಯಾಗಿದ್ದ ಖ್ಯಾತ ಜೋತಿಶಿ ಭೀಮಭಟ್ಟ ಜೋಶಿ ಜುಮನಾಳಕರ ಅವರ ಪುತ್ರರಾಗಿದ್ದರು.





ಮುದ್ದೇಬಿಹಾಳ: ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯದ ಸಭಾ ಭವನದಲ್ಲಿ ಮಂಗಳವಾರ ವಿಶ್ವಕ್ಷಯರೋಗ ದಿನಾಚರಣೆ ಅಂಗವಾಗಿ ತಾಲೂಕು ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ, ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಎಂ ಎಸ್ ಗೌಡರ, ಇಲಾಖೆಯ ಸಿಬ್ಬಂದಿಗಳಾದ ಅನುಸೂಯ ತೇರದಾಳ, ಯಲ್ಲಪ್ಪ ಚಲವಾದಿ, ಅಮರಯ್ಯ ಶಾಸ್ತ್ರಿ, ಎಸ್.ಡಿ.ಸಗರಿ, ಎಂ.ಎಂ.ಟಪಾಲ್ ಎಸ್.ಸಿ.ರುದ್ರವಾಡಿ, ವಿ.ಕೆ.ಪಾಟೀಲ, ಝುಡ್.ಎಂ.ಬೀಳಗಿ , ಪ್ರತಿಭಾರಾಣಿ ಹಾಗೂ ಸಿದ್ದಗಂಗಾ ಪ್ಯಾರ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಆರೋಗ್ಯ ರಕ್ಷಾ ಸಮಿತಿ ಸದಸ್ಯರಿಗೆ ಸನ್ಮಾನ

ನಾಲತವಾಡ: ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಸಂಜೆ ಆರೋಗ್ಯ ರಕ್ಷಾ ಸಮಿತಿ ಸದಸ್ಯರ ಸನ್ಮಾನ ಕಾರ್ಯಕ್ರಮ ಜರುಗಿತು. ನಾಲತವಾಡ ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಯ ಸದಸ್ಯರಾಗಿ ಆಯ್ಕೆಯಾದ ಡಾ.ರಾಜೇಂದ್ರ ಗಲಗಲಿ, ಮಹ್ಮದ ಯೂನುಸ್ ಮೂಲಿಮನಿ, ಸಿದ್ದಣ್ಣ ಕಟ್ಟಿಮನಿ, ವಿನೋದಾ ಅಮಾತಿಗೌಡ ಇವರಿಗೆ ಆರೋಗ್ಯ ಕೇಂದ್ರದ ವತಿಯಿಂದ ಸನ್ಮಾನಿಸಲಾಯಿತು. ನಂತರ ವೈದ್ಯಾಧಿಕಾರಿ ಡಾ.ರಂಗನಾಥ ವೈದ್ಯ ಮಾತನಾಡಿ, ಸರ್ಕಾರ ಆರೋಗ್ಯ ರಕ್ಷಾ ಸಮಿತಿಯ ಆಯ್ಕೆ ಮೂಲಕ ಆಸ್ಪತ್ರೆಯ ಅಭಿವೃದ್ಧಿಗೆ ಸ್ಥಳೀಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ. ಸಮಿತಿಯ ಸದಸ್ಯರು ಆಸ್ಪತ್ರೆಯ ವ್ಯವಸ್ಥೆ ಸುಧಾರಣೆ, ರೋಗಿಗಳಿಗೆ ಉತ್ತಮ ಸೌಲಭ್ಯ ಒದಗಿಸುವುದು ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಹೇಳಿದರು. ಸಮಿತಿ ಸದಸ್ಯ ಸಿದ್ದಣ್ಣ ಕಟ್ಟಿಮನಿ ಮಾತನಾಡಿ, ಶಾಸಕ ಸಿ.ಎಸ್.ನಾಡಗೌಡ (ಅಪ್ಪಾಜಿ) ಅವರು ನಮಗೆ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇವೆ. ಆಸ್ಪತ್ರೆಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಇಲ್ಲಿನ ವ್ಯವಸ್ಥೆಯನ್ನು ಸುಧಾರಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದರು. ಸಮಿತಿ ಸದಸ್ಯ ಡಾ.ರಾಜೇಂದ್ರ ಗಲಗಲಿ ಮಾತನಾಡಿ, ವೈದ್ಯಾಧಿಕಾರಿ ಡಾ.ರಂಗನಾಥ ವೈದ್ಯ ಅವರ ಸೇವೆ ಶ್ಲಾಘನೀಯ. ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತೇವೆ ಎಂದು ಹೇಳಿದರು.



ನಾಲತವಾಡ: ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಯ ಸದಸ್ಯರಾಗಿ ಆಯ್ಕೆಯಾದ ಡಾ.ರಾಜೇಂದ್ರ ಗಲಗಲಿ, ಮಹ್ಮದ ಯೂನುಸ್ ಮೂಲಿಮನಿ, ಸಿದ್ದಣ್ಣ ಕಟ್ಟಿಮನಿ, ವಿನೋದಾ ಅಮಾತಿಗೌಡ ಇವರಿಗೆ ಆರೋಗ್ಯ ಕೇಂದ್ರದ ವತಿಯಿಂದ ಸನ್ಮಾನಿಸಲಾಯಿತು. ಸಮುದಾಯ ಆರೋಗ್ಯ ಕೇಂದ್ರದ ವೈದ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ಮಳೆಯಿಂದ ಬೆಳೆಹಾನಿ | ಮೂರು ದಿನದೊಳಗೆ ಮಾಹಿತಿ ನೀಡಲು ಡಿಸಿ ಸೂಚನೆ

ಜಂಟಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಿ

ವಿಜಯಪುರ: ಇತ್ತೀಚಿಗೆ ಬೀಸಿದ ಬಿರುಗಾಳಿ ಹಾಗೂ ಆಲಿಕಲ್ಲು ಮಳೆಯಿಂದಾಗಿ ಕೃಷಿ, ತೋಟಗಾರಿಕಾ ಬೆಳೆ ಹಾನಿಗೆ ಸಂಬಂಸಿದಂತೆ ಜಂಟಿ ಸಮೀಕ್ಷೆ ಕೈಗೊಂಡು ಮೂರು ದಿನದೊಳಗಾಗಿ ವರದಿ ಸಲ್ಲಿಸಬೇಕು ಎಂದು ಜಿಲ್ಲಾಕಾರಿ ಡಾ.ಆನಂದ ಕೆ. ಅಕಾರಿಗಳಿಗೆ ಸೂಚಿಸಿದರು.

ಕೃಷಿ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಕಾರಿಗಳು ಹಾಗೂ ಬೆಳೆ ವಿಮಾ ಕಂಪನಿಯ ಅಕಾರಿಗಳೊಂದಿಗೆ ಜಿಲ್ಲಾಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು. ಕಂದಾಯ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಕಾರಿಗಳ ತಂಡ ರಚಿಸಿ ಹಾನಿಗೊಳಗಾದ ಕ್ಷೇತ್ರಗಳಿಗೆ ಭೇಟಿ ನೀಡಿ ನಿಖರವಾದ ಸಮೀಕ್ಷೆ ಕೈಗೊಂಡು 3 ದಿನಗೊಳಗಾಗಿ ಜಂಟಿ ಸಮೀಕ್ಷೆ ನಡೆಸಿ ವರದಿಯನ್ನು ನೀಡಬೇಕು ಎಂದು ಸೂಚಿಸಿದರು.

ಇತ್ತೀಚಿನ ದಿನಗಳಲ್ಲಿ ಬಿದ್ದ ಮಳೆ, ಗಾಳಿ ಹಾಗೂ ಆಲಿಕಲ್ಲು ಮಳೆಯಿಂದಾಗಿ ಕೃಷಿ ಬೆಳೆ ಹಾನಿಗೊಳಗಾದ ರೈತರು ಬೆಳೆ ವಿಮೆ ಮಾಡಿಸಿದ್ದರೆ ಅಂತಹ ರೈತರು ಮುಂದಿನ 3 ದಿನಗೊಳಗಾಗಿ (ಮುಂದಿನ 72 ಗಂಟೆಗೂಳಗಾಗಿ) ಓರಿಯಂಟಲ್ ಜನರಲ್ ಇನ್ಸೂರನ್ಸ್ ಕಂಪನಿ 1800 425 6678 ಗೆ ಕರೆ ಮಾಡಿ ವೈಯಕ್ತಿಕ ಸ್ಥಳ ನಿರ್ದಿಷ್ಟ ವಿಕೋಪಗಳ (ಖಐಐಂ) ಕುರಿತು ದೂರು ದಾಖಲಿಸಬಹುದಾಗಿದೆ ಎಂದು ಜಿಲ್ಲಾಕಾರಿಗಳು ಸೂಚಿಸಿದರು.



2025-26ನೇ ಸಾಲಿನ ಖಫಃಅಙಖ ಯೋಜನೆಯಡಿ ದ್ರಾಕ್ಷಿ, ದಾಳಿಂಬೆ ಹಾಗೂ ಲಿಂಬೆ ಬೆಳೆಗಳಿಗೆ ಆಲಿಕಲ್ಲು ಮಳೆಯಿಂದಾಗಿ ಬೆಳೆಹಾನಿ ಸಂಭವಿಸಿದ್ದಲ್ಲಿ, ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು ಹಾಗೂ ಮಾಹಿತಿಯನ್ನು 72 ಗಂಟೆಗಳೊಳಗಾಗಿ ಅಗ್ರಿಕಲ್ಚರ್ ಇನ್ಸುರನ್ಸ್ ಕಂಪನಿ ಆಫ್ ಇಂಡಿಯಾ ಲಿ. ರವರಿಗೆ 1800 425 0505 ಗೆ ಕರೆ ಮಾಡಿ ರೈತರು ಮಾಹಿತಿ ನೀಡಬಹುದಾಗಿದೆ ಎಂದರು.

ವಿಮಾ ಕಂಪನಿಯ ಅಕಾರಿಗಳು ಹಾಗೂ ಎಲ್ಲಾ ಇಲಾಖಾ ಅಕಾರಿಗಳು 3 ದಿನಗಳೊಳಗಾಗಿ ಜಂಟಿ ಸಮೀಕ್ಷೆ ಕೈಗೊಂಡು ವರದಿ ನೀಡುವಂತೆ ಜಿಲ್ಲಾ ಕಾರಿಗಳು ಸೂಚಿಸಿದರು.

ಸುಧಾರಿತ ತಂತ್ರಜ್ಞಾನದ ಕೆ-ಜಿಐಎಸ್ 2.0ಗೆ ಚಾಲನೆ

ವಿಜಯಪುರ: ತಂತ್ರಜ್ಞಾನ ಆಧಾರಿತ ನಿಖರ ಮಾಹಿತಿ ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವ ದೃಷ್ಟಿಯಿಂದ ಸುಧಾರಿತ ಕೆ-ಜಿಐಎಸ್ 2.0 ತಾಂತ್ರಿಕ ಸೇವೆಯಯನ್ನು ಸರ್ಕಾರದ 10ಕ್ಕೂ ಅಕ ಇಲಾಖೆಗಳಲ್ಲಿ ಬಳಕೆ ಮಾಡಿಕೊಳ್ಳಲು ತರಬೇತಿ ನೀಡಲಾಗುತ್ತಿದೆ ಎಂದು ಕೆಎಸ್ ಆರ್‌ಎಸ್‌ಎಸಿ, ಡಿಪಿಎಆರ್ ನಿರ್ದೇಶಕ ರಾಜೇಶ್ ಎನ್.ಎಲ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಗ್ರಾಪಂ ತಾಲೂಕು ಆಡಳಿತ, ಜಿಲ್ಲಾಡಳಿತ ಸೇರಿದಂತೆ ಎಲ್ಲ ಇಲಾಖೆಗಳು ಹೈ ರೇಜಿಲ್ಯೂಷನ್ ಚಿತ್ರಗಳನ್ನು ಬಳಸಿಕೊಂಡು ನಿಖರವಾದ ಮಾಹಿತಿಯನ್ನು ಕಲೆಹಾಕಬಹುದಾಗಿದ್ದು, ಕೃಷಿ ಇಲಾಖೆ ಸರ್ವೇ ಕಾರ್ಯಗಳಲ್ಲಿ ಬೆಳೆ ಹಾನಿ ಪರಿಹಾರ ನೀಡುವಾಗ ಆ ಜಮೀನಿನಲ್ಲಿ ಅದೇ ಬೆಳೆಯನ್ನು ಬಿತ್ತಲಾಗಿದೆಯೇ ಎನ್ನುವದನ್ನು ಉಪಗ್ರಹ ಆಧಾರಿತ ಸರ್ಕಾರಿ ಅಪ್ಲಿಕೇಶನ್ ಮೂಲಕ ತಿಳಿದುಕೊಳ್ಳಬಹುದಾಗಿದೆ ಎಂದರು.

ಯಾವುದೇ ಸರ್ಕಾರಿ ಕಾಮಗಾರಿಗಳ ಪ್ರಗತಿಯನ್ನು ಹಾಗೂ ಲಭ್ಯವಿರುವ ಸ್ಥಾಳಾವಕಾಶದ ಮಾಆಹಿತಿಯನ್ನು ನಿಖರವಾಗಿ ಅಳತೆ ಮಾಡಿಕೊಳ್ಳಬಹುದಾಗಿದೆ. ಸರ್ಕಾರಿ ಹಾಸ್ಟೆಲ್‌ನಲ್ಲಿ ವಿದ್ಯಯಾರ್ಥಿಗಳ ಸಂಖ್ಯೆ ಹೆಚ್ಚಾದಾಗ ಮತ್ತೊಂದು ಹಾಸ್ಟೇಲ್ ನಿರ್ಮಾಣ ಮಾಡಲು ಸ್ಥಳ, ಹಾಗೂ ಅದು ಎಷ್ಟು ಸೂಕ್ತವಾಗಿದೆ ಎನ್ನುವುದನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ ಎಂದು ಹೇಳಿದರು. ಸರ್ಕಾರದ ನೆಟ್



ವರ್ಕನಲ್ಲಿ ಒಟ್ಟು 251 ಅಪ್ಲಿಕೇಶನ್ ಗಳನ್ನು ಸಿದ್ಧಪಡಿಸಲಾಗಿದ್ದು ಪ್ರಸ್ತುತ 101 ಅಪ್ಲಿಕೇಶನ್‌ಗಳು ಜೀಯೋಗ್ರಾಫಿಕಲ್ ಸಿಸ್ಟಮ್ ಬಳಸಿಕೊಂಡು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ, ಜಿಲ್ಲಾಡಳಿತ ವಿಜಯಪುರ ಅವರ ಸಹಯೋಗದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಇದರಲ್ಲಿ 41 ಮೊಬೈಲ್ ಅಪ್ಲಿಕೇಶನ್ ಗಳು ಹಾಗೂ 60 ವೆಬ್ ಅಪ್ಲಿಕೇಶನ್ ಕಾರ್ಯನಿರ್ವಹಿಸುತ್ತಿವೆ. ಒಟ್ಟು 600 ಟೆರಾ ಬೈಟ್‌ನಷ್ಟು ಡೇಟಾ ನಮ್ಮಲ್ಲಿ ಸೇವ್ ಮಾಡಲಾಗಿದೆ. ಇಲ್ಲಿ ಮೈನ್ಸ್ ಹೇಗಿದೆ ಹಾಗೂ ಎಷ್ಟು ರಾಯಲಿಟಿ ಕಟ್ಟಬೇಕು. ಎಷ್ಟು ಕೃಷಿ ಕಾರ್ಯಕ್ರಮಗಳು ನಡೆಯುತ್ತಿವೆ ಎನ್ನುವುದನ್ನು ತಿಳಿದುಕೊಳ್ಳಬಹುದಾಗಿದೆ. ಡಿಜಿಟಲ್ ವ್ಯವಸ್ಥೆಯಲ್ಲಿ 30-40 ವರ್ಷಗಳ ಹಿಂದೆ ಲೋ ರೇಜಲ್ಯೂಷನ್ ಇತ್ತು. ಈಗ ಹೈ ರೆಜಲ್ಯೂಷನ್ ವ್ಯವಸ್ಥೆ ಇದೆ. ಆದ್ದರಿಂದ ಎಲ್ಲವನ್ನು ಸರಿಯಾಗಿ ಲೆಕ್ಕ ಹಾಕಲು ಸಾಧ್ಯವಿದೆ ಎಂದರು. ಹಂತ-ಹಂತವಾಗಿ ಇನ್ನಷ್ಟು ಟೆಕ್ನಾಲಜಿ ಅಭಿವೃದ್ಧಿ ಮಾಡುವ ಪ್ರಯತ್ನದಲ್ಲಿ ಇದ್ದೇವೆ. ಗ್ರಾಪಂನಿಂದ ಹಿಡಿದು ಜಿಲ್ಲಾಮಟ್ಟದ ಅಕಾರಿಗಳು ಕೆ-ಜಿಐಎಸ್ ಬಳಕೆ ಮಾಡುವುದನ್ನು ಕಡ್ಡಾಯಗೊಳಿಸಲಾಗುತ್ತದೆ ಎಂದರು.

ಅಧಿಕಾರ ಸ್ವೀಕಾರ



ಚಡಚಣ: ಚಡಚಣ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ(ಇಒ) ಅಶೋಕ ಕುಮಾರ ರಾಠೋಡರವರು ಅಕಾರ ಸ್ವೀಕರಿಸಿದರು. ಸಂಜಯ ಖಡಗೇಕರ ಅವರ ವರ್ಗಾವಣೆಯಿಂದ ತೆರುವಾದ ಜಾಗದ ಚಡಚಣ ತಾಲೂಕು ಪಂಚಾಯತಿಯ ಇಒ ಆಗಿ ಅಕಾರ ಸ್ವೀಕರಿಸಿದರು. ಸಹಾಯಕ ನಿರ್ದೇಶಕರಾದ ಶಿವದತ್ತ ಕೊಟ್ಟಲಗಿಯವರು ಸೇರಿದಂತೆ ಎಲ್ಲ ಅಧಿಕಾರಿಗಳು ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

ಬಸವ ಜಯಂತಿ ಉತ್ಸವ: ವಿವಿಧ ಸ್ಪರ್ಧೆ

ವಿಜಯಪುರ: ಜಿಲ್ಲೆಯಲ್ಲಿ ಏ.20ರಂದು ಹಮ್ಮಿಕೊಂಡ ಬಸವ ಜಯಂತಿ ನಿಮಿತ್ತ ವಿವಿಧ ಸ್ಪರ್ಧಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪಾಲ್ಗೊಳ್ಳುವವರು. ಮಾ.31ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕು. ಸ್ಪರ್ಧೆಯ ವಿಷಯಗಳು ಮಕ್ಕಳ ವಿಭಾಗ, ಪ್ರಬಂಧ ಸ್ಪರ್ಧೆ, ವಚನ ಕಂಠಪಾಠ, ಚಿತ್ರಕಲಾ ಸ್ಪರ್ಧೆ, ಕವಿ ಗೋಷ್ಠಿ ಸ್ಪರ್ಧೆಯಲ್ಲಿ ಭಾಗವಹಿಸುವವರು ಪ್ರೊ.ನೀಲಕಂಠ ಹಳ್ಳಿ (ಮೊ. 9060838424), ಪ್ರೊ.ಪೂರ್ಣಪ್ಪ ಕಡೆಮನಿ ಸಂಪರ್ಕಿಸಬಹುದಾಗಿದೆ. ಕವನ ವಾಚಿಸುವವರು ಬಸವ ಜಯಂತಿ ಉತ್ಸವ ಸಮಿತಿ- 2026, ಕೇರಾಫ್- ಫೆಡಿನಾ ಸಂಸ್ಥೆ, ಕೋಟ್ಯಾಳಕರ ಬಿಲ್ಡಿಂಗ್, ಶಾಹುನಗರ, ಮಿರ್ದೆಗಲ್ಲಿ ಕಳುಹಿಸಬಹುದಾಗಿದೆ ಎಂದು ಕಾರ್ಯಕ್ರಮದ ಸಂಯೋಜಕ ಪ್ರೊ.ಬಸವರಾಜ ಚಾಲವಾದಿ, ಶಂಕರ ಬೈಚಬಾಳ ತಿಳಿಸಿದ್ದಾರೆ.

ಹೆಣ್ಣು ಭ್ರೂಣ ಹತ್ಯೆಗೆ ಅವಕಾಶ ನೀಡಬೇಡಿ: ಯಶವಂತರಾಯಗೌಡ

ಇಂಡಿ: ಹೆಣ್ಣು ಮಗು ಜನಿಸಿದರೆ ಹುಣ್ಣು ಹುಟ್ಟಿದಂತೆ ಎನ್ನುವ ಕಾಲವೊಂದಿತ್ತು. ಆದರೆ ಈಗ ಕಾಲ ಬದಲಾಗಿದ್ದು, ಹೆಣ್ಣು ಮಗು ಜನಿಸಿದರೆ ಹೊನ್ನ ಸಿಕ್ಕಂತಾಗಿದೆ. ಹೆಣ್ಣು ಹುಟ್ಟಿದರೆ ಹೊನ್ನ ಹುಟ್ಟಿದ ಭಾವನೆಯಾಗಿ ಕಾಲ ಬದಲಾಗುತ್ತಿದ್ದು, ನಮ್ಮ ದೇಶದಲ್ಲಿ ಹೆಣ್ಣಿಗೆ ಗೌರವ ಸ್ಥಾನವಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ನಗರದ ಸ್ಪಂದನಾ ಸೂಪರ್ ಸ್ಪೆಷಾಲಿಟಿ ಆಸತ್ರೆ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತವಾಗಿ ಹೆಣ್ಣು ಮಗು ಜನಿಸಿದರೆ ಹೆರಿಗೆ ಹಾಗೂ ಚಿಕಿತ್ಸೆ ಉಚಿತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಹಿಳಾ ದಿನಾಚರಣೆಯಂದು ವೈದ್ಯಕೀಯ ಲೋಕದಲ್ಲಿ ಕೆಲಸ ಮಾಡುವವರು ಹಾಗೂ ಕುಟುಂಬದವರು ಹೆಣ್ಣು ಭ್ರೂಣ ಹತ್ಯೆ ಮಾಡುವುದಿಲ್ಲ ಎಂಬ ಆತ್ಮಸಾಕ್ಷಿಯಾಗಿ ದೃಢಸಂಕಲ್ಪ ಮಾಡಬೇಕು. ಅದು ಶ್ರೇಷ್ಠ ಕೆಲಸ. ಭ್ರೂಣ ಹತ್ಯೆ ತುಂಬಾ ಅಪರಾಧ. ಅದಕ್ಕೆ ಎಲ್ಲಿಯೂ ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಸ್ಪಂದನಾ ಆಸ್ಪತ್ರೆಯ ಆಡಳಿತಾಕಾರಿ ಡಾ.ಲಕ್ಷ್ಮೀಕಾಂತ ಮೇತ್ರಿ ಮಾತನಾಡಿ, ಸ್ಪಂದನಾ ಆಸ್ಪತ್ರೆಯ ಎಲ್ಲ ತರಹದ ಚಿಕಿತ್ಸೆ ಇದ್ದು, ಇದರ ಸದುಪಯೋಗ ಇಂಡಿ ತಾಲೂಕಿನ ಜನರು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಗುರುಣಾಪೂರ ಆಶ್ರಮದ ಯೋಗೇಶ್ವರಿ ಅಮ್ಮನವರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಡಾ.ಪ್ರೀತಿ ಕೊಳೆಕರ, ಸ್ಪಂದನಾ ಆಸ್ಪತ್ರೆ ಆಡಳಿತ ಮಂಡಳಿ ಅಧ್ಯಕ್ಷ ಭೀಮಾಶಂಕರ ಮುರಗುಂಡಿ ಮಾತನಾಡಿದರು. ರಾಜೇಶ್ವರಿ ಕ್ಷತ್ರಿ, ನಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಯೋಜನಾ ಪ್ರಾಕಾರ ಅಧ್ಯಕ್ಷ ಅಜೀತ ಧನಶೆಟ್ಟಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ರಾವೂರ, ಸರ್ಕಾರಿ ಆರೋಗ್ಯ ವೈದ್ಯಾಧಿಕಾರಿ ಡಾ.ರಾಜೇಶ ಕೋಳೆಕರ, ಡಾ.ಐಶ್ವರ್ಯ ಹೊನವಾಡ ಡಾ.ರಮೇಶ ಪೂಜಾರಿ, ಡಾ.ಮಯೂರಿ ಧನಶೆಟ್ಟಿ, ಸಂಗಮೇಶ ಕಕ್ಕಳಮೇಲಿ, ಯಾಸಿನ್ ಅರಬ್ ಉಪಸ್ಥಿತರಿದ್ದರು.



29ನೇ ದಿನಕ್ಕೆ ತಾಳಿಕೋಟೆ ಧರಣಿ ಮುಂದುವರಿಕೆ: ಹೋರಾಟದ ಎಚ್ಚರಿಕೆ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳದ ವಿರುದ್ಧ ಜನರ ಆಕ್ರೋಶ ತಾರಕಕ್ಕೇರಿದ್ದು, ಕಳೆದ 29 ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಮತ್ತಷ್ಟು ತೀವ್ರಗೊಂಡಿದೆ.

ಹೋರಾಟ ಸಮಿತಿಯ ಉಪಾಧ್ಯಕ್ಷ ರಾಮಣ್ಣ ಕಟ್ಟಿಮನಿ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ತಾಲೂಕಿನ ಜನರು 29 ದಿನಗಳಿಂದ ಹೋರಾಟ ನಡೆಸುತ್ತಿದ್ದರೂ ಜಿಲ್ಲಾಕಾರಿಗಳು ಮತ್ತು ಶಾಸಕರು ಧರಣಿ ಸ್ಥಳಕ್ಕೆ ಭೇಟಿ ನೀಡದೇ ಇರುವುದು ಜನರನ್ನು ನಿರ್ಲಕ್ಷ್ಯ ಮಾಡುತ್ತಿರುವುದಕ್ಕೆ ಸ್ಪಷ್ಟ ಸಾಕ್ಷಿ. ಇದು ಇಡೀ ತಾಲೂಕಿನ ಜನತೆಗೆ ಮಾಡುತ್ತಿರುವ ಅನ್ಯಾಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಳಿಕೋಟೆ ಪಟ್ಟಣದ ಎಲ್ಲಾ ಸಮಾಜಗಳ ಮುಖಂಡರು, ಸಂಘ-ಸಂಸ್ಥೆಗಳು ಹಾಗೂ ಗ್ರಾಮೀಣ ಪ್ರದೇಶಗಳ ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿರುವ ಈ ಹೋರಾಟ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಜನರ ಸಹನೆಯ ಮಿತಿ ಮೀರಿದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ಕಠಿಣಗೊಳಿಸುವ ಎಚ್ಚರಿಕೆ ಸಮಿತಿ ನೀಡಿದೆ.

ತಾಳಿಕೋಟೆ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ದಶರಥಸಿಂಗ್ ಮನಗೂಳಿ ಗೌರವ ಅಧ್ಯಕ್ಷ ಎಸ್ ಬಿ ಕಟ್ಟಿಮನಿ ಕಾರ್ಯಧ್ಯಕ್ಷ ಆರ್ ಎಸ್ ಪಾಟೀಲ(ಕೂಚಬಾಳ) ಉಪಾಧ್ಯಕ್ಷರಾದ ಮುತ್ತಪ್ಪ ಚಮಲಾಪುರ, ಮಾಸೂಮಸಾಬ್ ಕೆಂಭಾವಿ. ವಿಜಯಸಿಂಗ್ ಹಜೇರಿ, ಮೆಹೆಬುಬ್ ಚೋರಗಸ್ತಿ, ಮುರಿಗೆಪ್ಪ ಸರಶೆಟ್ಟಿ, ಪರಶುರಾಮ ತಂಗಡಗಿ, ದತ್ತು ಹೇಬಸೂರ ಕಾಶೀನಾಥ ಸಜ್ಜನ , ರಾಜು ಹಂಚಾಟೆ, ಸುರೇಶ ಹಜೇರಿ, ಕಸ್ತೂರಿಬಾಯಿ ಪೂಜಾರಿ, ಮಲ್ಲಮ್ಮ ಲಿಂಗದಹಳ್ಳಿ, ಶಕುಂತಲಾ ಕರೀಬಾವಿ, ಸಾವಿತ್ರಿ ಪಾಟೀಲ, ಕವಿತಾ ದೊಡಮನಿ, ಪ್ರಕಾಶ ಹಜೇರಿ, ರಾಜು ಸಜ್ಜನ, ನಾಗೇಶ ಕಟ್ಟಿಮನಿ, ಮಂಜುನಾಥ ಶೆಟ್ಟಿ, ಮಲ್ಲು ಮೇಟಿ, ತಿಪ್ಪಣ್ಣ ಸಜ್ಜನ, ಗೋವಿಂದಸಿಂಗ ಗೌಡಗೇರಿ ಕಳಕೂಸಾ ರಂಗರೇಜ್, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ ಹಾಗೂ ತಾಲೂಕಿನ ಅನೇಕರು ಹಾಜರಿದ್ದರು.



ಸಮಾಜದ ಅಂಕುಡೊಂಕು ತಿದ್ದಿದ ವಚನಕಾರ ದೇವರ ದಾಸಿಮಯ್ಯ

ಮುದ್ದೇಬಿಹಾಳ: ದೇವರ ದಾಸಿಮಯ್ಯನವರು ಸಮಾಜದಲ್ಲಿರುವ ಮೂಢನಂಬಿಕೆ, ಅಸಮಾನತೆಯ ಬಗ್ಗೆ 11ನೇ ಶತಮಾನದಲ್ಲಿಯೇ ವಚನಗಳನ್ನು ಬರೆದು ಜಾಗೃತಿ ಮೂಡಿಸಿದ ಜಗತ್ತಿನ ಮೊಟ್ಟ ಮೊದಲ ವಚನಕಾರರು ಎಂದು ಶಿಕ್ಷಕ ಮಹಾದೇವ ಗುಡಗುಂಟಿ ಹೇಳಿದರು.

ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಸೋಮವಾರ ಏರ್ಪಡಿಸಿದ್ದ ಆದ್ಯ ವಚನಕಾರ ದೇವರ ದಾಸಿಮಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು ಅವರು, ದೇವರ ದಾಸಿಮಯ್ಯನವರ ವಚನಗಳಲ್ಲಿ ಸ್ತಿಪುರುಷರ ಸಮಾನತೆ, ಕಾಯಕದ ಮಹತ್ವ, ಜೀವನದ ಮೌಲ್ಯಗಳ ಕುರಿತು ವಿವರಣೆ ನೀಡಲಾಗಿದೆ ಎಂದರು.

ದೇವಾಂಗ ಸಮಾಜದ ಜಿಲ್ಲಾಧ್ಯಕ್ಷ ಬಸವರಾಜ ಚಿತ್ತರಗಿ ಮಾತನಾಡಿ, ಮನು ಕುಲಕ್ಕೆ ಮಾನ ಮುಚ್ಚುವ ಬಟ್ಟೆ ನೇಯ್ದು ಕೊಟ್ಟ ಮಹಾನ್ ಶರಣ ದೇವರ ದಾಸಿಮಯ್ಯನವರು. ದೇವರಿಗೆ ತವನಿಧಿ ಅರ್ಪಿಸುವ ಮೂಲಕ ಬಸವಣ್ಣನವರ ಕಾಲದ ಹಿರಿಯ ವಚನಕಾರರಾಗಿದ್ದಾರೆ ಎಂದರು.

ಶಿರಸ್ತೇದಾರ ಎಂ.ಎಸ್.ಬಾಗೇವಾಡಿ, ಆಹಾರ ಇಲಾಖೆ ಶಿರಸ್ತೇದಾರ ಶಶಿಧರ ಕುಮಚಗಿ, ಶಿರಸ್ತೇದಾರ ಶಕುಂತಲಾ ಸಜ್ಜನ, ಬನಶಂಕರಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕಿ ಜಯಶ್ರೀ ಹೆಬ್ಬಾಳ, ವ್ಯವಸ್ಥಾಪಕಿ ವಿಜಯಲಕ್ಷ್ಮಿ ಪ್ಯಾಟಿಗೌಡರ, ಲಾಯನ್ಸ್ ಕ್ಲಬ್ ಸದಸ್ಯೆ ಅನುರಾಧಾ ಪ್ಯಾಟಿಗೌಡರ, ಆಟೋ ಚಾಲಕರ ಯೂನಿಯನ್ ಮುಖಂಡ ಕಾಶೀನಾಥ ಹೆಬ್ಬಾಳ, ದೇವಾಂಗ ಸಮಾಜದ ಮುಖಂಡರಾದ ಮುತ್ತಣ್ಣ ಪ್ಯಾಟಿಗೌಡರ, ಬಸವರಾಜ ಅಗಸಬಾಳ, ಈಶ್ವರಪ್ಪ ಹೆಬ್ಬಾಳ, ಈರಪ್ಪ ಆಲೂರ,ಉಮ್ಮಣ್ಣ ಹೆಬ್ಬಾಳ, ಸಿ.ಎಂ.ಪ್ಯಾಟಿಗೌಡರ, ಆರೋಗ್ಯ ಇಲಾಖೆಯ ವಿಜಯಕುಮಾರ ಐಹೊಳ್ಳಿ, ಗುಂಡು ಹೆಬ್ಬಾಳ, ಹರೀಶ ಸಿಂಹಾಸನ ಸೇರಿದಂತೆ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.



ಉತ್ತಮ ಸಂಸ್ಕಾರ ಬೆಳೆಸಿಕೊಳ್ಳಿ: ಶಾಸಕ ನಾಡಗೌಡ

ಮುದ್ದೇಬಿಹಾಳ: ಉತ್ತಮ ಸಂಸ್ಕಾರ ಬೆಳೆಸಿಕೊಂಡು ಪ್ರಜ್ಞಾವಂತ ನಾಗರಿಕರನ್ನು ದೇಶಕ್ಕೆ ಕೊಡುವುದರ ಜೊತೆಗೆ ಕುಟುಂಬ ತಂದೆ ತಾಯಿ ಗಳಿಗೆ ಗೌರವ ಕೊಡುವುದನ್ನು ಕಲಿಸಿ ಸಮಾಜ ನಿರ್ಮಾಣದಲ್ಲಿ ದಂಪತಿಗಳು ದೂರದೃಷ್ಟಿ ಇಟ್ಟುಕೊಳ್ಳಬೇಕು ಎಂದು ಶಾಸಕ ಸಿ.ಎಸ್.ನಾಡಗೌಡ ಹೇಳಿದರು.

ತಾಲೂಕಿನ ಕಿಲಾರ ಹಟ್ಟಿ ಗ್ರಾಮದಲ್ಲಿನಡೆದ ಬೀರಲಿಂಗೇಶ್ವರ ಹಾಗೂ ಕಾಡಸಿದ್ದೇಶ್ವರ ಜಾತ್ರೆಯ ಸಂದರ್ಭದಲ್ಲಿ ಸಮಾಜ ಸೇವಕ ಮಲ್ಲಿಕಾರ್ಜುನ್ ಮದರಿ ಹಮ್ಮಿಕೊಂಡಿದ್ದ ಜಾತ್ರಾ ಮಹೋತ್ಸವ, ಸಾಮೂಹಿಕ ವಿವಾಹ ಹಾಗೂ ಧರ್ಮ ಸಭೆಯಲ್ಲಿ ಮಾತನಾಡಿದ ಅವರು. ಕುಟುಂಬದ ಆರೋಗ್ಯ ಹಾಗೂ ಗೌರವವನ್ನು ಕಾಪಾಡಿಕೊಳ್ಳುವುದು ದೇಶನಿರ್ಮಾಣದಲ್ಲಿ ತೊಡಗಿದಂತೆ ಎಂದು ಹೇಳಿದರು.



ಸಾನ್ನಿಧ್ಯ ವಹಿಸಿ ಮಾತನಾಡಿದ ಆಗತೀರ್ಥದ ಶಾಂತಮಯ ಸ್ವಾಮೀಜಿ ಮಾತನಾಡಿ, ಸತತ 20 ವರ್ಷಗಳಿಂದ ಸ್ವಂತ ಹಣದಲ್ಲಿ ಸಾಮೂಹಿಕ ವಿವಾಹ ಮಾಡುವ ಮೂಲಕ ಬಡವರಿಗೆ ಸಹಾಯ ಮಾಡುತ್ತಿದ್ದಾರೆ. ಇಂದು ಯುವಕರು ಚಟಗಳ ದಾಸರಾಗಿದ್ದಾರೆ. ಸಮಾಜ ಮಾಂಸಾಹಾರ, ದುಂದುವೆಚ್ಚ, ಮೂಢ ನಂಬಿಕೆಯತ್ತ ಸಾಗುತ್ತಿದೆ. ಅತ್ತೆ ಮಾವಂದಿರನ್ನು ತಂದೆ-ತಾಯಿಗಳು ಎಂದು ತಿಳಿದುಕೊಳ್ಳಿ, ಸಂಸಾರ ಗಟ್ಟಿ ಮಾಡಿಕೊಳ್ಳಿ ಎಂದು ಹೇಳಿದರು.

ಸಿದ್ದನಕೊಳ್ಳದ ಶಿವ ಕುಮಾರ ಸ್ವಾಮೀಜಿ, ತಾಳಿಕೋಟೆಯ ಸಿದ್ದಲಿಂಗ ದೇವರು ಮಾತನಾಡಿದರು.

ಮುನ್ನಾದನಿ ದೇಶಮುಖ. ಶಾಂತಗೌಡ ಪಾಟೀಲ, ಯರಝರಿ ಗ್ರಾಮದ ಮಲ್ಲಾಲಿಂಗ ಸ್ವಾಮೀಜಿ. ಸರೂರು ಗ್ರಾಮದ ಶಿವಯ್ಯ ಗುರುವಿನ, ಕಿಲಾರ ಹಟ್ಟಿಯ ರಮಾನಂದ ಸ್ವಾಮೀಜಿ, ಸಿದ್ದಾಪುರದ ಅರವಿಂದ ಒಡೆಯರ, ಅಭ್ಯುದಯ ಸಂಸ್ಥೆಯ ಆಡಳಿತಾಧಿಕಾರಿ ಬಿ.ಜಿ ಬಿರಾದಾರ, ರವಿ ಜಗಲಿ, ಕಿರಣ ಮದರಿ ಉಪಸ್ಥಿತರಿದ್ದರು. 22 ನವ ಜೋಡಿಗಳ ವಿವಾಹ ನಡೆಯಿತು.

ದೇಶದ ಸಂಸ್ಕೃತಿ ಉಳಿಸಲು ಮುಂದಾಗಿ

ಝಳಕಿ: ಯುವಕರು ಭಾರತೀಯ ಸಂಸ್ಕಾರ, ಸಂಸ್ಕೃತಿ, ಪರಂಪರೆ ಉಳಿಸಲು ಮುಂದಾಗಬೇಕು ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ ಹೇಳಿದರು.

ಸಮೀಪದ ಭತಗುಣಕಿ ಹಾಗೂ ಮೈಲಾರ ಗ್ರಾಮಗಳ ಹತ್ತಿರದ ಚಾಲಿಹೊಲ ಲಕ್ಷ್ಮೀ ತಾಯಿ ಜಾತ್ರಾ ಮಹೋತ್ಸವ ಪ್ರಯುಕ್ತ ಚಿಂಗಾರಿ ಮೆಲೋಡಿಸ್ ಹಾಸ್ಯ ರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಭಾರತ ದೇಶದ ಸಂಸ್ಕಾರ ಸಂಸ್ಕೃತಿ ಉಳಿಬೇಕಾದರೆ ಯುವಕರು ಮುಂದಾಗಬೇಕು. ಜಾತ್ರೆಗಳಲ್ಲಿ ಸಾಂಶ್ಕೃತಿಕ ನಾಟಕ, ಕಿರ್ತನ, ಭಜನೆಗಳನ್ನು ಅನುಸರಿಸಿರಿ ಎಂದು ಹೇಳಿದರು.

ಜಾತ್ರಾ ಕಮಿಟಿ ಅಧ್ಯಕ್ಷ ಚನ್ನಯ್ಯ ಹಿರೇಮಠ, ಬಸವರಾಜ ಸ್ವಾಮೀಜಿ ಹಿರೇಮಠ, ಅಂಬಣ್ಣ ಗದ್ಯಾಳ, ಸಿದ್ದಾರಾಮ ನಿಚ್ಚಳ, ಮಲ್ಲಿಕಾರ್ಜುನ ಅಂಕಲಗಿ, ಶಹಾಜಿ ಮಿಸಾಳೆ, ಸಣ್ಣಪ್ಪ ತಳವಾರ, ಶಿವಾಜಿ ಮಾನೆ, ಶಹಾಜಿ ನಾಗಣೆ, ಶಹಾಜಿ ಸಿಂಧೆ, ಶ್ರೀಮಂತ ಮೊಗಲಾಯಿ, ಸದಾಶಿವ ಗಂಟಿ, ಸೋಮನಿಂಗ ಪೂಜಾರಿ, ಮಂಜುನಾಥ್ ಗಂಟಿ, ಚೇಟ್ಟಪ್ಪ ಅಗಸರ, ರಾಜಶೇಖರ ಗಂಟಿ, ಲಕ್ಷ್ಮಣ ಗಂಟಿ, ಸಂಬಾಜಿ ಪಾಟೀಲ, ಶಿವು ಗಂಟೆ ಪ್ರಕಾಶ ಡೊಳ್ಳಿ ನಿರೂಪಿಸಿದರು. ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.



ತಾಯಂದಿರನ್ನು ಪೂಜ್ಯನೀಯ ಭಾವದಿಂದ ಕಾಣಿ

ಬಸವನ ಬಾಗೇವಾಡಿ: ತಾಯಂದಿ ರನ್ನು ಪೂಜ್ಯನೀಯ ಭಾವದಿಂದ ಕಾಣುತ್ತೇವೆ ಅಲ್ಲಿ ದೇವತೆಗಳನೆಲೆಯಾಗಿರುತ್ತದೆಎಂದು ಯರನಾಳ ವಿರಕ್ತಮಠದ ಪೀಠಾಪತಿಗಳಾದ ಗುರುಸಂಗನಬಸವ ಸ್ವಾಮೀಜಿ ಹೇಳಿದರು.

ತಾಲೂಕಿನ ಯರನಾಳ ಪಂಪಾಪತಿ ಶಿವಯೋಗಿಗಳ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಬಂಥನಾಳ ಸಂಗನಬಸವ ಶಿವಯೋಗಿಗಳ ಅವರ ಮಹಾದ್ವಾರದ ಲೋಕಾರ್ಪಣೆ ಹಾಗೂ ದ್ವಿಸಹಸ್ರ ಮಾತೆಯರ ಉಡಿ ತುಂಬುವ ಕಾರ್ಯಕ್ರಮಹಾಗೂ ಶ್ರೇಷ್ಠ ಮಹಿಳಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರುಭಾರತ ದೇಶ ಸಂಸ್ಕಾರವಂತ ದೇಶವೆನ್ನುವುದಕ್ಕೆ ಸಾಕ್ಷಿಯಂದರೆ ನಾವು ತಾಯಂದಿರನ್ನು ಪೂಜ್ಯ ಭಾವನೆಯಿಂದ ನೋಡುತ್ತೇವೆ.



ಭಾರತದಲ್ಲಿ ಮಾತ್ರ ತಾಯಂದಿರಗೆ ಹೆಚ್ಚು ಬೆಲೆ ನೀಡುತ್ತಿರುವುದರಿಂದಲ್ಲೆ ಅವರು ಸಂಸ್ಕಾರ ಉಳಿಸಿಕೊಂಡು ಬಂದ ಹಿನ್ನಲ್ಲೆಯಲ್ಲಿ ದೇಶದ ಸಂಸ್ಕಾರ ಬೆಳೆದು ಹೆಮ್ಮರವಾಗಿದೆ ಎಂದರು.

ವಿಜ್ಞಾನ ವನ್ನು ಒಳ್ಳೆಯದಕ್ಕೆ ಬಳಕ್ಕೆಯಾಗದೆ ಯುದ್ಧಕ್ಕೆ ಬಳಕ್ಕೆ ಮಾಡಿ ವಿಶ್ವ ವಿನಾಶದತ್ತ ಮುಖ ಮಾಡಿದೆ. ವಿಶ್ವದ ಹಲವಾರು ದೇಶದ ಅಮಾಯಕ ಮುಗ್ದ ಜನರು ಬಲಿಯಾಗುತ್ತಿರುವುದು ಬಹಳ ನೋವಿನ ಸಂಗತಿ. ಯುದ್ಧ ನಿಂತು ಶಾಂತಿ ನೆಲೆಸುವಂತೆ ಎಲ್ಲ ತಾಯಂದಿರು ಪ್ರಾರ್ಥನೆ ಸಲ್ಲಿಸುವಂತೆ ಹೇಳಿದರು.

ಇಂಗಳೇಶ್ವರ ವಿರಕ್ತಮಠ ಡಾ.ಸಿದ್ದಲಿಂಗ ಸ್ವಾಮಿಜಿ ತೊರವಿ ಮಠದ ಸಿದ್ಧಲಿಂಗ ಶ್ರೀಗಳು ಹೂವಿನಹಿಪ್ಪರಗಿ ಪತ್ರಿವನ ಮಠದ ದ್ರಾಕ್ಷಾಯಣಿಅಮ್ಮನವರು,ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ, ಹಾಸ್ಯ ಕಲಾವಿದೆ ನಯಾನ, ಜೆಡಿಎಸ್ ನಾಯಕಿ ಸುನೀತಾ ಚವ್ಹಾಣ, ಬಂಥನಾಳದ ವೃಷಭಲಿಂಗ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು. ಡಾ.ಗುರುಸಂಗಮೇಶ ಹಿರೇಮಠ, ನಿವೃತ್ತ ನ್ಯಾಯಾಶ ಪ್ರಭಾವತಿ ಹಿರೇಮಠ, ಸಹಕಾರಿ ಧುರೀಣ ಶಂಕರಗೌಡ ಪಾಟೀಲ, ಯಮುನಾ ಮಠ, ಹಾಸ್ಯ ಕಲಾವಿದ ಪ್ರವೀಣ ಗಸ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಬಸವರಾಜ ಚಾಲಗೇರಿ, ಚಂದ್ರು ನರಗುಂದ, ಗಿರಿಜಾ ಪಾಟೀಲ ಇದ್ದರು.

ಕಿರುಸುದ್ದಿ

ಫೋನ್-ಇನ್ ಕಾರ್ಯಕ್ರಮ ಇಂದು

ಕಲಬುರಗಿ: ಬೇಸಿಗೆ ದಿನಗಳಲ್ಲಿ ವಿದ್ಯುತ್ ಉಳಿತಾಯ ಹಾಗೂ ಜೆಸ್ಕಾಂನ ವಿವಿಧ ಯೋಜನೆಗಳು ಮತ್ತು ಅನುಷ್ಠಾನಗಳ ಕುರಿತು ಜಾಗೃತಿ ಆಕಾಶವಾಣಿ ಕಲಬುರಗಿ ವತಿಯಿಂದ ಮಾ.25ರಂದು ಬೆಳಿಗ್ಗೆ 11 ಗಂಟೆಗೆ ವಿಶೇಷ ಲೈವ್ ಫೋನ್-ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.ಕಾರ್ಯಕ್ರಮದಲ್ಲಿ ಜೆಸ್ಕಾಂ ಅಧ್ಯಕ್ಷರಾದ ಪ್ರವೀಣ್ ಪಾಟೀಲ್ ಹರವಾಳ ಭಾಗವಹಿಸಲಿದ್ದು, ಗ್ರಾಹಕರಿಗೆ ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳು ಹಾಗೂ ಅನುಮಾನಗಳನ್ನು ನೇರವಾಗಿ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ.ನೇರ ಪ್ರಸಾರದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಜೆಸ್ಕಾಂ ವ್ಯಾಪ್ತಿಯ ವಿವಿಧ ಸಮಸ್ಯೆಗಳ ಕುರಿತು ಸಾರ್ವಜನಿಕರಿಂದ ಕರೆಗಳನ್ನು ಸ್ವೀಕರಿಸಿ, ತಕ್ಷಣ ಸ್ಪಷ್ಟನೆ ಹಾಗೂ ಪರಿಹಾರ ಒದಗಿಸಲಾಗುತ್ತದೆ. ಕಾರ್ಯಕ್ರಮವನ್ನು ಓಚಿತಿ? ಔಟ ಯಖ ಂಠಠ ಮೂಲಕವೂ ನೇರವಾಗಿ ಆಲಿಸಬಹುದಾಗಿದೆ.ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಲು 08472-295986, 08472-295987, 08472-310105 ಸಂಖ್ಯೆಗಳ ಮೂಲಕ ಕರೆ ಮಾಡಬಹುದಾಗಿದೆ.

ದೇವರ ದಾಸಿಮಯ್ಯನವರ ಜಯಂತಿ ಆಚರಣೆ

ಕುಷ್ಟಗಿ: ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಂಗಣದಲ್ಲಿ ತಾಲೂಕಾ ಆಡಳಿತದ ವತಿಯಿಂದ ಶ್ರೀದೇವರ ದಾಸಿಮಯ್ಯ ರವರ ಜಯಂತಿ ಆಚರಿಸಲಾಯಿತು. ದೋಟಿಹಾಳದ ದೇವಾಂಗ ಮಠದ ಈಶ್ವರಸ್ವಾಮಿ ದೋಟಿಹಾಳ ಸಾನಿಧ್ಯ ವಹಿಸಿದ್ದರು. ಡಾ.ಜೀವನಸಾಬ ಬಿನ್ನಾಳ ವಿಶೇಷ ಉಪನ್ಯಾಸ ನೀಡಿ, ಅಣ್ಣ ಬಸವಣ್ಣನವರ ಕಟ್ಟಿದ ವಚನ ಚಳುವಳಿಯಲ್ಲಿ ಅನೇಕ ಶರಣರು ಇದ್ದಾರೆ ಅದರಲ್ಲಿ ದೇವರ ದಾಸಿಮಯ್ಯನವರು ಒಬ್ಬರು. ರಾಮನಾಥ ಅಂಕಿತ ನಾಮದಿಂದ ಅನೇಕ ವಚನಗಳನ್ನು ಬರೆದಿದ್ದು, ಇಡೀ ಜಗತ್ತಿಗೆ ವಸ್ತ್ರ ನೀಡಿದ ಸಮಾಜ ನೇಕಾರ ಸಮಾಜದ. ಸಾಮಾಜಿಕ ಸುಧಾರಣೆ ಮತ್ತು ಕಾಯಕ ಮೂಲಕ ಮಾದರಿಯಾಗಿದ್ದಾರೆ ಎಂದರು. ವಸಂತ ಸಿನ್ನೂರ ಮಾತನಾಡಿ, ಆಧುನಿಕತೆಯ ವ್ಯವಸ್ಥೆಯಲ್ಲಿ ನೇಕಾರ ಬದುಕು ಅವನತಿಯತ್ತ ಸಾಗುತ್ತಿದ್ದೆ. ಸರಕಾರವು ನೇಕಾರ ಸಮಾಜವನ್ನು ಕಡೆಗಣೆ ಮಾಡಿದೆ. ಅಸಂಘಟಿತ ವಲಯದಲ್ಲಿ ಗುರುತಿಸಿದ್ದಾರೆ. ಆದರೆ ಅದು ಸಂಘಟಿತ ವಲಯದಲ್ಲಿ ಆಗಬೇಕು. ನೇಕಾರರ ರನ್ನು ಕಟ್ಟಡ ಕಾರ್ಮಿಕರಂತೆ ಸಂಘಟಿತ ವಲಯದಲ್ಲಿ ಗುರುತಿಸಬೇಕು ಎಂದು ಆಗ್ರಹಿಸಿದರು. ಶ್ರೀನಿವಾಸ ಕಂಟ್ಲಿ, ತಹಶೀಲ್ದಾರ ಅಶೋಕ ಶಿಗ್ಗಾವಿ ಮಾತನಾಡಿದರು. ದೇವಾಂಗ ಸಮಾಜದ ತಾಲೂಕಾ ಅಧ್ಯಕ್ಷ ಪಂಪಾಪತಿ ಅರಳಿಕಟ್ಟಿ, ಜಿಲ್ಲಾ ಉಪಾಧ್ಯಕ್ಷ ನಾರಾಯಣಪ್ಪ ಕೊಳ್ಳಿ, ಗ್ರೇಡ್ -2 ತಹಶೀಲ್ದಾರ ರಜನಿಕಾಂತ ಕೆಂಗೇರಿ, ರಾಮನಗೌಡ ಬಿಜ್ಜಳ, ಪ್ರಹ್ಲಾದಗೌಡ ಮೆದಿಕೇರಿ, ಶಂಕ್ರಪ್ಪ ಸಿನ್ನೂರ, ಶ್ರೀನಿವಾಸ ಕಂಟ್ಲಿ, ಮಹೇಶ ಕಾಳಗಿ, ವಸಂತ ಸಿನ್ನೂರು ಸೇರಿದಂತೆ ಸಮಾಜದ ಮುಖಂಡರು ಗಣ್ಯರು ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿ ಸುಂದರರಾಜ್, ಚಂದ್ರು ಪೂಜಾರ, ಸಿಬ್ಬಂದಿ ಶರಣಪ್ಪ ಹುಡೇದ ಕಾರ್ಯಕ್ರಮ ನಿರ್ವಹಿಸಿದರು.

ಇಂದಿನಿಂದ ಅಣಕು ಪ್ರದರ್ಶನ

ಕೊಪ್ಪಳ: ಜಿಲ್ಲೆಯ ಸಂಭವನೀಯ ಅತೀವೃಷ್ಟಿ ಅಥವಾ ಪ್ರವಾಹದಿಂದ ಹಾನಿಗೊಳಗಾಗುವ ಪ್ರದೇಶಗಳಲ್ಲಿ ಮುಂಜಾಗ್ರತಾ ಕ್ರಮವಾಗಿ ಮಾ. 25 ಮತ್ತು 26ರಂದು ಎನ್.ಡಿ.ಆರ್.ಎಫ್ ತಂಡದವರಿಂದ ಅಣುಕು ಪ್ರದರ್ಶನ ನಡೆಯಲಿದೆ ಎಂದು ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ತಿಳಿಸಿದ್ದಾರೆ.

2025-26ನೇ ಸಾಲಿನ ಸಂಭವನೀಯ ಅತೀವೃಷ್ಟಿ ಅಥವಾ ಪ್ರವಾಹದಿಂದ ಹಾನಿಗೊಳಗಾಗುವ ಪ್ರದೇಶಗಳಲ್ಲಿ ಮುಂಜಾಗ್ರತಾ ಕ್ರಮವಾಗಿ ಅಣುಕು ಪ್ರದರ್ಶನದ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವ ಕುರಿತು ಮಾ. 25 ರಿಂದ ಮಾ. 26ರವರೆಗೆ ಜಿಲ್ಲೆಯ ನದಿ ತೀರದ ಪ್ರವಾಹಪೀಡಿತ ಗ್ರಾಮ, ಪ್ರದೇಶ ಹಾಗೂ ಸಂಭವನೀಯ ಪ್ರವಾಹಕ್ಕೆ ಸಿಲುಕಿಕೊಳ್ಳಬಹುದಾದ ಗ್ರಾಮ, ಪ್ರದೇಶಗಳಲ್ಲಿ ಎನ್‌ಡಿಆರ್‌ಎಫ್ ತಂಡದವರು ಮೊಕ್ ಡ್ರಿಲ್ ಕಾರ್ಯಕ್ರಮ ನಡೆಸಲಿದ್ದು, ಈ ಕಾರ್ಯಕ್ರಮಕ್ಕೆ ಯಲಬುರ್ಗಾ, ಕೊಪ್ಪಳ ಮತ್ತು ಗಂಗಾವತಿ ತಹಶೀಲ್ದಾರರು ತಮ್ಮ-ತಮ್ಮ ತಾಲೂಕಿನ ಸಂಬಂಧಿಸಿದ ಎಲ್ಲ ಇಲಾಖೆಯ ಅಧಿಕಾರಿ, ಸಿಬ್ಬಂದಿ ವರ್ಗದವರಿಗೆ ಎನ್.ಡಿ.ಆರ್.ಎಫ್ ಮೊಕ್ ಡ್ರಿಲ್-2025-26 ರ ಅಡಿಯಲ್ಲಿ ನಡೆಯುವ ಕಾರ್ಯಕ್ರಮದ ಕುರಿತಾಗಿ ಸೂಕ್ತ ಯೋಜನೆ ರೂಪಿಸಿ ಕಾರ್ಯಕ್ರಮಕ್ಕೆ ಹಾಜರಾಗಬೇಕು. ಎನ್‌ಡಿಆರ್‌ಎಫ್ ತಂಡದವರು ನೀಡುವ ಮೊಕ್ ಡ್ರಿಲ್ ಕಾರ್ಯಕ್ರಮದ ಕುರಿತಾಗಿ ಸಂಬಂಧಿಸಿದ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಸ್ಥಳೀಯ ಸಂಘ-ಸಂಸ್ಥೆಯ ಸ್ವಯಂ ಸೇವಕ ಗುಂಪುಗಳೊಂದಿಗೆ ಸಮನ್ವಯ ಸಾಧಿಸಿ, ಜಾಗೃತಿ ಮೂಡಿಸುವ ಮೂಲಕ ಎನ್‌ಡಿಆರ್‌ಎಫ್ ಮೊಕ್ ಡ್ರಿಲ್ -2025-26ರ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕಾರ್ಯಾಚರಣೆಗೊಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.



ಕುಷ್ಟಗಿ: ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಂಗಣದಲ್ಲಿ ತಾಲೂಕಾ ಆಡಳಿತದ ವತಿಯಿಂದ ಶ್ರೀದೇವರ ದಾಸಿಮಯ್ಯ ರವರ ಜಯಂತಿ ಆಚರಿಸಲಾಯಿತು. ದೋಟಿಹಾಳದ ದೇವಾಂಗ ಮಠದ ಈಶ್ವರಸ್ವಾಮಿ ದೋಟಿಹಾಳ ಸಾನಿಧ್ಯ ವಹಿಸಿದ್ದರು.

ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ ಕಡ್ಡಾಯ

ಯಲಬುರ್ಗಾ: ಗರ್ಭಕಂಠದ ಕ್ಯಾನ್ಸರ್ ರೋಗವನ್ನು ತಡೆಯಲು ಹ್ಯೂಮನ್ ಪ್ಯಾಪಿಲೋಮ ವೈರಸ್ ಹೆಚ್‌ಪಿವಿ ಲಸಿಕೆ ಅಭಿಯಾನ ಅತ್ಯಂತ ಮಹತ್ವದ್ದಾಗಿದೆ ಎಂದು ವೈದ್ಯಾಧಿಕಾರಿ ಡಾ.ಐಶ್ವರ್ಯ ಹೇಳಿದರು.ತಾಲೂಕಿನ ಹಿರೇವಂಕಲಕುಂಟಾ ಸಮುದಾಯ ಕೇಂದ್ರದಲ್ಲಿ ಮಂಗಳವಾರ ಆಯೋಜಿಸಿದ್ದ ಎಚ್.ಪಿ.ವಿ ಲಸಿಕೆಕರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ವಿಕಲ್ ಕ್ಯಾನ್ಸರ್ ತಡೆಗಟ್ಟುವುದಕ್ಕಾಗಿ 14 ವರ್ಷ ತುಂಬಿದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಎಚ್.ಪಿ.ವಿ ಲಸಿಕೆ ನೀಡುವುದು ಅವಶ್ಯಕವಾಗಿದ್ದು ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು ಎಂದರು.ದೇಶದ ಹದಿಹರೆಯದ ಬಾಲಕಿಯರ ಆರೋಗ್ಯ ವಿಚಾರದಲ್ಲಿ ಇದೊಂದು ಹೆಚ್‌ಪಿವಿ ಲಸಿಕಾ ಒಂದು ಪ್ರಮುಖ ಮೈಲಿಗಲ್ಲಾಗಲಿದೆ. 14ವರ್ಷ ಪೂರೈಸಿ, ಹದಿನೈದು ವರ್ಷ ತುಂಬುವ ಬಾಲಕಿಯರಿಗೆ ಉಚಿತವಾಗಿ ಲಸಿಕೆಯನ್ನು ನೀಡಲಾಗುವುದು ಬಾಲಕಿಯರು ಇದರ ಸದುಪಯೋಗವನ್ನು ಪಡೆದುಕೊಂಡು ಉತ್ತಮ ಆರೋಗ್ಯ ಪಡೆದುಕೊಳ್ಳಬೇಕು ಎಂದು ಹೇಳಿದರು. ಆಯುಷ್ ವೈದ್ಯಾಧಿಕಾರಿ ಡಾ. ಟಿ.ಜೆ ಘಾಟ್ಗೆ ಮಾತನಾಡಿ, ಆರೋಗ್ಯ ಇಲಾಖೆಯಲ್ಲಿ ಪೋಲಿಯೋ ಲಸಿಕೆ ನೀಡಿ ಪೋಲಿಯೋ ನಿರ್ಮೂಲನೆ ಮಾಡಿದಂತೆ ಈ ಲಸಿಕೆ ನೀಡಿ ಹೆಣ್ಣು ಮಕ್ಕಳ ಗರ್ಭಕಂಠದ ಕ್ಯಾನ್ಸರ ತಡೆಗಟ್ಟುವ ನಿಟ್ಟಿನಲ್ಲಿ ತಮ್ಮ ಮಕ್ಕಳಿಗೆ ಈ ಲಸಿಕೆ ಕೊಡಿಸುವ ಜವಾಬ್ದಾರಿ ಪ್ರತಿಯೊಬ್ಬ ಪಾಲಕರದಾಗಿದೆ ಎಂದರು. ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಲಸಿಕೆ ಹಾಕಲಾಯಿತು. ಈ ವೇಳೆಯಲ್ಲಿ ಮಕ್ಕಳ ತಜ್ಞ ಡಾ.ಶಿವಕುಮಾರ ರಾಠೋಡ, ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಇದ್ದರು.



ಯಲಬುರ್ಗಾ: ತಾಲೂಕಿನ ಹಿರೇವಂಕಲಕುಂಟಾ ಸಮುದಾಯ ಕೇಂದ್ರದಲ್ಲಿ ಮಂಗಳವಾರ ಆಯೋಜಿಸಿದ್ದ ಎಚ್.ಪಿ.ವಿ ಲಸಿಕೆಕರಣ ಕಾರ್ಯಕ್ರಮ ನಡೆಯಿತು. ವೈದ್ಯಾಧಿಕಾರಿ ಡಾ.ಐಶ್ವರ್ಯ, ಆಯುಷ್ ವೈದ್ಯಾಧಿಕಾರಿ ಡಾ. ಟಿ.ಜೆ ಘಾಟ್ಗೆ, ಮಕ್ಕಳ ತಜ್ಞ ಡಾ.ಶಿವಕುಮಾರ ರಾಠೋಡ, ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಇದ್ದರು.

ಕಾಮಗಾರಿಗಳಲ್ಲಿ ಗುಣಮಟ್ಟ ಮಾಯ: ಆರೋಪ

ಎಚ್.ಕೆ.ಬಡಿಗೇರ್

ದಿಗಂತ ವಿಶೇಷ

ಸಿಂಧನೂರು: ವರ್ಷವಿಡೀ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇರುವ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಆಗಾಗ ಧ್ವನಿ ಎತ್ತುತ್ತಿರುತ್ತಾರೆ. ಆದರೆ ಅಧಿಕಾರಿಗಳು, ಜನಪ್ರತಿನಿಧಿಗಳು ಮಾತ್ರ ಮೌನಕ್ಕೆ ಶರಣಾಗಿರುತ್ತಾರೆ. ಆದರೆ ಈಗ ಮಾತ್ರ ಇದ್ದಕ್ಕಿದ್ದಂತೆ ಮಾರ್ಚ್ ತಿಂಗಳು ಸಮೀಪಿಸುತ್ತಿದ್ದಂತೆ ಮೂಲೆಯಲ್ಲಿ ಇದ್ದ ಬಿದ್ದ ಕಾಮಗಾರಿಗಳನ್ನೆಲ್ಲ ಪಟ್ಟಿ ಮಾಡಿಕೊಂಡು ಅರೆ ಬರೆ ಕಾಮಗಾರಿಗಳಲ್ಲಿ ಗುಣಮಟ್ಟ ಮರೆತು ಸರ್ಕಾರದ ವಿವಿಧ ಇಲಾಖೆಗಳ ಖಜಾನೆಯಲ್ಲಿ ಉಳಿದ ಅನುದಾನವನ್ನು ಖರ್ಚು ಮಾಡಲು ಟೆಂಡರ್ ಕರೆಯೋದು ಅಥವಾ ತುಂಡುಗುತ್ತಿಗೆ ನೀಡೋದು ಸೇರಿದಂತೆ ಇತರ ಮಾರ್ಗಗಳ ಮೂಲಕ ಹಣವನ್ನು ಈ ತಿಂಗಳ ಕೊನೆಯಲ್ಲಿ ಗುತ್ತಿಗೆದಾರರೊಂದಿಗೆ ಅಧಿಕಾರಿಗಳು ಸೇರಿ ಹರಿದು ಹಂಚಿ ತಿನ್ನುವ ಪ್ರವೃತ್ತಿ ವಿವಿಧ ಇಲಾಖೆಗಳಲ್ಲಿ ನಡೆದಿದೆ.

ಮಾರ್ಚ್ ತಿಂಗಳು ಬಂದರೆ ಅಧಿಕಾರಿಗಳಿಗೆ, ಗುತ್ತಿಗೆದಾರರಿಗೆ ಸುಗ್ಗಿಯ ಕಾಲ ಎಂಬುದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುವ ಮಾತು.

ಜಿಲ್ಲೆಯಾದ್ಯಂತ ನಡೆಯುವ ಸಿಸಿ ರಸ್ತೆ, ಅಂಗನವಾಡಿ, ಆರೋಗ್ಯ ಕೇಂದ್ರ, ಶೌಚಾಲಯ, ಶಾಲಾ ಕಾಂಪೌಂಡ್ ಸೇರಿದಂತೆ ವಿವಿಧ ರೀತಿಯ ಕಾಮಗಾರಿಗಳನ್ನು ಅಧಿಕಾರಿಗಳು ಸರಕಾರಿ ನಿಯಮಗಳನ್ನು ಪಾಲಿಸದೇ ತಮಗೆ ಅನುಕೂಲವಾಗುವಂತಹ



ಕಾಮಗಾರಿ ಮಾಡಿಕೊಂಡು ಜೇಬು ತುಂಬಿಸುವ ಕೆಲಸ ಆಗುತ್ತಿದೆ ಎಂಬ ಆರೋಪಗಳು ಹೊಸದೇನಲ್ಲ ಎಂದು ರೈತ ಮತ್ತು ದಲಿತ ಸಂಘಟನೆಗಳ ಆರೋಪವಾಗಿದೆ.

ವರ್ಷ ಪೂರ್ತಿ ಖರ್ಚು ಆಗದ ಸರ್ಕಾರಿ ಅನುದಾನ ಮಾರ್ಚ್ ತಿಂಗಳಲ್ಲಿ ಮಾತ್ರ ಯರ್ರಾ ಬಿರ್ರಿಯಾಗಿ ಖರ್ಚು ಆಗುತ್ತಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಮಾರ್ಚ್ ತಿಂಗಳ ಅಂತ್ಯದಲ್ಲಿ ತರಾತುರಿಯಲ್ಲಿ ಹಣ ಖರ್ಚು ಮಾಡಿದರೂ ಸಹ ವಿವಿಧ ಕಾಮಗಾರಿಗಳ ಗುಣಮಟ್ಟ ಹೇಗಿರುತ್ತದೆ ಎಂದು ಊಹಿಸಲೂ ಸಹ ಸಾಧ್ಯವಾಗದ ರೀತಿಯಲ್ಲಿ ಕಾಮಗಾರಿಗಳು ನಡೆದು ಬಿಲ್‌ಗಳು ಕೈಸೇರುತ್ತವೆ.

ರಾಜಕೀಯ ಒತ್ತಡವೋ ಅಥವಾ ಕೆಲವು ಅಧಿಕಾರಿಗಳ ಪರ್ಸೆಂಟೇಜ್ ಮಹಿಮೆಯೋ. ಆ ದೇವರೇ ಬಲ್ಲ, ಅದು ಏನೇ ಒಟ್ಟಾರೆಯಾಗಿ ಮಾರ್ಚ್ ತಿಂಗಳು ಅಂತ್ಯದ ಕೊನೆಯ ಚರಣ ಅಥವಾ ಕೊನೆ ಆಟ ಕೆಲ ಪ್ರಮಾಣಿಕರನ್ನ ಹೊರತು ಪಡಿಸಿ ಅಡಿಯಿಂದ ಮುಡಿಯವರೆಗೂ ಎಲ್ಲರಿಗೂ ಸುಗ್ಗಿಯ ಕಾಲವಂತು ಸತ್ಯ ಎಂದು ಹೇಳಬಹುದು.

> ಈ ಅವಧಿಯಲ್ಲಿ ಜಿಲ್ಲೆಯಾದ್ಯಂತ ನಡೆದಿರುವ ಕಾಮಗಾರಿಗಳಲ್ಲಿ ಯಾವುದಾದರೂ ಲೋಪ ಕಂಡು ಬಂದರೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
> ■ **ನಿತೀಶ್ ಕೆ,** ಜಿಲ್ಲಾಧಿಕಾರಿ, ರಾಯಚೂರು

> ಮಾರ್ಚ್ ಅವಧಿಯಲ್ಲಿ ಮಳೆಗಾಲ ಕಡಿಮೆ ಇರುವುದರಿಂದ ಹಾಗೂ ಗುಣಮಟ್ಟದ ಕಾಮಗಾರಿಗಳನ್ನು ಮಾಡುವ ಸಲುವಾಗಿ ಕಾಮಗಾರಿ ಮಾಡಲಾಗುತ್ತದೆ.
> ■ **ಸೂಗಪ್ಪ, ಎಇಇ,** ಲೋಕೋಪಯೋಗಿ ಇಲಾಖೆ ಅಧಿಕಾರಿ ಸಿಂಧನೂರು

> ಕಾಮಗಾರಿಗಳು ನಡೆಯುತ್ತಿರುವ ಸ್ಥಳದಲ್ಲಿ ಇಲಾಖೆಯ ಅಧಿಕಾರಿಗಳಿದ್ದು, ಅದರ ಬಗ್ಗೆ ಪರಿಪೂರ್ಣ ಮಾಹಿತಿ ತೆಗೆದುಕೊಂಡು ಬಿಲ್ ಪಾವತಿ ಮಾಡುವ ಮೂಲಕ ಕಾಮಗಾರಿಗಳ ಗುಣಮಟ್ಟ ಕಾಪಾಡಲಾಗುತ್ತದೆ.
> ■ **ಪ್ರಕಾಶ ಪಾಂಡುರಂಗ,** ಎಇಇ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಅಧಿಕಾರಿ ಸಿಂಧನೂರು

> ವಿವಿಧ ಇಲಾಖೆಗಳ ಕಾಮಗಾರಿಗಳನ್ನು ಅರೆಬರೆ ಮಾಡಿ ಬಿಲ್ ಎತ್ತುವ ಹುನ್ನಾರ ನಡೆದಿದೆ. ಇದರಲ್ಲಿ ಶಾಮಿಲಾದ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.
> ■ **ಬಾಲಸ್ವಾಮಿ ತಿಡಿಗೋಳ,** ದಲಿತ ಸಂಘಟನಾ ಸಮಿತಿ ಭೀಮ ಘರ್ಜನೆ ಕಲ್ಯಾಣ ಕರ್ನಾಟಕ ವಿಭಾಗೀಯ ಅಧ್ಯಕ್ಷ ಹಾಗೂ ಮಲ್ಲಪ್ಪ ಎಸ್. ಗೋನಾಳ, ದಲಿತ ಸಂಘರ್ಷ ಸಮಿತಿ (ಸಂಯೋಜಕ ಬಣ) ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷ

ಬಲ್ಡೋಟ ತೊಲಗಿಸಿ: 145ನೇ ದಿನದ ಧರಣಿ

ಕೊಪ್ಪಳ: ನಗರಸಭೆ ಮುಂದಿನ ಬಲ್ಡೋಟ ತೊಲಗಿಸಿ, ಕೊಪ್ಪಳ ಉಳಿಸಿ ಎಂದು ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನಡೆಸಿರುವ ಅನಿರ್ದಿಷ್ಟವಾದಿ ಧರಣಿಯ 145ನೇ ದಿನದ ಹೋರಾಟದಲ್ಲಿ ಜಿಲ್ಲೆಯ ರಾಜಕೀಯ ಧುರೀಣರಾಗಿದ್ದ ಕರಿಯಣ್ಣ ಸಂಗಟಿ ಅವರಿಗೆ ಮೌನಾಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಮಾಜಿ ವಿಧಾನ ಪರಿಷತ್ ಸದಸ್ಯ ಕರಿಯಣ್ಣ ಸಂಗಟಿ ಅವರು ಕೇವಲ ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಇರಲಿಲ್ಲ, ಪರಿಸರ ಉಳಿಸಲು ಅವರು ಮಾಡಿದ ಹೋರಾಟ ಬಹಳ ದೊಡ್ಡದು. ಕೊಪ್ಪಳ ಜಿಲ್ಲೆಗೆ ಧುತ್ತೆಂದು ಕಾಲಿಟ್ಟು ಸ್ಥಾಪನೆಗೆ ಮುಂದಾದ ವಿದ್ಯುತ್ ಅಣುಸ್ಥಾವರ ಘಟಕದ ವಿರುದ್ಧ ಹೋರಾಟವನ್ನು ನಮ್ಮ ವೇದಿಕೆಯ ಸಹಭಾಗಿತ್ವ ಇಟ್ಟುಕೊಂಡು ಪಟ್ಟು ಬಿಡದೇ ಅರಸಿನಕೇರಿ ಸುತ್ತಲಿನ ಜನರನ್ನು ಸಂಘಟಿಸಿ ಹೋರಾಟಕ್ಕೆ ನೇತೃತ್ವಕೊಟ್ಟರು. ಅಲ್ಲದೆ ಚಿಕ್ಕಬೆಣಕಲ್ ಟೋಲ್‌ಗೇಟ್ ಬಂದ್ ಮಾಡಿ ಹೋರಾಡಿ ಅಣುಸ್ಥಾವರ ಇಲ್ಲಿಂದ ತೊಲಗಿಸಿದ್ದನ್ನು ಸ್ಮರಿಸಿದರು. ಸೋಮವಾರ ಬೆಂಗಳೂರು ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಧರಣಿ ಹೋರಾಟದಲ್ಲಿ ಸಹ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಆದಷ್ಟು ಶೀಘ್ರ ಮತ್ತೊಂದು ದಿನಾಂಕ ಗೊತ್ತುಪಡಿಸಲಾಗುತ್ತದೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಮತ್ತು ಮಾಜಿ ಸಂಸದ ಸಂಗಣ್ಣ ಕರಡಿ ಭರವಸೆ ನೀಡಿದರು.

ಶೀಘ್ರ ಜಿಲ್ಲೆಯ ಸರ್ವ ಪಕ್ಷಗಳ, ಹೋರಾಟ ವೇದಿಕೆಯ ಮುಖಂಡರ ನಿಯೋಗ ಕೊಂಡೊಯ್ದು ಮುಖ್ಯಮಂತ್ರಿಗಳನ್ನು ಕಂಡು ಜೀವ, ಆರೋಗ್ಯ ಹಾನಿ ಮಾಡುವ ಮಾಲಿನ್ಯಕಾರಿ ಕಾರ್ಖಾನೆಗಳನ್ನು ಮುಚ್ಚಲು ಮನವರಿಕೆ ಮಾಡುತ್ತೇವೆ ಎಂದರು.

ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ, ಹೋರಾಟ ವೇದಿಕೆಯ ಮುಖಂಡರಾದ ರಾಜು ಬಾಕಳೆ, ಜ್ಯೋತಿ ಎಂ. ಗೊಂಡಬಾಳ, ಕಾವ್ಯ ಗಡಾದ, ವಿದ್ಯಾ ನಾಲ್ವಾಡ, ಸರೋಜಾ ಬಾಕಳೆ, ಬಿ.ಜಿ. ಕರಿಗಾರ, ಮಹಾದೇವಪ್ಪ ಮಾವಿನಮಡು, ಪಂಪಣ್ಣ ಚಿಂತಪಲ್ಲಿ, ರಾಜಶೇಖರ ಏಳುಬಾವಿ, ವೈ. ಸತ್ಯನಾರಾಯಣ, ಮಂಜುನಾಥ ಜಿ. ಗೊಂಡಬಾಳ, ಡಾ. ಬಸವರಾಜ ಪೂಜಾರ ಯಲಮಗೇರಿಯ ಕರಿಯಣ್ಣ ಸಂಗಟಿ ಅವರ ನಿವಾಸದಲ್ಲಿ ಅಂತಿಮ ದರ್ಶನ ಪಡೆದರು. ಧರಣಿಯಲ್ಲಿ ಶಿವಕುಮಾರ ಕುಕನೂರು, ಎಸ್.ಬಿ. ರಾಜೂರು, ಗಾಳೆಪ್ಪ ಎಸ್. ಕಡೆಮನಿ ಇದ್ದರು.



ಪುಸ್ತಕಗಳು ಸಂಸ್ಕೃತಿ ಜೀವಾಳ: ಡಾ.ಕಿಲಾರಿ

ಮುನಿರಾಬಾದ್: ಇಂದಿನ ಯುಗದಲ್ಲಿ ಯುವ ಪೀಳಿಗೆ ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಮರೆಯುತ್ತಿದ್ದಾರೆ. ನಮ್ಮ ಸಂಸ್ಕೃತಿಯ ಪಳೆಯುಳಿಕೆಗಳು ಉಳಿಯಬೇಕಾದರೆ ಪುಸ್ತಕಕ್ಕೆ ಮಾರು ಹೋಗಬೇಕಾದ ಅನಿವಾರ್ಯತೆ ಇದೆ ಎಂದು ಹೊಸಪೇಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ನಾಗಣ್ಣ ಕಿಲಾರಿ ಎಂದರು.

ಹಿಟ್ನಾಳ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಸಹಯೋಗದಲ್ಲಿ ನಡೆದ 'ನನ್ನ ಮೆಚ್ಚಿನ ಪುಸ್ತಕ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 'ಮೊಬೈಲ್ ಬಿಡಿ ಪುಸ್ತಕ ಇಡಿ' ಸರ್ಕಾರದ ಸದಾಶಯವಾಗಿದೆ. ವಿದ್ಯಾರ್ಥಿಗಳ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಪುಸ್ತಕಗಳು ಸಹಕಾರಿಯಾಗಲಿವೆ ಎಂದರು.

ಸಂಚಾಲಕ ಡಾ.ನಿಂಗಪ್ಪ ಕಂಬಳಿ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಏಳಿಗೆಗಾಗಿ ಪ್ರಾಧಿಕಾರವು ಹಾಕಿಕೊಂಡ ಮಹತ್ವಪೂರ್ಣ ಯೋಜನೆ ಇದಾಗಿದೆ. ಪ್ರಾಧಿಕಾರದ ಸದಾಶಯ ಈಡೇರಬೇಕಾದರೆ ಮನಸ್ಸು ಕೆಡಿಸುವ ಹಲವು ವಸ್ತುಗಳನ್ನು ಮೆಚ್ಚುವುದನ್ನು ಬಿಟ್ಟು ಪುಸ್ತಕ ಮೆಚ್ಚುವ ಕೆಲಸವಾಗಬೇಕು. ಕನ್ನಡ ಸಾಹಿತ್ಯ ಸಮೃದ್ಧವಾಗಿದ್ದು ಬಹಳಷ್ಟು ಪುಸ್ತಕಗಳು ಬದುಕಿಗೆ ದಾರಿ ದೀಪವಾಗಲಿವೆ ಎಂದರು. ಡಾ.ತಿಪ್ಪೇರುದ್ರ ಸಂಡೂರು ಮಾತನಾಡಿ, ಇಡೀ ಕನ್ನಡ ಸಾಹಿತ್ಯದ ಮಹತ್ವದ ಗ್ರಂಥಗಳನ್ನು ಪರಿಚಯಿಸುತ್ತ ನಾವೆಲ್ಲ ಪುಸ್ತಕಗಳನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಕು, ಇವತ್ತು ಹಲವಾರು ಮಹನೀಯರ ಬದುಕಿನ ಏರಿಳಿತಗಳನ್ನು



ಗಮನಿಸಿದಾಗ ಅವರನ್ನು ಮಹತ್ವದ ಸ್ಥಾನದಲ್ಲಿರಿಸಿದ್ದು ಪುಸ್ತಕಗಳು ಎಂಬುದನ್ನು ನಾವು ಮರೆಯುವಂತಿಲ್ಲ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಸವರಾಜ ಟಿ. ಎಚ್. ಮಾತನಾಡಿ, ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಆಗುವ ಅನಿವಾರ್ಯತೆ ಇದೆ. ಯುವ ಪೀಳಿಗೆಗಳು ಒಳ್ಳೆಯ ವ್ಯಕ್ತಿತ್ವ ರೂಪಿಸಿಕೊಳ್ಳಬೇಕಾದರೆ ಇಂಥ ಕಾರ್ಯಕ್ರಮಗಳು ಸಹಕಾರಿಯಾಗಲಿವೆ. ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮದ ಸದುಪಯೋಗ ಪಡೆದು ಒಳ್ಳೆಯ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಈ ವೇಳೆ ನನ್ನ ಮೆಚ್ಚಿದ ಪುಸ್ತಕ ಅಭಿಪ್ರಾಯ ಮಂಡನಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ವಿಜಯಲಕ್ಷ್ಮಿ, ದ್ವಿತೀಯ ಸ್ಥಾನ ಚೈತ್ರ, ತೃತೀಯ ಸ್ಥಾನ ಸಿಂಧು ವಿದ್ಯಾರ್ಥಿನಿಯರಿಗೆ ಬಹುಮಾನ ನೀಡಲಾಯಿತು. ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು. ಉಪನ್ಯಾಸಕರಾದ ಚಿಗಟೇರಿ ಗಜೇಂದ್ರಗಡ, ಎರಿಸ್ವಾಮಿ, ಕವಿತಾ, ಸೋಮನಾಥ, ವಿಶ್ವನಾಥ, ಆಂಜನೇಯ, ವೆಂಕಟೇಶ, ಪ್ರಿಯ ಇದ್ದರು. ಚಂದ್ರಶೇಖರ ನಿರೂಪಿಸಿ,ಕವಿತಾ ಪ್ರಾರ್ಥಿಸಿದರು. ಈರಯ್ಯ ವಕ್ಕುಂದಮಠ ಸ್ವಾಗತಿಸಿ, ಪೂಜಾ ಸುಬೇದಾರ ವಂದಿಸಿದರು.

ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ

ಯಾದಗಿರಿ: ರಾಜ್ಯದಲ್ಲಿ ಮುಂಬರುವ ದಿನಗಳಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಉತ್ತಮ ಭವಿಷ್ಯವಿದೆ. ಎಂದು ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ತಿಳಿಸಿದರು.

ನಗರದ ಎನ್.ವಿ.ಎಂ.ಹೋಟೆಲ್ ಸಭಾಂಗಣದಲ್ಲಿ ಬಿಜೆಪಿಯಿಂದ ಆಯೋಜಿಸಿದ್ದ ಪಂ.ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಅಭಿಯಾನ, ನಗರ ಮಂಡಲ ಪ್ರಶಿಕ್ಷಣ ವರ್ಗವನ್ನು ಉದ್ಘಾಟಿಸಿ ಮಾತನಾಡಿ, ಕೇಂದ್ರದಲ್ಲಿ ಕಳೆದ 12 ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನಮ್ಮ ಸರ್ಕಾರ ಭ್ರಷ್ಟಾಚಾರ ರಹಿತ ಆಡಳಿತ ನೀಡುತ್ತಿದೆ ಎಂದರು. ಇಂದು ಮಧ್ಯಪ್ರಾಚ್ಯ ರಾಷ್ಟ್ರಗಳು ಯುದ್ಧದಿಂದ ತತ್ತರಿಸಿವೆ. ಇದರಿಂದ ಕಚ್ಚಾತೈಲಗಳ ಬೆಲೆ ಆಯಾ ರಾಷ್ಟ್ರಗಳಲ್ಲಿ ಹೆಚ್ಚಾಗಿವೆ. ಆ ದೇಶದ ಪ್ರಜೆಗಳು ಬೆಲೆ ಏರಿಕೆಯಿಂದ ತೊಂದರೆಯಲ್ಲಿದ್ದಾರೆ. ಆದರೆ, ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಯಾವುದೇ ಏರಿಕೆಯಾಗಿಲ್ಲ, ಇದು ನಮ್ಮ ಪ್ರಧಾನಿಗಳ ಕಾರ್ಯವೈಖರಿ ಎಂದರು. ರಾಜ್ಯದಲ್ಲೂ ಸಹ ಮುಂದಿನ ಎಲ್ಲ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ಸಾಧಿಸಬೇಕು. ಈನಿಟ್ಟಿನಲ್ಲಿ ಪಕ್ಷದಿಂದ ಇಂಥ



ವರ್ಗಗಳನ್ನು ನಡೆಸುತ್ತಿದೆ ಎಂದರು. ಬೂತ್ ಮಟ್ಟದಲ್ಲಿನ ಅಧ್ಯಕ್ಷರು ಆ ಬೂತ್‌ಗೆ ಮುಖ್ಯಮಂತ್ರಿ ಇದ್ದ ಹಾಗೆ. ನಿಮ್ಮ ಬೂತ್‌ಗಳನ್ನು ಭದ್ರಗೊಳಿಸಿಕೊಳ್ಳಬೇಕು. ಬಿಎಲ್‌ಒಗಳೊಂದಿಗೆ ಸಮನ್ವಯ ಸಾಧಿಸಿ, ಮತದಾರರೊಂದಿಗೆ ನಿಕಟ ಸಂಪರ್ಕವಿಟ್ಟುಕೊಳ್ಳಬೇಕು ಎಂದರು.ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ ಪ್ರಮುಖರಾದ ಮಹೇಶರಡ್ಡಿ ಮುದ್ನಾಳ್, ರಾಚನಗೌಡ ಮುದ್ನಾಳ್, ನಾಗರತ್ನ ಕುಪ್ಪಿ, ಖಂಡಪ್ಪ ದಾಸನ್, ಡಾ.ಶರಣಭೂಪಾಲರಡ್ಡಿ ನಾಯ್ಕಲ್, ಸಿದ್ದನಗೌಡ ಕಾಡಂನೂರ, ದೇವಿಂದ್ರನಾಥ ನಾದ್, ನಿಂಗಪ್ಪ ಹತ್ತಿಮನಿ, ರಾಜಶೇಖರ ಕಾಡಂನೂರ, ಮೌನೇಶ ಬೆಳಗೇರಾ ಇದ್ದರು.

ಕೈ ಮುಖಂಡನಿಂದ ಜೀವ ಬೆದರಿಕೆ ಕರೆ: ಆರೋಪ

ಕಲಬುರಗಿ: ಜಮೀನು ಸಂಬಂಧಿತ ವಿಚಾರದಲ್ಲಿ ಜೀವ ಬೆದರಿಕೆ ಕರೆ ನೀಡಲಾಗಿದೆ ಎಂಬ ಗಂಭೀರ ಆರೋಪ ಬೆಳಕಿಗೆ ಬಂದಿದೆ. ಕಲಬುರಗಿ ನಗರದ ನಿವಾಸಿ ರಾಘವೇಂದ್ರ ಕುಲಕರ್ಣಿ ಅವರಿಗೆ ಜೀವ ಬೆದರಿಕೆ ನೀಡಲಾಗಿದೆ ಎಂದು ತಿಳಿದುಬಂದಿದೆ.


ನಗರದ ಸರ್ವೆ ನಂಬರ್ 78/1ಕ್ಕೆ ಸಂಬಂಧಿಸಿದ ಜಮೀನಿನ ಕುರಿತು ರಾಘವೇಂದ್ರ ಅವರು ಆರ್‌ಟಿಐ ಅರ್ಜಿ ಸಲ್ಲಿಸಿ, ಪಾಲಿಕೆಗೆ ಸೇರಿದ ಜಮೀನು ಕಬಳಿಕೆ ಕುರಿತು ದಾಖಲೆಗಳನ್ನು ಕೇಳಿದ್ದರು. ಈ ಹಿನ್ನೆಲೆ, ಕೈಮುಖಂಡ ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಾಂತಪ್ಪ ಕೂಡಲಗಿ ಅವರು ಫೋನ್ ಮೂಲಕ ಬೆದರಿಕೆ ಕರೆ ಮಾಡಿದ್ದು ಜಮೀನು ಸಂಬಂಧಿತ ದಾಖಲೆಗಳನ್ನು ಕೇಳಬಾರದು ಎಂದು ಒತ್ತಾಯಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಘಟನೆಗೆ ಸಂಬಂಧಿಸಿದಂತೆ ಶಾಂತಪ್ಪ ಕೂಡಲಗಿ ಸೇರಿದಂತೆ ಒಂಬತ್ತು ಜನರ ವಿರುದ್ಧ ಆರ್.ಜಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ, ಪ್ರಕರಣ ದಾಖಲಾಗಿ ಒಂದು ತಿಂಗಳು ಕಳೆದರೂ ಆರೋಪಿಗಳ ಬಂಧನವಾಗದಿರುವುದಕ್ಕೆ ರಾಘವೇಂದ್ರ ಕುಲಕರ್ಣಿ ಆಕ್ರೋಶ ವ್ಯಕ್ತಪಡಿಸಿದ್ದು, ತಕ್ಷಣ ಕ್ರಮ ಕೈಗೊಂಡು ಆರೋಪಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿದ್ದಾರೆ.

ಕೈ ಮುಖಂಡ ಶಾಂತಪ್ಪ ಸ್ಪಷ್ಟನೆ

ಜಮೀನು ಸಂಬಂಧಿತ ಜೀವ ಬೆದರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಕ್ಕೊಳಗಾದ ಕೈ ಮುಖಂಡ ಶಾಂತಪ್ಪ ಕೂಡಲಗಿ ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ್ದು, ರಾಘವೇಂದ್ರ ಕುಲಕರ್ಣಿ ಅವರಿಗೆ ಯಾವುದೇ ರೀತಿಯ ಜೀವ ಬೆದರಿಕೆ ನೀಡಿಲ್ಲ ಎಂದು ಹೇಳಿದ್ದಾರೆ. ನಾನು ಯಾರಿಗೂ ಬೆದರಿಕೆ ಹಾಕಿಲ್ಲ. ಅಂಬರೀಶ್ ಬಿರಬಿಟ್ಟಿ ಎಂಬವರು ನನ್ನ ಗೆಳೆಯರು. ಅವರಿಗೆ ರಾಘವೇಂದ್ರ ಕುಲಕರ್ಣಿ ಸುಮಾರು 50 ಲಕ್ಷ ರೂ. ಹಣ ನೀಡುವಂತೆ ಒತ್ತಾಯಿಸಿದ್ದಾನೆ. ಆ ವಿಚಾರದಲ್ಲಿ ಮಾತನಾಡಲು ನಾನು ಫೋನ್ ಮಾಡಿದ್ದೆ ಎಂದು ಶಾಂತಪ್ಪ ತಿಳಿಸಿದ್ದಾರೆ. ಈ ಪ್ರಕರಣದ ಸಂಬಂಧ ತಾನೂ ಸಹ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುವ ಶಾಂತಪ್ಪ ಕೂಡಲಗಿ, ನಾನು ಸಹ ಕೇಸ್ ದಾಖಲಿಸುತ್ತೇನೆ ಎಂದು ಹೇಳಿದ್ದಾರೆ.

ವಿವಿಧ ಕಾರ್ಯಕ್ರಮ ಆಯೋಜನೆ



ರಾಯಚೂರು : ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಹಿಳಾ ಘಟಕ ಹಾಗೂ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾ ಹಾಗೂ ತಾಲೂಕಾ ಘಟಕಗಳ ಸಮಯೋಗದಲ್ಲಿ ಮಹಿಳಾ ನೌಕರರಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ ಎಂದು ಕರ್ನಾಟಕ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶಾವಂತಗೇರಿ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಸ್ತುತ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ. ಮಹಿಳೆಯರು ಸಮಾಜದ ಬೆನ್ನೆಲುಬಾಗಿದ್ದು ಇವರು ಕುಟುಂಬದ ಜೊತೆಗೆ ಶಿಕ್ಷಣ, ಆರೋಗ್ಯ, ಆರ್ಥಿಕತೆ ಕ್ಷೇತ್ರಗಳು ದೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅನೇಕ ಕಾರ್ಯಕ್ಷೇತ್ರಗಳಲ್ಲಿ ಇವರು ಬಹಳ ಒತ್ತಡದ ನಡುವೆಯೂ ಕೆಲಸ ಮಾಡುತ್ತಿದ್ದಾರೆ. ಇವರ ಈ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಾಗವಹಿಸುವಂತೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿಲಾಗುತ್ತಿದೆ. ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮಾ.31ರ ಸಂಜೆ ನಾಲ್ಕು ಗಂಟೆಗೆ ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ಆಯೋಜನೆ ಮಾಡಲಾಗಿದೆ. ಇದೇ ಕಾರ್ಯಕ್ರಮದ ಅಂಗವಾಗಿ ಮಾ.29 ರಂದು ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಕ್ರೀಡಾ ಕೂಟವನ್ನು ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಛಾಯಾದೇವಿ, ಜಯಶ್ರೀ, ವಿಜಯಲಕ್ಷ್ಮೀ, ರತ್ನಾ, ನೀಲಮ್ಮ ಸೇರಿದಂತೆ ಇತರರಿದ್ದರು.


ವಿದ್ಯಾರ್ಥಿಗಳ ಸುರಕ್ಷತೆಗಾಗಿ ಮನವಿ ಸಲ್ಲಿಕೆ

ಕುಕನೂರು: ಪಟ್ಟಣದಲ್ಲಿ ವಿದ್ಯಾರ್ಥಿಗಳ, ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಎಸ್‌ಎಫ್‌ಎಸ್ ಶಾಲೆಯಿಂದ ವಿದ್ಯಾನಂದ ಗುರುಕುಲ ಶಾಲೆಯವರೆಗೆ ವಾಹನಗಳ ವೇಗ ನಿಯಂತ್ರಣ, ಸಂತೆ ಸಮಯದಲ್ಲಿ ಸಂಚಾರ ವ್ಯವಸ್ಥೆ ಸುಧಾರಣೆಗಾಗಿ ಕುಕನೂರ ಹಿತರಕ್ಷಣಾ ಸಮಿತಿಯ ಸದಸ್ಯರು ಮಂಗಳವಾರ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿದರು.

ಸಮಿತಿಯ ಸದಸ್ಯರು ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಮನವಿ ಹಸ್ತಾಂತರಿಸಿ, ಶಾಲಾ ಪ್ರದೇಶದಲ್ಲಿ ಹೆಚ್ಚುತ್ತಿರುವ ವಾಹನಗಳ ವೇಗದಿಂದ ವಿದ್ಯಾರ್ಥಿಗಳಿಗೆ ಅಪಾಯ ಉಂಟಾಗುತ್ತಿರುವುದನ್ನು ವಿವರಿಸಿದರು. ಈ ಹಿನ್ನೆಲೆಯಲ್ಲಿ ಶಾಲಾ ವಲಯವನ್ನು 'School Zone – Drive Slow" ಎಂದು ಘೋಷಿಸಿ, ಬ್ಯಾರಿಕೇಡ್‌ಗಳನ್ನು ಅಳವಡಿಸುವಂತೆ ಅವರು ವಿನಂತಿಸಿದರು. ವೀರಭದ್ರಪ್ಪ ವೃತ್ತದಿಂದ one-way ವ್ಯವಸ್ಥೆ ಜಾರಿಗೊಳಿಸಿ, ಪೊಲೀಸ್ ಸಿಬ್ಬಂದಿ ನಿಯೋಜಿಸುವಂತೆ ಮನವಿಯಲ್ಲಿ ತಿಳಿಸಲಾಗಿದೆ. ಪೊಲೀಸ್ ಅಧಿಕಾರಿಗಳು ಮನವಿಯನ್ನು ಸ್ವೀಕರಿಸಿ, ಸಮಸ್ಯೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸಮಿತಿ ಸಹ ಸಂಚಾಲಕ ಮಂಜುನಾಥ ನಾಡಗೌಡ, ಪದಾಧಿಕಾರಿಗಳಾದ ಅಂದಪ್ಪ ಜವಳಿ, ರಶೀದ್ ಹಣಜಗೇರಿ, ಕಳಕೇಶ್ ಹತ್ತಿಕಟಗಿ, ಗಂಗಾಧರ್ ನಾರಾಯಣಿ, ದೇವಪ್ಪ ರಾಟಿಮನಿ, ಕನಕಪ್ಪ ಬ್ಯಾಡರ್, ಸ್ಥಳೀಯರು ಇದ್ದರು.



ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ



ಮಾನ್ವಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಉದ್ಯೋಗ ಭರವಸೆ ಕೋಶ ಹಾಗೂ ಸಂಭವ ಪೌಂಡೇಶನ್ ಬೆಂಗಳೂರು ಸಹಯೋಗದಲ್ಲಿ ನಡೆದ ಕೃತಕ ಬುದ್ಧಿಮತ್ತೆ, ಎ.ಐ, ಶಾರ್ಟ್‌ಟರ್ಮ್ ಕೋರ್ಸ್ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ಕಾರ್ಯಗಾರಕ್ಕೆ ಚಾಲನೆ ನೀಡಿ ಕಾಲೇಜಿನ ಪ್ರಾಚಾರ್ಯ ಡಾ. ಜೆ.ಎಲ್.ಈರಣ್ಣ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ವಿದ್ಯಾರ್ಥಿಗಳು ಉನ್ನತವಾದ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಇಂದು ಕಂಪ್ಯೂಟರ್ ಜ್ಞಾನ ಹಾಗೂ ಎ.ಐ.ಸ್ಮಾರ್ಟ್ ಕೋರ್ಸ್‌ಗಳ ಬಗ್ಗೆ ಅಗತ್ಯವಾದ ಜ್ಞಾನವನ್ನು ನೀಡುವುದಕ್ಕಾಗಿ ಕೌಶಲ್ಯ ಭಾರತ ಎನ್ನುವ ಶೀರ್ಷಿಕೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯಧಾರಿತವಾದ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ವಿದ್ಯಾರ್ಥಿಗಳು ಕಾರ್ಯಗಾರದ ಸದುಪಯೋಗ ಪಡೆದುಕೊಳ್ಳ ಬೇಕು ಎಂದು ತಿಳಿಸಿದರು.

ಬೆಂಗಳೂರಿನ ಸಂಭವ ಫೌಂಡೇಶನ್ ಸಂಯೋಜಕ ಪ್ರವೀಣ್ ಕುಮಾರ್ ಮತ್ತು ತರಬೇತಿದಾರರಾದ ದಿವ್ಯಶ್ರೀ, ಪೂಜಾ ರವರು ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಗಣಕಯಂತ್ರ ವಿಭಾಗದ ಮುಖ್ಯಸ್ಥ ಡಾ. ಸೈಯದ್ ಮೀನಾಜ ವುಲ್ ಹಸನ್ ಹಾಗೂ ಐಕ್ಯು ಎ.ಸಿ. ಸಂಚಾಲಕರಾದ ಶಶಿಧರ್.ಎಸ್ ,ಕಾಲೇಜಿನ ಉದ್ಯೋಗ ಭರವಸೆ ಕೋಶದ ಸಂಯೋಜಕರಾದ ಚಂದ್ರು, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಚನ್ನಬಸವ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಮರಿದೇವ ಕುಟುಂಬಕ್ಕೆ ಚೆಕ್ ವಿತರಣೆ

ಮಸ್ಕಿ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಬೆಂಗಳೂರುಯಿಂದ ಜೆಸ್ಕಾಂ ನೌಕರರ ಸಂಘಟನಾ ಸಭೆ ಮತ್ತು ನೌಕರರ ಮಕ್ಕಳಿಗಾಗಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕಲ್ಬುರ್ಗಿಯ ಕೆಇಬಿ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಿಂಧನೂರು ವಿಭಾಗ ವ್ಯಾಪ್ತಿಯ ಮಸ್ಕಿ ಉಪ ವಿಭಾಗದಲ್ಲಿ ಕಿರಿಯ ಪವರ್ ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಮರಿದೇವ ಕಳೆದ ಏಪ್ರಿಲ್‌ನಲ್ಲಿ ಅಪಘಾತದಲ್ಲಿ ಮರಣ ಹೊಂದಿರುವುದರಿಂದ ಎಸ್‌ಬಿಐ ಬ್ಯಾಂಕ್‌ಯಿಂದ ಬ್ಯಾಂಕಿನ ಅಧಿಕಾರಿ ಕಾರ್ತಿಕ್, ಗುರುರಾಜ್ ಗಣ್ಯರ ಸಮ್ಮುಖದಲ್ಲಿ ಅಪಘಾತ ವಿಮಾ ರೂ.1 ಕೋಟಿ ರೂ.ಚೆಕ್ಕನ್ನು ಮರಿದೇವ ಕುಟುಂಬಕ್ಕೆ ವಿತರಿಸಿದರು. ನಂತರ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ರಾಜ್ಯಅಧ್ಯಕ್ಷ ಕೆ.ಬಲರಾಮ ಮಾತನಾಡಿ, ಅಪಘಾತದಲ್ಲಿ ಮರಣ ಹೊಂದಿದ ನೌಕರರಿಗೆ ಸಂಘವು ಸತತ ಪ್ರಯತ್ನ ಮಾಡಿ 1 ಕೋಟಿ ರೂ.ಗಳ ಪರಿಹಾರವನ್ನು ಕೊಡಿಸುವಲ್ಲಿ ಯಶಸ್ವಿಯಾಗಿದೆ. ಆದರೆ ನೌಕರರ ಜೀವಕ್ಕೆ ಬೆಲೆ ಕಟ್ಟಲಾಗದು. ನೌಕರರು ಕರ್ತವ್ಯದ ಜೊತೆಗೆ ಪ್ರಾಣ ರಕ್ಷಣೆಗಾಗಿ ಸುರಕ್ಷಾ ಕ್ರಮಗಳನ್ನು ತಪ್ಪದೇ ಅನುಸರಿಸಬೇಕು. ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಿ ಉನ್ನತ ಹುದ್ದೆಗಳನ್ನು ಅಲಂಕರಿಸುವಂತೆ ತಯಾರು ಮಾಡಬೇಕು ಎಂದರು. ಇಲಾಖೆಯ ಅಧಿಕಾರಿಗಳು ಇದ್ದರು.



ಕಿರುಸುದ್ದಿ

ದೀಕ್ಷಾ ಆಯ್ಕೆ

◆ **ಹಗರಿಬೊಮ್ಮನಹಳ್ಳಿ:** ತಾಲೂಕಿನ ಅಂಕಸಮುದ್ರ ಗ್ರಾಮದ ಶ್ರೀ ಕನಕ ವಿದ್ಯಾ ಸಂಸ್ಥೆಯ ವಿದ್ಯಾಭಾರತಿ ಹಿರಿಯ ಪ್ರಾಥಮಿಕ ಶಾಲೆ ಉಪನಾಯಕನಹಳ್ಳಿ ವಿದ್ಯಾರ್ಥಿನಿಯಾದ



ಎಂ.ಎಂ. ದೀಕ್ಷಾ ಪ್ರಸಕ್ತ ಸಾಲಿನಲ್ಲಿ ನವೋದಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ನವೋದಯ ಶಾಲೆಗೆ ಆಯ್ಕೆಯಾಗಿದ್ದಾಳೆ. ಅಂಕಸಮುದ್ರ ನಮ್ಮ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಎ. ಪಂಪಾಪತಿ ವಿದ್ಯಾಭಾರತಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿನಿಯ ತಂದೆ ಎಂಎಂ ಶಿವಕುಮಾರ್ ತಾಯಿ ಜಿಎಂ ಭಾರತಿ ಸೇರಿ ಇತರರು ಅಭಿನಂದಿಸಿ ಶುಭ ಕೋರಿದರು.

ಹೆಚ್. ಹೊಸಹಳ್ಳಿ ಗ್ರಾಪಂಗೆ ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ

◆ **ಕುರೂರು:** ಕರ್ನಾಟಕ ಸರ್ಕಾರವು ಉತ್ತಮಸಾಧನೆ ಮಾಡಿದ ಪಂಚಾಯತಿಗಳಿಗೆ ನೀಡುವ ಗಾಂಧಿ



ಗ್ರಾಮ ಪುರಸ್ಕಾರ ಪ್ರಶಸ್ತಿಗೆ ಹೆಚ್. ಹೊಸಹಳ್ಳಿ ಗ್ರಾಮ ಪಂಚಾಯತಿಯು 2024-25 ನೇ ಸಾಲಿನಲ್ಲಿ ಆಯ್ಕೆ ಮಾಡಿ ಆದೇಶ ಹೊರಡಿಸಿದ್ದಾರೆ. ಕುರೂರ ಹೆಚ್ ಹೊಸಹಳ್ಳಿ ಮತ್ತು ಹಾಗಲೂರು ಗ್ರಾಮಗಳಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಕರ್ತರಾದ ಪಿಡಿಓ, ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಎನ್‌ಆರ್‌ಎಲ್ ಎಂ ಘಟಕದವರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯವರು, ಎರಡೂ ಊರಿನ ಶಾಲಾ ಮುಖ್ಯಸ್ಥರು, ಸ್ವಚ್ಛತಾ ಸಿಬ್ಬಂದಿ, ಗ್ರಂಥ ಪಾಲಕರು, ವಿ.ಆರ್ ಡಬ್ಲ್ಯೂ, ಗ್ರಾಮ ಪಂಚಾಯತಿ ಸಿಬ್ಬಂದಿ, ಊರಿನ ಜನರು ಈ ಪ್ರಶಸ್ತಿಗೆ ಕಾರಣೀಕರ್ತರಾಗಿದ್ದಾರೆ. ಇಲ್ಲಿಯವರೆಗೆ ಗ್ರಾಮ ಪಂಚಾಯತಿ ವತಿಯಿಂದ ಊರುಗಳಲ್ಲಿ ಅತ್ಯುತ್ತಮ ಕೆಲಸಗಳಾಗಿದೆ. ಆದರೂ ಇನ್ನೂ ಮಾಡಬೇಕಾದ ಕೆಲಸಗಳು ಬೇಕಾದಷ್ಟಿವೆ. ನಮ್ಮ ಪಂಚಾಯತಿಯು ಭವಿಷ್ಯದಲ್ಲಿ ಪ್ರಮುಖ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಿದೆ.ವಿನೂತನ ಕಾರ್ಯಗಳು ಗ್ರಾಮಗಳಲ್ಲಿ ಜಾರಿಯಾಗಲಿವೆ. ಇದಕ್ಕೆ ನಿಮ್ಮ ಸಹಕಾರ ಗ್ರಾಮ ಪಂಚಾಯತಿಯೊಂದಿಗೆ ಹೀಗೇ ಇರಲಿ....

ವಿವಿಧೆಡೆ ದಾಳಿ: ಬಾಲಕಾರ್ಮಿಕನ ರಕ್ಷಣೆ



◆ **ಬಳ್ಳಾರಿ:** ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನೆ ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಮಂಗಳವಾರ ನಗರದ ವಿವಿಧೆಡೆ ದಾಳಿ ನಡೆಸಿ ಓರ್ವ ಬಾಲ ಕಾರ್ಮಿಕನನ್ನು ರಕ್ಷಿಸಲಾಗಿದೆ. ಜಿಲ್ಲಾಧಿಕಾರಿ ನಿರ್ದೇಶನದ ಮೇರೆಗೆ ಹಾಗೂ ಪ್ಯಾನ್-ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ ನಿಮಿತ್ತ ಉಪತಹಶೀಲ್ದಾರ ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರ ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಸಿ ಈ ದಾಳಿ ಕೈಗೊಳ್ಳಲಾಗಿದೆ. ನಗರದ ಬೆಂಗಳೂರು ರಸ್ತೆ, ಬಾಪೂಜಿ ನಗರ, ಎ.ಪಿ.ಎಂ.ಸಿ ಹತ್ತಿರದ ವಿವಿಧ ಸ್ಥಳಗಳಲ್ಲಿರುವ ಗ್ಯಾರೇಜ್, ಮೆಕ್ಯಾನಿಕ್ ಶಾಪ್, ಬೇಕರಿ, ಜೀನ್ಸ್ ಹೊಲಿಗೆ ಘಟಕಗಳ ಮೇಲೆ ಟಾಸ್ಕ್ ಫೋರ್ಸ್ ಸಮಿತಿ ಮೂಲಕ ಭೇಟಿ ನೀಡಿದ ವೇಳೆ ಮಕ್ಕಳು ಕೆಲಸ ಮಾಡುತ್ತಿರುವುದನ್ನು ಗಮನಿಸಲಾಯಿತು. ತಕ್ಷಣ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಒಬ್ಬ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಮಕ್ಕಳನ್ನು ವಶಕ್ಕೆ ಪಡೆದು ಮಕ್ಕಳ ಹೇಳಿಕೆಗಳನ್ನು ಸ್ಥಳದಲ್ಲಿಯೇ ಪಡೆದುಕೊಂಡು ಪೋಷಕರ ವಶಕ್ಕೆ ಒಪ್ಪಿಸಲಾಯಿತು. ಈ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ಬಳ್ಳಾರಿಯ 1ನೇ ವೃತ್ತದ ಕಾರ್ಮಿಕ ನಿರೀಕ್ಷಕ ರಮೇಶ್, 2ನೇ ವೃತ್ತದ ಕಾರ್ಮಿಕ ನಿರೀಕ್ಷಕ ಪರಶುರಾಮ್, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಮೌನೇಶ್, ಆರೋಗ್ಯ ಇಲಾಖೆಯ ಮುಸ್ತಾಕ್ ಅಹಮದ್, ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಹೊನ್ನೂರಪ್ಪ, ಮಕ್ಕಳ ಸಹಾಯವಾಣಿ ಸಿಬ್ಬಂದಿ ಕಾರ್ತಿಕ್ ಮತ್ತು ರೀಚ್ ಸಂಸ್ಥೆಯ ಸಂಯೋಜಕಿ ಲಕ್ಷ್ಮೀ ಸೇರಿದಂತೆ ವಿವಿಧ ಅಧಿಕಾರಿಗಳು ಇದ್ದರು.

ಕೋಟಿ ಈರಣ್ಣ ನಿಧನ



◆ **ಸಿರುಗುಪ್ಪ:** ನಗರದ ಗಂಗಾ ನಗರದ ನಿವಾಸಿ ಕೋಟಿ ಈರಣ್ಣ(37) ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಉತ್ತನೂರು ಸಾಯಿಬಮ್ಮ

◆ **ಕುರುಗೋಡು:** ಸಮೀಪದ ಎಮ್ಮಿಗನೂರು ಗ್ರಾಮದ



ಉತ್ತನೂರು ಸಾಯಿಬಮ್ಮ (78) ನಿಧರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.



ಕರೂರ: ಸಮೀಪದ ಆಗಲೂರು ಗ್ರಾಮದಲ್ಲಿ ಶ್ರೀ ಆಗಲೂರಪ್ಪ ತೇರು ಜಾತ್ರೆ, ಮಹೋತ್ಸವ ಕಾರ್ಯಕ್ರಮ ನಡೆಯಿತು. ಡೊಳ್ಳು ಮತ್ತು ಊಟದ ವ್ಯವಸ್ಥೆ ಕೂಡ ಮಾಡಲಾಯಿತು.

ಮಹಿಳೆ ಸಮಾಜದ ನಿರ್ಮಾತೃ, ಮಾರ್ಗದರ್ಶಕಿ

◆ **ಹೊಸಪೇಟೆ:** ಸಮಾಜವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದರೆ, ಸಮಾಜವು ಅಭಿವೃದ್ಧಿ ಪದದತ್ತ ಸಾಗುತ್ತದೆ. ಪ್ರಸ್ತುತ ದಿನಮಾನಗಳಲ್ಲಿ ಶಿಕ್ಷಕಿ ಮತ್ತು ಮಹಿಳೆಗೆ ಆಧುನಿಕ ದಿನಮಾನಗಳಲ್ಲಿ ಹಲವಾರು ಸವಾಲುಗಳಿದ್ದರೂ ಅವುಗಳನ್ನು ಲೆಕ್ಕಿಸದೆ ಸಮಾಜದ ಅಭಿವೃದ್ಧಿಗಾಗಿ ಮಹಿಳೆಯರು ನಿಸ್ವಾರ್ಥವಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾಳೆ. ಮನೆಯಲ್ಲಿ ಗೃಹಿಣಿಯಾಗಿ, ಶಾಲೆಯಲ್ಲಿ ಶಿಕ್ಷಕಿಯಾಗಿ, ಸಮಾಜದಲ್ಲಿ ತಾಯಿಯಾಗಿ ಹಲವಾರು ಪಾತ್ರಗಳನ್ನು ನಿರ್ವಹಿಸುವ ಮಹಿಳೆಯ ಕಾರ್ಯ ಅವಳ ಸೇವೆ ಅತ್ಯಂತ ಶ್ಲಾಘನೀಯವಾದದ್ದು ಆದ್ದರಿಂದ ಮಹಿಳೆಯು ಸೇವೆಗೆ ಅಷ್ಟೇ ಅಲ್ಲದೆ ಉತ್ತಮ ಸಮಾಜದ ನಿರ್ಮಾತೃಳು ಎಂದು ಥಿಯೊಸೊಫಿಕಲ್ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಅನುಸೂಯ ಅಂಗಡಿ ಹೇಳಿದರು. ನಗರದ ಬಳ್ಳಾರಿ ವಿವಿ ಸಂಘದ.ಷಾ ಭಾವರಲಾಲ್ ಬಾಬುಲಾಲ್ ನಾಹರ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ವಿಶೇಷ ಉಪನ್ಯಾಸ ನೀಡಿದರು. ಪ್ರಾಚಾರ್ಯ ಡಾ. ಶಿವನಗೌಡ ಸಾತ್ಮರ್ ಮಾತನಾಡಿ, ಮಹಿಳೆ ಕೇವಲ ಅಬಲೆ ಅಲ್ಲ ಸಬಲೆ. ಜೊತೆಗೆ ಸಂಸಾರದ ಕಣ್ಣು ಅಷ್ಟೇ ಅಲ್ಲದೆ ನಮ್ಮ ಸಮಾಜದ ಕಣ್ಣು ಎಂದರು. ಈ ವೇಳೆ ಡಾ. ಅನುಸೂಯ ಅಂಗಡಿಯವರನ್ನು ಸನ್ಮಾನಿಸಲಾಯಿತು. ಐಕ್ಯೂಎಸಿ ಸಂಯೋಜಕ ಡಾ ಜಗದೀಶ್ ಮಾತನಾಡಿದರು. ಡಾ. ಶೋಭಾ ಪಾಟೀಲ್ ಹಾಡಿದರು. ಈ ವೇಳೆ ಮಹಾವಿದ್ಯಾಲಯದ ಅಧ್ಯಾಪಕರಾದ ಡಾ. ಕೆಎಂ ಪಾರ್ವತಿ, ಡಾ. ಮಲ್ಲಿಕಾ, ಡಾ. ಸತೀಶ್ ಸೂರಿಮಠ, ಡಾ. ಪಿ.ಎಂ. ಸಿದ್ದಲಿಂಗಸ್ವಾಮಿ, ಡಾ. ವಿಶ್ವನಾಥ್ ಗೌಡ, ಇಟಗಿ ಮಲ್ಲಿಕಾರ್ಜುನ, ಡಾ.ಉಮೇಶ್ ಹಡಗಲಿ, ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಇದ್ದರು. ಸ್ಫೂರ್ತಿ ಪ್ರಾರ್ಥಿಸಿ, ನಿಸರ್ಗ ಸ್ವಾಗತಿಸಿ, ಮೇಘ ನಿರೂಪಿಸಿದರು.



ಹೊಸಪೇಟೆ: ನಗರದ ಬಳ್ಳಾರಿ ವಿವಿ ಸಂಘದ.ಷಾ ಭಾವರಲಾಲ್ ಬಾಬುಲಾಲ್ ನಾಹರ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು. ಥಿಯೊಸೊಫಿಕಲ್ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಅನುಸೂಯ ಅಂಗಡಿ ಸೇರಿದಂತೆ ಇತರರಿದ್ದರು.

ಜಿಲ್ಲಾಡಳಿತದಿಂದ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಣೆ

ಮಹಿಳೆಗೆ ಅವಕಾಶ ನೀಡಿ: ನಾಗರಾಜ್

◆ **ಬಳ್ಳಾರಿ:** ಭಾರತೀಯ ಸಂಸ್ಕೃತಿಯಲ್ಲಿ ಹಿಂದಿನಿಂದಲೂ ಮಹಿಳೆಯರಿಗೆ ಪೂಜನೀಯ ಸ್ಥಾನವಿದೆ ಎಂದು ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್ ಹೇಳಿದರು.

ನಗರದ ವಾಲ್ಮೀಕಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಪೋರ್ಚುಗೀಸರ ವಿರುದ್ಧ ಹೋರಾಡಿದ್ದ ತುಳುನಾಡಿನ ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅಂತಹ ವೀರ ಮಹಿಳೆಯರ ಧೈರ್ಯದ ಕಥೆಗಳನ್ನು ಸ್ಮರಿಸಬೇಕು. ಮಹಿಳೆಯರು ಮತ್ತು ದಲಿತರಿಗೆ ಶಿಕ್ಷಣ ನಿರಾಕರಿಸಲ್ಪಟ್ಟ ಕಾಲದಲ್ಲಿ, ಪುಣೆಯಲ್ಲಿ ಮೊದಲ ಬಾರಿಗೆ ಹೆಣ್ಣುಮಕ್ಕಳಿಗಾಗಿ ಶಾಲೆ ತೆರೆದ ಸಾವಿತ್ರಿಬಾಯಿ ಫುಲೆ ಅವರ ಕೊಡುಗೆಯನ್ನು ಇಂದು ನಾವೆಲ್ಲರೂ ಗೌರವಿಸಬೇಕು ಎಂದರು. ಡಾ.ಬಿ.ಆರ್. ಅಂಬೇಡ್ಕರ್ ಅವರು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಒದಗಿಸಲು ಸಾಕಷ್ಟು ಶ್ರಮ ಪಟ್ಟಿದ್ದಾರೆ. ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನ ಹಕ್ಕು ಮತ್ತು ಸ್ವಾತಂತ್ರ್ಯ ನೀಡಲು ಅಂಬೇಡ್ಕರ್ ಅವರು ಮಂಡಿಸಿದ ಹಿಂದೂ ಕೋಡ್ ಬಿಲ್ ಮಸೂದೆ ತಿರಸ್ಕಾರಗೊಂಡಾಗ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ್ದರು ಎಂದು ಸ್ಮರಿಸಿದರು.



ಜಿಲ್ಲಾಧಿಕಾರಿನಾಗೇಂದ್ರಪ್ರಸಾದ್.ಕೆಮಾತನಾಡಿ, ಈ ವರ್ಷದ ಮಹಿಳಾ ದಿನಾಚರಣೆಯನ್ನು 'ಗಿವ್ ಟು ಗೇನ್' (ಪಡೆಯುವುದಕ್ಕಾಗಿ ಕೊಡಿ) ಎಂಬ ವಿಶೇಷ ಥೀಮ್‌ನೊಂದಿಗೆ ಆಚರಿಸಲಾಗುತ್ತಿದೆ. ಮಹಿಳೆಯರಿಗೆ ಅವಕಾಶ ಮತ್ತು ಸಮಯ ನೀಡಿದರೆ, ಅದು ಸಮೃದ್ಧ ಸಮಾಜವಾಗಿ ನಮಗೆ ಮರಳಿ ಸಿಗುತ್ತದೆ ಎಂಬುದು ಇದರ ಆಶಯ ಎಂದರು.

ಸರ್ಕಾರದ ಸೌಲಭ್ಯಗಳು ಫಲಾನುಭವಿಗಳಿಗೆ ತಲುಪುವಲ್ಲಿ ವಿಳಂಬವಾಗುತ್ತಿದೆ. ಅಧಿಕಾರಿಗಳು ಕಚೇರಿಯಲ್ಲಿಕುಳಿತುಅರ್ಜಿಗಾಗಿಕಾಯುವಬದಲು ಅಧಿಕಾರಿಗಳೇ ಚುರುಕಾಗಿ ಕಾರ್ಯನಿರ್ವಹಿಸಿ ಮಹಿಳೆಯರು ಮತ್ತು ವಿಶೇಷ ಚೇತನರಿದ್ದ ಸ್ಥಳಕ್ಕೆ ಹೋಗಿ ಸೌಲಭ್ಯಗಳನ್ನು ತಲುಪಿಸಬೇಕು ಎಂದು ಸೂಚಿಸಿದರು. ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಮಾತನಾಡಿ, ಮಹಿಳೆಯರು ಕೇವಲ ಫಲಾನುಭವಿಗಳಾಗದೆ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನೇತೃತ್ವದ ಸ್ಥಾನಗಳನ್ನು ಅಲಂಕರಿಸುವ ಮೂಲಕ ಸಮಾಜವನ್ನು ಮುನ್ನಡೆಸುವಂತವರಾಗಬೇಕು ಎಂದರು.

ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳಾ ಸಾಧಕಿಯರನ್ನು ಗೌರವಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ.ಎಂ., ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಆಶಾಲತಾ ಸೋಮಪ್ಪ, ಬಳ್ಳಾರಿ ತಾಲೂಕು ಅಧ್ಯಕ್ಷ ಗೋನಾಳ್ ಎಂ.ನಾಗಭೂಷಣ ಗೌಡ, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆತ್ರಿವೇಣಿಪತ್ತಾರ್, ಕುರುಗೋಡು ತಾಪಂ ಇಒ ಕೆ.ವಿ ನಿರ್ಮಲಾ, ಜಿಪಂ ಲೆಕ್ಕಾಧಿಕಾರಿ ನಾಗಲಕ್ಷ್ಮೀ, ಡಿವೈಎಸ್ಪಿ ಗೋವಿಂದರಾಜ್, ಹಿರಿಯ ಸಾಹಿತಿ ಎನ್.ಡಿ. ವೆಂಕಮ್ಮ ಸೇರಿದಂತೆ ಇತರರಿದ್ದರು.

ಮಂಜಮ್ಮಗೆ ವಾತ್ಸಲ್ಯ ಮನೆ ಹಸ್ತಾಂತರ

◆ **ಹೂವಿನ ಹಡಗಲಿ:** ತಾಲೂಕು ವ್ಯಾಪ್ತಿಯ ಅಡವಿಮಲ್ಲನಕೇರಿ ಗ್ರಾಮದ ಹಡಪದ ಮಂಜಮ್ಮ ಅವರಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆಯವರ ವಾತ್ಸಲ್ಯ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ತಿಂಗಳು 1000 ಮಾಸಾಶನ ಬರುತ್ತಿದ್ದು, ಈ ಫಲಾನುಭವಿಯು ವಾಸಿಸಲು ಮನೆಯೂ ಸಹ ಇಲ್ಲದೆ ಜೋಪಡಿಯಲ್ಲಿ ವಾಸ ಮಾಡುತ್ತಿದ್ದರು ಇವರಿಗೆ ವಾತ್ಸಲ್ಯ ಕಾರ್ಯಕ್ರಮದಲ್ಲಿ ವಾತ್ಸಲ್ಯ ಮನೆ ಮಂಜೂರಾಗಿದ್ದು, ಈ ದಿನ ಇವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮನೆ ನಿರ್ಮಾಣ ಮಾಡಿ ಮನೆ ಹಸ್ತಾಂತರ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಜಯನಗರ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ, ತಾಲೂಕು ಯೋಜನಾಧಿಕಾರಿ ಸುಬ್ರಹ್ಮಣ್ಯ, ಜಿಲ್ಲಾ ಜನ ಜಾಗೃತಿ ಸದಸ್ಯರಾದ ಸುಭಾಷ್ ವಠಕನಹಳ್ಳಿ, ಭರತೇಶ್ ಬಸ್ತಿ, ಶಿವರಾಜ್ ಹಡಗಲಿ, ತಳಕಲ್ಲು ಚಂದ್ರಪ್ಪ, ಕೋಡಿಹಳ್ಳಿ ಕೊಟ್ರೇಶ್, ಊರಿನ ಗಣ್ಯರು ಉಪಸ್ಥಿತರಿದ್ದರು.

ವಿಜಯನಗರ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪೂಜ್ಯ ಹೆಗ್ಗಡೆಯವರ, ಮಾತೃಶ್ರೀ ಅಮ್ಮನವರ ಆಶಯದಂತೆ ಸೂರು ಇಲ್ಲದವರಿಗೆ ಒಂದು ಮನೆ ನಿರ್ಮಾಣ ಮಾಡಿ ನೆಮ್ಮದಿಯಾಗಿ ವಾಸಿಸಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಈ ವಾತ್ಸಲ್ಯ ಕಾರ್ಯಕ್ರಮ ಅನುಷ್ಠಾನ ಮಾಡಿ ಅನೇಕ ಕುಟುಂಬಗಳಿಗೆ ಆಸರೆ ಕಲ್ಪಿಸಿದ್ದಾರೆ. ತಾಲೂಕಿನಲ್ಲಿ ಪ್ರಸ್ತುತ ವರ್ಷದಲ್ಲಿ 3 ಮನೆ ರಚನೆಮಾಡಿಕೊಡಲಾಗಿದೆ ಎಂದರು.

ಹೂವಿನಹಡಗಲಿ ವ್ಯಾಪ್ತಿಯಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸಹಾಯಧನ ವಿತರಣೆ, ಸಂಘದ ಸದಸ್ಯರ ಮಕ್ಕಳ ತಾಂತ್ರಿಕ ಶಿಕ್ಷಣಕ್ಕೆ ಸುಜ್ಞಾನ ನಿಧಿ ಶಿಷ್ಯವೇತನ, ಸರ್ಕಾರಿ ಶಾಲೆಯ ಮಕ್ಕಳಿಗೆ ಅನುಕೂಲವಾಗಲು ಜ್ಞಾನದೀಪ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಶಾಲೆಗೆ ಶಿಕ್ಷಕರ ಒದಗಣೆ, ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿಯಲ್ಲಿ ನಾಗತಿ ಬಸಾಪುರ ಕೆರೆ ಹೂಳೆತ್ತುವುದು ಇನ್ನೂ ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದರು. ವಲಯದ ಮೇಲ್ವಿಚಾರಕರಾದ ರಮೇಶ್, ಜ್ಞಾನವಿಕಾಸ ಸಮನ್ವಯಾಧಿಕಾರಿ ರೇಷ್ಮ, ಒಕ್ಕೂಟದ ಅಧ್ಯಕ್ಷೆ ವಿನೋದಮ್ಮ, ಕಾರ್ಯಕ್ಷೇತ್ರಸೇವಾಪ್ರತಿನಿಧಿಗಂಗಪ್ಪ, ಊರಿನ ಗಣ್ಯರು, ಸದಸ್ಯರು ಉಪಸ್ಥಿತರಿದ್ದರು.



ದೇವರ ದಾಸಿಮಯ್ಯನವರ ಕೊಡುಗೆ ಅಪಾರ

◆ **ವಿಜಯನಗರ:** ನಿತ್ಯ ಕಾಯಕದೊಂದೊಂದಿಗೆ ದೇವರನ್ನು ದರ್ಶಿಸಿಕೊಂಡ ದೇವರದಾಸಿಮಯ್ಯ ಅವರು ವಚನ ಸಾಹಿತ್ಯಕ್ಕೆ ಸಲ್ಲಿಸಿದ ಕೊಡುಗೆ ಅಪಾರವಾದುದು ಎಂದು ಡಾ. ದಿವಾಕರ ನಾರಾಯಣ ಅಭಿಪ್ರಾಯ ಪಟ್ಟರು.

ಸೋಮವಾರ ನಗರದ ನೀಲಕಂಠೇಶ್ವರ ಕಲ್ಯಾಣ ಮಂಟಪದಲ್ಲಿ ಹೊಸಪೇಟೆ ತಾಲೂಕು ನೇಕಾರ ಸಂಘವು ಹಮ್ಮಿಕೊಂಡ ಶ್ರೀ ದೇವರದಾಸಿಮಯ್ಯನವರ ಜಯಂತಿ ಕಾರ್ಯಕ್ರಮದಲ್ಲಿಮಾತನಾಡಿ, ಬಸವಣ್ಣರವರು ತಮ್ಮ ವಚನಗಳಲ್ಲಿ ದೇವರ ದಾಸಿಮಯ್ಯ ಅವರನ್ನು ಆದ್ಯ ವಚನಕಾರರೆಂದು ಸ್ತುತಿಸಿದ್ದಾರೆ. ಅಲ್ಲದೇ ಸ್ತ್ರೀ ಪುರುಷ ಬೇಧ ಭಾವ ಇಲ್ಲದಂತೆ ಎಲ್ಲರೂ ಸಮಾನರು ಎಂಬ ಭಾವವನ್ನು ಹೊಂದಿರಬೇಕೆಂದು ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ. ಇಂತಹ ಮಹಾನ್ ಶರಣರ ಜೀವನವನ್ನು ಜೀವನದಲ್ಲಿ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ದಾಸಿಮಯ್ಯ ಅಧ್ಯಯನ ಪೀಠದ ಸಂಚಾಲಕ ಡಾ. ಗೋವಿಂದ ಮಾತನಾಡಿ, ದಾಸಿಮಯ್ಯ ಅವರು ಈ ನಾಡು ಕಂಡ ಹಿರಿಯ ವಚನಕಾರರು. ಅವರ ವಚನಗಳಲ್ಲಿ ಸಮಾಜ ಪರಿವರ್ತನೆ ಮಾಡುವ ಶಕ್ತಿ ಅಡಗಿದೆ ಎಂದರು.

ತಾಲೂಕು ನೇಕಾರರ ಸಂಘದ ಅಧ್ಯಕ್ಷ ಕೆಂಚೆ ಮಹೇಶ್ ಕುಮಾರ ಮಾತನಾಡಿ, ನಿಜಕ್ಕೂ ನನ್ನ ಅಧ್ಯಕ್ಷತೆಯಲ್ಲಿ ನಿಮ್ಮಗಳ ಸಹಕಾರದಿಂದ ಜಯಂತಿ ಕಾರ್ಯಕ್ರಮವು ಯಶಸ್ವಿಯಾಗಿದೆ. ಇನ್ನೂ ನಮ್ಮ ಸಂಘಟನೆ ಬೆಳೆಸಲು ಮುಂಬರುವ ದಿನಗಳಲ್ಲಿ ನೇಕಾರರ ಸಂಘದ ಅಡಿಯಲ್ಲಿ ತಾಲೂಕು ಮಟ್ಟದ ಸಮಾವೇಶ ಮಾಡುವ ಗುರಿ ಹೊಂದಲಾಗಿದೆ ಇದಕ್ಕೆ ತಮ್ಮಗಳ ಸಹಕಾರ ಮುಖ್ಯ ಎಂದರು.

ಈ ವೇಳೆ ಜಯಂತಿ ನಿಮಿತ್ಯವಾಗಿ ಹಮ್ಮಿಕೊಂಡ ಕ್ರೀಡಾಕೂಟದ ಸ್ಪರ್ಧಾ ವಿಜೇತರಿಗೆ ವೇದಿಕೆ ಮೇಲಿನ ಗಣ್ಯರು ಬಹುಮಾನಗಳನ್ನು ವಿತರಿಸಿದರು. ಹಿರಿಯ ನೇಕಾರರಾದ ವರಲಕ್ಷ್ಮಿ ಅವರಿಗೆ ಸನ್ಮಾನಿಸಿದರು. ವೇದಿಕೆಯ ಮೇಲೆ ಬಸವರಾಜ್ ನಾಲತ್ವಡ್, ವಗ್ಗಾ ಜಯರಾಮ್, ಕಾಶಿ ವಿಶ್ವನಾಥ, ಕೊಳಗದ ಗಣಪತಿ, ಶರಣಾರ್ಥಿ ಶಿವಶಂಕ್ರಪ್ಪ, ಪಟ್ಟಸಾಲಿ ವಿರೂಪಾಕ್ಷ, ಸಜ್ಜೋಳ್ಳೆಜಾತಪ್ಪ, ಶ್ರೀನಿವಾಸರಾವ್, ಕೇತ ಯರ್ರಿಸ್ವಾಮಿ, ಸತೀಶಗೋಸಿ, ಬುದ್ದಿ ರಾಮಕೃಷ್ಣ ಇತರರು ಉಪಸ್ಥಿತರಿದ್ದರು. ಈ ವೇಳೆ ಚಂದನ ಭರತನಾಟ್ಯ ನೃತ್ಯ ಪದರ್ಶನ ನೀಡಿ ನೆರೆದವರ ಮನ ರಂಜಿಸಿದರು. ಆರಂಭದಲ್ಲಿ ಕಾರ್ಯಕ್ರಮವನ್ನು ನಿವೃತ್ತ ಅಧ್ಯಾಪಕರಾದ ನಾಗರಾಜ ಸ್ವಾಗತಿಸಿದರು. ಐಲಿ ಪೂಜಾ ನಿರೂಪಿಸಿದರೆ, ಕಾಳಿಗಿ ಪಂಪಾಪತಿ ವಂದಿಸಿದರು.



ಮೀಸಲಾತಿ ಹೆಚ್ಚಿಸಿ, ಸಾಮಾಜಿಕ ನ್ಯಾಯ ಕೊಡಿ: ಉಗ್ರಪ್ಪ

◆ **ಯಾದಗಿರಿ:** ರಾಜ್ಯದಲ್ಲಿನ ಎಸ್‌ಟಿ ಎಸ್ಸಿ ಹಾಗೂ ಒಬಿಸಿ ವರ್ಗಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಬೇಕಾದರೆ ಶೇ.56 ರಷ್ಟು ಮೀಸಲಾತಿ ನೀಡಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡುವಂತೆ ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲ ಮಾತನಾಡಿದ ಅವರು, ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರದಲ್ಲಿ ಹೆಚ್ಚಿಸಿರುವ ಮೀಸಲಾತಿಯನ್ನು ಕೇಂದ್ರ ಸರ್ಕಾರ ಶಡ್ಯೂಲ್ 9ಕ್ಕೆ ಸೇರಿಸಬೇಕು. ಈ ನಿಟ್ಟಿನಲ್ಲಿ ಕೂಡಲೇ ಸಿಎಂ ಸಿದ್ದರಾಮಯ್ಯ ಅವರು ಸರ್ವ ಪಕ್ಷಗಳ ಸಭೆ ಕರೆದು ಈ ಬಗ್ಗೆ ಚರ್ಚಿಸಿ ನಂತರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ನ್ಯಾಯ ಕೊಡಿಸಬೇಕೆಂದು ಆಗ್ರಹಿಸಿದರು.

ಶೇ.56ಕ್ಕೂ ಹೆಚ್ಚು ಮಿಸಲಾತಿನೀಡಬೇಕು. ನಿರ್ಲಕ್ಷವಹಿಸಿದರ ಉಪಚುನಾವಣೆ ನಂತರ ಬೆಂಗಳೂರಿನಲ್ಲಿ ಅಹೋರಾತ್ರಿ ಆರಂಭಿಸಲಾಗುತ್ತಿದೆ. ಅವಕಾಶ ವಂಚಿತ ಸಮುದಾಯಗಳಿಗೆ ಸನ್ನಿವೇಶಕ್ಕನುಗುಣವಾಗಿ ನೇಮಕಾತಿ ಮತ್ತು ಶೈಕ್ಷಣಿಕವಾಗಿ ಮೀಸಲಾತಿ ಹೆಚ್ಚಿಸಬೇಕು. ಎಸ್‌ಟಿಗೆ ಸೇರಿದ ಸಮುದಾಯಗಳಲ್ಲಿ ಶೇ.5 ರಷ್ಟು ಇದ್ದ ಮೀಸಲಾತಿ ಶೇ.7ಕ್ಕೆ ಹೆಚ್ಚಾಗಿದ್ದು ಹೋರಾಟದ ಫಲವೇ ಹೊರತು ಇನ್ನಾವುದು ಅಲ್ಲ, ರಾಜ್ಯದಲ್ಲಿ ನಮ್ಮೆಲ್ಲರ ಹೋರಾಟದಿಂದ ನಾಗಮೋಹನ್ ದಾಸ್ ಸಮಿತಿ ನೇಮಕ ಮಾಡಿ, ಅಧ್ಯಯನ ನಡೆಸಿ ವರದಿ ಸಲ್ಲಿಸಲಾಯಿತು ಎಂದರು.

ಆದರಲ್ಲಿ ಅನುಸೂಚಿತ ಪಂಗಡ, ಜಾತಿಗಳಿಗಾಗಿ ಸರ್ಕಾರದ ಉದ್ಯೋಗಳಲ್ಲಿ ಅವರ ಸಾಕ್ಷರತೆ ಜಾಸ್ತಿಯಾಗಿರಿಲ್ಲದಿರುವುದು ಸಾಕ್ಷ್ಯವಿದ್ದು, ಇದು ಅವರ ಜನಗಣತಿ ಪ್ರಕಾರ ಮೀಸಲಾತಿ ಬೇಕನ್ನುವುದು ವರದಿ ಹೇಳುತ್ತದೆ ಎಂದು ವಿವರಣೆ ನೀಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ಈ ಭಾಗಕ್ಕೆ (ಕಲಬುರಗಿ) ಬಂದಾಗ ಕೋಲಿ, ಗೊಲ್ಲರ ಸಮುದಾಯಗಳು ಸೇರಿದಂತೆಯೇ ಇನ್ನೂ ಅನೇಕ ಜಾತಿಗಳನ್ನು ಎಸ್‌ಟಿಗೆ ಸೇರಿಸುವುದಾಗಿ ಹೇಳಿದ್ದರು. ಆದರೆ ಕೊಟ್ಟ ಮಾತು ಉಳಿಸಿಕೊಂಡಿಲ್ಲ ಎಂದು ಆರೋಪಿಸಿದರು. ಗೊಲ್ಲಪಲ್ಲಿಯ ವರದಾನಂದೇಶ್ವರ ಸ್ವಾಮಿಗಳು, ಜಿಲ್ಲಾಧ್ಯಕ್ಷ ಗೌಡಪ್ಪಗೌಡ ಅಲ್ದಾಳ, ಸಾಹೇಬಗೌಡ ನಾಯಕ, ಉಕ ಅಧ್ಯಕ್ಷ ಮಾರೆಪ್ಪ ನಾಯಕ ಮಗ್ದಂಪುರ, ಹಣಮಂತ ನಾಯಕ, ರಾಮು ನಾಯಕ, ನರಸಪ್ಪ ನಾಯಕ ಸಿದ್ದಲಿಂಗಪ್ಪ ನಾಯಕ ಸೇರಿದಂತೆ ಇತರರಿದ್ದರು.

ಎಲ್ಲರಿಗೂ ನೀರು ತಲುಪಿಸಿ, ನಿರ್ಲಕ್ಷ್ಯ ಬೇಡ

◆ **ಬಳ್ಳಾರಿ:** ಬೇಸಿಗೆಹಿನ್ನೆಲೆದಿನದಿಂದ ದಿನಕ್ಕೆ ನೀರಿನ ಅಭಾವಬಿಗಡಾಯಿಸುತ್ತಿದ್ದು, 8 ರಿಂದ 10 ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದೆ. ಯಾವುದೇ ಕಾರಣಕ್ಕೂ ಜನರಿಗೆ ನೀರಿನ ತೊಂದರೆ ಎದುರಾಗಬಾರದು, ಎಲ್ಲರಿಗೂ ನೀರು ತಲುಪಬೇಕು, ಪಾಲಿಕೆ ಅಧಿಕಾರಿಗಳು, ಸಿಬ್ಬಂದಿಗಳು ಈ ಕುರಿತು ಗಮನಹರಿಸಬೇಕು. ನಲ್ಲಿಗಳಿಗೆ ಯಾರೇ ಮೋಟಾರ್ ಅಳವಡಿಸಿದರು ಕ್ರಮಕ್ಕೆ ಮುಂದಾಗಬೇಕು. ಎಲ್ಲರಿಗೂ ನೀರು ತಲುಪಬೇಕು ಎನ್ನುವ ಉದ್ದೇಶ ನಮ್ಮದು ಎಂದು ಮಹಾನಗರ ಪಾಲಿಕೆ ಲೆಕ್ಕಪತ್ರಗಳ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಹನುಮಂತಪ್ಪ ಸೂಚಿಸಿದರು.

ನಗರದ ತಮ್ಮ ವಾರ್ಡ್ ವ್ಯಾಪ್ತಿಯ ಮನೆಗಳಿಗೆ ಪಾಲಿಕೆ ಸಿಬ್ಬಂದಿಗಳೊಂದಿಗೆ ಮಂಗಳವಾರ ಭೇಟಿ ನೀಡಿ ಮಾತನಾಡಿದರು. ಕಡೆ ಮನೆವರೆಗೂ ನೀರು ತಲುಪಬೇಕು. ಈ ವಿಚಾರದಲ್ಲಿ ನಮ್ಮ ಸಿಬ್ಬಂದಿಗಳು ನಿರ್ಲಕ್ಷ್ಯ ವಹಿಸಿದರೆ ಸುಮ್ಮನಿರುವ ಮಾತೇ ಇಲ್ಲ, ನಮ್ಮ ಎಲ್ಲ ವಾಲ್‌ಮ್ಯಾನ್‌ಗಳು ಮನೆ ಮನೆಗೂ ಭೇಟಿ ನೀಡಿ ನೀರು ಪೋಲಾಗದಂತೆ ನೋಡಿಕೊಳ್ಳಬೇಕು. ವಾರ್ಡ್‌ನ ಜನತೆ



ನೀರಿನ ಸಮಸ್ಯೆ ಇರಲಿ ಯಾವುದೇ ಸಮಸ್ಯೆ ಇರಲಿ, ಕರೆ ಮಾಡಿದರೆ, ನಮ್ಮ ಪಾಲಿಕೆ ಸಿಬ್ಬಂದಿ, ವಾಲ್‌ಮೆನ್‌ಗಳು ಸೌಜನ್ಯದಿಂದ ಅವರಿಗೆ ಉತ್ತರಿಸಬೇಕು. ಯಾವುದೇ ಕಾರಣಕ್ಕೂ ಬೇಜವಾಬ್ದಾರಿಯಿಂದ ಉತ್ತರಿಸಕೂಡದು, ಕಂಡು ಬಂದರೆ ಅಥವಾ ದೂರುಗಳು ಬಂದರೆ ಮೇಲಧಿಕಾರಿಗಳ ಗಮನಸೆಳೆಯುವೆ ಎಂದು ಸಿಬ್ಬಂದಿಗಳಿಗೆ ಎಚ್ಚರಿಸಿದರು. ವಾರ್ಡ್ ವ್ಯಾಪ್ತಿಯ ಪ್ರಮುಖರು, ಪಾಲಿಕೆ ಸಿಬ್ಬಂದಿಗಳು ಇದ್ದರು.

ಭ್ರಷ್ಟಾಚಾರ ಆರೋಪ: ತನಿಖೆಗೆ ಆಗ್ರಹ

◆ **ಬೀದರ:** ಬೀದರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಬುದ್ಧ ವಿಹಾರಗಳ ದುರಸ್ತಿ, ಹೊಸ ವಿಹಾರಗಳ ನಿರ್ಮಾಣಕ್ಕೆ ಬಿಡುಗಡೆಗೊಂಡ ಕೋಟ್ಯಾಂತರ ರೂ.ಗಳ ಅನುದಾನದಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ ಎಂದು ಆಲ್ ಇಂಡಿಯಾ ಸಮತಾ ಸೈನಿಕ್ ದಳ (ಗುಲ್ಬರ್ಗಾ ವಿಭಾಗ) ಅಧ್ಯಕ್ಷ ನಾಗೇಂದ್ರ ಎಸ್. ದಂಡೆ ಜಿಪಂ ಸಿಇಒ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಿದರು.



ಬುದ್ಧ ವಿಹಾರಗಳ ದುರಸ್ತಿಗೆ ತಲಾ 10 ಲಕ್ಷ, ಹೊಸ ವಿಹಾರಗಳ ನಿರ್ಮಾಣಕ್ಕೆ ಒಂದು ಕೋಟಿಗೂ ಹೆಚ್ಚು ಅನುದಾನ ಬಿಡುಗಡೆ ಮಾಡಲಾಗುತ್ತಿದ್ದರೂ, ಈ ಹಣ ಸರಿಯಾಗಿ ಬಳಸದೇ ದುರುಪಯೋಗ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ. ಜಿಲ್ಲೆಯ ಬೀದರ, ಭಾಲ್ಕಿ, ಬಸವಕಲ್ಯಾಣ, ಹುಮನಾಬಾದ್, ಔರಾದ ತಾಲೂಕುಗಳಲ್ಲಿ ಇರುವ ದರ್ಶನ ಭೂಮಿ ಬುದ್ಧ ವಿಹಾರ (ಆಣದೂರ), ವಿಶ್ವ ಶಾಂತಿ ಬುದ್ಧ ವಿಹಾರ (ಅಮಲಾಪುರ), ಸಂಬೋಧಿ ಬುದ್ಧ ವಿಹಾರ (ವಾಲದೊಡ್ಡಿ), ಸಿದ್ದಾರ್ಥ, ಕರುಣಾ, ಜೇತವನ, ನಾಗಸೇನ್, ಚಂದ್ರಮಣಿ ಸೇರಿದಂತೆ ಅನೇಕ ವಿಹಾರಗಳು ಅಭಿವೃದ್ಧಿಯಿಲ್ಲದೆ ಉಳಿದಿವೆ ಎಂದು ದೂರಲಾಗಿದೆ.

ಈ ಹಿನ್ನೆಲೆ ಬಿಡುಗಡೆಯಾದ ಅನುದಾನದ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲು ಆಗ್ರಹಿಸಲಾಗಿದೆ. ಎರಡು ವಾರಗಳೊಳಗೆ ಕ್ರಮ ಕೈಗೊಳ್ಳದಿದ್ದಲ್ಲಿ ಲೋಕಾಯುಕ್ತ ಹಾಗೂ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡುವುದಾಗಿ ಎಚ್ಚರಿಸಲಾಗಿದೆ.

ಕ್ಷಯ ರೋಗ ಜಾಗೃತಿ ಕಾರ್ಯಕ್ರಮ

◆ **ಹುಣಸಗಿ:** ವಿಶ್ವ ಕ್ಷಯರೋಗ ದಿನದ ಅಂಗವಾಗಿ ಹುಣಸಗಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ವೈದ್ಯಾಧಿಕಾರಿ ಡಾ. ಎಸ್.ಬಿ .ಪಾಟೀಲ್ ಕ್ಷಯ ರೋಗದ ಮಾಹಿತಿ ನೀಡಿದರು.

ಕ್ಷಯ ರೋಗವು ಒಂದು ಸಾಂಕ್ರಾಮಿಕ ರೋಗವಾಗಿದ್ದು, ಮುಖ್ಯವಾಗಿ ಶ್ವಾಸಕೋಶವನ್ನು ಹಾನಿ ಮಾಡುತ್ತದೆ. ಈ ರೋಗವು ಕೆಮ್ಮು, ಜ್ವರ, ತೂಕ ಇಳಿಕೆ, ದೌರ್ಬಲ್ಯ ಮೊದಲಾದ ಲಕ್ಷಣಗಳ ಮೂಲಕ ಕಾಣಿಸಿಕೊಳ್ಳುತ್ತದೆ. ಎರಡು ವಾರಗಳಿಗಿಂತ ಹೆಚ್ಚು ಕಾಲ ಕೆಮ್ಮು ಮುಂದುವರಿದರೆ ತಕ್ಷಣವೇ ಸಮೀಪದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕ್ಷಯರೋಗ ಸಂಪೂರ್ಣವಾಗಿ ಗುಣಪಡಿಸಬಹುದಾದ ರೋಗವಾಗಿದ್ದು, ಸರಿಯಾದ ಸಮಯದಲ್ಲಿ ಚಿಕಿತ್ಸೆ ಪಡೆಯುವುದರಿಂದ ರೋಗವನ್ನು ನಿಯಂತ್ರಿಸಬಹುದು. ಸರ್ಕಾರದಿಂದ ಉಚಿತವಾಗಿ ಔಷಧಿ ಹಾಗೂ ಚಿಕಿತ್ಸಾ ಸೌಲಭ್ಯಗಳು ಲಭ್ಯವಿರುವುದರಿಂದ ರೋಗಿಗಳು ಚಿಕಿತ್ಸೆ ಮಧ್ಯದಲ್ಲಿ ನಿಲ್ಲಿಸದೆ ಪೂರ್ಣಗೊಳಿಸಬೇಕು ಎಂದರು. ಈ ಸಂದರ್ಭದಲ್ಲಿ ವೈದ್ಯರಾದ ಡಾ. ರವಿಕಿರಣ್, ಡಾ. ದಿನೇಶ್ ಹಾಗೂ ಸಿಬ್ಬಂದಿಗಳಾದ ಪಿ.ವಿ. ಗಸ್ತಿ, ಸುರೇಶ್ ಪಾಟೀಲ್, ದೇವರಾಜ್, ವೆಂಕಟೇಶ್, ಸೋಮಶೇಖರ್, ಮಂಜುನಾಥ್ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಕೋರಿ ನಿರೂಪಿಸಿ, ರಂಗನಾಥ್ ಸ್ವಾಗತಿಸಿ, ವಂದಿಸಿದರು.



ಬೆಣಕಲ್ಲು ಬನ್ನಿ ಮರದ ಬಸವೇಶ್ವರ ಸ್ವಾಮಿ ರಥೋತ್ಸವ

◆ **ಹಗರಿಬೊಮ್ಮನಹಳ್ಳಿ:** ತಾಲೂಕಿನ ಬೆಣಕಲ್ಲು ಗ್ರಾಮದ ಬನ್ನಿ ಮರದ ಬಸವೇಶ್ವರ ಸ್ವಾಮಿಯ ರಥೋತ್ಸವ ಅದ್ಧೂರಿಯಾಗಿ ಜರುಗಿತು.

ಸೋಮವಾರ ಬೆಣಕಲ್ಲು ಗ್ರಾಮದ ಶ್ರೀ ಬನ್ನಿ ಮರದ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ರಥೋತ್ಸವ ಅಂಗವಾಗಿ ವಿಶೇಷ ಪೂಜೆ ಅಭಿಷೇಕ ಮಹಾ ಮಂಗಳಾರತಿ ಗಂಟಾನಾದ ಮೊಳಗಿದವು. ಸಂಜೆ ರಥೋತ್ಸವಕ್ಕೂ ಮುನ್ನ ನೆಡೆದ ಪಟಾಕ್ಷಿ ಹರಾಜಿನಲ್ಲಿ ಬೇವೂರು ಹನುಮಂತಪ್ಪ ಎಂಬುವರು 61 ಸಾವಿರ ರೂ.ಗಳಿಗೆ ಪಡೆದರು. ಬಳಿಕ ಸಮಾಳ ನಂದಿಕೋಲು ವಿವಿಧ ವಾದ್ಯ ಮೇಳದೊಂದಿಗೆ ಸಹಸ್ರಾರು ಭಕ್ತರ ಜಯಘೋಷಗಳ ಮಧ್ಯೆ ಬನ್ನಿ ಮರದ ಬಸವೇಶ್ವರ ಸ್ವಾಮಿ ರಥೋತ್ಸವ ಸಡಗರ ಸಂಭ್ರಮದಿಂದ ವಿಜೃಂಭಣೆಯಿಂದ ಜರುಗಿತು. ಭಕ್ತರು ಬಾಳೆ ಹಣ್ಣು ಉತ್ತುತ್ತಿ ರಥೋತ್ಸವಕ್ಕೆ ಎಸೆದು ಭಕ್ತಿ ಸಮರ್ಪಿಸಿದರು. ವಿಶೇಷವೆಂದರೆ ಬೆಣಕಲ್ಲು ಗ್ರಾಮದಲ್ಲಿ



ಕಾರಣಾಂತರದಿಂದಾಗಿ ಕಳೆದ ಐದು ವರ್ಷಗಳಿಂದ ರಥೋತ್ಸವ ಆಗಿರಲಿಲ್ಲ, ಗ್ರಾಮಸ್ಥರೆಲ್ಲ ಒಂದುಗೂಡಿ ಐದು ವರ್ಷಗಳ ಬಳಿಕ ರಥೋತ್ಸವ ಜರುಗಿದ್ದರಿಂದಾಗಿ ಗ್ರಾಮಸ್ಥರಲ್ಲಿ ಸಂಭ್ರಮ ಇಮ್ಮಡಿಗೊಳಿಸಿತು. ಪೊಲೀಸ್ ಇಲಾಖೆಯಿಂದ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು. ಬೆಣಕಲ್ಲು ಗ್ರಾಮದ ಗುರುಹಿರಿಯರು ಮಹಿಳೆಯರು ಮಕ್ಕಳು ಯುವಕರು ಸುತ್ತಮುತ್ತಲಿನ ಗ್ರಾಮಗಳ ನಾಗರಿಕರು ಪಾಲ್ಗೊಂಡಿದ್ದರು.

ವನಜಾಗೆ ಒಲಿದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ

◆ **ಕೊಟ್ಟೂರು:** ಕರ್ನಾಟಕ ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಪ್ರತಿ ವರ್ಷ ನೀಡುವ ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರಕ್ಕೆ ಕೊಟ್ಟೂರಿನ ಮನೆಮಗಳಾದ ಪ್ರಸ್ತುತ ಶಿವಮೊಗ್ಗ ವಾಸಿಯಾದ ವನಜಾ ಬಸಾಪುರ್ ಭಾಜನರಾಗಿದ್ದಾರೆ. ಸರ್ಕಾರವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಪ್ರತಿವರ್ಷವೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುವ ಮಹಿಳೆಯರನ್ನು ಗುರುತಿಸಿ ರಾಣಿ ಚೆನ್ನಮ್ಮನ ಹೆಸರಿನಲ್ಲಿ ಪ್ರತಿ ವರ್ಷ ನೀಡುತ್ತಾ ಬಂದಿದ್ದು ಈ ಸಾಲಿನ ಪುರಸ್ಕಾರಕ್ಕೆ ಅನೇಕ ಸಂಘ ಸಂಸ್ಥೆಗಳು ಹಾಗೂ ಮಹಿಳೆಯರು ಭಾಜನರಾಗಿದ್ದಾರೆ. ಕಲೆ, ಸಾಹಿತ್ಯ ಕ್ಷೇತ್ರದಲ್ಲಿ ಈ ಪ್ರಶಸ್ತಿಗೆ ಭಾಜನರಾಗಿದ್ದು ಮಂಗಳವಾರ ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪ್ರಶಸ್ತಿ ಪ್ರಧಾನ ಮಾಡಿದರು. ಪ್ರಶಸ್ತಿಯು ಇಪ್ಪತ್ತೈದು ಸಾವಿರ ರೂಪಾಯಿಗಳ ನಗದು ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು



ಒಳಗೊಂಡಿದ್ದು ಈ ಪ್ರಶಸ್ತಿಯನ್ನು ಪಡೆದು ತವರು ಮನೆಗೆ ಕೀರ್ತಿ ತಂದಿದ್ದಾರೆ. ಕೊಟ್ಟೂರಿನ ಬಸಾಪುರದ ಸೋಮಶೇಖರಪ್ಪ ಹಾಗೂ ವೀರಮ್ಮ ದಂಪತಿಗಳ ಪುತ್ರಿಯಾದ ಪ್ರಸ್ತುತ ಶಿವಮೊಗ್ಗದಲ್ಲಿ ವಾಸವಾಗಿರುವ ಶಾಂತಾ ಆನಂದ್ ಎಂದೇ ಪರಿಚಿತರಾಗಿರುವ ವನಜಾ ಬಸಾಪುರ್ ಇವರು 2008ರಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾಗಿದ್ದರು. ಸುಗಮ ಸಂಗೀತ, ನಿರೂಪಣೆ, ಸಾಮಾಜಿಕ ಸೇವೆಗಳಲ್ಲಿ ಸದಾ ತೊಡಗಿಸಿಕೊಂಡಿದ್ದು, ಶಿವಮೊಗ್ಗದ ವೀರಶೈವ ಸಮಾಜದ ಉಪಾಧ್ಯಕ್ಷರಾಗಿದ್ದು, ಅನೇಕ ಸಂಘ ಸಂಸ್ಥೆಗಳಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವನಜಾ ಬಸಾಪುರ್ ಅವರಿಗೆ ಈ ಪ್ರಶಸ್ತಿ ಲಭಿಸಿರುವುದು ಅವರ ಕುಟುಂಬದವರಲ್ಲೂ ಹಾಗೂ ಅವರ ಹಿತೈಷಿಗಳಲ್ಲೂ ಸಂತಸವನ್ನುಂಟು ಮಾಡಿದೆ.